ಬೆಂಗಳೂರು ಶನಿವಾರ, 28 ಫೆಬ್ರವರಿ 2026 ಸಂಪುಟ 33, ಸಂಚಿಕೆ 120, ಪುಟಗಳು 16+4 ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ RNI: 58231/94 REG No.KA/BG GPO/2532/2021-23 ▸hosadigantha.com ▸epaper.hosadigantha.com ₹5

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ



ರಾಷ್ಟ್ರಸೇವೆಯಲ್ಲಿ 60 ವರ್ಷ (1965-2025)

ಭಾರತೀಯ ಪ್ರಜ್ಞೆಯಲ್ಲಿ ಆಳವಾಗಿ ಬೇರೂರಿರುವ, ಸ್ವಸ್ಥ – ಸುಸ್ಥಿರ ಸಮಾಜವನ್ನು ರೂಪಿಸುವುದಕ್ಕಾಗಿ 1965ರಲ್ಲಿ ಸ್ಥಾಪನೆಯಾಗಿರುವ ಸಮಾಜಸೇವಾ ಸಂಸ್ಥೆ ರಾಷ್ಟ್ರೋತ್ಥಾನ ಪರಿಷತ್. ಅದೀಗ 60 ಸಂವತ್ಸರಗಳನ್ನು ಪೂರೈಸುತ್ತಿದೆ.

ರಾಷ್ಟ್ರೋತ್ಥಾನ @60

ಸೇವಾ ಸಂಭ್ರಮದ ಸಾರ್ಥಕತೆ



ರಾಷ್ಟ್ರೋತ್ಥಾನ ಪರಿವಾರ ಸಂಗಮ 2026

ಶತಮಾನಗಳ ವಸಾಹತುಶಾಹಿ ಆಳ್ವಿಕೆಯ ವಿರುದ್ಧ ನಡೆದ ಸುದೀರ್ಘ ಹೋರಾಟದ ಪರಿಣಾಮವಾಗಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು; ತನ್ನ ಮಹೋನ್ನತ ಚರಿತ್ರೆ, ಭವ್ಯ ಪರಂಪರೆ ಹಾಗೂ ಅನನ್ಯ ಸಾಂಸ್ಕೃತಿಕ ಸ್ವರೂಪ – ಇವುಗಳಲ್ಲಿ ಬೇರೂರಿದ ರಾಷ್ಟ್ರವೊಂದನ್ನು ಪುನರ್ನಿರ್ಮಿಸುವ ಅವಕಾಶ ಭಾರತೀಯರಿಗೆ ಒದಗಿಬಂತು. ಆದರೆ, ವರ್ಷಗಳು ಉರುಳುತ್ತಿದ್ದಂತೆ ಆಡಳಿತ–ಆರ್ಥಿಕತೆ–ಶಿಕ್ಷಣ–ಸರ್ಕಾರೀ ಸಾಮಾಜಿಕ ಸಂಸ್ಥೆಗಳು–ಸಾಮಾಜಿಕ ವ್ಯವಸ್ಥೆಗಳು – ಈ ಎಲ್ಲ ಕ್ಷೇತ್ರಗಳಲ್ಲಿ ವಿದೇಶೀ ಮಾದರಿಗಳನ್ನು ಅನುಕರಿಸುವ ಪ್ರವೃತ್ತಿಯ ಕರಿನೆರಳು ಭಾರತದ ಆಶೋತ್ತರಗಳನ್ನು ಮತ್ತೆ ಮತ್ತೆ ಮರೆಮಾಚತೊಡಗಿತು. ಅಂತಹದ್ದೊಂದು ಸಂದಿಗ್ಧತೆ ದೇಶದಲ್ಲಿ ಮನೆಮಾಡತೊಡಗಿದ ಸಂದರ್ಭದಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನ ಉದಯವಾಯಿತು.

ರಾಷ್ಟ್ರಕ್ಕಾಗಿ ರಾಷ್ಟ್ರೋತ್ಥಾನ ಪರಿಷತ್ತಿನ ಸ್ಥಾಪನೆ

ಸದೃಢ ವ್ಯಕ್ತಿತ್ವ ನಿರ್ಮಾಣದ ಮೂಲಕ ಸಮಾಜಪರಿವರ್ತನೆಯನ್ನು ಸಾಧಿಸುವುದಕ್ಕೆ ಒಂದು ಸಾಂಸ್ಥಿಕ ವ್ಯವಸ್ಥೆ ಬೇಕು. ಈ ನಿಟ್ಟಿನಲ್ಲಿ ದೇಶಭಕ್ತಿ, ಪ್ರಾಮಾಣಿಕತೆ, ನಿಷ್ಠೆ, ಪ್ರೀತಿಗಳಂತಹ ಸನಾತನ ಮೌಲ್ಯಗಳನ್ನು ಅಭಿವ್ಯಕ್ತಿಸುವ ಸಂಸ್ಥೆಯೊಂದರ ಸ್ಥಾಪನೆ ಅವಶ್ಯಕವೆನಿಸಿ, ಸಮಾಜಕಾರ್ಯಕ್ಕಾಗಿಯೇ ತಮ್ಮ ಜೀವನವನ್ನು ಸಮರ್ಪಿಸಿದ್ದ ಯಾದವರಾವ್ ಜೋಶಿ, ಹೊ.ವೆ. ಶೇಷಾದ್ರಿ, ನಂ. ಮಧ್ವರಾವ್, ಎಂ. ಗೋವಿಂದ ರಾವ್, ಅರಕಲಿ ನಾರಾಯಣ, ಮೈ.ಚ. ಜಯದೇವ ಮೊದಲಾದ ಪ್ರಾಜ್ಞರ ಯೋಚನೆ–ಯೋಜನೆಗಳ ಫಲವಾಗಿ ರಾಷ್ಟ್ರೋತ್ಥಾನ ಪರಿಷತ್ತಿನ ಯಾತ್ರೆ ಪ್ರಾರಂಭವಾಯಿತು. ರಾಷ್ಟ್ರದೇವೋ ಭವ ಪರಿಷತ್‌ನ ಧ್ಯೇಯವಾಕ್ಯವಾಗಿದೆ. ಕಾರ್ಯಸಾಧನೆಯ ದೃಷ್ಟಿಯಿಂದ ರಾಷ್ಟ್ರೋತ್ಥಾನ ಪರಿಷತ್ ತನ್ನೆಲ್ಲ ಚಟುವಟಿಕೆಗಳನ್ನು ಸಾಹಿತ್ಯ, ಶಿಕ್ಷಣ, ಆರೋಗ್ಯ ಹಾಗೂ ಸಮಾಜ ಸಬಲೀಕರಣ ಎನ್ನುವ ನಾಲ್ಕು ವಿಭಾಗಗಳಲ್ಲಿ ವಿಂಗಡಿಸಿ, ಅನುಷ್ಠಾನಗೊಳಿಸುತ್ತದೆ.

ಪರಿಷತ್ ಸೇವೆಯ ಮಹತ್ವದ ಮೈಲಿಗಲ್ಲುಗಳು

18 ಕ್ಕೂ ಅಧಿಕ ಪ್ರಕಲ್ಪಗಳು (ಯೋಜನೆಗಳು)

50 ಕ್ಕೂ ಹೆಚ್ಚಿನ ಚಟುವಟಿಕೆಗಳು


1,100 ಕ್ಕೂ ಹೆಚ್ಚು ಸಾಹಿತ್ಯ ಪ್ರಕಟಣೆಗಳು ಹಾಗೂ ಉತ್ಥಾನ ಮಾಸಪತ್ರಿಕೆ

9 ನಗರ ಮತ್ತು ಗ್ರಾಮೀಣ ಪ್ರದೇಶಗಳ ಹಿಂದುಳಿದ ಮಕ್ಕಳಿಗಾಗಿ ರಾಜ್ಯ ಪಠ್ಯಕ್ರಮದ ರಾಷ್ಟ್ರೋತ್ಥಾನ ವಿದ್ಯಾಲಯಗಳು

20 ಪಂಚಮುಖೀ ಶಿಕ್ಷಣದ ಮೂಲಕ ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಶ್ರಮಿಸುತ್ತಿರುವ ಸಿಬಿಎಸ್‌ಇ ಪಠ್ಯಕ್ರಮದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರಗಳು

- ಉನ್ನತ ಶಿಕ್ಷಣದ ಸಮರ್ಥ ಸೋಪಾನವಾಗಿ ದಾವಣಗೆರೆ, ಉಡುಪಿ ಮತ್ತು ಧಾರವಾಡದಲ್ಲಿ 3 ಪದವಿಪೂರ್ವ ಕಾಲೇಜುಗಳು
- ಭಾರತ ಕೇಂದ್ರಿತ ಶೈಕ್ಷಣಿಕ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶ ಹೊಂದಿರುವ ಸಂವಿತ್ ಸಂಶೋಧನಾ ಪ್ರತಿಷ್ಠಾನ
- ದೈಹಿಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಉನ್ನತಿಗೆ ಸಹಕರಿಸುವ 20ಕ್ಕೂ ಮಿಕ್ಕಿದ ಯೋಗ ಕೇಂದ್ರಗಳು
- ಬೆಂಗಳೂರಿನಲ್ಲಿ ಆಧುನಿಕ ವೈದ್ಯಕೀಯ ಪದ್ಧತಿ, ಆಯುರ್ವೇದ, ಹೋಮಿಯೋಪತಿ, ಯೋಗ ಮತ್ತು ಪ್ರಕೃತಿ ಚಿಕಿತ್ಸೆಗಳನ್ನೊಳಗೊಂಡ ಸಮಗ್ರ ಚಿಕಿತ್ಸೆಯ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ
- ದೇಹ–ಬುದ್ಧಿ–ಮನಸ್ಸುಗಳು ಯಾವುದೇ ದೋಷ, ಅನಾರೋಗ್ಯಗಳಿಲ್ಲದೇ ಚೈತನ್ಯಪೂರ್ಣವಾಗಿ ಮಾಡುವ ಸಲುವಾಗಿ ಸ್ವಾಸ್ಥ್ಯ ಭಾರತಿ ಪ್ರಕಲ್ಪ
- 200ಕ್ಕೂ ಹೆಚ್ಚಿನ ಸೇವಾವಸತಿಗಳಲ್ಲಿ 360ಕ್ಕೂ ಅಧಿಕ ಶಾಲಾ ನಂತರದ ಕಲಿಕಾ ತರಬೇತಿ ಕೇಂದ್ರಗಳು ಹಾಗೂ 30 ಸೇವಾವಸತಿಗಳ ಸಮಗ್ರ ಅಭಿವೃದ್ಧಿ





ಪರಿಷತ್ತಿನ ಆರಂಭಿಕ ಹೆಜ್ಜೆಗಳು

1967 ರಲ್ಲಿ ರಾಷ್ಟ್ರೋತ್ಥಾನ ಪರಿಷತ್‌ನ ಕೇಂದ್ರ ಕಚೇರಿ ಕೆಂಪೇಗೌಡನಗರದಲ್ಲಿ (ಬೆಂಗಳೂರು) ತನ್ನದೇ ಕಟ್ಟಡಕ್ಕೆ ಸ್ಥಳಾಂತರಗೊಂಡಿತು

- ಸಂಸ್ಥೆಯ ಆರಂಭಿಕ ವರ್ಷಗಳಲ್ಲಿ ಕಲೆಸಾಹಿತ್ಯ ಕ್ಷೇತ್ರದ ದಿಗ್ಗಜರು, ಉದ್ಯಮಿಗಳು ಹಾಗೂ ಸಮಾಜಸೇವಕರು ಸೇರಿ, ಇಡೀ ಸಮಾಜದಿಂದಲೇ ಪರಿಷತ್ತಿನ ಪೋಷಣೆಯಾಯಿತು
- ರಾಷ್ಟ್ರೋತ್ಥಾನ ಸಾಹಿತ್ಯ ಮತ್ತು ಉತ್ಥಾನ ಕನ್ನಡ ಮಾಸಪತ್ರಿಕೆಗಳು ಪರಿಷತ್ತಿನ ಪ್ರಾರಂಭಿಕ ಚಟುವಟಿಕೆಗಳಾಗಿದ್ದವು
- ಈ ಪ್ರಕಲ್ಪಗಳು ಸಾಹಿತ್ಯಸಿಂಧು ಪ್ರಕಾಶನ ಮತ್ತು ಭಾರತಭಾರತಿ ಪುಸ್ತಕ ಸಂಪದಗಳ ಮೂಲಕ ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡವು
- ಪ್ರಕಾಶನ ಚಟುವಟಿಕೆಗಳಿಗೆ ಪೂರಕವಾಗಿ ರಾಷ್ಟ್ರೋತ್ಥಾನ ಮುದ್ರಣಾಲಯ ಆರಂಭವಾಯಿತು
- 1984ರ ವೇಳೆಗೆ, ಆರು ಅಂತಸ್ತುಗಳ ಕಟ್ಟಡ ಮತ್ತು 600 ಆಸನಗಳ ಸಭಾಂಗಣದೊಂದಿಗೆ ಪರಿಷತ್ತಿನ ಕೇಂದ್ರ ಕಚೇರಿ ಕೇಶವಶಿಲ್ಪ ಸಜ್ಜಾಯಿತು
- 2004ರಲ್ಲಿ ಕೇಶವಶಿಲ್ಪಕ್ಕೆ ಸೇರಿಕೊಂಡಂತೆ ಮತ್ತೊಂದು ಕಟ್ಟಡವಾದ ಸೇವಾಸೌಧ ನಿರ್ಮಾಣಗೊಂಡಿತು
- ಕಾಲಕ್ರಮೇಣ ಪರಿಷತ್ತಿನ ಹಲವು ಚಟುವಟಿಕೆಗಳು ತಮ್ಮ ವಿಶಿಷ್ಟ ಸ್ವರೂಪ ಮತ್ತು ಕಾರ್ಯವ್ಯಾಪ್ತಿಯ ಕಾರಣದಿಂದ ಸ್ವತಂತ್ರ ವಿಭಾಗಗಳಾಗಿ ಬೆಳೆದವು

ಸಾಮಾಜಿಕ ಪರಿವರ್ತನೆಯ ಸಾಗರದಲ್ಲಿ ಒಂದು ಬಿಂದು

ದಿಗಂತ ಸಂದರ್ಶನ

ಸಮಾಜದಲ್ಲಿ ಕಾಲಕಾಲಕ್ಕೆ ಸಕಾರಾತ್ಮಕ ಬದಲಾವಣೆಯನ್ನು ತರುವುದಕ್ಕಾಗಿ ಪ್ರಾರಂಭವಾದ ರಾಷ್ಟ್ರೋತ್ಥಾನ ಪರಿಷತ್‌ಗೆ ಈಗ 60ನೇ ವರ್ಷದ ಸಂಭ್ರಮ. ಇಂತಹ ಸೇವಾಸಂಭ್ರಮದ ಸುಸಂದರ್ಭದಲ್ಲಿ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಅವರು ಹೊಸ ದಿಗಂತಕ್ಕೆ ವಿಶೇಷ ಸಂದರ್ಶನ ನೀಡಿದ್ದಾರೆ. ಪರಿಷತ್ತಿನ ಆರಂಭ, ವರ್ತಮಾನ ಮತ್ತು ಭವಿಷ್ಯದ ಕುರಿತಾಗಿ ಮಾತನಾಡಿದ್ದಾರೆ.

▸60 ವರ್ಷಗಳಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನ ಸಾರ್ಥಕತೆ ಏನು?

ರಾಷ್ಟ್ರೋತ್ಥಾನ ಪರಿಷತ್‌ಗೆ 60 ವರ್ಷ ತುಂಬಿದೆ ಎಂದರೆ, ಅದರಲ್ಲಿ ಅನೇಕ ರೀತಿಯ ಸಮಾಧಾನ, ಸಂತೋಷ ಮತ್ತು ಸಾರ್ಥಕತೆಯಿದೆ. ನಾವು ಇಟ್ಟುಕೊಂಡಿರುವ ಗುರಿಯತ್ತ ಹೋಗುವುದಕ್ಕೆ ಸಮಾಜ ನಮಗೆ ಸಹಕರಿಸುತ್ತಿದೆ. ಸಮಾಜದ ಸ್ಪಂದನೆ ನಮಗೆ ಬಹಳ ಪ್ರೇರಕವಾಗಿದೆ. ಪ್ರಾರಂಭದ ದಿನಗಳಲ್ಲಿ ನಮ್ಮ ಧ್ಯೇಯಕ್ಕೆ ಅನುಗುಣವಾಗಿ ಬಂಡವಾಳ ಮತ್ತು ಮಾನವ ಸಂಪನ್ಮೂಲ ನಮ್ಮಲ್ಲಿರಲಿಲ್ಲ. ಆದರೆ, ನಮ್ಮ ಕೆಲಸವನ್ನು ಅನುಕರಣೀಯ ಮಾದರಿಯಾಗಿ ಮಾಡಿದ್ದೇವೆ. ಸಮಾಜದ ಕೆಲಸವನ್ನು ರಾಷ್ಟ್ರೋತ್ಥಾನ ಮಾತ್ರ ಮಾಡುವುದಲ್ಲ, ಸಮಾಜದಲ್ಲಿ ಬೇರೆ ಬೇರೆಯವರು ಮಾಡುತ್ತಾರೆ. ಪ್ರಸಕ್ತ 60 ವರ್ಷಗಳನ್ನು ಪೂರೈಸಿದ ನಾವು ಎಲ್ಲವನ್ನು ಮಾಡಿ ಮುಗಿಸಿದ್ದೇವೆ ಎಂದಲ್ಲ, ಒಂದು ಹಂತವನ್ನು ತಲುಪಿದ್ದೇವೆ ಎಂಬ ಸಾರ್ಥಕತೆಯಿದೆ. ನಾವು ಯಾವುದೇ ಕಾರಣಕ್ಕೆ ಗುರಿ, ಸಿದ್ಧಾಂತ ಮತ್ತು ಮೌಲ್ಯಗಳಿಂದ ವಿಚಲಿತರಾಗಿಲ್ಲ. ನಮ್ಮ ಉದ್ದೇಶದ ಜೊತೆಗೆ ರಾಜಿ ಮಾಡಿಕೊಂಡಿಲ್ಲ.

▸ಸಮಾಜದ ಇತರೆ ಸಂಘಟನೆಗಳಿಂದ ಪರಿಷತ್ ಹೇಗೆ ಭಿನ್ನವಾಗಿ ನಿಲ್ಲುತ್ತದೆ?

ರಾಷ್ಟ್ರೋತ್ಥಾನವು ಸಾಹಿತ್ಯ, ಶಿಕ್ಷಣ, ಆರೋಗ್ಯ ಮತ್ತು ಸಮಾಜ ಸಬಲೀಕರಣ (ಸೇವೆ) ಈ ನಾಲ್ಕು ಆಯಾಮಗಳಲ್ಲಿ ಕೆಲಸ ಮಾಡುತ್ತದೆ. ಸಾಹಿತ್ಯವನ್ನು ಸಮಾಜಕ್ಕೆ ಕೊಡಬೇಕಾದರೆ ಸಮಾಜದಲ್ಲಿ ಒಂದು ಜಾಗೃತಿಯಾಗಬೇಕೆಂಬ ಚಿಂತನೆಯಿಂದ ಪ್ರಾರಂಭವಾಗಿತ್ತು. ಇತಿಹಾಸ, ಜ್ಞಾನ ಪರಂಪರೆ, ಸಂಸ್ಕೃತಿ ಯಾವುದನ್ನೇ ಕೊಡುವಾಗಲೂ ಜಾಗೃತಿ ಮೂಡಿಸಬೇಕು. ರಾಷ್ಟ್ರೋತ್ಥಾನ ಸಾಹಿತ್ಯವು ನಮ್ಮ ದೇಶ ಎಷ್ಟು ಸತ್ವಭರಿತವಾಗಿದೆ ಎಂದು ತೋರಿಸುತ್ತದೆ. 610 ಮರೆಯಬಾರದ ಮಹಾಪುರುಷರ ಜೀವನ ಚರಿತ್ರೆಗಳನ್ನು ಭಾರತ ಭಾರತಿಯ ಪುಟ್ಟ ಪುಸ್ತಕಗಳು ಅನನ್ಯವಾಗಿ ಕಟ್ಟಿಕೊಟ್ಟಿವೆ. ಈ ಮೂಲಕ ಭಾರತ ಮಹಾಪುರುಷರು, ಇತಿಹಾಸಕಾರರು, ಸಂಸ್ಕೃತಿ, ಪರಂಪರೆಗಳ ಬಗೆಗೆ ನಮ್ಮ ಪೀಳಿಗೆಯು ಹೆಮ್ಮೆ ಪಡುವಂತಹ ಕೆಲಸಗಳನ್ನು ನಾವು ಮಾಡಿದ್ದೇವೆ.

ಶಿಕ್ಷಣ ಕ್ಷೇತ್ರದಲ್ಲಿ ಎಲ್ಲರೂ ತುಂಬಾ ಕೆಲಸ ಮಾಡುತ್ತಿದ್ದಾರೆ. ಆದರೆ, ಭಾರತದ ನೆಲದ ಮೂಲ ಅಂಶಗಳು ಮತ್ತು ಮಣ್ಣಿನ ಸೊಗಡನ್ನು ಮೈಗೂಡಿಸಿಕೊಂಡು ಶಿಕ್ಷಣದಲ್ಲಿ ಅತ್ಯಂತ ಎತ್ತರಕ್ಕೆ ಹೋಗುವ ಅಂಶಗಳು ಬೇಕೆಂದು ನಾವು ಪ್ರತಿಪಾದಿಸುತ್ತಿದ್ದೇವೆ. ಗುರುಕುಲ ಮಾದರಿಯಲ್ಲಿ ಭಾರತೀಯ ಶಿಕ್ಷಣ ಕೊಡಲು ಈಗಿನ ಕಾಲಘಟ್ಟದಲ್ಲಿ ಸಾಧ್ಯವಿಲ್ಲ, ಆದ್ದರಿಂದ ಶಿಕ್ಷಣದಲ್ಲಿ ಭಾರತೀಯತೆ ತರಬೇಕಿದೆ. ಇದಕ್ಕಾಗಿ ಪಂಚಮುಖಿ ಶಿಕ್ಷಣ (ಮಕ್ಕಳ ದೈಹಿಕ, ಬೌದ್ಧಿಕ, ಮಾನಸಿಕ, ಭಾವನಾತ್ಮಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆ) ಪದ್ಧತಿಯನ್ನು ರೂಪಿಸಲಾಗಿದೆ. ಇದರಿಂದ ವ್ಯಕ್ತಿಯೊಬ್ಬ ಪರಿಪೂರ್ಣವಾಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ನಮ್ಮಲ್ಲಿ ಇದು ನಿರಂತರವಾಗಿ ನಡೆಯುತ್ತದೆ.

ಭಾರತದಲ್ಲಿ ಸೇವೆ ಎಂಬುದು ಜೀವನದ ಅವಿಭಾಜ್ಯ ಅಂಗ. ಇಲ್ಲಿ ಯಾರಿಗೂ ಅದನ್ನು ಹೇಳಿಕೊಡಬೇಕಾಗಿಲ್ಲ. ಅದಕ್ಕೆ ಅವಕಾಶ ಕೊಡಬೇಕು, ವ್ಯವಸ್ಥೆಗಳನ್ನು ಮಾಡಬೇಕು. ಅದಕ್ಕಾಗಿ ಕೆಲವು ಮಾದರಿಯಾದ ಸೇವಾಚಟುವಟಿಕೆಗಳನ್ನು ಮಾಡಿದ್ದೇವೆ. ಬೆಂಗಳೂರು ಮಹಾನಗರ ಸೇವಾವಸತಿ(ಕೊಳಗೇರಿ)ಯ ಮಕ್ಕಳು ಮುಖ್ಯವಾಹಿನಿಗೆ ಸೇರಬೇಕು. ಇದಕ್ಕಾಗಿ ಅವರಿಗೆ ಉಚಿತ ಟ್ಯೂಷನ್ ಸಹಿತ ವಿದ್ಯಾಭ್ಯಾಸ ನೀಡಲಾಗುತ್ತದೆ. ಕೊಳಗೇರಿಯಲ್ಲಿ ಕಿಶೋರರು, ಕಿಶೋರಿಯರು, ಹೆಣ್ಣುಮಕ್ಕಳಿಗೆ ಹೆಚ್ಚಿನ ಗಮನ ಕೊಡುತ್ತೇವೆ. ಅವರ ಆರೋಗ್ಯ, ಕೌಶಲ ಅಭಿವೃದ್ಧಿ, ಸ್ವಸಹಾಯ ಗುಂಪುಗಳಂತಹ ನಾನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತೇವೆ. ಅವರನ್ನು ಸ್ವಾವಲಂಬಿಗಳಾಗಿಸಲು ಪ್ರಯತ್ನಿಸುತ್ತೇವೆ. ಮೂವತ್ತು ವರ್ಷಗಳಿಂದ ನಿರಂತರವಾಗಿ ಕೆಲಸ ಮಾಡಿದ್ದರಿಂದ ಅಲ್ಲಿ ಸಣ್ಣ ಬದಲಾವಣೆ ಕಾಣುವುದಕ್ಕೆ ಸಾಧ್ಯವಾಗಿದೆ. ದೇಸಿ ಗೋತಳಿಗಳ ಸಂರಕ್ಷಣೆಗಾಗಿ ಘಾಟಿಸುಬ್ರಹ್ಮಣ್ಯದ ಬಳಿ ಮಾಧವಸೃಷ್ಟಿ ಗೋಶಾಲೆ ಸ್ಥಾಪಿಸಲಾಗಿದೆ. ಸೇವೆ ಎಂಬುದೊಂದು ಸಾಮಾಜಿಕ ಜಾಗೃತಿಯ ಕೆಲಸ.

ಆರೋಗ್ಯ ದೃಷ್ಟಿಯಿಂದ 1972ರಲ್ಲಿ ಯೋಗವನ್ನು ಚಳವಳಿ ರೂಪದಲ್ಲಿ ಆರಂಭಿಸಿದ್ದು ನಾವು. ಇಲ್ಲಿಯವರೆಗೆ ಲಕ್ಷಾಂತರ ಮಂದಿಗೆ ಯೋಗ ಕಲಿಸಿದ್ದೇವೆ. ನಮ್ಮ ರಕ್ತನಿಧಿ ಕೇಂದ್ರವು ಮಾದರಿಯಾಗಿದೆ. ನಾವು 1993ರಲ್ಲಿ ರಕ್ತನಿಧಿ ಕೇಂದ್ರ ಪ್ರಾರಂಭಿಸುವುದಕ್ಕೂ ಮೊದಲು ರಕ್ತ ಸಿಗಬೇಕಾದರೆ ಬಹಳಷ್ಟು ಸಮಸ್ಯೆಯಾಗುತ್ತಿತ್ತು. ರಕ್ತ ಮಾರಾಟ ಮಾಡಬಾರದು ಎಂದು ಕೇಂದ್ರ ಶುರು ಮಾಡಿದೆವು. ಆಗ ತಲಸ್ಸೆಮಿಯಾ ಪೀಡಿತರ ಬಗ್ಗೆ ಗೊತ್ತಾಗಿ ಅವರಿಗಾಗಿ ಉಚಿತ ಡೇ ಕೇರ್ ಸೆಂಟರ್ ತೆರೆದಿದ್ದೇವೆ. ಅನಾರೋಗ್ಯ ಆದಾಗ ರೋಗಿಗಳಿಗೆ ಕೈಗೆಟುಕುವ ದರದಲ್ಲಿ ಒಳ್ಳೆಯ ಚಿಕಿತ್ಸೆ ಕೊಡಬೇಕು ಎಂದು ರಾಷ್ಟ್ರೋತ್ಥಾನ ಆಸ್ಪತ್ರೆ ಮಾಡಿದ್ದೇವೆ. ಆದರೆ, ಅನಾರೋಗ್ಯ ಆಗಲೇಬಾರದು ಎಂದು ಜನರಿಗೆ ಮಾಹಿತಿ ನೀಡುವುದಕ್ಕಾಗಿ ಆಸ್ಪತ್ರೆಯ ಜೊತೆಗೆ ಜೀವನಶೈಲಿ ವಿಭಾಗವನ್ನು ತೆರೆದಿದ್ದೇವೆ. ಇದೆಲ್ಲವೂ ಬೇರೆಯವರಿಗಿಂತ ನಾವು ಭಿನ್ನ ಎಂಬುದನ್ನು ತೋರಿಸುತ್ತದೆ.



▸ಪರಿಷತ್‌ನ ಮುಂದಿನ ಯೋಜನೆಗಳೇನು?

ಈಗಿರುವ ಚಟುವಟಿಕೆಗಳು ಮುಂದುವರೆಸಿಕೊಂಡು ಹೋಗಬೇಕು ಮತ್ತು ಅವುಗಳಲ್ಲಿ ಗುಣಮಟ್ಟವನ್ನು ತರಬೇಕು. ಜಿಲ್ಲೆಗೊಂದು ಮಾದರಿ ಶಾಲೆ ಸ್ಥಾಪನೆ ಮಾಡಬೇಕು, ಯೋಗ ಕೇಂದ್ರಗಳನ್ನು ವಿಸ್ತರಿಸಬೇಕೆಂಬ ಯೋಚನೆಯಿದೆ. ಆಸ್ಪತ್ರೆಯನ್ನು ಹೆಚ್ಚಿಸುವ ಯೋಚನೆಯಿಲ್ಲ, ಆದರೆ, ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ರಾಜ್ಯಾದ್ಯಂತ ಸ್ವಸ್ಥ ಜೀವನಶೈಲಿ ವಿಭಾಗವನ್ನು ವಿಸ್ತರಿಸುವ ಚಿಂತನೆಯಿದೆ. ರಾಜ್ಯಾದ್ಯಂತ ನಮ್ಮ ಸಾಹಿತ್ಯ ಕೃತಿಗಳು ಜನರಿಗೆ ಸುಲಭದಲ್ಲಿ ಸಿಗುವಂತೆ ಮಾಡಲು ಜಿಲ್ಲಾ ಕೇಂದ್ರಗಳಲ್ಲಿ ರಾಷ್ಟ್ರೋತ್ಥಾನ ಬಳಗ ರಚಿಸಿ, ಅದರ ಮೂಲಕ ಸಾಹಿತ್ಯವನ್ನು ದೊಡ್ಡ ಪ್ರಮಾಣದಲ್ಲಿ ಸಮಾಜಕ್ಕೆ ತಲುಪಿಸಬೇಕಾಗಿದೆ. ಈಗಿರುವ ಕಾರ್ಯವನ್ನು ವಿಸ್ತಾರ ಮಾಡುವ ಜೊತೆಗೆ ಹೊಸ ಸವಾಲುಗಳಿಗೆ ಸಮಾಜವನ್ನು ಸದೃಢಗೊಳಿಸುವ ಕೆಲಸವನ್ನೂ ರಾಷ್ಟ್ರೋತ್ಥಾನ ಮಾಡಬೇಕಿದೆ.

> **▸ರಾಷ್ಟ್ರೋತ್ಥಾನ ಪರಿಷತ್‌ನ ವಿಶೇಷತೆ ಏನು?**
>
> ಸಮಾಜವನ್ನು ಒಳಗೊಂಡು ಸಮಾಜಕ್ಕಾಗಿ ಕೆಲಸ ಮಾಡಿದ ಸಂಸ್ಥೆ ರಾಷ್ಟ್ರೋತ್ಥಾನ ಪರಿಷತ್. ಅದರ ವಿಶೇಷತೆಯೆಂದರೆ, ಕಳೆದ 60 ವರ್ಷದಲ್ಲಿ ಒಂದು ಕೆಲಸವನ್ನು ತೆಗೆದುಕೊಂಡು ಸಮಾಜಕ್ಕೆ ಪೂರಕವಾಗಿ ಅದು ಕಾರ್ಯವನ್ನು ವಿಸ್ತಾರ ಮಾಡುತ್ತಾ ಬಂದಿದೆ. ನಾವು ಮಾತ್ರ ಮಾಡಿದ್ದೇವೆ ಎಂದು ಹೇಳುವುದಿಲ್ಲ, ಸಮಾಜ ಸುಧಾರಣೆಗೆ ಅಗಣಿತ ಸಜ್ಜನರು ಕೆಲಸ ಮಾಡುತ್ತಲೇ ಇದ್ದಾರೆ. ಈ ಸಮಾಜಸೇವಾ ಸಾಗರದಲ್ಲಿನ ಒಂದು ಹನಿಯಂತೆ ರಾಷ್ಟ್ರೋತ್ಥಾನವು ಸಮಾಜದ ಅಗತ್ಯಗಳಿಗೆ ಸ್ಪಂದಿಸುತ್ತಿರುವ ಬಗೆಗೆ ಧನ್ಯತೆ ಇದೆ.

▸ರಾಷ್ಟ್ರೋತ್ಥಾನ ಬೇರೆ ಬೇರೆ ರೀತಿಯ ಚಟುವಟಿಕೆಗಳನ್ನು ಮಾಡುತ್ತಿದೆ, ವೃದ್ಧಾಶ್ರಮ ಮಾಡುವ ಯೋಚನೆಯಿದೆಯೇ?

ವೃದ್ಧಾಶ್ರಮ ತೆರೆಯುವುದಕ್ಕೆ ನಾಲ್ಕೈದು ಅವಕಾಶಗಳು ನಮಗೆ ಬಂದವು. ಅಂದರೆ, ಬೇಕಾದ ಸಂಪನ್ಮೂಲ ಮತ್ತು ಮೂಲಸೌಕರ್ಯ ನೀಡುವುದಕ್ಕೆ ಮುಂದೆ ಬಂದಿದ್ದರು. ಈ ವೇಳೆ ನಾವು ಸ್ಪಷ್ಟವಾಗಿ ಹೇಳಿದ್ದೆವು, ವೃದ್ಧಾಶ್ರಮದ ಸಮಸ್ಯೆಯ ಮೂಲ ಬಗೆಹರಿಸಲು ಯೋಚಿಸಬೇಕೇ ವಿನಾ ತಾತ್ಕಾಲಿಕ ಪರಿಹಾರವಲ್ಲ, ವೃದ್ಧಾಶ್ರಮದ ಪರಿಕಲ್ಪನೆಯೇ ಸಮಾಜದಲ್ಲಿ ಬರಬಾರದು. ನಮ್ಮ ಶಾಲೆ, ಯೋಗ ಕೇಂದ್ರ, ಹೀಗೆ ನಮ್ಮ ಸಂಪರ್ಕಕ್ಕೆ ಬಂದವರು ತಮ್ಮ ಅವಲಂಬಿತರನ್ನು ಯಾವುದೇ ಕಾರಣಕ್ಕೂ ವೃದ್ಧಾಶ್ರಮಕ್ಕೆ ಕಳುಹಿಸಬಾರದು. ಈ ಜಾಗೃತಿ ಮೂಡಿದರೆ ವೃದ್ಧಾಶ್ರಮ ಮಾಡುವ ಅಗತ್ಯ ಯಾಕೆ ಬರುತ್ತದೆ? ಪೋಷಕರನ್ನು ವೃದ್ಧಾಶ್ರಮಕ್ಕೆ ಕಳುಹಿಸುವ ಮಕ್ಕಳನ್ನು ನಾವು ತಯಾರು ಮಾಡುವುದಿಲ್ಲ, ನಮ್ಮ ಚಿಂತನೆ ಮೂಲಕ್ಕೆ ಹೋಗುವುದಾಗಿದೆ.

ಸರ್ಕಾರದಿಂದ ಮೀಸಲಾತಿ ಗೊಂದಲ ಸೃಷ್ಟಿ: ಕಾರಜೋಳ

• **ಚಿತ್ರದುರ್ಗ:** ರಾಜ್ಯ ಸರ್ಕಾರ ತನ್ನ ಎಡವಟ್ಟುಗಳನ್ನು ಮತ್ತು ದಿವಾಳಿಯಾದ ಖಜಾನೆ ಮುಚ್ಚಿಕೊಳ್ಳಲು ಮೀಸಲಾತಿ ಗೊಂದಲ ಸೃಷ್ಟಿಸಿ ವಿದ್ಯಾರ್ಥಿ, ಯುವಜನರ ಕನಸು, ನಿರೀಕ್ಷೆಗಳಿಗೆ ಮಣ್ಣು ಸುರಿಯುತ್ತಿದೆ. ಇದರ ಬಗ್ಗೆ ಸರ್ವ ಪಕ್ಷಗಳ ಪ್ರಮುಖರ ಸಭೆ ಕರೆದು ಚರ್ಚಿಸಲಿ ಎಂದು ಸಂಸದ ಗೋವಿಂದ ಕಾರಜೋಳ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಸರ್ಕಾರಕ್ಕೆ ಬದ್ಧತೆಯ ಕೊರತೆ


ಪರಿಶಿಷ್ಟ ಜಾತಿ, ಪಂಗಡಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಕೊಡಬೇಕಾದ ಮೀಸಲಾತಿಗೆ ಸಾಂವಿಧಾನಿಕವಾದ ಮಾನ್ಯತೆ ಇದೆ. ಇದನ್ನು ಸಮರ್ಥವಾಗಿ ಹೈಕೋರ್ಟ್‌ನಲ್ಲಿ ಮಂಡಿಸುವಲ್ಲಿ ಸೋತಿರುವ ರಾಜ್ಯ ಸರ್ಕಾರ ಒಳ ಮೀಸಲಾತಿಯಿಂದ ಹಿಂದೆ ಸರಿದು ನೇಮಕ ಪ್ರಕ್ರಿಯೆ ಆರಂಭಿಸಲು ಹೊರಟಿರುವುದು ಸಾಮಾಜಿಕ ನ್ಯಾಯದ ವಿಷಯದಲ್ಲಿ ಸರ್ಕಾರಕ್ಕೆ ಬದ್ಧತೆಯ ಕೊರತೆ ಇರುವುದನ್ನು ಸ್ಪಷ್ಟಪಡಿಸಿದೆ ಎಂದು ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗುರುವಾರ ನಡೆದ ಮಂತ್ರಿಮಂಡಲದ ಸಭೆಯಲ್ಲಿ ಕರ್ನಾಟಕ ಸರ್ಕಾರ 56,422 ಹುದ್ದೆಗಳ ಭರ್ತಿಗೆ, ಮುಂದಿನ 30 ದಿನಗಳಲ್ಲಿ ಪ್ರಕ್ರಿಯೆ ಆರಂಭಿಸುವುದಾಗಿ ಪ್ರಕಟಿಸಲಾಗಿದೆ. ಆದರೆ ಈ ಪ್ರಕ್ರಿಯೆ ಶೇ.56ರ ಮೀಸಲಾತಿ, ಒಳಮೀಸಲಾತಿ ಎರಡನ್ನೂ ಹೊರಗಿಟ್ಟು ಮಾಡುತ್ತಿರುವುದು.

ಪರಿಶಿಷ್ಟಜಾತಿ, ಪಂಗಡಗಳಿಗೆ ಮಾಡುತ್ತಿರುವ ಘೋರ ಅನ್ಯಾಯವಾಗಿದೆ ಎಂದರು. ಹೊರ ಗುತ್ತಿಗೆ ಕಾರ್ಮಿಕರು ಅಂಗನವಾಡಿ ಕಾರ್ಯಕರ್ತೆಯರಿಂದ ಹಿಡಿದು ಅನೇಕ ಇಲಾಖೆ ಉದ್ಯೋಗಿಗಳಿಗೆ ತಿಂಗಳ ಸಂಬಳ ಕೊಡಲಾಗದೆ ಪರದಾಡುತ್ತಿದೆ. ಸಾರಿಗೆ ಆರೋಗ್ಯ ಇಲಾಖೆಯ ನೌಕರರಿಗೆ ಪಾವತಿಸಬೇಕಾದ ನೂರಾರು ಕೋಟಿ ರೂ.ಗಳನ್ನು ಬಾಕಿ ಉಳಿಸಿಕೊಂಡಿದೆ ಎಂದು ದೂರಿದರು.

ಬಿಎಸ್‌ವೈಗೆ ಶುಭಾಶಯ



ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ಹುಟ್ಟುಹಬ್ಬದ ಪ್ರಯುಕ್ತ ಶುಕ್ರವಾರ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಜಿ. ಮರಿಸ್ವಾಮಿರವರು ಶಿಕಾರಿಪುರದಲ್ಲಿ ಯಡಿಯೂರಪ್ಪ ಅವರ ಸ್ವಗೃಹದಲ್ಲಿ ಹುಟ್ಟು ಹಬ್ಬದ ಶುಭಾಶಯವನ್ನು ಕೋರಿದರು. ಈ ವೇಳೆ ಸಂಸದ ಬಿ.ವೈ.ರಾಘವೇಂದ್ರ ಇದ್ದರು.

ವಿನಯ್ ಕುಲಕರ್ಣಿಗೆ ಜಾಮೀನು

• **ಬೆಂಗಳೂರು:** ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿ ನ್ಯಾಯಾಂಗ ಬಂಧನದಲ್ಲಿರುವ ಶಾಸಕ ವಿನಯ್ ಕುಲಕರ್ಣಿ ಅವರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಜಾಮೀನು ಮಂಜೂರು ಮಾಡಿದೆ. ಈ ಮೂಲಕ ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ವಿನಯ್ ಕುಲಕರ್ಣಿ ಅವರು ಬಿಡುಗಡೆ ಆಗಲಿದ್ದಾರೆ.



ಪ್ರಕರಣದ ವಿವರ: ಯೋಗೇಶ್ ಗೌಡ ಅವರನ್ನು 2016ರ ಜೂ.15ರಂದು ದುಷ್ಕರ್ಮಿಗಳು ಕೊಲೆ ಮಾಡಿದ್ದರು. ಪ್ರಕರಣದ ತನಿಖೆಯನ್ನು ಸ್ಥಳೀಯ ಪೊಲೀಸರ ಬಳಿಕ ಸಿಬಿಐ ಕೈಗೆತ್ತಿಕೊಂಡು ಶಾಸಕ ವಿನಯ್ ಕುಲಕರ್ಣಿ ಅವರನ್ನು ಆರೋಪಿಯನ್ನಾಗಿ ಪರಿಗಣಿಸಿ ಬಂಧಿಸಿತ್ತು. ಬಳಿಕ ಹೈಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಈ ಆದೇಶವನ್ನು ಸಿಬಿಐ, ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು. ಅರ್ಜಿ ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್, ಷರತ್ತುಗಳನ್ನು ಉಲ್ಲಂಘಿಸಿದ ಆರೋಪದಲ್ಲಿ ಜಾಮೀನು ರದ್ದುಪಡಿಸಿದ್ದರಿಂದ 2025ರ ಜೂ.13ರಿಂದ ಪರಪ್ಪನ ಅಗ್ರಹಾರ ಜೈಲಿನಲ್ಲಿ ವಿಚಾರಣಾಧೀನ ಕೈದಿಯಾಗಿದ್ದರು.

ಬಳಿಕ ಜಾಮೀನು ಕೋರಿ ವಿನಯ್ ಕುಲಕರ್ಣಿ ಸಲ್ಲಿಸಿದ್ದ ಅರ್ಜಿಯನ್ನು ಜನಪ್ರತಿನಿಧಿಗಳ ನ್ಯಾಯಾಲಯ ಕಳೆದ ಡಿ.8ರಂದು ವಜಾಗೊಳಿಸಿತ್ತು. ಬಳಿಕ ಹೈಕೋರ್ಟ್ ಕೂಡ ಜಾಮೀನು ಅರ್ಜಿ ವಜಾಗೊಳಿಸಿತ್ತು. ನಂತರ ಸುಪ್ರೀಂಕೋರ್ಟ್ ಮೆಟ್ಟಿಲೇರಿ ದ್ದರು. ವಿನಯ್ ಕುಲಕರ್ಣಿ ಅವರ ಜಾಮೀನನ್ನು ಸುಪ್ರೀಂ ಕೋರ್ಟ್ 2025 ಜೂ.6ರಂದು ರದ್ದುಗೊಳಿಸಿತ್ತು. ಇದೇ ವೇಳೆ ವಿಚಾರಣಾ ನ್ಯಾಯಾಲಯದ ಎದುರು ಶರಣಾಗಲು ಒಂದು ವಾರಗಳ ಕಾಲಾವಕಾಶ ಕೂಡಾ ನೀಡಿತ್ತು.

ಒಂದು ವಾರದ ಅವಧಿಯಲ್ಲಿ ಸಂಬಂಧಪಟ್ಟ ವಿಚಾರಣಾ ನ್ಯಾಯಾಲಯ /ಜೈಲು ಪ್ರಾಧಿಕಾರದ ಮುಂದೆ ಶರಣಾಗುವಂತೆ ಶಾಸಕ ವಿನಯ್ ಕುಲಕರ್ಣಿಗೆ ಸುಪ್ರೀಂಕೋರ್ಟ್ ಸೂಚಿಸಿತ್ತು.

ಕುಲಕರ್ಣಿ ಮತ್ತು ಇತರ ಆರೋಪಿಗಳು ತಮ್ಮ ಮೇಲೆ ವಿಧಿಸಲಾದ ಷರತ್ತುಗಳನ್ನು ಉಲ್ಲಂಘಿಸಿ ಸಾಕ್ಷಿಗಳನ್ನು ಸಂಪರ್ಕಿ ಸಲು ಮತ್ತು ಪ್ರಭಾವ ಬೀರಲು ಪ್ರಯತ್ನಿಸಿದ್ದಾರೆ ಎಂಬುದನ್ನು ಸುಪ್ರೀಂ ಕೋರ್ಟ್ ಗಮನಿಸಿತ್ತು.

ಬೆಂಬಲಿಗರಿಂದ ಸಂಭ್ರಮಾಚರಣೆ: ಧಾರವಾಡ ಗ್ರಾಮೀಣ ಶಾಸಕ ವಿನಯ್ ಕುಲಕರ್ಣಿ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿದ ಹಿನ್ನೆಲೆ ಕಾಂಗ್ರೆಸ್ ಕಾರ್ಯಕರ್ತರು ಧಾರವಾಡದಲ್ಲಿ ಸಂಭ್ರಮಾಚರಿಸಿದರು.

ಕಿರುಸುದ್ದಿ

ನಿಧಿ ನೀಡಿದ ಪ್ರಜ್ವಲ್ ರಿತ್ತಿಗೆ ನಿವೇಶನ

• **ಗದಗ:** ತಾಲೂಕಿನ ಲಕ್ಕುಂಡಿ ಗ್ರಾಮದಲ್ಲಿ ಕಳೆದ ತಿಂಗಳು ತನ್ನ ಮನೆ ನಿರ್ಮಾಣದ ಸಂದರ್ಭದಲ್ಲಿ ಚಿನ್ನಾಭರಣಗಳ ನಿಧಿ ಸಿಕ್ಕಿದ್ದನ್ನು ಸರ್ಕಾರಕ್ಕೆ ಒಪ್ಪಿಸಿದ್ದ ಬಾಲಕ ಪ್ರಜ್ವಲ್ ರಿತ್ತಿ ಕುಟುಂಬಕ್ಕೆ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ನಿವೇಶನ ವಿತರಿಸಿದರು. ಈ ಕುರಿತು ವಿಷಯ ತಿಳಿಸಿದ ಅಭಿವೃದ್ಧಿ ಅಧಿಕಾರಿ ಅಮೀರನಾಯಕ ಅವರು, ಮಾರುತಿ ನಗರದ 7 ಎಕರೆ ಕ್ಷೇತ್ರದಲ್ಲಿಯ 274 / 4ರ ಸರ್ವೆಯಲ್ಲಿ ನಿವೇಶನ ವಿತರಿಸಲಾಗಿದ್ದು, ಸ್ಥಳದಲ್ಲಿ ಜಿ.ಪಿ.ಎಸ್ ಭಾವಚಿತ್ರವನ್ನು ತೆಗೆಯಲಾಗಿದೆ ಎಂದು ತಿಳಿಸಿದರು. ಕಳೆದ ಜ.22ರಂದು ಗ್ರಾಮ ಪಂಚಾಯತಿಯು ವಿಶೇಷ ಗ್ರಾಮ ಸಭೆಯನ್ನು ಕರೆದು ಪ್ರಜ್ವಲ್‌ನ ತಾಯಿ ಗಂಗವ್ವಳನ್ನು ಫಲಾನುಭವಿ ಅಂತ ಆಯ್ಕೆ ಮಾಡಲಾಗಿತ್ತು. ನಂತರ ಗಣರಾಜ್ಯೋತ್ಸವದಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರು ಸರ್ಕಾರದಿಂದ 5 ಲಕ್ಷ ರೂ. ಬಹುಮಾನದೊಂದಿಗೆ ನಿವೇಶನ ನೀಡುವ ಪತ್ರವನ್ನು ನೀಡಿದ್ದರು. ಅದರಂತೆ ರಿತ್ತಿ ಕುಟುಂಬಕ್ಕೆ ನಿವೇಶನವನ್ನು ನೀಡಿದ್ದಾರೆ. ನಿವೇಶನವನ್ನು ನೀಡಿರುವುದಕ್ಕೆ ಪ್ರಜ್ವಲ್ ರಿತ್ತಿ ಕುಟುಂಬವು ಸಂತಸ ವ್ಯಕ್ತಪಡಿಸಿದೆ.

ಎಫ್‌ಐಆರ್ ರದ್ದತಿ ಕೋರಿ ಮುತ್ಯಾ ಹೈಕೋರ್ಟ್ ಮೊರೆ

• **ಕಲಬುರಗಿ:** ತಮ್ಮ ವಿರುದ್ಧ ದಾಖಲಾಗಿರುವ ಪೋಕ್ಸೋ ಪ್ರಕರಣದ ಎಫ್‌ಐಆರ್ ರದ್ದತಿ ಕೋರಿ ಯಾದಗಿರಿ ಜಿಲ್ಲೆಯ ಮಹಲ್ ರೋಜಾ ಮಠದ ಮಲ್ಲಿಕಾರ್ಜುನ ಮುತ್ಯಾ ಕರ್ನಾಟಕ ವಿಭಾಗೀಯ ಹೈಕೋರ್ಟ್ ಪೀಠಕ್ಕೆ ಮೊರೆ ಹೋಗಿದ್ದಾರೆ. ಲೈಂಗಿಕ ಕಿರುಕುಳ ನೀಡಿಲ್ಲ, ದುರುದ್ದೇಶದಿಂದ ದೂರು ದಾಖಲಿಸಲಾಗಿದೆ. ಹೀಗಾಗಿ ಎಫ್‌ಐಆರ್ ರದ್ದುಗೊಳಿಸುವಂತೆ ಮಲ್ಲಿಕಾರ್ಜುನ ಮುತ್ಯಾ ಕಲಬುರಗಿ ಹೈಕೋರ್ಟ್‌ನ ಏಕ ಸದಸ್ಯತ್ವದ ಪೀಠಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ಸ್ವೀಕಾರವಾಗಿದ್ದು, ಸೋಮವಾರ ಫೆ.2ರಂದು ವಿಚಾರಣೆಗೆ ಬರುವ ಸಾಧ್ಯತೆವಿದೆ.



ಆಡಳಿತಗಾರರಿಗೆ ಬಿಎಸ್‌ವೈ ಸ್ಫೂರ್ತಿ: ಬೊಮ್ಮಾಯಿ

• **ಬೆಂಗಳೂರು:** ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ನಾಡು ಕಂಡ ಅತ್ಯಂತ ಶ್ರೇಷ್ಠ ಧೀಮಂತ ನಾಯಕರು. ಅವರು ಮುಖ್ಯಮಂತ್ರಿಯಾಗಿ ಮಾಡಿರುವ ಕಾರ್ಯಗಳು ಆಡಳಿತಗಾರರಿಗೆ ಸ್ಫೂರ್ತಿಯಾಗಿವೆ ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಯಡಿಯೂರಪ್ಪ ಅವರ ಹುಟ್ಟು ಹಬ್ಬದ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣದ ಮೂಲಕ ಹುಟ್ಟುಹಬ್ಬದ ಶುಭಾಶಯ ತಿಳಿಸಿರುವ ಅವರು, ಯಡಿಯೂರಪ್ಪ ಅವರು ರೈತ ಪರ ಜನ ಪರ ಹೋರಾಟದ ಮೂಲಕ ರಾಜ್ಯದ ಜನರ ಮನ ಗೆದ್ದವರು. ಅವರು ಮುಖ್ಯಮಂತ್ರಿಯಾಗಿ ಮಕ್ಕಳಿಗೆ, ಯುವಕರಿಗೆ, ಮಹಿಳೆಯರಿಗೆ ಮಾಡಿರುವ ಕೆಲಸ ಸದಾ ಕಾಲ ಆಡಳಿತಗಾರರಿಗೆ ಸ್ಫೂರ್ತಿಯಾಗುತ್ತದೆ. ರಾಜ್ಯದಲ್ಲಿ ಬಿಜೆಪಿ ಕಟ್ಟಿ ಬೆಳೆಸಿರುವ ಅವರು ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ನಾಡಿನ ಸೇವೆ ಮಾಡಿರುವುದು ಚಿರಸ್ಮರಣೀಯ ಎಂದಿದ್ದಾರೆ. ಯಡಿಯೂರಪ್ಪ ಅವರಿಗೆ ಭಗವಂತ ಹೆಚ್ಚಿನ ಆರೋಗ್ಯ, ಆಯುಷ್ಯ ಶಕ್ತಿಯನ್ನು ಕೊಟ್ಟು ಇನ್ನಷ್ಟು ನಾಡ ಸೇವೆ ಮಾಡುವ ಅವಕಾಶ ಕೊಡುವಂತೆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಅವರಿಗೆ ಹುಟ್ಟು ಹಬ್ಬದ ಶುಭಾಶಯಗಳು ಎಂದು ತಿಳಿಸಿದ್ದಾರೆ.

ಯಾವ ಶಕ್ತಿ ಪ್ರದರ್ಶನ ಇಲ್ಲ: ಡಿಸಿಎಂ ಡಿ.ಕೆ.ಶಿವಕುಮಾರ್

ನನ್ನ ಪರ ಯಾರೂ ದಿಲ್ಲಿಗೆ ಹೋಗೋದು ಬೇಡ

• **ಬೆಂಗಳೂರು:** ನನ್ನ ಪರವಾಗಿ ಯಾರೂ ಹೊಸದಿಲ್ಲಿಗೆ ಹೋಗುವುದು ಬೇಡ. ನಿಮ್ಮ ಸಮಸ್ಯೆ ಗಳು ಇದ್ದರೆ, ಮಂತ್ರಿ ಸ್ಥಾನದ ಆಕಾಂಕ್ಷಿಯಾಗಿದ್ದರೆ, ಅಧಿಕಾರ, ಹುದ್ದೆ ಬೇಕು ಎಂದರೆ ಹೋಗಿ ಮನವಿ ಮಾಡಿಕೊಳ್ಳಿ. ನನ್ನ ವಿಚಾರಕ್ಕೆ ಹೋಗುವುದು ಬೇಡ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮನವಿ ಮಾಡಿದ್ದಾರೆ.

ಶುಕ್ರವಾರ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಕೆಲವು ಸಚಿವರು, ಶಾಸಕರು ದೆಹಲಿಗೆ ಹೋಗಿ ನನ್ನ ಪರವಾಗಿ ಮನವಿ ಮಾಡುವುದು ಬೇಡ. ನಾನು ಸಿಎಂ ಆಗಬೇಕು ಎಂದು ಕೆಲಸ ಶಾಸಕರು ಹೇಳಿಕೆ ನೀಡಿದ್ದಾರೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಜತೆಗೆ ಅವರು ಯಾರು ಮಾತನಾಡಿಲ್ಲ. ಕೆಲವರು ಆಸೆ ಇಟ್ಟುಕೊಂಡಿದ್ದಾರೆ ಎಂದರು.

40ಕ್ಕೂ ಹೆಚ್ಚು ಶಾಸಕರು ಖಾಸಗಿ ಹೋಟೆಲ್‌ನಲ್ಲಿ ಸೇರಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಶಾಸಕರು ಸೇರಿರುವುದು ಯಾವ ಶಕ್ತಿ ಪ್ರದರ್ಶನವೂ ಇಲ್ಲ, ಕೆಲವರು ವಿಶ್ರಾಂತಿ, ಅಧ್ಯಯನಕ್ಕೆ ವಿದೇಶಕ್ಕೆ ಹೋಗುತ್ತಾರೆ. ಕೆಲವರು ದೆಹಲಿಗೆ ಹೋದರೆ, ಮತ್ತೆ ಕೆಲವರು ಭೋಜನ ಕೂಟ ಸೇರುತ್ತಾರೆ. ಅವರ ವೈಯಕ್ತಿಕ ವಿಚಾರಕ್ಕೂ ಪಕ್ಷಕ್ಕೂ ಸಂಬಂಧವಿಲ್ಲ ಎಂದು ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು.

ಕಾವೇರಿ ಆರನೇ ಹಂತಕ್ಕೆ ಒಪ್ಪಿಗೆ

ಸಚಿವ ಸಂಪುಟ ಸಭೆಯಲ್ಲಿ ಕಾವೇರಿ ಆರನೇ ಹಂತದ ಕುಡಿಯುವ ನೀರಿನ ಯೋಜನೆಗೆ ಒಪ್ಪಿಗೆ ನೀಡಿರುವುದು ಐತಿಹಾಸಿಕ ನಿರ್ಧಾರ. ಭವಿಷ್ಯದಲ್ಲಿ ಬೆಂಗಳೂರು ಬೆಳೆಯುವುದನ್ನು ಗಮನದಲ್ಲಿಟ್ಟುಕೊಂಡು 7 ಸಾವಿರ ಕೋಟಿ ವೆಚ್ಚದಲ್ಲಿ ಈ ಯೋಜನೆ ಮಾಡಲಾಗುತ್ತಿದೆ. ಇದಕ್ಕೆ ಜೈಕಾ ಸಂಸ್ಥೆ ನೆರವು ಪಡೆಯಲಾಗುತ್ತಿದೆ. ನಾನು ಸಚಿವನಾದ ಬಳಿಕ ಕಾವೇರಿಯ 6 ಟಿಎಂಸಿ ನೀರನ್ನು ಬೆಂಗಳೂರಿಗೆ ನೀಡಲು ಅನುಮೋದನೆ ನೀಡಿದ್ದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.



ನಾವು ಹಳಬರಾಗಿದ್ದೇವೆ, ಹೊಸಬರಿಗೆ ಮಂತ್ರಿ ಆಸೆ ಇದೆ: ಹೊಸಬರಿಗೆ ಮಂತ್ರಿ ಆಗುವ ಆಸೆ ಇರುತ್ತದೆ. ನಾನು, ಪರಮೇಶ್ವರ್, ಎಚ್.ಕೆ. ಪಾಟೀಲ್, ಮಹದೇವಪ್ಪ, ಸಿದ್ದರಾಮಯ್ಯ ಸೇರಿ ನಾವೀಗ ಹಳಬರಾದೆವು. ಚಿಕ್ಕ ವಯಸ್ಸಿನಲ್ಲೇ ಮಂತ್ರಿಯಾದವರು. ಈಗ ಹೊಸಬರು ಮಂತ್ರಿ ಆಗಬೇಕು ಎಂಬ ಆಸೆ ವ್ಯಕ್ತಪಡಿಸುತ್ತಿದ್ದಾರೆ. ನೋಡೋಣ, ನಾನು ಈ ವಿಚಾರವನ್ನು ಹೈಕಮಾಂಡ್ ಗಮನಕ್ಕೆ ತರುತ್ತೇನೆ ಎಂದು ತಿಳಿಸಿದರು.

ಹಳೆ ಮೀಸಲಾತಿ ಅನ್ವಯ ನೇಮಕಾತಿ: ನಾವು ಹೊಸ ಮೀಸಲಾತಿ ಮಾಡಿದ್ದರೂ 2022ರ ನ್ಯಾಯಾಲಯ ಆದೇಶ ಅನುಸಾರ ಹಳೆ ಮೀಸಲಾತಿ ಮೇಲೆ ಮೊದಲ ಹಂತದಲ್ಲಿ 56 ಸಾವಿರ ನೇಮಕಾತಿ ಮಾಡಲು ತೀರ್ಮಾನಿಸಲಾಗಿದೆ. ಉದ್ಯೋಗ ನೀಡುವುದಾಗಿ ನಾವು ಯುವಕರಿಗೆ ಮಾತು ನೀಡಿದ್ದು, ಅದರಂತೆ ನೇಮಕಾತಿ ಮಾಡುತ್ತೇವೆ. 1 ಲಕ್ಷಕ್ಕೂ ಹೆಚ್ಚು ಹುದ್ದೆಗಳಿಗೆ ನೇಮಕಾತಿ ಮಾಡಬೇಕು. ಎಲ್ಲವನ್ನೂ ಏಕಕಾಲಕ್ಕೆ ಮಾಡಿದರೆ ಕೆಲವರಿಗೆ ಅವಕಾಶ ಸಿಗುವುದಿಲ್ಲ ಎಂಬ ಕಾರಣಕ್ಕೆ ಹಂತ ಹಂತವಾಗಿ ಮಾಡುತ್ತೇವೆ ಎಂದರು.

85 ಅಭ್ಯರ್ಥಿಗಳಿಗೆ ನೇಮಕ ಪತ್ರ ವಿತರಣೆ

• **ಬೆಂಗಳೂರು:** ಕಾರ್ಮಿಕ ಇಲಾಖೆಯ ವ್ಯಾಪ್ತಿಯ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವಿವಿಧ ಹುದ್ದೆಗಳಿಗೆ ಆಯ್ಕೆಯಾದ 85 ಅಭ್ಯರ್ಥಿಗಳಿಗೆ ಶುಕ್ರವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಚಿವ ಸಂತೋಷ್ ಲಾಡ್ ನೇಮಕಾತಿ ಪತ್ರ ವಿತರಿಸಿದರು.

ಈ ವೇಳೆ ಮಾತನಾಡಿದ ಸಚಿವರು, ಮಂಡಳಿಯು 2007ರಲ್ಲಿ ಸ್ಥಾಪನೆಯಾಗಿದೆ. ಸರ್ಕಾರದ 2020ರ ಅಧಿಸೂಚನೆಯನ್ವಯ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿ ಒಟ್ಟು 643 ಹುದ್ದೆಗಳನ್ನು ಸೃಜಿಸಲಾಗಿದೆ. 2022ರಲ್ಲಿ ಉಳಿಕೆ ಮೂಲ ವೃಂದದ 128 ಹುದ್ದೆಗಳು ಮತ್ತು ಕಲ್ಯಾಣ ಕರ್ನಾಟಕ ವೃಂದದ 58 ಹುದ್ದೆಗಳು ಸೇರಿ ಒಟ್ಟು 191 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿಸಿತ್ತು.

ಈ ಪೈಕಿ 186 ಹುದ್ದೆಗಳನ್ನು ಭರ್ತಿ ಮಾಡಲು 2023ರಲ್ಲಿ ಅಧಿಸೂಚನೆ ಹೊರಡಿಸಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ 2024ರಲ್ಲಿ ಅರ್ಹತಾ ಪಟ್ಟಿಯನ್ನೂ ಪ್ರಕಟಿಸಿತ್ತು. ಅದನ್ನು ಬಳಿಕ ತಡೆ ಹಿಡಿದ್ದರಿಂದ ಆಯ್ಕೆ ಪಟ್ಟಿ ತಡೆ ಹಿಡಿಯಲಾಗಿತ್ತು ಎಂದರು.



ಕಳೆದ ವರ್ಷ ಮಂಡಳಿಯಿಂದ ಸರ್ಕಾರಕ್ಕೆ ಪತ್ರ ಬರೆದು ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸಿರುವ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಲು ಪಾಲಿಸಬೇಕಾದ ವಿಧಿ ವಿಧಾನಗಳ ಬಗ್ಗೆ ಸ್ಪಷ್ಟೀಕರಣ ಕೇಳಿತ್ತು. ಸ್ಪಷ್ಟೀಕರಣ ನೀಡಿದ್ದರಿಂದ ಕಳೆದ ಅಕ್ಟೋಬರ್‌ನಲ್ಲಿ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ.

ಅಂತಿಮವಾಗಿ ಎಲ್ಲಾ ದಾಖಲೆಗಳನ್ನು ಸಲ್ಲಿಸಿದ 85 ಅಭ್ಯರ್ಥಿಗಳಿಗೆ ಸ್ಥಳ ನಿಯೋಜನೆಗೆ ಫೆ.18ರಂದು ಮಂಡಳಿಯಲ್ಲಿ ಪಾರದರ್ಶಕವಾಗಿ ಕೌನ್ಸಲಿಂಗ್ ನಡೆಸಲಾಗಿದೆ. ಇಂದು ಅವರಿಗೆಲ್ಲ ನೇಮಕಾತಿ ಪತ್ರ ಹಸ್ತಾಂತರಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕರಾದ ಕೆ.ಎಂ. ಶಿವಲಿಂಗೇಗೌಡ, ಬಿಲ್ಕೀಸ್ ಬಾನು, ಕಾರ್ಮಿಕ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಜಾನಪದ ಅಕಾಡೆಮಿಗೆ ಅನುದಾನ: ತಂಗಡಗಿ

• **ಬೆಂಗಳೂರು:** ಜಾನಪದ ಅಕಾಡೆಮಿಗೆ ಶಕ್ತಿ ತುಂಬಲು ಸರ್ಕಾರದಿಂದ ಹೆಚ್ಚಿನ ಅನುದಾನ ಕೊಡಿಸುವ ಪ್ರಾಮಾಣಿಕ ಕೆಲಸ ಮಾಡುತ್ತೇನೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ತಿಳಿಸಿದರು.



ಕರ್ನಾಟಕ ಜಾನಪದ ಅಕಾಡೆಮಿಯು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಶುಕ್ರವಾರ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಹಾಗೂ ಪ್ರಶಸ್ತಿ ಪುರಸ್ಕೃತರ ಪರಿಚಯ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಪ್ರಸಕ್ತ ಸಾಲಿನಲ್ಲೇ ಉತ್ತರ ಕರ್ನಾಟಕ ಭಾಗದಲ್ಲಿ ಜಾನಪದ ಮಹಿಳಾ ಉತ್ಸವ ಹಮ್ಮಿಕೊಳ್ಳಲಾಗುತ್ತದೆ. ಉತ್ಸವಕ್ಕೆ ಬೇಕಾದ ಅನುದಾನವನ್ನು ನೀಡಲಿದ್ದೇನೆ. ಜಾನಪದ ಮಹಿಳಾ ಉತ್ಸವವು ಅಕಾಡೆಮಿಯ ಬಹು ದಿನದ ಬೇಡಿಕೆ ಆಗಿತ್ತು. ಹಾಗಾಗಿ ಉತ್ತರ ಕರ್ನಾಟಕದ ಬೀದರ್, ಕಲಬುರಗಿ ಹಾಗೂ ರಾಯಚೂರು ಸೇರಿದಂತೆ ಒಂದು ಜಿಲ್ಲೆಯನ್ನು ಆಯ್ಕೆಗೊಳಿಸಿದರೆ, ಅಲ್ಲಿ ದೊಡ್ಡ ಮಟ್ಟದಲ್ಲಿ ಜಾನಪದ ಮಹಿಳಾ ಉತ್ಸವ ಮಾಡೋಣ ಎಂದರು.

> **ಆಧುನಿಕ ದಿನಗಳಲ್ಲಿ ಜಾನಪದ ಕಲೆ ಹಾಗೂ ಪರಂಪರೆಯನ್ನು ಉಳಿಸಿಕೊಳ್ಳಬೇಕಿದ್ದು, ಈ ನಿಟ್ಟಿನಲ್ಲಿ ಜಾನಪದ ಅಕಾಡೆಮಿ ಸೇರಿದಂತೆ ಎಲ್ಲಾ ಅಕಾಡೆಮಿಗಳ ಕಾರ್ಯಕ್ರಮಗಳು ರಾಜ್ಯಾದ್ಯಂತ ಪಸರಿಸಬೇಕಿದೆ.**
> ■ **ಶಿವರಾಜ್ ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ**

ಜಾನಪದ ಅಕಾಡೆಮಿಗೆ ಶಕ್ತಿ ತುಂಬಲು ಸರ್ಕಾರದಿಂದ ಹೆಚ್ಚಿನ ಅನುದಾನ ಕೊಡಿಸುವ ಪ್ರಾಮಾಣಿಕ ಕೆಲಸ ಮಾಡುತ್ತೇನೆ. ಈ ಕುರಿತಂತೆ ಮುಖ್ಯಮಂತ್ರಿಗಳಿಗೂ ಮನವಿ ಸಲ್ಲಿಸಿದ್ದೇನೆ. ಅವರು ಸಹ ಸಾಹಿತ್ಯ, ಕಲೆ, ಜಾನಪದ ಸಂಸ್ಕೃತಿಯ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದರಿಂದ ಅಕಾಡೆಮಿಗಳಿಗೆ ಶಕ್ತಿ ತುಂಬುವ ಕೆಲಸ ಸರ್ಕಾರದಿಂದ ಆಗಲಿದೆ ಎಂದು ಹೇಳಿದರು. ಜಾನಪದ ಅಕಾಡೆಮಿಯ ಅಧ್ಯಕ್ಷ ಡಾ. ಗೊಲ್ಲಹಳ್ಳಿ ಶಿವಪ್ರಸಾದ್ ಮಾತನಾಡಿ, ಜಾನಪದ ಕಲೆ ಹಾಗೂ ಕಲಾವಿದ ಕಲಾವಿದರನ್ನು ಪೋಷಿಸುವ, ಪ್ರೋತ್ಸಾಹಿಸುವ ಮತ್ತು ಗೌರವಿಸುವ ಕಾರ್ಯವನ್ನು ಜಾನಪದ ಅಕಾಡೆಮಿ ಮಾಡುತ್ತಿದೆ ಎಂದರು.

ಕರ್ನಾಟಕ ಜಾನಪದ ಅಕಾಡೆಮಿಯ ವತಿಯಿಂದ 30 ಜನ ಕಲಾವಿದರಿಗೆ 2025ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ, ಇಬ್ಬರು ವಿದ್ವಾಂಸರಿಗೆ ತಜ್ಞ ಪ್ರಶಸ್ತಿ ಹಾಗೂ ಇಬ್ಬರು ಜಾನಪದ ಲೇಖಕರಿಗೆ 2024ನೇ ಸಾಲಿನ ಪುಸ್ತಕ ಬಹುಮಾನವನ್ನು ನೀಡಲಾಯಿತು.

ದಲಿತ ಸಚಿವರು ರಾಜೀನಾಮೆ ನೀಡಲಿ

• **ಬೆಂಗಳೂರು:** ದಲಿತರ ಕುರಿತು ತಮಗೆ ಬದ್ಧತೆ, ಸಾಮಾಜಿಕ ಕಳಕಳಿ ಇದ್ದರೆ ದಲಿತ ಸಚಿವರು ತಕ್ಷಣ ರಾಜೀನಾಮೆ ಕೊಡಬೇಕು. ಮಾನವೀಯತೆ ಇದ್ದರೆ, ಮೀಸಲು ಕ್ಷೇತ್ರದಿಂದ ಗೆದ್ದಿದ್ದರೆ 54 ಶಾಸಕರು ಮುಂದಿನ ವಿಧಾನಸಭಾ ಕಲಾಪ ಗಳಲ್ಲಿ ಭಾಗವಹಿಸಬಾರದು; ರಾಜೀ ನಾಮೆ ಕೊಡಿ ಎಂದು ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ ಆಗ್ರಹಿಸಿದ್ದಾರೆ.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪಂಗಡದ 54 ಜನ ಶಾಸಕರಿದ್ದಾರೆ. ಶಿಕ್ಷಣದಲ್ಲಿ ಕ್ರಾಂತಿ ಆಗಿದೆ. ಆದರೆ, ಈ 54 ಜನರು ಮಾತನಾಡುತ್ತಿಲ್ಲ, ಸಚಿವ ಸಂಪುಟ ಸಭೆಯಲ್ಲಿ ಸಚಿವರು ಮಾತನಾಡುವುದಿಲ್ಲ, ಯಾಕೆ ನೀವು ಸಚಿವ ಸ್ಥಾನದಲ್ಲಿ ಇದ್ದೀರಿ? ನಾವು ಹೋರಾಟದ ಕಡೆ ಹೆಜ್ಜೆ ಇಡಲಿದ್ದೇವೆ ಎಂದು ಪ್ರಕಟಿಸಿದರು.

ರಾಜ್ಯದ ಮುಖ್ಯಮಂತ್ರಿಗಳೂ ರಾಜೀನಾಮೆ ನೀಡಬೇಕು. 35 ವರ್ಷ ಹೋರಾಟ ಮಾಡಿದ ಮಾದಿಗರಿಗೆ ಸಿದ್ದರಾಮಯ್ಯ ಅವರು ತಿರುಪತಿ ನಾಮ ಇಟ್ಟಿದ್ದಾರೆ. ರಾಜ್ಯದ ಇಡೀ ದಲಿತರಿಗೆ ಚೆಂಬು ಕೊಟ್ಟಿದ್ದಾರೆ. ಒಳ ಮೀಸಲಾತಿ ವಿಚಾರದಲ್ಲಿ 101 ಜಾತಿಗೂ ಅವರು ಚೆಂಬು ನೀಡಿದ್ದಾರೆ. ಉದ್ಯೋಗಾಕಾಂಕ್ಷಿ ಯುವಜನರ ಕಿವಿಗೆ ಚೆಂಡು ಹೂವನ್ನು ಇಟ್ಟಿದ್ದಾರೆ ಎಂದು ಆರೋಪಿಸಿದರು. ರಾಜ್ಯ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಹೂಡಿ ಮಂಜುನಾಥ್ ಇದ್ದರು.

ಕಾಂಗ್ರೆಸ್‌ನಿಂದ ಅಭಿವೃದ್ಧಿ ಕ್ಷೀಣ: ಛಲವಾದಿ

• **ದಾವಣಗೆರೆ:** ರಾಜ್ಯದ ಕಾಂಗ್ರೆಸ್ ಸರ್ಕಾರ ಮೀಸಲಾತಿ, ಒಳ ಮೀಸಲಾತಿ, ಉದ್ಯೋಗ, ಶಿಕ್ಷಣ, ಅಭಿವೃದ್ಧಿ ಹೀಗೆ ಎಲ್ಲದರಲ್ಲೂ ಹಿಂದೆ ಬಿದ್ದಿದೆ. ತನ್ನದೇ ತಪ್ಪುಗಳಿಂದ ಸಂಕಷ್ಟ ಮೈಮೇಲೆಳೆದುಕೊಂಡು ಜನರ ಮುಂದೆ ಮುಜುಗರಕ್ಕೀಡಾಗುತ್ತಿದೆ ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವಿಧಾನ ಸಭೆ ಚುನಾವಣೆ ಪೂರ್ವದಲ್ಲಿ 2 ಲಕ್ಷಕ್ಕೂ ಅಧಿಕ ಹುದ್ದೆ ಖಾಲಿಗಳನ್ನು ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ ಭರ್ತಿ ಮಾಡಿಕೊಳ್ಳುವುದಾಗಿ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಧಾರವಾಡದಲ್ಲಿ ವಿದ್ಯಾರ್ಥಿ-ಯುವಜನರು ಸರ್ಕಾರಿ ಹುದ್ದೆಗಳ ಭರ್ತಿಗಾಗಿ ತೀವ್ರ ಸ್ವರೂಪದ ಹೋರಾಟ ನಡೆಸಿದ ಪರಿಣಾಮ ಈಗ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಾಗಿ ಕಾಂಗ್ರೆಸ್ ಸರ್ಕಾರ ಹೇಳಿದೆ ಎಂದರು.

ಮಾಜಿ ಶಾಸಕ ಎಂ. ಬಸವರಾಜ ನಾಯ್ಕ, ಪಕ್ಷದ ಜಿಲ್ಲಾಧ್ಯಕ್ಷ ಎನ್. ರಾಜಶೇಖರ, ಮುಖಂಡರಾದ ಧನಂಜಯ ಕಡ್ಲೇಬಾಳು ಇದ್ದರು.



> **ಸಿದ್ದರಾಮಯ್ಯ ಸರ್ಕಾರ ಕಳೆದ 2-3 ವರ್ಷಗಳಿಂದ ಏನು ಮಾಡಿದೆ? ಕಾಂಗ್ರೆಸ್ ಹಾಗೂ ಬಿಜೆಪಿ ಸರ್ಕಾರಗಳ ಅವಧಿಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇದ್ದವು, ಯಾವ ಸರ್ಕಾರದಲ್ಲಿ ಎಷ್ಟು ನೇಮಕಾತಿ ನಡೆದವು? ಎಂಬ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶ್ವೇತಪತ್ರ ಹೊರಡಿಸಲಿ.**
> ■ **ಛಲವಾದಿ ನಾರಾಯಣಸ್ವಾಮಿ, ಪ್ರತಿಪಕ್ಷ ನಾಯಕ**

ಕಡೇ ಕ್ಷಣದಲ್ಲಿ ಮದುವೆ ನಿರಾಕರಿಸಿದ ವಧು!

• **ಚಿಕ್ಕಮಗಳೂರು:** ಕಡೇ ಕ್ಷಣದಲ್ಲಿ ವಧು ಮದುವೆ ನಿರಾಕರಿಸಿದ ಕಾರಣ ವಿವಾಹವೊಂದು ಮದುವೆ ಮಂಟಪದಲ್ಲೇ ಮುರಿದುಬಿದ್ದ ಪ್ರಸಂಗ ಶೃಂಗೇರಿ ಪಟ್ಟಣದ ಈಡಿಗ ಸಮುದಾಯ ಭವನದಲ್ಲಿ ಶುಕ್ರವಾರ ನಡೆದಿದೆ. 41 ವರ್ಷದ ಯುವಕನ ಜೊತೆ 29 ವರ್ಷದ ಯುವತಿಯ ಮದುವೆ ನಿಶ್ಚಯವಾಗಿತ್ತು. ಆದರೆ, ವರನು ತನ್ನ ವಯಸ್ಸಿನ ಬಗ್ಗೆ ಸುಳ್ಳು ಹೇಳಿದ್ದಾನೆಂದು ಆರೋಪಿಸಿ ವಧು ಮದುವೆಯನ್ನೇ ನಿರಾಕರಿಸಿದ್ದಾಳೆ.

ವರನ ಮೇಲೆ ಈ ಹಿಂದೆ ಇದ್ದ ಪೊಲೀಸ್ ಪ್ರಕರಣಗಳನ್ನು ಮುಚ್ಚಿಡಲಾಗಿದೆ. ಆತನ ತಾಯಿಯ ಅನಾರೋಗ್ಯದ ವಿಷಯವನ್ನೂ ಮರೆಮಾಚಲಾಗಿದೆ ಎಂಬುದು ಯುವತಿಯ ಆರೋಪವಾಗಿದೆ. ಮದುವೆಗೆ ಮೊದಲು ಯಾವುದೇ ಪ್ರಶ್ನೆ ಕೇಳಿದರೂ ಮದುವೆಯಾದ ನಂತರ ಉತ್ತರಿಸುವುದಾಗಿ ವರ ಹೇಳುತ್ತಿದ್ದನೆನ್ನಲಾಗಿದೆ.

ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ಬೆಲ್ಲದ ಮನವಿ

ಹುದ್ದೆ ಭರ್ತಿ ಪಾರದರ್ಶಕತೆಯಿಂದ ನಡೆಯಲಿ

• **ಹುಬ್ಬಳ್ಳಿ:** ರಾಜ್ಯ ಸರ್ಕಾರ ಉದ್ಯೋಗಾಕಾಂಕ್ಷಿಗಳ ಹೋರಾಟಕ್ಕೆ ಮಣಿದು ವಿವಿಧ ಇಲಾಖೆಯಲ್ಲಿ 56 ಸಾವಿರ ಹುದ್ದೆ ಭರ್ತಿ ಮಾಡುವುದಾಗಿ ಹೇಳಿದ್ದು, ಭ್ರಷ್ಟಾಚಾರ ರಹಿತ ಹಾಗೂ ಪಾರದರ್ಶಕತೆಯಿಂದ ಪ್ರಕ್ರಿಯೆ ನಡೆಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ ಆಗ್ರಹಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ ಇನ್ನೂ 30 ದಿನಗಳಲ್ಲಿ ಭರ್ತಿ ಮಾಡುವುದಾಗಿ ಒಪ್ಪಿಕೊಂಡಿದೆ. ಉದ್ಯೋಗಾಕಾಂಕ್ಷಿಗಳ ಮತ್ತು ಬಿಜೆಪಿ ಪ್ರತಿಭಟನೆಗೆ ಸರ್ಕಾರ ಮಣಿದಿದೆ. ಒಂದು ವೇಳೆ ನಿರ್ಲಕ್ಷ್ಯ ವಹಿಸಿದ್ದರೆ ಗಂಭೀರ ಪರಿಣಾಮ ಎದುರಿಸಬೇಕು ಎಂಬ ಭಯದಿಂದ ಸೂಕ್ತ ನಿರ್ಧಾರ ಕೈಗೊಂಡಿದೆ ಎಂದು ತಿಳಿಸಿದರು.

ಕೆಲವೇ ತಿಂಗಳುಗಳಲ್ಲಿ ಸ್ಥಳೀಯ ಸಂಸ್ಥೆಯ ಚುನಾವಣೆಗಳು ನಡೆಯಲಿದ್ದು, ನೀತಿ ಸಂಹಿತೆ ಜಾರಿಗೂ ಮುನ್ನವೇ ಅಧಿಸೂಚನೆ ಹೊರಡಿಸಬೇಕು. ಅಧಿಸೂಚನೆ ಹೊರಡಿಸಿದ ಮೂರು ತಿಂಗಳ ಒಳಗಾಗಿ ನೇಮಕಾತಿ ಪತ್ರ ನೀಡಬೇಕು ಎಂದು ಆಗ್ರಹಿಸಿದರು.

ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಸಂಬಂಧಿಸಿದ ಪ್ರಕರಣ ನ್ಯಾಯಾಲಯದಲ್ಲಿದೆ. ಸರ್ಕಾರ ಇದರ ನೆಪ ಹೇಳದೇ ಈ ಹಿಂದಿನ 6:6:5 ಅನುಪಾತದಲ್ಲಿ ನೇಮಕಾತಿ ಮಾಡಿಕೊಳ್ಳಬೇಕು ಮತ್ತು ಈ ಸಂಬಂಧ ವಿಶೇಷ ಸಭೆ ಕರೆದು, ಕಾನೂನು ತಜ್ಞರೊಂದಿಗೆ ಸಮಾಲೋಚನೆ ನಡೆಸಿ, ನ್ಯಾಯಾಲಯಕ್ಕೆ ನಿರುದ್ಯೋಗಿಗಳ ಸಮಸ್ಯೆಗಳನ್ನು ಮನವರಿಕೆ ಮಾಡಲು ಪ್ರಯತ್ನಿಸಬೇಕು.

ಯಾವ ಸಮಾಜ, ಸಮುದಾಯಕ್ಕೂ ಮೀಸಲಾತಿ ವಿಚಾರದಲ್ಲಿ ಅನ್ಯಾಯ ಆಗದಂತೆ ಕ್ರಮ ವಹಿಸಬೇಕು ಎಂದು ವಿವರಿಸಿದರು ಎಂದು ಹೇಳಿದರು. ಮಾಜಿ ಮಹಾಪೌರ ರಾಮಣ್ಣ ಬಡಿಗೇರ ಸೇರಿದಂತೆ ಅನೇಕರಿದ್ದರು.

ಹೋರಾಟದಿಂದ ಬಿಜೆಪಿಗೆ ಜಯ



ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವ ಹೋರಾಟದಲ್ಲಿ ವಿದ್ಯಾರ್ಥಿ ಸಂಘಟನೆ ಮತ್ತು ಬಿಜೆಪಿಗೆ ಜಯ ಲಭಿಸಿದೆ. ಆದರೆ, ಹೋರಾಟದ ಸಂದರ್ಭದಲ್ಲಿ ಆದ ಸಣ್ಣ ಪುಟ್ಟ ಘಟನೆಗಳನ್ನು ಮನದಲ್ಲಿಟ್ಟುಕೊಂಡು ಪೊಲೀಸರು ವಿದ್ಯಾರ್ಥಿ ನಾಯಕರ ಮೇಲೆ ಪ್ರಕರಣ ದಾಖಲಿಸುವ ಕೆಲಸ ಮಾಡಬಾರದು. 30-40 ಸಾವಿರ ಜನ ಸೇರಿದಾಗ ಸಣ್ಣ ಪುಟ್ಟ ಘಟನೆಗಳು ಆಗುವುದು ಸಹಜ ಅದನ್ನೇ ದೊಡ್ಡದಾಗಿ ಬಿಂಬಿಸುವ ಕೆಲಸ ಆಗಬಾರದು ಎಂದರು.

ಹೊರಗಡೆ ಔಷಧಿ ಬರೆದು ಕೊಟ್ಟರೆ ಕ್ರಮ: ಸಚಿವ

• **ಕಲಬುರಗಿ:** ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಯಾವುದೇ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಹೊರಗಡೆಯ ಮೆಡಿಸಿನ್ ಬರೆದು ಕೊಡುವಂತಿಲ್ಲ. ಒಂದು ವೇಳೆ ಯಾರಾದರೂ ಬರೆದು ಕೊಟ್ಟರೆ ಅಂತವರ ವಿರುದ್ಧ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ತಿಳಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿರುವ ಯಾವುದೇ ಆಸ್ಪತ್ರೆಗಳಲ್ಲಿ ಔಷಧಿಯ ಕೊರತೆಯಿಲ್ಲ, ಹೀಗಾಗಿ ಹೊರಗಡೆ ಔಷಧಿ ಯಾರು ಬರೆದು ಕೊಡಬಾರದು ಎಂಬ ಸ್ಪಷ್ಟ ನಿರ್ದೇಶನವಿದ್ದು, ಈಗಾಗಲೇ ಈ ಕುರಿತು ಸರ್ಕ್ಯುಲರ್ ಕೂಡ ಹೊರಡಿಸಲಾಗಿದೆ. ಒಂದು ವೇಳೆ ಯಾರಾದರೂ ಈ ನಿರ್ದೇಶನ ಮುರಿದರೇ, ಇಲಾಖೆ ಅವರ ವಿರುದ್ಧ ಸೂಕ್ತ ಕ್ರಮಕ್ಕೆ ಮುಂದಾಗಲಿದೆ ಎಂದರು.

ಸಚಿವ ಸ್ಥಾನ ಕೇಳುವ ಅಧಿಕಾರ ಇದೆ

ಮುಖ್ಯಮಂತ್ರಿ ಬದಲಾವಣೆ ಪಕ್ಷದ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳಲಿದೆ. ನಾನಲ್ಲ, ಸಚಿವ ಸಂಪುಟ ಪುನಾರಚನೆ ಮಾಡುವುದು ಬಿಡುವುದು ಸಿಎಂ ಸಿದ್ದರಾಮಯ್ಯ ಹಾಗೂ ಪಕ್ಷದ ವರಿಷ್ಠರಿಗೆ ಬಿಟ್ಟ ವಿಚಾರ. ಸಚಿವ ಸ್ಥಾನ ಕೇಳುವ ಅಧಿಕಾರ ಎಲ್ಲರಿಗೂ ಇರಲಿದೆ. ಇದರ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಅಂತಿಮವಾಗಿ ಹೈಕಮಾಂಡ್ ಸೂಚಿಸಿದರೆ ಯಾರು ಕೂಡ ಸಚಿವರಾಗಬಹುದು ಎಂದರು.

ನೇಮಕಾತಿ ಆದೇಶ ಮಾಡಿ: ಅಶೋಕ

• **ಮೈಸೂರು:** ಕಾಂಗ್ರೆಸ್ ಸರ್ಕಾರ ಸರ್ಕಾರಿ ಉದ್ಯೋಗದ ನೇಮಕಾತಿ ಆದೇಶ ಮಾಡದೆ ವಿದ್ಯಾರ್ಥಿಗಳನ್ನು ಆಟವಾಡಿಸುತ್ತಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ ಕಿಡಿಕಾರಿದರು.



ಶುಕ್ರವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಸರ್ಕಾರ ನಮ್ಮ ಹೋರಾಟ,ವಿದ್ಯಾರ್ಥಿಗಳ ಹೋರಾಟಕ್ಕೆ ಮಣಿದು, ಇದೀಗ ಹುದ್ದೆಗಳ ನೇಮಕಾತಿ ಆದೇಶ ಮಾಡಿದೆ. 2.84 ಲಕ್ಷ ಹುದ್ದೆಗಳಿಗೆ ನಾವು ಹೋರಾಟ ಮಾಡಿದ್ದರೂ, ಸರ್ಕಾರ 56 ಸಾವಿರ ಹುದ್ದೆಗೆ ನೇಮಕ ಆದೇಶ ಮಾಡಿದೆ. ಉಳಿದ ನೇಮಕಾತಿಗೆ ಯಾವಾಗ ಆದೇಶ ಮಾಡುತ್ತಾರೆಂದು ಸರ್ಕಾರ ತಿಳಿಸಬೇಕು. ಇಲ್ಲವಾದರೆ ಪಾದಯಾತ್ರೆಯ ಚಳವಳಿ ಮಾಡುತ್ತೇವೆ. ಅದೇ ರೀತಿ ಸೇವ್ ಮೈಸೂರು ಸಿಲ್ಕ್ ಎಂಬ ಹೋರಾಟ ಮಾಡುತ್ತೇವೆ. ಇದನ್ನು ದೊಡ್ಡಮಟ್ಟದ ಜನಾಂದೋಲನವಾಗಿ ರೂಪಿಸುತ್ತೇವೆ. ಬಜೆಟ್ ಅಧಿವೇಶನದಲ್ಲೂ ಈ ಬಗ್ಗೆ ಮಾತಾಡುತ್ತೇನೆ ಎಂದರು.

ಸಿಎಂ ಹುದ್ದೆ ಒಪ್ಪಂದ ಬಗ್ಗೆ ಸ್ಪಷ್ಟವಾಗಿ ಹೇಳಿ: ಸಿಎಂ ಹುದ್ದೆ ಒಪ್ಪಂದದ ಬಗ್ಗೆ ಯಾರೂ ಸರಿಯಾಗಿ ಹೇಳುತ್ತಿಲ್ಲ, ಇದೇ ಕಚ್ಚಾಟದಿಂದಾಗಿ ರಾಜ್ಯದ ಅಭಿವೃದ್ಧಿ ಕಡೆಗಣನೆಯಾಗಿದೆ. ಇಬ್ಬರ ಕಿತಾಪತಿಯಿಂದ ಗೊಂದಲ ಸೃಷ್ಟಿಯಾಗಿದೆ. ಇಂತಹ ಕಾಮಿಡಿಯನ್ನು ಜನರು ಎಂಜಾಯ್ ಮಾಡುತ್ತಿದ್ದಾರೆ. ನವೆಂಬರ್ ಕ್ರಾಂತಿ ಆರಂಭವಾಗಿ, ಕಾಂಗ್ರೆಸ್ ಪಕ್ಷದಲ್ಲಿ ಕಹಳೆ ಊದಲಾಗಿದೆ. ಕಾಂಗ್ರೆಸ್ ಶಾಸಕ ಬಾಲಕೃಷ್ಣ ಅವರೇ ಮುಂದೆ ಕಾಂಗ್ರೆಸ್ ಗೆಲ್ಲಲ್ಲ ಎಂದಿದ್ದಾರೆ. ಗ್ಯಾರಂಟಿಗಳನ್ನು ಹೊರೆ ಎಂದು ಈಗ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಚುನಾವಣೆಯಲ್ಲಿ ಘೋಷಣೆ ಮಾಡುವಾಗ ಇವರಿಗೆ ಜ್ಞಾನ ಇರಲಿಲ್ಲ, ಯುವನಿಧಿ ಈಗಾಗಲೇ ಸ್ಥಗಿತವಾಗಿದೆ ಎಂದರು.

ಬೆಂಗಳೂರು

ಶನಿವಾರ, 28 ಫೆಬ್ರವರಿ 2026

ಸಂಪುಟ 33, ಸಂಚಿಕೆ 120, ಪುಟಗಳು 16+4

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

RNI: 58231/94
REG No.KA/BG GPO/2532/2021-23

hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ವ್ಯಾಪಾರ ವೃದ್ಧಿಸಲು ಭಾರತ ಭೇಟಿ | ೧೨ · ಭಾರತದ ಪ್ರತಿಷ್ಠೆಗೆ ಧಕ್ಕೆ ತರುವ ಯತ್ನ | ೧೨ · ಕೇರಳ ಸ್ಟೋರಿ 2 ಬಿಡುಗಡೆಗೆ ಹೈ ನಿಶಾನೆ | ೧೨

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಪುನರ್ವಸು

ದಿನದ ಮಾತು

ಮನುಷ್ಯನಿಗೆ ಬೇಕಾಗಿರುವುದು ವಿವೇಕ ಮತ್ತು ಎಚ್ಚರ. ಮೂಢನಂಬಿಕೆ, ಅಂಧ ಶ್ರದ್ಧೆಗಳಲ್ಲ.

▲ ಲೋಕೋಕ್ತಿ

ವಿಶುದ್ಧ ಚಕ್ರ ನಿಮಗೊಲಿದರೆ...

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ನನ್ನ ಪರ ಯಾರೂ ದಿಲ್ಲಿಗೆ ಹೋಗೋದು ಬೇಡ: ಡಿಕೆಶಿ

• **ಬೆಂಗಳೂರು:** ನನ್ನ ಪರವಾಗಿ ಯಾರೂ ಹೊಸದಿಲ್ಲಿಗೆ ಹೋಗುವುದು ಬೇಡ. ನಿಮ್ಮ ಸಮಸ್ಯೆಗಳು ಇದ್ದರೆ, ಮಂತ್ರಿ ಸ್ಥಾನದ ಆಕಾಂಕ್ಷಿಯಾಗಿದ್ದರೆ, ಅಧಿಕಾರ, ಹುದ್ದೆ ಬೇಕು ಎಂದರೆ ಹೋಗಿ ಮನವಿ ಮಾಡಿಕೊಳ್ಳಿ. ನನ್ನ ವಿಚಾರಕ್ಕೆ ಹೋಗುವುದು ಬೇಡ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮನವಿ ಮಾಡಿದ್ದಾರೆ.

• ಪುಟ ೨

ಇಂದಿನಿಂದ ದ್ವಿತೀಯ ಪಿಯುಸಿ-1 ಪರೀಕ್ಷೆ

• **ಬೆಂಗಳೂರು:** ಪ್ರಸಕ್ತ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-1 ರಾಜ್ಯಾದ್ಯಂತ ಶನಿವಾರದಿಂದ(ಫೆ.28) ಆರಂಭವಾಗಲಿದ್ದು, 7,10,363 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಈ ಪೈಕಿ 6,46,801 ಹೊಸಬರು, 50,540 ಪುನರಾವರ್ತಿತ ಮತ್ತು 13,022 ಖಾಸಗಿ ಅಭ್ಯರ್ಥಿಗಳು ಸೇರಿದ್ದಾರೆ. ರಾಜ್ಯದ 1,217 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಪ್ರತಿ ಪರೀಕ್ಷಾ ಕೇಂದ್ರದಲ್ಲೂ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ. ಪರೀಕ್ಷಾರ್ಥಿಗಳು ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳಲ್ಲಿ ಪರೀಕ್ಷಾ ಪ್ರವೇಶ ಪತ್ರ ತೋರಿಸಿ ಉಚಿತವಾಗಿ ಪ್ರಯಾಣಿಸಬಹುದು.

• ಪುಟ ೨

ಟ್ರಂಪ್ ಕೊಲೆಗೆ ಸಂಚು; ಪಾಕ್ ಪ್ರಜೆ ವಿಚಾರಣೆ

• ಪುಟ ೧೨

85 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ವಿತರಣೆ

• ಪುಟ ೨

ಚಿನ್ನ, ಬೆಳ್ಳಿಗೆ ಏ.1ರಿಂದ ದೇಶೀಯ ದರ ಅನ್ವಯ

• ಪುಟ ೧೨



ಅಧಿಕಪ್ರಸಂಗಿ ಪಾಕ್, ತಾಲಿಬಾನ್ ಅಟ್ಯಾಕ್

• ಪುಟ ೧೨

ಸುದ್ದಿ ಸಮಗ್ರ

ಯುದ್ಧೋನ್ಮಾದ ಸ್ಥಿತಿ ತಲುಪಿದ ಡುರಾಂಡ್ ಗಡಿರೇಖೆ ಬಿಕ್ಕಟ್ಟು

ಅಫ್ಘಾನ್-ಪಾಕ್ ಸಮರ



ಎಫ್ 16 ವಿಮಾನ ಹೊಡೆದುರುಳಿಸಿದ ತಾಲಿಬಾನ್?

ಪಾಕಿಸ್ತಾನ ವಾಯುದಾಳಿ ನಡೆಸುವ ವೇಳೆ ಅದರ ಎಫ್ 16 ಯುದ್ಧ ವಿಮಾನ ಹೊಡೆದುರುಳಿಸಿದ್ದಾಗಿ ಅಫ್ಘಾನಿಸ್ತಾನ ಹೇಳಿಕೊಂಡಿದೆ. ಪಾಕ್ ಸೇನೆಯ ಎಫ್ 16 ಎನ್ನಲಾದ ಯುದ್ಧ ವಿಮಾನವೊಂದು ಬೆಂಕಿ ತಗುಲಿ ಹೊತ್ತಿ ಉರಿಯುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

• **ಕಾಬೂಲ್:** ಕಳೆದ ಎರಡು ದಿನಗಳಿಂದ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ನಡುವಿನ ಗಡಿ ಉದ್ವಿಗ್ನತೆ ಭಾರೀ ತೀವ್ರತೆ ಪಡೆದುಕೊಂಡಿದ್ದು, ಅಫ್ಘಾನ್ ಮೇಲೆ ಯುದ್ಧ ಸಾರುವುದಾಗಿ ಪಾಕ್ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಶುಕ್ರವಾರ ಬೆದರಿಕೆಯೊಡ್ಡಿದ್ದಾರೆ. ಉಭಯ ದೇಶಗಳ ಮಧ್ಯೆ ಸಂಧಾನ ಮಾತುಕತೆಗೆ ಸಿದ್ಧವೆಂದು ಇರಾನ್ ಹೇಳಿದರೆ, ಯುದ್ಧ



ನಿಲ್ಲಿಸಬೇಕೆಂದು ಚೀನಾ ಮತ್ತು ರಷ್ಯಾ ಕರೆನೀಡಿವೆ.

ಪಾಕಿಸ್ತಾನ ನಡೆಸಿದ ಹೊಸ ದಾಳಿಗೆ 274 ತಾಲಿಬಾನಿ ಹೋರಾಟಗಾರರು ಬಲಿಯಾಗಿದ್ದು, 12 ಪಾಕ್ ಸೈನಿಕರಷ್ಟೇ ಮೃತಪಟ್ಟಿದ್ದಾರೆಂದು ಪಾಕ್ ಹೇಳಿದೆ. ಗುರುವಾರ ಅಫ್ಘಾನ್ ನಡೆಸಿದ ಪ್ರತಿ ದಾಳಿಗೆ 55 ಪಾಕ್ ಸೈನಿಕರು ಬಲಿಯಾಗಿದ್ದರೆಂಬು ದಾಗಿ ಅಫ್ಘಾನ್ ವಕ್ತಾರ ಹೇಳಿದ್ದಾರೆ. ಆದರೆ ಇವು ಯಾವುವೂ ಪರಿಶೀಲಿಸಲ್ಪಟ್ಟ ಮಾಹಿತಿಯಲ್ಲ.

ಆಪರೇಷನ್ ಘಜಬ್ ಲಿಲ್ ಹಕ್: ಫೆ.26ರಂದು ಪಾಕ್ ವಾಯುದಾಳಿಗೆ ತಾಲಿಬಾನ್ ಪ್ರತಿ ದಾಳಿ ನಡೆಸಿದ್ದು, 55 ಪಾಕ್ ಸೈನಿಕರು ಹತರಾಗಿದ್ದರೆಂದು ಹೇಳಿಕೊಂಡಿದೆ. 12 ಸೈನಿಕರು ಮೃತಪಟ್ಟಿರುವುದನ್ನು ಪಾಕಿಸ್ತಾನ ಒಪ್ಪಿದೆ. ಗುರುವಾರ ರಾತ್ರಿ, ಅಫ್ಘಾನ್ ನೀಡಿದ ಪ್ರತ್ಯುತ್ತರಕ್ಕೆ ಕುಪಿತಗೊಂಡ ಪಾಕ್ ಆಡಳಿತ ಶುಕ್ರವಾರ ಯುದ್ಧ ನಡೆಸುತ್ತೇವೆಂದು ಬೆದರಿಕೆಯೊಡ್ಡಿದ್ದಲ್ಲದೆ, ಮತ್ತೆ ಆಪರೇಷನ್ ಘಜಬ್ ಲಿಲ್ ಹಕ್ ಹೆಸರಿನ ಕಾರ್ಯಾಚರಣೆ ನಡೆಸಿರುವುದಾಗಿ ಹೇಳಿಕೊಂಡಿದೆ. 274 ತಾಲಿಬಾನಿ ಹೋರಾಟಗಾರರನ್ನು ಹೊಡೆದುರುಳಿಸಿದ್ದಾಗಿ ಹೇಳಿದೆ.

➡ ಪುಟ ೭


- ಪಾಕ್ ದಾಳಿಗೆ 274 ತಾಲಿಬಾನ್ ಹೋರಾಟಗಾರರ ಬಲಿ
- ಅಫ್ಘಾನ್ ದಾಳಿಗೆ 55 ಪಾಕ್ ಸೈನಿಕರ ಸಾವು
- 12 ಸೈನಿಕರಷ್ಟೇ ಸಾವು ಎಂದ ಪಾಕ್
- ಕಾಬೂಲ್, ಕಂದಹಾರ್, ಪಾಕ್ಟಿಯಾ ಮೇಲೆ ಪಾಕ್ ದಾಳಿ

ಭಾರತದ ಈವರೆಗಿನ ನಿಲುವು?

ಡುರಾಂಡ್ ಗಡಿರೇಖೆ ವಿವಾದವು ಪಾಕ್, ಅಫ್ಘಾನಿಸ್ತಾನದ ದ್ವಿಪಕ್ಷೀಯ ಭಿನ್ನಾಭಿಪ್ರಾಯ ಎಂಬುದು ಭಾರತದ ಈವರೆಗಿನ ತಟಸ್ಥ ನಿಲುವಾಗಿದೆ.

➡ ಪುಟ ೭

ಏನಿದು ಡುರಾಂಡ್ ಗಡಿರೇಖೆ?



ಖೈಬರ್ ಪಖ್ತುನ್‌ಖ್ವಾ, ಪಾಕ್ ಮತ್ತು ಅಫ್ಘಾನ್ ನಡುವಿನ ಗಡಿ ಪ್ರದೇಶವಾಗಿದ್ದು, ಇಲ್ಲಿ 2,611 ಕಿ.ಮೀ. ಉದ್ದದ ಡುರಾಂಡ್ ಗಡಿ ರೇಖೆಯಿದೆ. ಇದು 1893ರಲ್ಲಿ ಸಹಿ ಮಾಡಿದ ಒಪ್ಪಂದವಾಗಿದೆ. ಬ್ರಿಟಿಷ್ ಆಳ್ವಿಕೆ ಸಮಯದಲ್ಲಿ ಭಾರತದ ವಿದೇಶಾಂಗ ಕಾರ್ಯದರ್ಶಿ ಮೊರ್ಟಿಮರ್ ಡುರಾಂಡ್, ಅಫ್ಘಾನಿಸ್ತಾನದ ಅಮೀರ್ ಅಬ್ದುರ್ ರೆಹಮಾನ್ ಖಾನ್ ಡುರಾಂಡ್ ಗೆರೆ ಒಪ್ಪಂದಕ್ಕೆ ಸಹಿ ಮಾಡಿದ್ದರು. ಈ ಒಪ್ಪಂದವು ಪಶ್ತೂನ್ ಬುಡಕಟ್ಟು ಸಮುದಾಯವನ್ನು ಪ್ರತ್ಯೇಕಿಸಿತು. 1947ರಲ್ಲಿ ಪಾಕಿಸ್ತಾನ ಪ್ರತ್ಯೇಕ ರಾಷ್ಟ್ರವಾದ ಬಳಿಕ ಡುರಾಂಡ್ ಗೆರೆಯನ್ನು ತನ್ನ ಪಶ್ಚಿಮದ ಗಡಿ ರೇಖೆಯೆಂದು ಪರಿಗಣಿಸಿತು.

➡ ಪುಟ ೭

ಜಿಎಎಫ್‌ಎಕ್ಸ್‌ನ 7ನೇ ಆವೃತ್ತಿ ಉದ್ಘಾಟನೆ

ಬೆಂಗಳೂರು ಸೃಜನಶೀಲ ರಾಜಧಾನಿ ಆಗಲಿ: ಸಿಎಂ



• **ಬೆಂಗಳೂರು:** ಕರ್ನಾಟಕವನ್ನು ಭಾರತದ ಸಿಲಿಕಾನ್ ಸಿಟಿ ವ್ಯಾಲಿ ಎಂದು ಪರಿಗಣಿಸುವುದು ಮಾತ್ರವಲ್ಲದೆ, ಪ್ರಪಂಚದ ಸೃಜನಶೀಲ ರಾಜಧಾನಿ ಎಂದು ಕರೆಯುವಂತಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ನಡೆದ ಜಿಎಎಫ್‌ಎಕ್ಸ್‌ನ ಏಳನೇ ಆವೃತ್ತಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೆಂಗಳೂರು ಕೇವಲ ಭಾರತದ ತಂತ್ರಜ್ಞಾನ ರಾಜಧಾನಿಯಲ್ಲ, ಸೃಜನಶೀಲ ಬಂಡವಾಳವನ್ನು ಕಂಡುಕೊಳ್ಳುವ ಸ್ಥಳ. ಸಾಫ್ಟ್‌ವೇರ್‌ನಿಂದ ಬಾಹ್ಯಾಕಾಶ ಸಂಶೋಧನೆಯವರೆಗೆ, ಬಯೋಟೆಕ್‌ನಿಂದ ಡೀಪ್-ಟೆಕ್‌ವರೆಗೆ ಬೆಂಗಳೂರು ಯಾವಾಗಲೂ ಕ್ರಾಂತಿಗಳ ಗಡಿಯಲ್ಲಿ ನಿಂತಿದೆ ಎಂದರು.

BENGALURU GAFX

ಗೇಮ್ಸ್, ಅನಿಮೇಷನ್ ಮತ್ತು ವಿಷುವಲ್ ಎಫೆಕ್ಟ್ ವಲಯವು ಇನ್ನು ಮುಂದೆ ಸಣ್ಣ ಸೃಜನಶೀಲ ಉದ್ಯಮವಲ್ಲ, ಡಿಜಿಟಲ್ ಕ್ರಾಂತಿ, ತಲ್ಲೀನಗೊಳಿಸುವ ಮಾಧ್ಯಮ, ಸ್ಟ್ರೀಮಿಂಗ್ ಪ್ಲಾಟ್‌ಫಾರ್ಮ್‌ಗಳು, ಇ-ಸ್ಪೋರ್ಟ್ಸ್ ಮತ್ತು ವಾಸ್ತವದ ಯುಗದಲ್ಲಿ, ಜಿಎಎಫ್‌ಎಕ್ಸ್ ಮಾನವೀಯತೆಯು ಕಥೆಗಳು, ಸಂಸ್ಕೃತಿ, ಶಿಕ್ಷಣ ಮತ್ತು ಆಡಳಿತವನ್ನು ಹೇಗೆ ಅನುಭವಿಸುತ್ತದೆ ಎಂಬುದನ್ನು ರೂಪಿಸುತ್ತಿದೆ ಎಂದು ಸಿದ್ದರಾಮಯ್ಯ ಹೇಳಿದರು.

➡ ಪುಟ ೭

ಪ್ರತಿಭಾವಂತರಿಗೆ ಕರ್ನಾಟಕ ಕಾಯಕ ಭೂಮಿ: ಡಿಸಿಎಂ

ಕರ್ನಾಟಕ ರಾಜ್ಯ ಸಂಶೋಧನೆಗೆ, ನೂತನ ಆವಿಷ್ಕಾರಗಳಿಗೆ, ಉದ್ಯೋಗಗಳಿಗೆ ಹಾಗೂ ಪ್ರತಿಭಾವಂತರಿಗೆ ಕಾಯಕ ಭೂಮಿಯಾಗಿದೆ. ಕರ್ನಾಟಕವು 875 ಕ್ಕೂ ಹೆಚ್ಚು ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು (ಜಿಸಿಸಿ) ಹೊಂದಿದೆ. ಡಿಜಿಟಲ್ ಮಾಧ್ಯಮ ಕಂಪನಿಗಳಿಗೆ ನೆಲೆಯಾಗಿ ನಮ್ಮ ರಾಜ್ಯ ರೂಪುಗೊಂಡಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಬಣ್ಣಿಸಿದರು. ಬೆಂಗಳೂರು ಜಿಎಎಫ್‌ಎಕ್ಸ್ ಸಮ್ಮಿಟ್‌ನಲ್ಲಿ ಮಾತನಾಡಿದ ಅವರು, ಆರೆಂಜ್ ಎಕಾನಮಿ ಬಗ್ಗೆ ಪ್ರಧಾನಮಂತ್ರಿ ಈಗ ಮಾತನಾಡಿದ್ದಾರೆ.

➡ ಪುಟ ೭

ಕಿತ್ತೂರು ಕರ್ನಾಟಕ ಜೆಡಿಎಸ್ ಸಮಾವೇಶದಲ್ಲಿ ಎಚ್‌ಡಿಡಿ ಶಪಥ

ಕೃಷ್ಣಾ ಮೇಲ್ದಂಡೆಗೆ ಗಟ್ಟಿ ಹೋರಾಟ

• **ವಿಜಯಪುರ:** ಕೃಷ್ಣಾ ಮೇಲ್ದಂಡೆ 3ನೇ ಹಂತದ ಯೋಜನೆಗೆ ಅಂತಿಮ ಗೆಜೆಟ್ ನೋಟಿಫಿಕೇಷನ್ ಹೊರಡಿಸಬೇಕಿದ್ದು, ನಾನು ರಾಜ್ಯಸಭೆಯಲ್ಲಿ ಇರದಿದ್ದರೂ ಈ ನಿಟ್ಟಿನಲ್ಲಿ ಗಟ್ಟಿ ಹೋರಾಟ ಮಾಡುವೆ ಎಂದು ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಶಪಥ ಮಾಡಿದ್ದಾರೆ.

ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಜೆಡಿಎಸ್ ಬೆಳ್ಳಿ ಹಬ್ಬದ ಸಂಭ್ರಮ ಹಾಗೂ ಕಿತ್ತೂರ ಕರ್ನಾಟಕ ಭಾಗದ ಜಿಲ್ಲೆಗಳ ಸಂಘಟನಾ ಸಮಾವೇಶದಲ್ಲಿ ಅವರು ಮಾತನಾಡಿದರು. ನನ್ನ ರಾಜಕೀಯ ಜೀವನದಲ್ಲಿ ಇಂತಹ ಕೆಟ್ಟ ವ್ಯವಸ್ಥೆಯ ರಾಜ್ಯ ಸರ್ಕಾರವನ್ನೇ ನಾನು ನೋಡಿಲ್ಲ, ಹೀಗಾಗಿ ನಿಮ್ಮ ಮುಂದೆ ಕೈಚಾಚಿ ಪ್ರಾದೇಶಿಕ ಪಕ್ಷವನ್ನು ಬೆಳೆಸಿ, ಉಳಿಸಿ ಎಂದು ಕೇಳಿಕೊಳ್ಳುವೆ. ನಾಡಿನ ಅಭ್ಯುದಯಕ್ಕೆ ಪ್ರಾದೇಶಿಕ ಪಕ್ಷದ ಅವಶ್ಯಕತೆ ಇದೆ.

➡ ಪುಟ ೭



ಬಡವರ ಬದುಕು ಬೀದಿಗೆ: ಎಚ್‌ಡಿಕೆ

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, ರಾಜ್ಯದಲ್ಲಿ ಲಕ್ಷಾಂತರ ಸರ್ಕಾರಿ ಹುದ್ದೆ ಖಾಲಿ ಇವೆ. ಸಾವಿರಾರು ಶಿಕ್ಷಕರ ಹುದ್ದೆ ಖಾಲಿ ಇವೆ. ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಎಂಬ ಹೆಸರು ಇರಿಸಿದ ಮಾತ್ರಕ್ಕೆ ಇಲ್ಲಿ ಅಭಿವೃದ್ಧಿ ಪರ್ವ ನಡೆದಿದೆಯೇ? ಗ್ಯಾರಂಟಿ ಯೋಜನೆಗಳು ಸರ್ಕಾರಕ್ಕೆ ಭಾರವಾಗಿವೆ.

➡ ಪುಟ ೭

ಪ.ಬಂಗಾಳಕ್ಕೆ ಸುಪ್ರೀಂ ತಾಕೀತು | ವಿಚಾರಣೆಗೆ ಅಂತ್ಯ ಇರಬೇಕು

ಎಸ್‌ಐಆರ್ ಪ್ರಕ್ರಿಯೆ ಸ್ಥಗಿತಕ್ಕೆ ನೆಪ ಬೇಡ

• **ಹೊಸದಿಲ್ಲಿ:** ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವಂತೆ ದೈನಂದಿನ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್



ಶುಕ್ರವಾರ ಸ್ಪಷ್ಟಪಡಿಸಿದೆ. ಪ್ರಕ್ರಿಯೆ ತಡೆಯಲು ನೆಪಗಳ ಶೋಧ ನಿಲ್ಲಿಸಬೇಕು ಹಾಗೂ ವಿಚಾರಣೆಗೆ ಒಂದು ಅಂತ್ಯ ಇರಬೇಕು ಎಂದು ನ್ಯಾಯಪೀಠ ಕಠಿಣವಾಗಿ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜೋಯ್ಮಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠ, ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಹಕ್ಕು ಪರಿಶೀಲನೆಗಾಗಿ ನಿಯೋಜಿಸಲಾದ ನ್ಯಾಯಾಂಗ ಅಧಿಕಾರಿಗಳಿಗೆ ತರಬೇತಿ ನೀಡುತ್ತಿರುವುದರ ಬಗ್ಗೆ ಆಡಳಿತಾರೂಢ ತೃಣಮೂಲ ಕಾಂಗ್ರೆಸ್(ಟಿಎಂಸಿ) ಎತ್ತಿದ ಆಕ್ಷೇಪಣೆಗಳನ್ನು ಪರಿಗಣಿಸಲು ನಿರಾಕರಿಸಿತು. ಚುನಾವಣಾ ಆಯೋಗದ ತರಬೇತಿ ಮಾಡ್ಯೂಲ್ ನ್ಯಾಯಾಲಯದ ಆದೇಶಗಳನ್ನು ಅತಿಕ್ರಮಿಸುವುದಿಲ್ಲ. ನ್ಯಾಯಾಂಗ ಅಧಿಕಾರಿಗಳ ಸ್ವತಂತ್ರ ತೀರ್ಮಾನದಲ್ಲಿ ನಂಬಿಕೆ ಇಡಬೇಕು ಎಂದು ಪೀಠ ಸ್ಪಷ್ಟಪಡಿಸಿದೆ.

➡ ಪುಟ ೭

ತರಬೇತಿ ಅಗತ್ಯ

ನ್ಯಾಯಾಧೀಶರಿಗೆ ಇದು ಹೊಸ ರೀತಿಯ ಜವಾಬ್ದಾರಿಯಾಗಿರುವುದರಿಂದ ತರಬೇತಿಯ ಅಗತ್ಯವಿದೆ ಎಂದು ನ್ಯಾಯಮೂರ್ತಿ ಬಾಗ್ಚಿ ಅಭಿಪ್ರಾಯಪಟ್ಟರು. ಚುನಾವಣಾ ಆಯೋಗದ ತಾಂತ್ರಿಕ ವ್ಯವಸ್ಥೆ ಮತ್ತು ದಾಖಲೆಗಳ ಪರಿಶೀಲನೆಯ ಬಗ್ಗೆ ಆಯೋಗವೇ ತರಬೇತಿ ನೀಡುವುದು ಸರಿಯಾಗಿಯೇ ಇದೆ. ಅಲ್ಲದೆ, ಯಾವ ದಾಖಲೆಗಳನ್ನು ಪರಿಶೀಲಿಸಬೇಕು ಎಂಬ ಬಗ್ಗೆ ನ್ಯಾಯಾಲಯ ಈಗಾಗಲೇ ಸ್ಪಷ್ಟ ಆದೇಶ ನೀಡಿದೆ ಎಂದು ಪೀಠ ನೆನಪಿಸಿತು.

ಕೇಜ್ರಿವಾಲ್, ಸಿಸೋಡಿಯಾ ಸೇರಿ 23 ಮಂದಿ ಖುಲಾಸೆ

• **ಹೊಸದಿಲ್ಲಿ:** ದಿಲ್ಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್, ಮನೀಶ್ ಸಿಸೋಡಿಯಾ ಮತ್ತು ಕೆ.ಕವಿತಾ ಸೇರಿದಂತೆ ಒಟ್ಟು



23 ಆರೋಪಿಗಳನ್ನು ವಿಶೇಷ ನ್ಯಾಯಾಲಯ ಶುಕ್ರವಾರ ಖುಲಾಸೆ ಮಾಡಿದೆ. ಸಿಬಿಐ ಸಲ್ಲಿಸಿದ ಸಾಕ್ಷ್ಯಗಳು ನ್ಯಾಯಾಲಯದ ಮುಂದೆ ನಿಲ್ಲಲು ಸಾಧ್ಯವಿಲ್ಲ ಎಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ. ತಮ್ಮ ತೀರ್ಪಿನಲ್ಲಿ ವಿಶೇಷ ನ್ಯಾಯಾಧೀಶ ಜಿತೇಂದ್ರ ಸಿಂಗ್, ಈ ಅಬಕಾರಿ ನೀತಿಯಲ್ಲಿ ಯಾವುದೇ ಲೋಪದೋಷಗಳಿಲ್ಲ ಅಥವಾ ಇದನ್ನು ಕಾನೂನು ಬಾಹಿರವಾಗಿ ಜಾರಿಗೆ ತಂದಿದ್ದಾರೆ ಎನ್ನುವುದಕ್ಕೆ ಸಾಕ್ಷಿಯಿಲ್ಲ. ಹೀಗಿರುವಾಗ, ಪ್ರಾಸಿಕ್ಯೂಷನ್ (ಸಿಬಿಐ) ಮಂಡಿಸುತ್ತಿರುವ ವಾದ ಕೇವಲ ಊಹಾಪೋಹವಷ್ಟೇ ಆಗುತ್ತದೆ.

➡ ಪುಟ ೭

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಶ್ವಾಸ

ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ತರುವೆ

• **ಶಿವಮೊಗ್ಗ:** ರಾಜ್ಯಾದ್ಯಂತ ಪ್ರವಾಸ ಮಾಡಿ ಬಿಜೆಪಿಯನ್ನು ಮತ್ತೊಮ್ಮೆ ಅಧಿಕಾರಕ್ಕೆ ತರುವುದೇ ಮುಖ್ಯ ಗುರಿಯಾಗಿದ್ದು, ಇದಕ್ಕೆ ರಾಜ್ಯದ ಜನರ ಸಹಕಾರ ನೀಡಬೇಕೆಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮನವಿ ಮಾಡಿದರು. ಶಿಕಾರಿಪುರದಲ್ಲಿ ಶುಕ್ರವಾರ ಆಯೋಜಿಸಿದ್ದ ತಮ್ಮ 84ನೇ ಹುಟ್ಟುಹಬ್ಬದ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಭ್ರಷ್ಟ ಸರ್ಕಾರವಾಗಿದೆ. ಇದನ್ನು ಕಿತ್ತೊಗೆದು ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕಿದೆ. ರೈತರು, ಬಡವರು ನೆಮ್ಮದಿಯಿಂದ ಬದುಕಲು ಬೇಕಾದ ವಾತಾವರಣ ಮತ್ತೆ ನಿರ್ಮಿಸಬೇಕಿದೆ ಎಂದರು.

ಬಡವರ ಕಣ್ಣೀರು ಒರೆಸಿದ್ದೇನೆ: ರಾಜಕೀಯ ಜೀವನದುದ್ದಕ್ಕೂ ಶೋಷಿತ, ಪೀಡಿತ, ಬಡವರ ಏಳಿಗೆಗಾಗಿ ಹೋರಾಟ ನಡೆಸಿಕೊಂಡು ಬಂದಿದ್ದೇನೆ. ಅಧಿಕಾರ ಸಿಕ್ಕಾಗ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದು ಬಡವರ ಕಣ್ಣೀರು ಒರೆಸುವ ಕೆಲಸ ಮಾಡಿದ್ದೇನೆ ಎಂದರು. ಭಾಗ್ಯಲಕ್ಷ್ಮೀ ಯೋಜನೆ ಮೂಲಕ ಕೋಟ್ಯಂತರ ಹೆಣ್ಣುಮಕ್ಕಳು ಸೌಲಭ್ಯ ಪಡೆದಿದ್ದಾರೆ. ರೈತರಿಗಾಗಿ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ್ದು, ಇದರ ಲಾಭ ರೈತ ಸಮುದಾಯಕ್ಕೆ ಸಿಕ್ಕಿದೆ. ಶಿವಮೊಗ್ಗ ಜಿಲ್ಲೆ ಮಾತ್ರವಲ್ಲದೆ ಇಡೀ ರಾಜ್ಯದಲ್ಲಿ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ರೈತರ ಕಣ್ಣೀರು ಒರೆಸುವ ಕೆಲಸ ಮಾಡಲಾಗಿದೆ.

➡ ಪುಟ ೭



ನಾನು ಇಂದು ಏನೇ ಆಗಿದ್ದರೂ ಅದಕ್ಕೆ ಶಿಕಾರಿಪುರ ಜನತೆ ಕಾರಣ. ಅವರು ನೀಡಿದ ಶಕ್ತಿಯಿಂದಾಗಿಯೇ ಎಲ್ಲವೂ ಸಾಧ್ಯವಾಗಿದ್ದು, ನನ್ನಂತೆ ನನ್ನ ಮಕ್ಕಳನ್ನೂ ಬೆಂಬಲಿಸುತ್ತಿರುವ ಕ್ಷೇತ್ರದ ಜನತೆಗೆ ನಾನೆಂದಿಗೂ ಚಿರಋಣಿಯಾಗಿರುತ್ತೇನೆ.

■ ಬಿ.ಎಸ್. ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,85,000(2,85,000) ಅಪರಂಜಿ ಚಿನ್ನ: 1,61,570(1,61,020) ಆಭರಣ ಚಿನ್ನ: 1,48,100(1,47,600) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 81,287(961↓) ಎನ್‌ಎಸ್‌ಇ 25,178(317↓)

$1 = ₹90.88

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಬೆಂಗಳೂರು

ಸಂಖ್ಯೆ: ಹಾಹೂಮಾಸ(ವಿ)/ಕೃಉಮಾಸ(ಬೆಂ)/3419/2025-26
ದಿನಾಂಕ: 24.02.2026

-: ಸಾರ್ವಜನಿಕ ಪ್ರಕಟಣೆ :-

[illegible]

ಸಹಿ/- ಕಾರ್ಯದರ್ಶಿ

PUBLIC NOTICE

All the General Public are hereby informed that Manjunath G Residing at No.1365, 8th Main, 5th Block, HBR Layout, Bangalore - 560043 is the absolute owner of Schedule Property, have lost Original Lease Cum Sale Agreement Dt 02-09-1988, Doc No. 6851/1988-89, Book No.I, Volume 2892 at pages 44 to 48 at Bangalore South Taluk Sub Registrar Office.

Since the Original Lease Cum Sale Agreement mentioned above in respect of the Schedule Property was lost by the owner during transit; this public notice is issued, as it is a legal & mandatory requirement. The owner Manjunath G has already given police complaint in this regard as per the Lost Report No. 2077563/2026 dated 23-02-2026. So, the general public are hereby requested that, if any person gets the above-mentioned Original Lease Cum Sale Agreement, the same can be handed over to the undersigned or to my client directly and oblige.

SCHEDULE PROPERTY

All that piece and parcel of BDA Residential Site No.1407 measuring EW: 30 feet NS: 40 feet in all measuring 133.33 Sq yards situated at 1st Stage, 5th Block, Hennur Bellary Road Layout, Bangalore and bounded by: East by :Site No.1407/A, West by : Site No.1406, North by : Road, South by: Site No.1391

Shridhara Murthy, Advocate
No.79/80, 1st Floor, Kothanur Dinne Main Road, Oppt to Smart Bazar, JP Nagar 7th Phase, Bangalore – 560078

IN THE COURT OF THE HON'BLE SENIOR CIVIL JUDGE AND JMFC AT CHINTAMANI
M.V.C.No.01/2020

Petitioners: Smt. PeddaVenkatamma and another

V/s

Respondent: Smt.N.B.Suma

NOTICE UNDER ORDER 5 RULE 20 OF THE CIVIL PROCEDURE CODE TO THE RESPONDENT

Address N.B.Suma D/o Venkataramanappa, Aged about Majar, R/at No. 87, 3rd Type, Officer Quarters, BEML Nagar, KGF.

NOTICE

Whereas the petitioner above named have instituted this case under section 166 of The Motor Vehicle Act against respondent for the relief of compensation accident claim and the case is posted for hearing on 13th March 2026 at 11 AM.

Hence you are hereby call upon you appear before the court in person or by a pleader on 13th March 2026 at 11 AM. And if you fail to appear before the court the case will be decided ex-parte.

Given under my hand on this day 27.02.2026

By order of the court
Chief Ministrial Officer,
SENIOR CIVIL JUDGE AND JMFC AT CHINTAMANI

Advocate for Petitioner
G.B. Venkatashivareddy, Advocate
Prabhakar Layout, Chintamani town, Chikkaballapur District.

IN THE COURT OF THE III ADDL. CIVIL JUDGE (JR. DN) AND JMFC AT ANEKAL
Crl. Misc. No. 355/2026

Between : 1. Smt. Eramamma, W/o. Narasimha, Aged about 60 years. R/at. Konasandra Village, Jigani Hobli, Anekal Taluk, Bangalore. 2. Sri. Lingaiah, S/o. Late Lingaiah Aged about 75 years. 3. Smt. Chikki Veeramma, D/o. Late Erellappa, Aged about 73 years. 4. Sri. Anappa S/o. Late Lingaiah, Aged about 71 years. 5. Smt. Rathanamma W/o. Narayanappa, Aged about 69 years. 6. Sri. Nagarajappa S/o. Late Lingaiah Aged about 67 years. Both are R/at: Kumbaranahalli Village, Kasaba Hobli, Anekal Taluk, Bangalore-560105. ...PETITIONERS

And : Thahasildhar, Anekal. ...RESPONDENT

PUBLIC NOTICE

Whereas, the Petitioner above named filed the above petition for seeking death certificate of my Mother namely Puttamma W/o. Late. Lingaiah, who was died on 25/09/2000, (Twenty Five day September Two Thousand) Kumbaranahalli Village, Kasaba Hobli, Anekal Taluk Bangalore. Before the III ADDL. Civil Judge and JMFC at Anekal. You are if anyone have any objection hereby inform to appear before this Hon'ble court in person or any Legal heirs are by a pleader duly instructed on 15.04.2026 at 11.00 AM in forenoon to show case against the claim, filing which the matter will be heard and determined ex-parte. Given under my hand and the seal of the court this 26th day of February 2026.

By order of the Court, Sheristedar, Civil Judge (Jr.Dn.) adn JMFC Court, Anekal.
Advocate for the petitioner :
Ramesh. G, Sujindra Kumar .P, Advocates
Off at No. 2, R.G. Law Associates, Behind Ragavendra Bhavan, Anekal.

IN THE COURT OF THE HON'BLE SENIOR CIVIL JUDGE MALUR
R.A.No.54/2016

Appellant: Smt. Gopamma

V/S

Respondents: Jayamma & others

NOTICE TO LRS OF RESPONDENT NO.2(a) to 2(c), 4 to 9

2a. Sri. Kodandapani S/o. Venkatappa, 75 years
2b. Sri. Srinivasa S/o. late Venkatappa, 72 y ears
2c. Smt. Leelavathi W/o. Narayanagowda, 70 years All are residing at Patrapalli village, V.Kota post, Palamaner taluk, Chittoor dist, Andhra Pradesh.
4. Sri. G.Ravi Shankar S/o. late Chikka Gopalappa @ M.Gopalappa 46 years R/o Lakkur village and hobli Malur Taluk, Kolar District
5. Smt. Hemamalini D/o. late Chikka Gopalappa @ M.Gopalappa W/o. Krishnamurthy, 38 years R/o. No.53, Kangandahalli Bangarpet taluk, Kolar District.
6. Smt. Padmini D/o. late Chikka Gopalappa @ M.Gopalappa W/o. Ramesh, 36 years R/o.No.20, D.Hosahalli village Hosakote taluk, Bangalore rural dist.
7. Smt. G.Uma Malini D/o. late Chikka Gopalappa @ M.Gopalappa W/o. Ashwath Gowda, 40 years R/o. No.26, Doddadasarahalli village Hosakote taluk, Bangalore rural dist.
8. Sri. Manjunatha S/o. late Chandra reddy, Aged about 31 years , R/o. NO.6/9A, Devarabisanahalli village Varthuru hobli, Bangalore east taluk.
9. Sri. Nagesh K.V S/o. Venkataswamy Reddy Aged about 48 years R/o. No.131, Kotiganahalli street Dommasandra, Anekal taluk Bangalore dist-25

Whereas, the Appellant herein has filed the above appeal against the Respondents by challenging the judgment and decree passed in O.S.No. 447/2014 on the file of this Hon'ble court. Thereby you are hereby directed to appear in person or through your agent/pleader on 04.04.2026 at about 11.00 'o' clock at Hon'ble Senior civil judge & JMFC. Failing which the suit will be disposed off exparte.

Given under my hand and seal of office, on this 25th day of Feb. 2026.

By Order of the Court
Chief Ministrial Officer Senior Civil Judge Court Malur
N.Shivanna Advocate, Mandeep Nilaya, Maruthi extension, Malur-563 130

PUBLIC NOTICE

This is to inform the general public that my client **Mrs. REVATHI VYASARAYANI**, D/o V. Narasinga Rao resident of Flat No.201, 2nd Floor Krishna Mohan Residency, Horamavu, Bengaluru has lost the original deeds dated 02-11-2015 Doc No. BNS-1-113201-2015-16 of Book-1 stored in CD No.BNSD 392 registered in the office of the Sub-Registrar Banaswadi, Bangalore.
2) Discharge deed dated 05-02-2019 Doc No.BNS-1-18403-2018-19 of Book-1 stored in CD No. BNSD 696 registered in the office of the Sub-Registrar Banaswadi, Bangalore relating to the below mentioned schedule property and its been lost in transits. Any person's or body of persons, banks, financial institutions, NBFC's etc., having any objection/s or claims, shall with documentary evidence lodge their objection/claims **within 15 days** from the date of this notice with the undersigned, failing which, my client shall proceed with the above mentioned transaction.

SCHEDULE

ALL THAT PIECE AND PARCEL OF IMMOVABLE PROPERTY being the Flat bearing No.201, in the Second Floor, measuring about 1450 Sq.ft super built up area and 408 Sq.ft undivided right, title and interest in the land comprised therein, containing three bed rooms, together with RCC roofing, ceramic flooring together with one covered car parking space, including proportionate share in common areas such as passages, lobbies, staircase, Lift., etc., in the multistoried residential building known as "KRISHNA MOHAN RESIDENCY" constructed over Property bearing Converted Sy. No.4, measuring an extent of 0.13 (Thirteen) Guntas (plus 01 (one) Gunta 'A' Kharab), totally an extent of 0.14 (Fourteen) Guntas; and converted Sy No.5/2, measuring an extent of 0.3 (Three) Guntas, totally measuring 0.17 (Seventeen) Guntas; converted vide order No. ALN[E] SR(K.H):26/2011-12, Dated 30-06-2011, issued by the Special Deputy Commissioner, Bangalore Dist., Bangalore), present BBMP Katha No.27, situated at Horamavu Village, K.R.Puram Hobli, earlier Bangalore South Taluk, presently Bangalore East Taluk and the entire land property is bounded on the **East by** : Property belongs to Patel Muniswamappa (Sy. No.3) on the **West by** : Property belongs to K. Chikkapullappa (Sy. No.5) on the **North by** : Road and on the **South by** : Property belongs to Chinna Swamy (Sy. No.7)

R. Shailesh Kamar
M/s. SUSHEEL ASSOCIATES,
Law Firm, Unit No. F-1, 1st Floor, 'Harshita Arcade', No.138, 1st Main, Sheshadripuram, Bengaluru-560020
Bangalore Mobile No. 9845009771.
Date : 27-02-2026

IN THE COURT OF THE XV ADDITIONAL CITY CIVIL JUDGE, AT BANGALORE
OS.No 2831/2024 CCH-03

BETWEEN:
State Bank of India
Retail Assets Central Processing Centre (RACPC) No.241, 19 th Main Road, HSR Layout Sector-4, Bangalore-560102 .....Plantiff

AND
Ramaiah and another .....Defendant

SUMMONS TO DEFENDANT

1. Ramaiah GR, S/o Late Lakkanna, Residing at T Begur, Nelamangala Tq, Bangalore Rural- 562123
2. Sunitha C. W/o Ramaiah G R. No.99, 2nd Main, 4th Cross, KSRTC LayOut, Chikkalasandra, Bangalore South-562123

WHEREAS, the plaintiff has instituted a suit against you under Order 7 Rule 1 r/w Section 26 of the Code of Civil Procedure, 1908 for the relief of recovery of money for a sum of **Rs. 11,91,755/-** with full costs and current and future interests and interest compounded monthly from the date of filing of the suit.

You are hereby summoned to appear before the court i.e., XV Additional City Civil Judge, CCH-3, Bangalore in person or by pleader duly instructed to answer the claim on **25.04.2026, at 11.00 AM**. Failing which you will be placed Ex Parte.

Given under my hand and seal of the court this the 19 day of February 2026

By The Order of the
Assistant Registrar
City Civil Court, Bangalore

M.G. VYKUNTASWAMY
ADVOCATE,
No. 252/7, 2 floor, 9 Main,
Sampangiramanagara, Bangalore-560027

IN THE HON'BLE COURT OF PRL. SENIOR CIVIL JUDGE AT NELAMANGALA
O.S. No. 31/2020

Plaintiff : Kempathimmaiah

V/s

Defendants : Venkatappa and Others
Adress of the Defendant No. 2
Sri. M. Narasimha Murthy S/o Late Madappa Resident of No. 195, 14th Main, Subramanya Nagar, Bengaluru-560021.

PUBLIC NOTICE

Whereas, the Plaintiff, has instituted a suit against Defendants for declaration and Permanent Injunction petition. The summons issued through court as well as RPAD has been returned unserved.

The above case has been posted to **01.04.2026 at about 11.00 A.M.**

Take notice to appear before this Hon'ble Court on the above mentioned date and time, either personally or through counsel and to file objections/statements if any. If you fail to appear the above suit will be decided ex-parte.

SCHEDULE

Item No. 1 : Bangalore North Taluk, Dasanapura Hobli, Shivanapura Village, Sy.No. 6/1, measuring 0-30 guntas (Thirty Seven guntas) dry land and bounded on:- **East by**: Marappa, **West by**: Dhi, **North by**: Shanubhoga Inamthi Land, **South by**: Gomala.

Item No. 2 : Bangalore North Taluk, Dasanapura Hobli, Shivanapura Village, Sy.No. 6/2, Measuring 0-13 guntas (Thirteen guntas) dry land and bounded on:- **East by**: Shanubhoga Land, **West by**: Road, **North by**: Shanubhoga Inamathi Land, **South by**: Gomala.

Given under my hand and seal of this court on the 27.02.2026.

By Order of the Court, Sheristedar, Court of Senior Civil Judge Court, Nelamangala.

Plaintiff Counsel : **Harish Kumar .E**
No.889, I Floor, Munichowdappa Building, T. Dasarahalli and Market, T.Dasarahalli, Bangalore-560057. Mob: 9916161171

ನಮೂನೆ ಐ.ಎನ್.ಸಿ.–25ಎ

ಸಾರ್ವಜನಿಕ ಕಂಪನಿಯನ್ನು ಖಾಸಗಿ ಕಂಪನಿಯಾಗಿ ಪರಿವರ್ತಿಸುವ ಬಗ್ಗೆ ವಾರ್ತಾಪತ್ರಿಕೆಯಲ್ಲಿ ಪ್ರಕಟಿಸಬೇಕಾದ ಜಾಹೀರಾತು ಇವರ ಸಮಕ್ಷಮದಲ್ಲಿ:

ಪ್ರಾದೇಶಿಕ ನಿರ್ದೇಶಕರು, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ, ನೈಋತ್ಯ ಪ್ರದೇಶ, ಬೆಂಗಳೂರು

ಕಂಪನಿಗಳ ಕಾಯಿದೆ, 2013, ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 14 ಮತ್ತು ಕಂಪನಿಗಳ (ಸ್ಥಾಪನೆ) ನಿಯಮಗಳು, 2014 ನಿಯಮ 41 ರ ವಿಷಯವಾಗಿ

ಮತ್ತು

ಮೆ. ಫ್ಲೀಲ್‌ಟೆಕ್ ಎನರ್ಜಿ ಲಿಮಿಟೆಡ್, ನೋಂದಾಯಿತ ಕಛೇರಿ ವಿಳಾಸ: ನಂ.52/44, 8ನೇ ಮೇನ್, 2ನೇ ಕ್ರಾಸ್, ಗಣೇಶ ಬ್ಲಾಕ್, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560096 ವಿಷಯವಾಗಿ

.... ಅರ್ಜಿದಾರ

ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿರುವುದೇನೆಂದರೆ: ಖಾಸಗಿ ಸೀಮಿತ ಕಂಪನಿಯಾಗಿ ಪರಿವರ್ತನೆಗೊಳ್ಳಲು ಇಚ್ಛಿಸುವ ಸದರಿ ಕಂಪನಿಯು ಹಾಗೆ ಪರಿವರ್ತನೆಗೊಳ್ಳಲು ಸಾಧ್ಯವಾಗುವಂತೆ, **ಫೆಬ್ರವರಿ 09, 2026** ರಂದು ನಡೆದ ವಿಶೇಷ ಸರ್ವಸದಸ್ಯರ ಸಭೆಯಲ್ಲಿ ಅಂಗೀಕರಿಸಲಾದ ವಿಶೇಷ ನಿರ್ಣಯದ ಪ್ರಕಾರ, ಕಂಪನಿಗಳ ಕಾಯಿದೆ 2013 ಸೆಕ್ಷನ್ 14 ನ್ನು ಮೇಲೆ ಹೇಳಿರುವ ನಿಯಮಗಳೊಂದಿಗೆ ಓದಿಕೊಂಡಂತೆ, ಕೇಂದ್ರ ಸರ್ಕಾರಕ್ಕೆ ಅರ್ಜಿಯೊಂದನ್ನು ಸಲ್ಲಿಸಲು ಉದ್ದೇಶಿಸಿದೆ.

ಕಂಪನಿಯ ಪ್ರಸ್ತಾವಿತ ಬದಲಾವಣೆ/ಸ್ಥಿತಿಯಿಂದ ತಮ್ಮ ಹಿತಾಸಕ್ತಿಯ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿರುವ ಯಾವುದೇ ವ್ಯಕ್ತಿ, ತಮ್ಮ ಆಸಕ್ತಿಯ ಸ್ವರೂಪ ಮತ್ತು ವಿರೋಧಕ್ಕೆ ಇರುವ ಕಾರಣಗಳನ್ನು ತಿಳಿಸುವ ಅಫಿಡವಿಟ್ ಸಹಿತ ತಮ್ಮ ಆಕ್ಷೇಪಣೆಗಳನ್ನು ಈ ಸೂಚನೆ ಪ್ರಕಟವಾದ ದಿನಾಂಕದಿಂದ ಹದಿನಾಲ್ಕು ದಿನಗಳ ಒಳಗೆ, **ಪ್ರಾದೇಶಿಕ ನಿರ್ದೇಶಕರು, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ, ನೈಋತ್ಯ ಪ್ರದೇಶ, 'ಇ' ವಿಂಗ್, 2ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು–560034**, ಕರ್ನಾಟಕ ಇವರಿಗೆ, ತಲುಪಿಸಬಹುದು ಅಥವಾ ತಲುಪುವಂತೆ ಮಾಡಬಹುದು ಅಥವಾ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳುಹಿಸಬಹುದು ಮತ್ತು ಅದರ ಪ್ರತಿಯೊಂದನ್ನು ಇಲ್ಲಿ ಕೆಳಗೆ ತಿಳಿಸಿರುವ ವಿಳಾಸದಲ್ಲಿರುವ ಅರ್ಜಿದಾರ ಕಂಪನಿಯ ನೋಂದಾಯಿತ ಕಛೇರಿಗೆ ತಲುಪಿಸಬೇಕು:

ಅರ್ಜಿದಾರರಿಗಾಗಿ ಮತ್ತು ಪರವಾಗಿ
ಮೆ. ಫ್ಲೀಲ್‌ಟೆಕ್ ಎನರ್ಜಿ ಲಿಮಿಟೆಡ್
ಅಲೆಕ್ಸ್ ಮಹೇಶ್‌ಚಂದ್ರ ಜಾನ್ಸನ್
ಡೈರೆಕ್ಟರ್
(ಡಿಐಎನ್: 00502359)

ಅರ್ಜಿದಾರ ಕಂಪನಿಯ ನೋಂದಾಯಿತ ಕಛೇರಿ ವಿಳಾಸ:
ಮೆ. ಫ್ಲೀಲ್‌ಟೆಕ್ ಎನರ್ಜಿ ಲಿಮಿಟೆಡ್
ಸಿಐಎನ್: **U01100KA2005PLC036884**
ನಂ. 52/44, 8ನೇ ಮೇನ್, 2ನೇ ಕ್ರಾಸ್, ಗಣೇಶ ಬ್ಲಾಕ್, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560096

ದಿನಾಂಕ:28–02–2026
ಸ್ಥಳ: ಬೆಂಗಳೂರು

IN THE COURT OF THE DEPUTY DIRECTOR OF LAND RECORDS. TUMAKURU DISTRICT, TUMAKURU.
DDLR.(A) No.665/2025

Appellants: K.R. Ramegowda and another V/s
Respondents: The ADLR, Turuvekere Taluk, Turuvekere and others.

DRAFT PAPER PUBLICATION

Notice to respondents No.6(a), 7, 8, 10, 11, 12, 14, 15, 16 and 17 in th above case:

K.C. Puttaraju (Lrs)
R6(a) punyavathi w/o Late KC puttaraju, 70 years, Rat Kanatturu village, and past, Dabbeghatta Hobli, Turuvekere Taluk **R-7: Boramma @ Bharathi** W/o Late Shivalingaiah, Aged about 57 years, **R-8: K.C. Chakrapani** S/o Late Chikkegowda, Aged about 70 years, Respondents No.7 and 8 are R/at K. Hosuru, Kanathuru Post, Dabbeghatta Hobli, Turuvekere Taluk, Tumakuru District. **R-10: Manjula** W/o Late K.C. Swamy, Aged about 59 years, **R-11: K.C. Renukamma** D/o Late Chikkegowda, Aged about 55 years, **R-12: Nanjegowda** S/o Boregowda, Aged about 53 years, **R-14: Geetha B.S.** W/o Late K.N. Prakash, Major, **R-15: Thimmegowda** S/o Nanjegowda, Major,
R-16: K.S. Katharaju S/o K.R. Shivappa, Major, R-17: K.R. Nanjundegowda S/o Chikkarangegowda, Major, Respondents No.10 to 12 and 14 to 17 are R/at Kanathuru Village and Post, Dabbeghatta Hobli, Turuvekere Taluk, Tumakuru District.

WHEREAS, the above appellants have preferred the above appeal against the respondents for relief sought in the appeal memo in respect of land bearing Sy.No.5/2, situated at Kanathuru Village, Dabbeghatta Hobli, Turuvekere Taluk, Tumakuru District.

Take notice that you are been respondents No.6a, 7, 8, 10, 11, 12, 14, 15, 16 and 17 in the above case and the same is posted for your appearance on 10.03. 2026at 3.00 P.M. before the Hon'ble DDLR Court, Tumakuru, therefore, you are hereby informed to appear on the said date, failing which the case shall be heard and determined as ex-parte and case will be continue in your absence. Given under my hand and seal of this court, this Feb of 2026.

By Order of the Court
DEPUTY DIRECTOR OF LAND RECORDS. TUMAKURU DISTRICT, TUMAKURU.
Advocate for Appellants
Lakshminarayana, B.A.LL.B., Advocate,
SRS Building, Near Civil Bus Stand,
Tumakuru. Mobile No.9448581909

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಬೆಂಗಳೂರು

ಸಂಖ್ಯೆ: ಹಾಹೂಮಾಸ(ವಿ)/ಕೃಉಮಾಸ(ಬೆಂ)/3424/2025–26
ದಿನಾಂಕ: 25.02.2026

-: ಸಾರ್ವಜನಿಕ ಪ್ರಕಟಣೆ :-

[illegible] JAYSP GLOBAL [illegible]

ಸಹಿ/- ಕಾರ್ಯದರ್ಶಿ

ಕರ್ನಾಟಕ ಸರ್ಕಾರ

ಮುಖ್ಯ ವೈದ್ಯಾಧಿಕಾರಿಗಳ ಕಚೇರಿ, ಭದ್ರಾವತಿ

Ph: Email: cmobdvt@gmail.com Phone- 08282-298133

ಸಂ/ಸಾಆಭ/ಹೊಗು/1250/2025-26 ದಿ: 27.02.2026

ವಿಷಯ :- 2026–27 ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್–ಡಿ ಮತ್ತು ನಾನ್–ಕ್ಲಿನಿಕಲ್ ಸೇವೆ ಪಡೆಯುವ ಕುರಿತು ಇ–ಟೆಂಡರ್ ಆಹ್ವಾನ.

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಭದ್ರಾವತಿ ಇಲ್ಲಿಗೆ 2026–27 ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್–ಡಿ ಮತ್ತು ನಾನ್–ಕ್ಲಿನಿಕಲ್ ಸೇವೆ ಪಡೆಯುವ ಕುರಿತು, ಕರ್ನಾಟಕ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ದ್ವಿ–ಲಕೋಟೆ ಪದ್ಧತಿಯ (Two Cover system) ಪ್ರಕಾರ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ, ಇ.ಎಂ.ಡಿ. ಟೆಂಡರ್ ಷರತ್ತು ಮತ್ತು ನಿಬಂಧನೆಗಳ ಬಗ್ಗೆ ಮತ್ತು ಹೆಚ್ಚಿನ ಮಾಹಿತಿಗಾಗಿ https:://kppp.karnataka.gov.in ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಕಚೇರಿ ಕಾರ್ಯಾಲಯದ ಸಮಯದಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಟೆಂಡರ್‌ನ ಅಂದಾಜು ಮೊತ್ತರೂ. 81.00 ಲಕ್ಷಗಳು (ರೂ ಎಂಭತ್ತೊಂದು ಲಕ್ಷ ಮಾತ್ರ

ಸಹಿ/- ಮುಖ್ಯ ವೈದ್ಯಾಧಿಕಾರಿಗಳು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಭದ್ರಾವತಿ

ವಾ.ಸಾ.ಸಂ.ಇ/ಶಿ.ಎಸ್.ಎಂ.ಸಿ.ಎ/ಬಿ/25-26/149/02/1919

IN THE COURT OF THE HON'BLE V ADDITIONAL CIVIL JUDGE AND JMFC AT TUMAKURU
F.D.P.No.39/2025

Petitioners : Ranganna and another

V/s

Respondents : L.T. Gangathimmegowda @ Rajanna And others.

DRAFT PAPER PUBLICATION

Notice to respondent No.2 in th above case:

R-2: L.T. Devaraju S/o Late Thimmannagowda, Aged about 55 years, R/at House No.172, Manjunatha Nagara, Church Road, Nagasandra Post, Bengaluru - 73

WHEREAS, the above appellants have preferred the above appeal against the respondents for relief sought in the appeal memo in respect of land bearing Sy.No.53/5, situated at Lakkenahalli Village, Hebburu Hobli, Tumakuru Taluk, Tumakuru District.

Take notice that you are been respondent No.2 in the above case and the same is posted for your appearance on 18.03.2026 11.00 A.M. before the Hon'ble V Additional Civil Judge and JMFC at Tumakuru, therefore, you are hereby informed to appear on the said date, failing which the case shall be heard and determined as ex-parte and case will be continue in your absence.

Given under my hand and seal of this court, this 27th February of 2026.

By Order of the Court
Sheristedar Prl. Civil Judge & J.M.E.C., TUMKUR
Advocate for Appellants
Lakshminarayana, B.A.LL.B., Advocate,
SRS Building, Near Civil Bus Stand, Tumakuru.
Mobile No.9448581909

ಕರ್ನಾಟಕ ಸರಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ

ದೂರವಾಣಿ : 08472 –220196, midnglb@rediffmail.com / midnglb1@gmail.com

ಐಎಫ್‌ಬಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ–4/2025–26/5435 ದಿನಾಂಕ: 25–02–2026

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–1, 2&4) ::

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 4702–ಅಣೆಕಟ್ಟು, ಪಿಕಪ್, 4702–ಏತ ನೀರಾವರಿ ಯೋಜನೆ–ಪ್ರಧಾನ ಕಾಮಗಾರಿಗಳು, 2702 ವಾರ್ಷಿಕ ನಿರ್ವಹಣೆ, ವಿಶೇಷ ಘಟಕ ಯೋಜನೆ ಅಡಿಯಲ್ಲಿ ಕಾಮಗಾರಿಗಳಿಗಾಗಿ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: ಗರಿಷ್ಠ ರೂ. **121,92,140.50** ಕನಿಷ್ಠ ರೂ. **3,43,481.25,** 3) ಗುತ್ತಿಗೆದಾರರ ಅರ್ಹತೆ ವಿವರ: 4ನೇ ದರ್ಜೆ ಮೇಲ್ಪಟ್ಟು (ಬಿಡ್‌ನಲ್ಲಿ ಇರುವಂತೆ), 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : ಅರ್ಜಿಯ ಬೆಲೆ ಕೆ.ಪಿ.ಪಿ. ಪೋರ್ಟಲ್‌ನಂತೆ ಇ.ಎಂ.ಡಿ. ಮೊತ್ತ ಗರಿಷ್ಠ ರೂ. 2,00,000.00 ಕನಿಷ್ಠ ರೂ. 4,300.00 5) ಪ್ರಿ ಬಿಡ್ ಮೀಟಿಂಗ್ ದಿನಾಂಕ: **02–03–2026 ಸಮಯ 11–00ರ ವರೆಗೆ,** 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: **05–03–2026 ಸಮಯ 11–00ರ ವರೆಗೆ,** 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **06–03–2026 ಸಮಯ 17–30ರ ವರೆಗೆ,** 8) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: **07–03–2026 ಸಮಯ 17–30ರ ವರೆಗೆ,** 9) ಫೈನಾನ್ಷಿಯಲ್ ಬಿಡ್ ತೆರೆಯುವ ದಿನಾಂಕ: **09–03–2026 ಸಮಯ 17–30ರ ವರೆಗೆ** 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 11) ಅಂತರಜಾಲ ತಾಣದ ವಿಳಾಸ: www. kppp.Karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/1129/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ.

ದೂ: ಸಂ: 08194–235464 ಇ–ಮೇಲ್: dhochitradurga@gmail.com

ಸಂ:ಜಿಆಕುಕಅ/ಚಿ/ಸರಬ/ಪಥ್ಯಾಹಾರ/03/2025–26 ದಿನಾಂಕ:–25–02–2026

ಇ–ಟೆಂಡರ್ ಪ್ರಕಟಣೆ

2026–27ನೇ ಸಾಲಿನ ಅವಧಿಗೆಜಿಲ್ಲಾಆರೋಗ್ಯ ಮತ್ತು ಕು.ಕ.ಅಧಿಕಾರಿಗಳು, ಚಿತ್ರದುರ್ಗ ಜಿಲ್ಲೆಯ ಅಧೀನ ಎರಡು ಸಾರ್ವಜನಿಕ ಆಸ್ಪತ್ರೆಗಳು (ಹೊಸದುರ್ಗ, ಮೊಳಕಾಲ್ಮೂರು) / ಹನ್ನೊಂದು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಅವಶ್ಯವಿರುವ ಪಥ್ಯಾಹಾರ ಹಾಗೂ ಉತ್ತಮ ದರ್ಜೆ ಬ್ರೆಡ್‌ಪೂರೈಕೆಗಾಗಿ ಇ–ಟೆಂಡರ್ ಕರೆಯಲಾಗಿರುತ್ತದೆ.

ಕರ್ನಾಟಕ ಪಬ್ಲಿಕ್ ಪ್ರಾಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ನ್ನು ದಿನಾಂಕ:–25–02–2026 ರಿಂದ ದಿನಾಂಕ:–27–03–2026 ರ ಸಮಯ ಸಂಜೆ 5=00 ಗಂಟೆಯವರೆಗೆ ಅಪ್ ಲೋಡ್ ಮಾಡಬಹುದು. ಟೆಂಡರ್‌ನ ತಾಂತ್ರಿಕ ಬಿಡ್‌ತೆರೆಯುವ ದಿನಾಂಕ:–30–03–2026 ರ ಬೆಳಗ್ಗೆ 11–00 ಗಂಟೆಗೆ.

ಟೆಂಡರ್‌ನ ಪ್ರತಿಯೊಂದು ಷರತ್ತು ಮತ್ತು ನಿಬಂಧನೆಗಳನ್ನು http:// kppp.karnataka.gov.in ಅಂತರ್‌ಜಾಲದಲ್ಲಿ ಪಡೆದು ಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಚಿತ್ರದುರ್ಗ. ಇಲ್ಲಿಕಚೇರಿ ವೇಳೆಯಲ್ಲಿ ಸಂಪರ್ಕಿಸುವುದು.

DIPR/CTA/KSMCA/ 709/2025-26 ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿತ್ರದುರ್ಗ.

ಕರ್ನಾಟಕ ಸರ್ಕಾರ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ದೂರವಾಣಿ: 08382–220556 ಇ–ಮೇಲ್: predkarwar@gmail.com

ಕ್ರ.ಸಂ: ಪಂರಾ.ಇಂ/ಕಾ/ಪಿಎ–1/2025–26/53 ದಿ: 25.02.2026

ಟೆಂಡರ್ ಪ್ರಕಟಣೆ–53/2025–26 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ವಿವಿಧ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-1, 2 ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಏಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) (1) 2022–23ನೇ ಸಾಲಿನ ರಾಜ್ಯ ವಲಯ ಮುಂದುವರೆದ ವಿವೇಕ ಯೋಜನೆಯಡಿ ಹೊನ್ನಾವರ ತಾಲೂಕಿನ ಕಾಸರಕೋಡ ಪಂ.ದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉರ್ದು ಹಿರೇಮಠ ಒಂದು ಕೊಠಡಿ ನಿರ್ಮಾಣ. RDPR/2025-26/BD/WORK_INDENT24073, ಅಂದಾಜು ಮೊತ್ತ: ರೂ. 14.50 ಲಕ್ಷ, ಮುಂಗಡ ಠೇವಣಿ: ರೂ. 36,250.00, ಕಾಲಮಿತಿ (ಮಳೆಗಾಲ ಸಹಿತ): 06 ತಿಂಗಳು

(ಮೀಸಲಾತಿ: ಪರಿಶಿಷ್ಟ ಪಂಗಡ) (2) 2024–25ನೇ ಸಾಲಿನ ಸರಕಾರಿ ಪದವಿ ಪೂರ್ವ ಕಾಲೇಜುಗಳ ತರಗತಿ ಕೊಠಡಿಗಳ ದುರಸ್ತಿ ಅನುದಾನದಡಿ ಕುಮಟಾ ತಾಲೂಕಿನ ಸರಕಾರಿ ಬೆಣ್ಣೆ ಪದವಿಪೂರ್ವ ಕಾಲೇಜು ನೆಲ್ಲಿಕೇರಿ ಕೊಠಡಿ ದುರಸ್ತಿ. RDPR/2025-26/BD/WORK_INDENT25186, ಅಂದಾಜು ಮೊತ್ತ: ರೂ. 27.00 ಲಕ್ಷ, ಮುಂಗಡ ಠೇವಣಿ: ರೂ. 27,000.00, ಕಾಲಮಿತಿ (ಮಳೆಗಾಲ ಸಹಿತ): 06 ತಿಂಗಳು

(ಮೀಸಲಾತಿ: ಪರಿಶಿಷ್ಟ ಜಾತಿ) (3) 2024–25ನೇ ಸಾಲಿನ ಸರಕಾರಿ ಪದವಿ ಪೂರ್ವ ಕಾಲೇಜುಗಳ ತರಗತಿ ಕೊಠಡಿಗಳ ದುರಸ್ತಿ ಅನುದಾನದಡಿ ಕುಮಟಾ ತಾಲೂಕಿನ ಸರಕಾರಿ ಪದವಿಪೂರ್ವ ಕಾಲೇಜು ಬಾಡ ಕಟ್ಟಡ ದುರಸ್ತಿ. RDPR/2025-26/RD/WORK_INDENT25101, ಅಂದಾಜು ಮೊತ್ತ: ರೂ. 16.00 ಲಕ್ಷ, ಮುಂಗಡ ಠೇವಣಿ: ರೂ. 20,000.00, ಕಾಲಮಿತಿ (ಮಳೆಗಾಲ ಸಹಿತ): 05 ತಿಂಗಳು

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್–ಬಿಗಳನ್ನು ಮತ್ತು Technical Bid ನ್ನು ವೆಬ್ ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 13.03.2026 ರ ಮಧ್ಯಾಹ್ನ 16.30 ಘಂಟೆವರೆಗೆ (2) ಕಾಮಗಾರಿಯ Technical Bidನ್ನು ತೆರೆಯುವ ದಿನಾಂಕ: 16.03.2026 ಮಧ್ಯಾಹ್ನ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/1158/25-26 ದಿ. 27.02.2026

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur

(ಸರ್ಕಾರದ ಸ್ವಾಯತ್ತ ಸಂಸ್ಥೆ) ಹೈದ್ರಾಬಾದ್ ರೋಡ್, ರಾಯಚೂರು –584102
Phone /Fax-08532-238488/89
www.rims-raichur.karnataka.gov.in info@rims-raichur.com

ಸಂ. ರಿಮ್ಸ್/ಸರಬರಾಜು/ಟೆಂಡರ್/2025–26 ದಿನಾಂಕ:26.02.2026

ಇ–ಟೆಂಡರ್ ಪ್ರಕಟಣೆ

2024–25ನೇ ಸಾಲಿನ ಕ.ಕ.ಪ್ರ.ಅ. ಮಂಡಳಿಯ ಮೈಕ್ರೋ ಯೋಜನೆಯಡಿ ದೇವದುರ್ಗ ತಾಲೂಕಿನ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳ ಅನುಷ್ಠಾನ ಮಾಡಲು ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್‌ನ ವಿವರ	ಟೆಂಡರ್‌ನ ಸಂಖ್ಯೆ	ಅಂದಾಜು ವೆಚ್ಚ (ಲಕ್ಷಗಳಲ್ಲಿ)
1	ದೇವದುರ್ಗ ಸಾರ್ವಜನಿಕ ತಾಲೂಕು ಆಸ್ಪತ್ರೆಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಸರಬರಾಜು ಮಾಡಿಸುವುದು ಹಾಗೂ ಅಳವಡಿಕೆ ಮಾಡಿಸುವ ಕುರಿತು	ರಿಮ್ಸ್/ಡಿಹೆಚ್‌ಓ/ ಸರಬರಾಜು/ ಟೆಂಡರ್/ ಉಪಕರಣ/15/2025–26 DME/2025-26/IND2112	130.00
2	ದೇವದುರ್ಗ ತಾಲೂಕಿನ ಸಮುದಾಯ ಆರೋಗ್ಯ ಕೇಂದ್ರ ಜಾಲಹಳ್ಳಿಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಸರಬರಾಜು ಮಾಡಿಸುವುದು ಮತ್ತು ಅಳವಡಿಸಿಕೆ ಮಾಡಿಸುವ ಕುರಿತು	ರಿಮ್ಸ್/ಡಿಹೆಚ್‌ಓ/ ಸರಬರಾಜು/ ಟೆಂಡರ್/ ಉಪಕರಣ/16/2025–26 DME/2025-26/IND2113	30.00
3	ದೇವದುರ್ಗ ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ, ಗಾಣದಾಳ ಮತ್ತು ರಾಮದುರ್ಗ ಗಳಿಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಪೀಠೋಪಕರಣಗಳನ್ನು ಸರಬರಾಜು ಮಾಡಿಸುವುದು ಮತ್ತು ಅಳವಡಿಸಿಕೆ ಮಾಡಿಸುವ ಕುರಿತು	ರಿಮ್ಸ್/ಡಿಹೆಚ್‌ಓ/ ಸರಬರಾಜು/ ಟೆಂಡರ್/ ಉಪಕರಣ/17/2025–26 DME/2025-26/IND2114	40.00

1) ಟೆಂಡರ್‌ಗಳನ್ನು ದಿನಾಂಕ : 27.02.2026 ರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಫಾರ್ಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 13.03.2026 ರ ಸಾಯಂಕಾಲ 5.00 ಗಂಟೆಯ ವರೆಗೆ 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 16.03.2026 ರ ಬೆಳಿಗ್ಗೆ 11.30 ಗಂಟೆಗೆ

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ https://kppp.karnataka.gov.in ನಿಂದ ಡೌನ್ಲೋಡ್ ಮಾಡಿಕೊಳ್ಳಬಹುದು.

ಸಹಿ/- ನಿರ್ದೇಶಕರು
DIP/RCR/732/KSMC&A/735/2025-26 ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಾಯಚೂರು

ನಗರಸಭಾ ಕಾರ್ಯಾಲಯ, ಹೊಸಕೋಟೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ–562114.
ದೂರವಾಣಿ:–27931221, ಸಹಾಯವಾಣಿ: 27931759
Email:-itstaff_ulb_hosakote@yahoo.com Website: www.hosakotecity.mrc.gov.in

ನಂ.ನಸಹೊ/ತಾಂತ್ರಿಕ ಶಾಖೆ/ಟೆಂಡರ್/ಸಿಆರ್/14/2025–26 ದಿನಾಂಕ: 27.02.2026

"ಮರು ಟೆಂಡರ್ ಪ್ರಕಟಣೆ" (ಇ–ಪ್ರೊಕ್ಯೂರ್‌ಮೆಂಟ್ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ)

ಪೌರಾಯುಕ್ತರು ನಗರಸಭೆ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2025–26ನೇ ಸಾಲಿನ ಸನ್ಮಾನ್ಯ ಮುಖ್ಯ ಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ (CMIDP) ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸ್ಟಾಂಡರ್ಡ್ ಡಾಕ್ಯುಮೆಂಟ್ 01.02.03 ರ ಪ್ರಕಾರ ಟೆಂಡರ್‌ನ್ನು ಏಕ/ ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮರುಟೆಂಡರ್‌ನ್ನು ಕರೆಯಲಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಮೀಸಲಿರಿಸಿರುವ ವರ್ಗ
1	DMA/2025-26/OW/WORK_INDENT53589/CALL-2	42.00	SC
2	DMA/2025-26/RD/WORK_INDENT53598/CALL-2	20.00	SC
3	DMA/2025-26/OW/WORK_INDENT53587/CALL-2	85.00	SC
4	DMA/2025-26/OW/WORK_INDENT53601/CALL-2	32.00	ST
5	DMA/2025-26/OW/WORK_INDENT53612/CALL-2	40.00	CAT-II(A)
6	DMA/2025-26/RD/WORK_INDENT53605/CALL-2	20.00	CAT-II(A)
7	DMA/2025-26/OW/WORK_INDENT53591/CALL-3	65.00	GENERAL
8	DMA/2025-26/RD/WORK_INDENT53573/CALL-3	50.00	GENERAL
9	DMA/2025-26/RD/WORK_INDENT53597/CALL-2	34.00	GENERAL
10	DMA/2025-26/OW/WORK_INDENT53602/CALL-2	40.00	GENERAL
11	DMA/2025-26/OW/WORK_INDENT53604/CALL-2	42.00	GENERAL
12	DMA/2025-26/RD/WORK_INDENT53613/CALL-2	30.00	GENERAL
13	DMA/2025-26/RD/WORK_INDENT53614/CALL-2	20.00	GENERAL
14	DMA/2025-26/OW/WORK_INDENT53615/CALL-2	35.00	GENERAL
15	DMA/2025-26/RD/WORK_INDENT55032	40.00	GENERAL
16	DMA/2025-26/RD/WORK_INDENT55030	40.00	GENERAL
17	DMA/2025-26/RD/WORK_INDENT55028	70.00	GENERAL

1) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **16.03.2026** ರ ಸಂಜೆ **5:30** ಗಂಟೆಯವರೆಗೆ ಹಾಗೂ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **18.03.2026** ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: **24.03.2026** ರ ಬೆಳಗ್ಗೆ **11:00** ಗಂಟೆಗೆ ನಿಗಧಿಪಡಿಸಲಾಗಿರುತ್ತದೆ.
2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in/#/portal/portal-home** ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು.

ಸಹಿ/- ಪೌರಾಯುಕ್ತರು
ನಗರಸಭೆ, ಹೊಸಕೋಟೆ.
ವಾಸಾಸಂಇ/ನಾ.ಪ್ರ/ಕಿರಡಿಸಾಯು/5915/2025–26

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಹಿಂದಿನ ಹೆಸರು ಕರ್ನಾಟಕ ಭೂಸೇನೆ ನಿಗಮ ನಿಯಮಿತ)
ಕಾರ್ಯಪಾಲಕ ಅಭಿಯಂತರರು–1, ಕೆಆರ್‌ಐಡಿಎಲ್, ಬಿಬಿಎಂಪಿ ವಿಭಾಗ
ನಂ. 2882, 14ನೇ ಮುಖ್ಯ ರಸ್ತೆ, 2ನೇ ಹಂತ, ರಾಜಾಜಿನಗರ, ಸುಬ್ರಮಣ್ಯನಗರ, ಬೆಂಗಳೂರು–560010

ಸಂಖ್ಯೆ: ಇಇ–1/ಕೆಆರ್‌ಐಡಿಎಲ್/ಬಿಬಿಎಂಪಿ/ಟೆಂಡರ್ ವರ್ಕ್ಸ್/2025–26/427 ದಿನಾಂಕ: 27.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್ ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು–1, ಕೆಆರ್‌ಐಡಿಎಲ್ ಇವರು ಕೆಳಕಂಡ ಕಾಮಗಾರಿಗಳಿಗೆ ಪ್ರಸಿದ್ಧ ಮತ್ತು ಅನುಭವವುಳ್ಳ ಗುತ್ತಿಗೆದಾರರು/ಕಂಪನಿಗಳಿಂದ ಕೆಪಿಪಿ ಪೋರ್ಟಲ್ ಮೂಲಕ ಇ–ಟೆಂಡರುಗಳನ್ನು ಆಹ್ವಾನಿಸಿದ್ದಾರೆ.

ಟೆಂಡರಿನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಸಂಸ್ಥೆಗಳು ಇ–ಆಡಳಿತ ಕಾರ್ಯಾಲಯದ ನೂತನ ವೆಬ್‌ಸೈಟ್: **www.kppp.karnataka.gov.in** ಮೂಲಕ ಮಾತ್ರ ಟೆಂಡರನ್ನು ನೋಡಬಹುದು, ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಸಲ್ಲಿಸಬಹುದು. ಟೆಂಡರನ್ನು ನಿಗದಿತ ದಿನಾಂಕ ಮತ್ತು ಸಮಯದ ಒಳಗೆ ಪೋರ್ಟಲ್ ಮೂಲಕ ವಿದ್ಯುನ್ಮಾನವಾಗಿ (ಇಂಟರ್ನೆಟ್ ಮೂಲಕ ಆನ್‌ಲೈನ್‌ನಲ್ಲಿ) ಸಲ್ಲಿಸತಕ್ಕದ್ದು, ಕೆಪಿಪಿ ಸಹಾಯವಾಣಿ ಸಂಪರ್ಕ ಸಂಖ್ಯೆ **+91–9240214000/+91–9240214001.**

ಕ್ರಸಂ	ಕೆಲಸದ ಹೆಸರು	ಟೆಂಡರಿಗಿಟ್ಟಿರುವ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಲಕ್ಷಗಳಲ್ಲಿ)
1	ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿನ ಜಯಮಹಲ್ ಮತ್ತು ರಾಮಸ್ವಾಮಿ ಪಾಳ್ಯ ವಾರ್ಡ್‌ನಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ನೀರು ಸರಬರಾಜು ಪೂರೈಕೆ ಮತ್ತು ಇತರೆ ಸಂಬಂಧಪಟ್ಟ ಕಾಮಗಾರಿಗಳು.	757.91	11.37
2	ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದಲ್ಲಿನ ಲಿಂಗರಾಜಪುರಂ ವಾರ್ಡ್ 49, ಕಮ್ಮನಹಳ್ಳಿ ವಾರ್ಡ್ 28, ಹೆಚ್‌ಬಿಆರ್ ವಾರ್ಡ್ 24ರಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ನೀರು ಸರಬರಾಜು ಪೂರೈಕೆ ಮತ್ತು ಇತರೆ ಸಂಬಂಧಪಟ್ಟ ಕಾಮಗಾರಿಗಳು.	758.00	11.37

- ವಿಚಾರಣೆಗಾಗಿ ಕಡೇ ದಿನಾಂಕ ಮತ್ತು ಸಮಯ: **18.03.2026** ರಂದು **14.00** ಗಂಟೆವರೆಗೆ.
- ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ: **18.03.2026** ರಂದು **16.00** ಗಂಟೆವರೆಗೆ
- ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **23.03.2026** ರಂದು **16.00** ಗಂಟೆಗೆ
- ಆರ್ಥಿಕ ಬಿಡ್ ತೆರೆಯುವ ದಿನಾಂಕ: **25.03.2026** ರಂದು **16.00** ಗಂಟೆಗೆ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಕಾರ್ಯಪಾಲಕ ಅಭಿಯಂತರರು–1
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
ದೂರವಾಣಿ: 9380134784/9448051646 ಇ–ಮೇಲ್: ee1bbmpwest@kridl.net

ಸಹಿ/- ಕಾರ್ಯಪಾಲಕ ಅಭಿಯಂತರರು–1, ಕೆಆರ್‌ಐಡಿಎಲ್, ಬಿಬಿಎಂಪಿ, ಬೆಂಗಳೂರು

ಹಾಸನ ಜಿಲ್ಲೆಯಲ್ಲಿ ಪರೀಕ್ಷೆ ಎದುರಿಸಲಿರುವ 15,782 ಅಭ್ಯರ್ಥಿಗಳು | ಜಿಲ್ಲಾಡಳಿತ ಸಿದ್ಧತೆ

ಪಿಯು ಪರೀಕ್ಷೆ: ಬಿಗಿಬಂದೋಬಸ್ತ್

▸ ಮೂರ್ತಿ ಬೆಳ್ಳಾವರ

• ಹಾಸನ: ಜಿಲ್ಲೆಯಲ್ಲಿ 2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ ಇಂದಿನಿಂದ (ಫೆ.28) ಮಾ.17ರವರೆಗೆ ನಡೆಯಲಿದ್ದು ಹಾಸನ ಜಿಲ್ಲೆಯಲ್ಲಿ ಒಟ್ಟು 15,782 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ,

ಈಗಾಗಲೇ ದ್ವಿತಿಯ ಪಿಯುಸಿ ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಲು ಅಗತ್ಯವಿರುವ ಸಿದ್ಧತೆಗಳನ್ನು ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಜಿಲ್ಲಾ ಪಂಚಾಯಿತಿ, ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಸಿದ್ಧತೆ ಮಾಡಿಕೊಳ್ಳಾಗಿದೆ. ದ್ವಿತೀಯ ಪಿಯುಸಿ ಪರೀಕ್ಷೆ ಫೆ.28 ರಿಂದ ಮಾ.17 ರವರೆಗೆ ನಡೆಯಲಿದ್ದು, ಪರೀಕ್ಷೆಯೂ ಪ್ರತಿದಿನ ಬೆ.10 ಗಂಟೆಗೆ ಪ್ರಾರಂಭವಾಗಿ ಮಧ್ಯಾಹ್ನ 1 ಗಂಟೆವರೆಗೆ ನಡೆಯಲಿದೆ. ಜಿಲ್ಲೆಯಲ್ಲಿ 14,759 ಹೊಸ ವಿದ್ಯಾರ್ಥಿಗಳು, 305 ಖಾಸಗಿ ಅಭ್ಯರ್ಥಿಗಳು, 715 ಪುನರಾವರ್ತಿತ ವಿದ್ಯಾರ್ಥಿಗಳು ಬರೆಯಲಿದ್ದು, ಇವರಲ್ಲಿ 6167 ಬಾಲಕರು, 8592 ಬಾಲಕಿಯರು ಸೇರಿದಂತೆ ಒಟ್ಟು 15,782 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

33 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ: ಹಾಸನ ನಗರದಲ್ಲಿ-12, ಆಲೂರು-01, ಅರಸೀಕೆರೆ-06, ಅರಕಲಗೂಡು-03, ಬೇಲೂರು-02, ಚನ್ನರಾಯಪಟ್ಟಣ-04, ಜಾವಗಲ್-01, ಹೊಳೆನರಸೀಪುರ-03, ಸಕಲೇಶಪುರ-01 ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 33 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ಸಿ.ಸಿ ಕ್ಯಾಮೆರಾ, ಬಿಗಿ ಬಂದೋಬಸ್ತ್: ಪರೀಕ್ಷೆ ನಡೆಯುವ ದಿನಗಳಲ್ಲಿ ಪರೀಕ್ಷಾ ಕೇಂದ್ರಗಳ 200 ಮೀಟರ್ ಸುತ್ತಮುತ್ತ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. ಜೆರಾಕ್ಸ್ ಅಂಗಡಿ ಮತ್ತು ಸೈಬರ್ ಕೇಂದ್ರಗಳನ್ನು ಮುಚ್ಚುವಂತೆ ಈಗಾಗಲೇ ಆದೇಶ ಹೊರಡಿಸಲಾಗಿದೆ. ಹಾಗೂ ಪರೀಕ್ಷಾ ಕೇಂದ್ರದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ



ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ, ಪಾರದರ್ಶಕತೆಯಿಂದ ಪರೀಕ್ಷೆ ನಡೆಸಲು ಹಾಗೂ ಪರೀಕ್ಷಾ ಅಕ್ರಮ ತಡೆಗಟ್ಟಲು ಸಿ.ಸಿ ಕ್ಯಾಮೆರಾ ಕಣ್ಗಾವಲು ವ್ಯವಸ್ಥೆ ಮಾಡಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳ ಚಲನವಲನ ವೀಕ್ಷಿಸಲು ವೆಬ್ ಕಾಸ್ಟಿಂಗ್ ಕಣ್ಗಾವಲಿನ ವ್ಯವಸ್ಥೆ ಕೂಡ ಮಾಡಲಾಗಿದೆ.

ಪ್ರಶ್ನೆ ಪತ್ರಿಕೆ ವಿತರಣೆ ವಾಹನಗಳಿಗೆ ಜಿಪಿಎಸ್ ಟ್ರ್ಯಾಕಿಂಗ್: ಪ್ರಶ್ನೆ ಪತ್ರಿಕೆಗಳನ್ನು 10 ಮಾರ್ಗಗಳಲ್ಲಿ ವಿತರಿಸುವ ವಾಹನಗಳಿಗೆ ಜಿಪಿಎಸ್ ಟ್ರ್ಯಾಕಿಂಗ್ ಅಳವಡಿಸಲಾಗಿದೆ. ಮತ್ತು ಶಸ್ತ್ರ ಸಜ್ಜಿತ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ಮುಖ್ಯ ಅಧೀಕ್ಷಕರನ್ನು ಹೊರತುಪಡಿಸಿ ಬೇರಾವುದೇ ಸಿಬ್ಬಂದಿ ಮೊಬೈಲ್ ಬಳಕೆ ನಿಷೇಧಿಸಲಾಗಿದೆ. ಪರೀಕ್ಷಾ ಸಿಬ್ಬಂದಿ ಕಡ್ಡಾಯವಾಗಿ ಗುರುತಿನ ಚೀಟಿ ಧರಿಸುವಂತೆ ಕಡ್ಡಾಯ ಮಾಡಲಾಗಿದೆ.

ವಿದ್ಯಾರ್ಥಿಗಳಿಗೆ ಸೂಚನೆ: ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಮೊಬೈಲ್, ಬ್ಲೂ ಟೂತ್ ಸೇರಿದಂತೆ ಯಾವುದೇ ವಿದ್ಯುನ್ಮಾನ ಉಪಕರಣ ನಿಷೇಧಿಸಲಾಗಿದೆ, ವಿದ್ಯಾರ್ಥಿಗಳು ಪ್ರತಿ ದಿನ 40 ನಿಮಿಷ ಮುಂಚಿತವಾಗಿ ಪರೀಕ್ಷಾ ಕೇಂದ್ರ ತಲುಪಬೇಕು. ವಿಕಲಚೇತನ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ವಾಚಕರು, ಸಹಾಯಕರು ಮತ್ತು ಸಹಾಯಕ ಬರಹಗಾರರನ್ನು ನೇಮಿಸಿಕೊಳ್ಳಬಹುದು. 1 ಗಂಟೆ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ, ನೆಲ ಮಹಡಿಯಲ್ಲಿ ಸೂಕ್ತ ಆಸನದ ವ್ಯವಸ್ಥೆ ಮಾಡಲಾಗಿದೆ. ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಪರೀಕ್ಷೆಗೆ ಸಂಬಂಧಪಟ್ಟವರು ಪರೀಕ್ಷಾ ಕೇಂದ್ರದ ಪ್ರವೇಶಕ್ಕೆ ಅವಕಾಶ ಇರುವುದಿಲ್ಲ.

ಶೇ.100 ಫಲಿತಾಂಶ ನಿರೀಕ್ಷೆ

ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯಗಳು ಸುಸ್ಥಿತಿಯಲ್ಲಿ ಹಾಗೂ ಸ್ವಚ್ಛತೆ, ಕೊಠಡಿಗಳ ಸ್ವಚ್ಛತೆ, ವಿದ್ಯುತ್ ಸಂಪರ್ಕದಲ್ಲಿ ವ್ಯತಯವಾಗದಂತೆ ಹಾಗೂ ವೈದ್ಯಕೀಯ ತಂಡ, ಸೇರಿದಂತೆ ವಿದ್ಯಾರ್ಥಿಗಳಿಗೆ ಯಾವುದೇ ಗೊಂದಲ ಹಾಗೂ ಸಮಸ್ಯೆಯಾಗದಂತೆ ಈ ಭಾರಿ ಪರೀಕ್ಷೆ ಬರೆಯಲು ಸಿದ್ಧತೆ ನಡೆದರೆ, ಇತ್ತ ಪೋಷಕರು ಹಾಗೂ ಆದ್ಯಾಪಕರು, ಶಿಕ್ಷಣ ಮಂಡಳಿ ಜಿಲ್ಲೆಯ ಎಲ್ಲಾ ವಿದ್ಯಾರ್ಥಿಗಳಿಂದ ಮತ್ತು ಕಾಲೇಜುಗಳಿಂದ ಶೇಕಡಾ 100 ರಷ್ಟು ಫಲಿತಾಂಶವನ್ನು ನಿರೀಕ್ಷಿಸಲಾಗಿದೆ,

ದ್ವಿತಿಯ ಪಿಯುಸಿ ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಲು ಅಗತ್ಯವಿರುವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಜಿಲ್ಲೆಯ ಎಲ್ಲಾ ಕಾಲೇಜುಗಳಿಂದ ಶೇಕಡಾ 100 ರಷ್ಟು ಫಲಿತಾಂಶವನ್ನು ನಿರೀಕ್ಷಿಸಲಾಗಿದೆ, ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಲು ಮಾನಸಿಕವಾಗಿ ಸಿದ್ಧವಾಗಬೇಕು. ಪರೀಕ್ಷೆ ಬರೆಯುವ ಸಮಯದಲ್ಲಿ ಗೊಂದಲಕ್ಕೀಡಾಗಬೇಡಿ.

■ **ಲತಾ ಕುಮಾರಿ, ಜಿಲ್ಲಾಧಿಕಾರಿ, ಹಾಸನ.**

ಆರ್‌ಬಿಐ ನಿಯಮ ಕಡ್ಡಾಯವಾಗಿ ಪಾಲಿಸಿ

• ಮಂಡ್ಯ: ಖಾಸಗಿ ಹಣಕಾಸು ಸಂಸ್ಥೆಗಳು, ಮೈಕ್ರೋ ಫೈನಾನ್ಸ್‌ಗಳು ಸಾಲ ವಸೂಲಾತಿ ಮಾಡುವಾಗ ಆರ್‌ಬಿಐ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ನಿಯಮ ಮೀರಿ ದೌರ್ಜನ್ಯ ಎಸಗುವ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ರೈತ ಸಂಘದ ಬೇಡಿಕೆಗಳ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಖಾಸಗಿ ಹಣಕಾಸು ಸಂಸ್ಥೆಗಳು ಮತ್ತು ಮೈಕ್ರೋ ಫೈನಾನ್ಸ್ ಕಂಪನಿಗಳು ರೈತರಿಗೆ ಹಾಗೂ ಜನಸಾಮಾನ್ಯರಿಗೆ ಸಾಲ ವಸೂಲಾತಿ ಹೆಸರಿನಲ್ಲಿ ಕಿರುಕುಳ ನೀಡಬಾರದು ಎಂಬುದು ಸರ್ಕಾರದ ಕಟ್ಟುನಿಟ್ಟಿನ ಆದೇಶವಾಗಿದೆ. ನಿಯಮ ಮೀರಿ ವರ್ತಿಸುವ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ರಾತ್ರಿ ವೇಳೆ ವಿದ್ಯುತ್ ನೀಡುವುದರಿಂದ ಪ್ರಾಣಹಾನಿ ಇಲ್ಲವೇ ಅನಾನುಕೂಲ ಉಂಟಾಗುವ ಸಾಧ್ಯತೆಗಳಿವೆ. ಹೀಗಾಗಿ ಹಗಲು ಹೊತ್ತಿನಲ್ಲಿ ಬೆಳೆಗಳಿಗೆ ನೀರು ಹರಿಸುವುದು ಪ್ರಯೋಜನಕಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಬೆಳಗಿನ ಸಮಯದಲ್ಲಿ



ವಿದ್ಯುತ್ ನೀಡಬೇಕು. ತಾಂತ್ರಿಕ ಅಡಚಣೆಗಳಿದ್ದಲ್ಲಿ ಅದನ್ನು ಬಗೆಹರಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ರೈತರ ಕುಂದುಕೊರತೆಗಳಿಗೆ ಹಾಗೂ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಪಂದಿಸಬೇಕು ಎಂದು ತಿಳಿಸಿದ ಜಿಲ್ಲಾಧಿಕಾರಿಗಳು ರೈತರಿಗೆ ಕೃಷಿ ಚಟುವಟಿಕೆಗಳನ್ನು ಉತ್ತೇಜಿಸಲು ಬ್ಯಾಂಕುಗಳು ಹಲವು ಬೆಳೆ ಸಾಲ ಯೋಜನೆಗಳನ್ನು ಸಮರ್ಪಕವಾಗಿ ನೀಡಲು ಕ್ರಮವಹಿಸಿ ಎಂದು ಅವರು ತಿಳಿಸಿದರು.

ಸಭೆಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಪ್ರತೀಕ್‌ಹೆಗ್ಡೆ ಹಾಗೂ ರೈತ ಮುಖಂಡರು ಭಾಗವಹಿಸಿದ್ದರು.



ಭಗತ್‌ಸಿಂಗ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷರು ಹಾಗೂ ಚಿಕ್ಕಬಳ್ಳಾಪುರ ಬಿಜೆಪಿ ಮುಖಂಡ ಸಂದೀಪ ಬಿ. ರೆಡ್ಡಿಯವರು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನಿವಾಸಕ್ಕೆ ತೆರಳಿ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಬ್ರಹ್ಮೋತ್ಸವಕ್ಕೆ ಮೇಲುಕೋಟೆಯಲ್ಲಿ ಸಿದ್ಧತೆ | ಪರಮೇಶ್‌ಗೌಡ ಮಾಹಿತಿ

ಮಾ.23ರಿಂದ ಚಲುವರಾಯಸ್ವಾಮಿ ವೈರಮುಡಿ

• ಮೇಲುಕೋಟೆ: ಮಾ.23ರಿಂದ ಏಪ್ರಿಲ್ 3ರವರೆಗೆ ನಡೆಯುವ ಮೇಲುಕೋಟೆ ಚಲುವನಾರಾಯಣ ಸ್ವಾಮಿಯವರ ಪ್ರಖ್ಯಾತ ವೈರಮುಡಿ ಬ್ರಹ್ಮೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಲು ಸಿದ್ಧತೆ ಮಾಡಲಾಗುತ್ತಿದೆ ಎಂದು ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕನಗೋನಹಳ್ಳಿ ಪರಮೇಶ್‌ಗೌಡ ಹೇಳಿದರು.

ಮೇಲುಕೋಟೆಯಲ್ಲಿ ವ್ಯವಸ್ಥಾನ ಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಮಾಹಿತಿ ನೀಡಿ ಮಾತನಾಡಿ, ಬ್ರಹ್ಮೋತ್ಸವದ ಪ್ರಮುಖ ಉತ್ಸವವಾದ ಮಾರ್ಚ 28ರ ರಾತ್ರಿ ನಡೆಯುವ ವೈರಮುಡಿ ಕಿರೀಟಧಾರಣ ಮಹೋತ್ಸವ ಮಾರ್ಚ 31ರ ಮಹಾರಥೋತ್ಸವ ಹಾಗೂ ಏ.1 ರಂದು ರಾತ್ರಿ ಕಲ್ಯಾಣಿಯಲ್ಲಿ ನಡೆಯುವ ತೆಪ್ಪೋತ್ಸವವನ್ನು ವಿಶೇಷವಾಗಿ ಆಚರಿಸಲಾಗುತ್ತದೆ ಆಕರ್ಷಕ ದೀಪಾಲಂಕಾರ ಹಾಗೂ ಪುಷ್ಪಾಲಂಕಾರ ಮಾಡಲಾಗುತ್ತದೆ ಎಂದರು.

ಚಲುವನಾರಾಯಣಸ್ವಾಮಿಯವರ ಉತ್ಸವ ನಡೆಯುವ ಬೀದಿಗಳ ಎರಡೂ ಕಡೆಗಳಲ್ಲಿ ಉದ್ದಕ್ಕೂ ತೆರೆದ ಚರಂಡಿಗಳಿವೆ ವೈರಮುಡಿಯಂದು



ಭಕ್ತರು ನೂಕುನುಗ್ಗಲಿನಲ್ಲಿ ಚರಂಡಿಗೆ ಬಿದ್ದು ಗಾಯಮಾಡಿಕೊಳ್ಳುತ್ತಿದ್ದಾರೆ ಈ ವರ್ಷ ಅದನ್ನು ತಪ್ಪಿಸಲು ಕ್ರಮವಹಿಸಿದ್ದೇವೆ ಬ್ರಹ್ಮೋತ್ಸವದ ವೇಳೆ ಉತ್ಸವಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಯೋಜಿಸಿದ್ದು ಸೇವೆ ಮಾಡಲು ಭಕ್ತಾದಿಗಳಿಗೂ ಅವಕಾಶ ಕಲ್ಪಿಸಿದ್ದೇವೆ ಭಕ್ತರು ಪುಷ್ಪಾಲಂಕಾರ, ಪ್ರಸಾದ, ದೀಪಾಲಂಕಾರ ಸೇರಿದಂತೆ ಯಾವುದೇ ಸೇವೆಗಳನ್ನು ಮಾಡಬಹುದಾಗಿದ್ದು ಸೇವಾರ್ಥದಾರರ ಹೆಸರನ್ನು ವೈರಮುಡಿ ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸುವುದರ ಜೊತೆಗೆ ವಿಶೇಷ ಗೌರವ ಸಮರ್ಪಣೆ ಮಾಡಲಾಗುತ್ತದೆ ಎಂದರು

ವ್ಯವಸ್ಥಾಪನಾ ಸಮಿತಿ ಸದಸ್ಯ ವಕೀಲ ಕಾಡೇನಹಳ್ಳಿ ಸತೀಶ್ ವಿವರ ನೀಡಿ ದೇವಾಲಯದ ಮುಂಭಾಗದ ಚಪ್ಪರವನ್ನು ಆಕರ್ಷಕವಾಗಿ ಶಾಶ್ವತವಾಗಿ ನಿರ್ಮಾಣ ಮಾಡಲಾಗುತ್ತದೆ. ಈಗ ದೇವಾಲಯದ ಮುಂಭಾಗವಿರುವ ಹಳೆಯ ಬ್ಯಾರಿಕೇಡ್‌ಗಳನ್ನು ತೆಗೆದು ಎಸ್.ಎಸ್ ಬ್ಯಾರಿಕೇಡ್ ಹಾಕಲಾಗುತ್ತದೆ ಅನಗತ್ಯ ನಾಮ ಫಲಕಗಳು, ಕಬ್ಬಿಣದ ಕಂಬಗಳನ್ನು ತೆಗೆಸಲಾಗುತ್ತದೆ ಬ್ರಹ್ಮೋತ್ಸವ ವೇಳೆ ಉತ್ಸವ ಬೀದಿಗಳಲ್ಲಿ ವಾಹನ ನಿಲುಗಡೆ ನಿಷೇಧಿಸಲಾಗುತ್ತದೆ ಎಂದರು

ಕಲ್ಯಾಣಿ ಪೂಜಾಶುಲ್ಕ ರದ್ದು: ಸಾಮಾನ್ಯ ಭಕ್ತರ ಒತ್ತಾಯಕ್ಕೆ ಮನ್ನಣೆ ನೀಡಿ ಕಲ್ಯಾಣಿ ಪೂಜೆಗೆ ನಿಗದಿ ಮಾಡಿದ್ದ 20 ರೂ. ಶುಲ್ಕವನ್ನು ರದ್ದು ಮಾಡಲಾಗಿದೆ. ಜಾತ್ರೆಯಲ್ಲಿ ವಿಶೇಷ ದರ್ಶನಕ್ಕೆ ಸಾವಿರ ರೂ. ಶುಲ್ಕ ನಿಗದಿ ಮಾಡಲಾಗಿದೆ. ದೇವಾಲಯದ ಚಿನ್ನದ ಗೋಪುರದ ಬಳಿ ವಿಶೇಷ ಹುಂಡಿಯಿಡಲು ತೀರ್ಮಾನಿಸಿದೆ. ಸದಸ್ಯರಾದ ಶೋಭಾ, ಡಾ.ಪ್ರೀತಿ ಮಹದೇವ್ ವೆಂಕಟೇಶ್,ರಾಜು ಕೆ.ಎಚ್ ಪುಟ್ಟಸ್ವಾಮಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಶೀಲಾ ಭಾಗವಹಿಸಿದ್ದರು.

ವೈದ್ಯ ಆತ್ಮಹತ್ಯೆ

• ಮಂಡ್ಯ: ಮಾನಸಿಕ ಖಿನ್ನತೆಗೆ ಒಳಗಾಗಿದ್ದ ವೈದ್ಯರೊಬ್ಬರು ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಶರಣಾಗಿರುವ ಘಟನೆ ನಗರದ ಹರಿಪ್ರಿಯ ಹೋಟೆಲ್‌ನಲ್ಲಿ ನಡೆದಿದೆ.



ಕೆ.ಆರ್.ನಗರ ಮೂಲದ ಸುಖದೇವ್ (53) ಎಂಬುವರೇ ಆತ್ಮಹತ್ಯೆಗೆ ಶರಣಾದ ವೈದ್ಯ. ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸುಖದೇವ್ ಅವರು ಶುಕ್ರವಾರ ನಗರದ ಹರಿಪ್ರಿಯ ಹೋಟೇಲ್‌ನಲ್ಲಿ ರೂಂ ಪಡೆದು ವಿಶ್ರಾಂತಿ ಪಡೆಯುತ್ತಿದ್ದರು. ಹೋಟೆಲ್‌ನ ರೂಂನಲ್ಲಿ ಸುಖದೇವ್ ಅವರು ಮದ್ಯ ಸೇವನೆ ಮಾಡಿದ್ದು, ಇದೇ ವೇಳೆ 30 ಮಾತ್ರೆಗಳನ್ನು ಸೇವಿಸಿ ಸಾವನ್ನಪ್ಪಿದ್ದಾರೆ. ವೈದ್ಯರು ಸಾವನ್ನಪ್ಪಿರುವುದನ್ನು ರೂಂ ಬಾಯ್ ಪೊಲೀಸರಿಗೆ ತಿಳಿಸಿದ್ದಾರೆ.

ಸಂಪಾದಕೀಯ

ಪಾಪದ ಕರ್ಮ ಬೆನ್ನು ಬಿಡದು

ಒಂದೆಡೆ ರಷ್ಯಾ -ಉಕ್ರೇನ್ ಸಮರ, ಇನ್ನೊಂದೆಡೆ ಇಸ್ರೇಲ್ ಮತ್ತು ಅದರ ವಿರೋಧಿಗಳ ನಡುವಿನ ಸಂಘರ್ಷ, ಮತ್ತೊಂದೆಡೆ ಇರಾನ್ ಮೇಲೆ ಅಮೆರಿಕದ ದಾಳಿಯ ಸಂಭಾವ್ಯತೆ...ಇವುಗಳ ಮಧ್ಯೆಯೇ ಮತ್ತೊಂದು ಯುದ್ಧವು ಸ್ಫೋಟಗೊಂಡಿದೆ. ಪಾಕಿಸ್ತಾನವು ಅಫಘಾನಿಸ್ತಾನದ ಮೇಲೆ 'ಸಮರ ಘೋಷಿಸಿದ್ದು' ರಾಜಧಾನಿ ಕಾಬೂಲ್ ಸೇರಿದಂತೆ ಕೆಲವು ನಗರಗಳ ಮೇಲೆ ವೈಮಾನಿಕ ದಾಳಿ ನಡೆಸಿದೆ. ಇದು ಕಳೆದ ಕೆಲವು ತಿಂಗಳುಗಳಿಂದ ಉಭಯದೇಶಗಳ ನಡುವೆ ನಡೆಯುತ್ತಿದ್ದ ತಿಕ್ಕಾಟವು ತೀರಾ ಉಲ್ಬಣಾವಸ್ಥೆ ತಲುಪಿರುವುದನ್ನು ಸಂಕೇತಿಸಿದೆ. ಈ ಸಮರವು ದೀರ್ಘಾವಧಿಗೆ ಮುಂದುವರಿದಲ್ಲಿ ಇಡೀ ದಕ್ಷಿಣ ಏಷ್ಯಾದ ಮೇಲೆ ಪರಿಣಾಮ ಬೀರುವುದು ನಿಶ್ಚಿತವಾಗಿದೆ.

ಭಯೋತ್ಪಾದನೆಯನ್ನು ಪೋಷಿಸುವ ಪಾಕಿಸ್ತಾನದ ನೀತಿಯು ಅದಕ್ಕೇ ತಿರುಗುಬಾಣವಾಗುತ್ತಿರುವ ಸಂಕೇತವೂ ಇದಾಗಿದೆ. ತಾಲಿಬಾನ್‌ನ್ನು ಪೋಷಿಸಿ, ಬೆಳೆಸಿದ್ದು ಇದೇ ಪಾಕಿಸ್ತಾನ. ಅಫಘಾನಿಸ್ತಾನದಲ್ಲಿ ತನ್ನ ಕೈಗೊಂಬೆ ಸರಕಾರವನ್ನು ಕುಳ್ಳಿರಿಸುವ ಉದ್ದೇಶದಿಂದ ತಾಲಿಬಾನ್‌ನ್ನು ಬೆಳೆಸಿದ ಪಾಕಿಸ್ತಾನಕ್ಕೆ ಆಘಾತವಾದುದು ತಾಲಿಬಾನ್ ಅಫಘಾನಿಸ್ತಾನದ ಅಧಿಕಾರ ಹಿಡಿದ ಬಳಿಕ! ಪಾಕಿಸ್ತಾನದ ತಾಳಕ್ಕೆ ಕುಣಿಯಲು ನಿರಾಕರಿಸಿದ ತಾಲಿಬಾನ್‌ಗಳು ಪಾಕಿಸ್ತಾನದ ಮೇಲೆಯೇ ದಾಳಿ ನಡೆಸಲಾರಂಭಿಸಿದರು.



ಕಳೆದ ಕೆಲವು ವರ್ಷಗಳಲ್ಲಿ ಹಲವಾರು ಭಯೋತ್ಪಾದಕ ಕೃತ್ಯಗಳಿಗೆ ಪಾಕಿಸ್ತಾನವು ಈಡಾಗಬೇಕಾಯಿತು. ಅದೀಗ ಉಭಯದೇಶಗಳ ಮಧ್ಯೆ ನೇರ ಯುದ್ಧಕ್ಕೇ ಕಾರಣವಾಗಿದೆ.

ಸದ್ಯದ ಮಟ್ಟಿಗೆ ಪಾಕಿಸ್ತಾನವು ಅಫಘಾನಿಸ್ತಾನದ ಮೇಲೆ ಮೇಲುಗೈ ಸಾಧಿಸಿದಂತೆ ತೋರಿ ಬರಬಹುದು. ಅಫಘಾನಿಸ್ತಾನವು ಪಾಕಿಸ್ತಾನದಷ್ಟು ದೊಡ್ಡ ಸೇನಾ ಬಲ ಹೊಂದದಿರುವುದು, ಅತ್ಯಾಧುನಿಕ ಸಮರ ಉಪಕರಣಗಳನ್ನು ಪಡೆಯದಿರುವುದು, ವಾಯುಪಡೆಯ ಸೌಲಭ್ಯವನ್ನೆ ಹೊಂದದಿರುವುದು ಇದಕ್ಕೆ ಕಾರಣವಾಗಿದೆ. ಆದರೆ ಗೆರಿಲ್ಲಾ ಯುದ್ಧದಲ್ಲಿ ಪರಿಣತವಾದ ತಾಲಿಬಾನ್‌ಗಳು ದೀರ್ಘಾವಧಿಯಲ್ಲಿ ಪಾಕಿಸ್ತಾನಕ್ಕೆ ಭಾರೀ ಹಾನಿ ಎಸಗುವುದು ಖಂಡಿತವಾಗಿದೆ. ರಷ್ಯಾ ಮತ್ತು ಅಮೆರಿಕದಂತಹ ಬಲಿಷ್ಠ ರಾಷ್ಟ್ರಗಳೇ ತಾಲಿಬಾನ್‌ನ ಮುಂದೆ ಸೋತುಹೋಗಿರುವುದು ಇದಕ್ಕೆ ನಿದರ್ಶನ. ಇದರ ಜತೆಗೇ ಬಲೂಚಿಸ್ತಾನದ ಸ್ವಾತಂತ್ರ್ಯ ಹೋರಾಟಗಾರರೂ ಪಾಕಿಸ್ತಾನದ ವಿರುದ್ಧ ಸಮರ ಸಾರಿರುವುದರಿಂದ ಪಾಕಿಸ್ತಾನದ ಪರಿಸ್ಥಿತಿ ಮುಂದಿನ ದಿನಗಳಲ್ಲಿ ಚಿಂತಾಜನಕವಾದರೆ ಅಚ್ಚರಿ ಪಡಬೇಕಾಗಿಲ್ಲ.

ಭಾರತದ ವಿರುದ್ಧ ಭಯೋತ್ಪಾದನೆಯನ್ನು ಛೂ ಬಿಟ್ಟ, ಜಗತ್ತಿಗೆ ಭಯೋತ್ಪಾದನೆಯನ್ನು ರಫ್ತು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ ಪಾಕಿಸ್ತಾನವು ಈಗ ತಾನೇ ಅದರ ಉಪಟಳವನ್ನು ಎದುರಿಸುತ್ತಿರುವುದು 'ಪಾಪದ ಕರ್ಮ ಎಂದಿಗೂ ಬೆನ್ನು ಬಿಡದು' ಎಂಬುದಕ್ಕೆ ಸಾಕ್ಷಿ.

ವಿಶುದ್ಧ ಚಕ್ರ ನಿಮಗೊಲಿದರೆ...

ವಿಶುದ್ಧ ಚಕ್ರವು ನಿಮಗೊಲಿದರೆ ದಿನೇ ದಿನೇ ನೀವು ಮಾತಿನ ನಾಯಕರಾಗುತ್ತಾ ಹೋಗುತ್ತೀರಿ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ವಿಶುದ್ಧ ಚಕ್ರವು ನಿಮಗೆ ಒಲಿದುದಾದರೆ...

ನೀವು ಸ್ಪಷ್ಟವಾಗಿ, ಸಣ್ಣ ಸಣ್ಣ ವಾಕ್ಯಗಳಲ್ಲಿ ಸಂಗತಿಗಳನ್ನು ಹೇಳುತ್ತೀರಿ. ಕೇಳುಗರಿಗೆ ಇಷ್ಟವಾಗುವ ರೀತಿಯಲ್ಲಿ ಹೇಳುತ್ತೀರಿ. ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರನ್ನೂ ಆಕರ್ಷಿಸುತ್ತೀರಿ. ನಿಮ್ಮ ಸ್ವರ ಹಿತವಾಗಿರುತ್ತದೆ.

ಸಾರ್ವಜನಿಕವಾಗಿ ಮಾತನಾಡುವಾಗ ವಿಷಯವನ್ನು ಕೇಂದ್ರೀಕರಿಸುತ್ತೀರಿ. ವಿಷಯದ ಸುತ್ತಲೂ ಮಾತುಗಳನ್ನು ಬೆಳೆಸುತ್ತೀರಿ. ನಿಧಾನವಾಗಿ ಕತೆಗಳನ್ನು ಹೇಳುತ್ತಾ ಕೇಳುಗರಿಗೆ ಬೇಸರವಾಗದಂತೆ ಜೋಕ್‌ಗಳನ್ನು ಮಾಡುತ್ತಾ ವಿಷಯವು ಅವರ ಮನ ಮುಟ್ಟುವಂತೆ ಮಾಡುತ್ತೀರಿ. ನಿಮಗೆ ಯಾವುದೂ ಅಡಚಣೆ ಎನಿಸುವುದಿಲ್ಲ. ಯಾರೋ ಪ್ರಶ್ನೆ ಕೇಳಿದರೆ ಅದು ಅಸಂಗತ ಅಥವಾ ತೊಡಕು ಎನಿಸುವುದಿಲ್ಲ. ಅದನ್ನೇ ಮುಂದುವರೆಸಿ ಅವರಿಗೆ ಉತ್ತರ ಕೊಡುತ್ತೀರಿ ಅಥವಾ ಅವರನ್ನು ಗೊಂದಲಕ್ಕೆ ಕೆಡವುತ್ತೀರಿ.

ಎಲ್ಲಿ ಆಕ್ರಮಣ ಮಾಡಬೇಕು, ಯಾವಾಗ ಡಯಾಸನ್ನು ಗುದ್ದಬೇಕು ಎನ್ನುವುದನ್ನು ಪ್ರಜ್ಞಾಪೂರ್ವಕವಾಗಿ ಮಾಡುತ್ತೀರಿ. ಕೇಳುಗರ ಅಗತ್ಯಗಳನ್ನು ತಣಿಸುತ್ತಾ ಅವರಲ್ಲೇ ಜಿಜ್ಞಾಸೆ ಉಂಟಾಗುವಂತೆ ಮಾಡುತ್ತೀರಿ. ಅದು ಅವರಲ್ಲಿ ತರ್ಕವಾಗಿ ಅವರಿಗೆ ಅದೇ ಸವಾಲಾಗುವಂತೆ ಮಾಡುತ್ತೀರಿ. ಮುಂದೆ ಅವರ ದಾರಿ ಅವರೇ ಕಂಡುಕೊಳ್ಳಬೇಕೆಂಬುದು ನಿಮ್ಮ ಗುರಿಯಾಗಿರುತ್ತದೆ. ನಿಮ್ಮ ಅಭಿವ್ಯಕ್ತಿತ್ವವು ಅವರನ್ನು ವಿಚಲಿತಗೊಳಿಸುವಂತೆ ನಿಮ್ಮ ಪ್ರಭಾವ ಇರುತ್ತದೆ. ನೀವು ಸತ್ಯವನ್ನು ನೇರವಾಗಿ ನುಡಿದರೆ ಜನರು ಮೆಚ್ಚುವುದಿಲ್ಲ. ನಿಮ್ಮ ಮಾತುಗಳು ಕಹಿ ಗುಳಿಗೆಗಳಾದರೂ ಅದನ್ನು ಸಿಹಿಯಾದ ಲೇಪನ ಮಾಡಿ ಕೊಡಬೇಕು. ನಿಮ್ಮ ಭಾವನೆಗಳು ನಿಮ್ಮನ್ನು ವಿಚಲಿತರನ್ನಾಗಿ ಮಾಡಬಾರದು. ನಿಮ್ಮ ವಿಚಾರಗಳು ನಿಮ್ಮ ಭಾವನೆಯ ಮೇಲೆ ಹೇರಿಕೆಯಾಗಲೂ ಬಾರದು. ಇವೆಲ್ಲದರೊಂದಿಗೆ ಕೊನೆಯಲ್ಲಿ ನಿಮ್ಮ ಗುರುತು ಉಳಿಯುವಂತೆ ನೀವು ಮುಕ್ತಾಯ ಮಾಡಬೇಕು. ನಿಮ್ಮ ಅವರ ಸಂಬಂಧ ಅಲ್ಲಿಂದ ಪ್ರಾರಂಭವಾಗುವಂತೆ ಇರಬೇಕು.

ನಿಮ್ಮ ಆಲೋಚನೆಗಳೇ ನಿಮ್ಮ ಮಾತುಗಳಾಗಿರಬೇಕು. ಮಾತನಾಡುತ್ತಾ ನೀವೇ ತರ್ಕವನ್ನೂ, ಹೊಸ ಚಿಂತನೆಗಳನ್ನು, ಹೊಸ ದೃಷ್ಟಿಕೋನವನ್ನೂ, ಹೊಸ ಸಂಗತಿಗಳನ್ನು ಹುಟ್ಟುಹಾಕಬೇಕು. ಇದು ನಿಮಗೆ ನೀವೇ ಹಾಕಿಕೊಳ್ಳುವ ಸವಾಲಾಗಿರಬೇಕು. ದಿನೇ ದಿನೇ ನೀವು ಮಾತಿನ ನಾಯಕರಾಗುತ್ತಾ ಹೋಗುತ್ತೀರಿ. ನಿಮ್ಮ ಸಂವಹನದ ಸಾಮರ್ಥ್ಯ ಹೆಚ್ಚುತ್ತದೆ. ಭಾವನಾತ್ಮಕ ತೀವ್ರತೆ ಕಡಿಮೆಯಾಗುತ್ತದೆ. ಆಲೋಚನೆಗಳೆಲ್ಲಾ ಸುಸಂಬದ್ಧವಾಗಿ ವ್ಯಕ್ತವಾಗುತ್ತಾ ಹೋಗುತ್ತದೆ. ಆತಂಕ ಇಲ್ಲವೇ ಇಲ್ಲವಾಗುತ್ತದೆ.

ಸಂದರ್ಶನಗಳಲ್ಲಿ ನೀವು ಅವರು ಕೇಳುವ ಪ್ರಶ್ನೆಗಳ ಉತ್ತರಿಸುವ ಬದಲು ನಿಮ್ಮ ಉತ್ತರಗಳಿಗೆ ಅವರು ಪ್ರಶ್ನೆ ಕೇಳುವಂತೆ ಹಿಡಿತ ಸಾಧಿಸಬಲ್ಲಿರಿ. ನಿಮ್ಮ ಧ್ವನಿ ಕರುಣೆಯಿಂದ, ಮನವೊಲಿಸುವ ದಾಟಿಯಲ್ಲಿ ಬದಲಾಗಿರುತ್ತದೆ. ನಾಯಕತ್ವವನ್ನು ವಹಿಸಿದಾಗ ನಿಮ್ಮ ಕಿವಿಗಳು ತೆರೆದಿದ್ದು ಅವರನ್ನು ತೃಪ್ತಿಗೊಳಿಸುವ ರೀತಿಯಲ್ಲಿ ಆಲಿಸಿರುತ್ತೀರಿ. ಬಳಿಕ ಅವರಿಗೆ ಭರವಸೆ ಮೂಡಿಸುವ ಮಾತುಗಳನ್ನು ಆಡುತ್ತಾ ಬಲವಾದ ಜಾಲವನ್ನು ಹೆಣೆಯುತ್ತೀರಿ. ಅದೆಷ್ಟೆಂದರೆ ಅವರು ಹೇಳಿದ್ದು ಅವರಿಗೆ ಮರೆತು ಹೋಗಿ ನೀವು ಹೇಳುತ್ತಿರುವುದನ್ನೇ ಅವರು ಪಾಲಿಸುವಂತೆ ಮತ್ತು ನಂಬುವಂತೆ ಮಾಡುತ್ತೀರಿ. ಮತ್ತು ಆದದ್ದೆಲ್ಲಾ ಅವರು ಹೇಳಿದಂತೆ ಎನ್ನುವಂತೆ ವರ್ತಿಸುತ್ತೀರಿ.

ನಿಮ್ಮ ಮಾತಿನಿಂದ ಹಳಸಿದ ಅನ್ನವನ್ನೂ ಸಹಾ ಮಾರಾಟ ಮಾಡಬಲ್ಲಿರಿ, ಉರಿದೆದ್ದ ಗ್ರಾಹಕರನ್ನು ಸಮಾಧಾನಪಡಿಸಬಲ್ಲಿರಿ. ಗೊಂದಲದಿಂದ ನಿರ್ಣಯಕ್ಕೆ ಬರಲಾರದ ವ್ಯಕ್ತಿಯನ್ನು ಕೈಹಿಡಿದು ನಡೆಸಬಲ್ಲಿರಿ. ಸಿಟ್ಟು ಬಂದವರನ್ನು ಸುಧಾರಿಸ ಬಲ್ಲಿರಿ. ಸಂಘರ್ಷ ಉಂಟಾದಾಗ ಕ್ಷಮೆ ಕೇಳುವ ಮೂಲಕ ಪರಿಸ್ಥಿತಿಯನ್ನು ನಿಭಾಯಿಸ ಬಲ್ಲಿರಿ. ಯಾವುದೇ ತಪ್ಪುಗ್ರಹಿಕೆಗಳು ಉಂಟಾಗದಂತೆ ನೋಡಿಕೊಳ್ಳಬಲ್ಲಿರಿ. ಇಲ್ಲ ಎನ್ನುವುದನ್ನು ಇಲ್ಲ ಎಂದೇ ಹೇಳಬಲ್ಲಿರಿ. ಸಂವಾದಕ್ಕೆ ನಿಮ್ಮನ್ನು ತೆರೆದುಕೊಳ್ಳಬಲ್ಲಿರಿ. ಅದರಿಂದ ಕಡಿಮೆ ವಿವಾದ ಮತ್ತು ಹೆಚ್ಚು ರಚನಾತ್ಮಕವಾದ ಫಲಿತಾಂಶ ಬರುತ್ತದೆ.

ನಿಮ್ಮ ಧ್ವನಿ ಯಾವತ್ತೂ ಕರ್ಕಶವಾಗುವುದಿಲ್ಲ, ಏರು ಧ್ವನಿಯಲ್ಲಿ ಮಾತನಾಡಿದರೂ ಅದು ಹಿಂಸೆ ನೀಡುವುದಿಲ್ಲ, ನಿಮಗೆ ಎಂದಿಗೂ ಉದ್ವೇಗ ಉಂಟಾಗುವುದಿಲ್ಲ, ನಿರ್ದಿಷ್ಟವಾದ ಸಮಯದಲ್ಲಿ ನೀವು ಮಾತನ್ನು ಮುಗಿಸುತ್ತೀರಿ. ಯಾವ ಭಯವಿಲ್ಲದೇ ಕಠೋರವಾದ ವಾಸ್ತವವನ್ನು ಲಘುವಾದ ದಾಟಿಯಲ್ಲಿ ಹೇಳಿಬಿಡುತ್ತೀರಿ. ಕಷ್ಟ ಮತ್ತು ಕ್ಲಿಷ್ಟವಾದ ಸಂಗತಿಗಳನ್ನು ಉದಾಹರಣೆಯೊಂದಿಗೆ ಸುಗಮವಾಗಿ ತಲುಪುವಂತೆ ಮಾಡುತ್ತೀರಿ. ಎದುರಿನವರ ಮಾತುಗಳನ್ನು, ಸಮಸ್ಯೆಗಳನ್ನು, ನೋವನ್ನು, ಖುಷಿಯನ್ನು ಎಲ್ಲವನ್ನೂ ಕೇಳುವ ಒಳ್ಳೆಯ ಕೇಳುಗರು ನೀವು ಎಂದು ಎಲ್ಲರೂ ಮೆಚ್ಚುವಂತೆ ಮಾಡುತ್ತೀರಿ. ನಿಮ್ಮಲ್ಲಿ ಶಬ್ದ ಭಾಂಡಾರವೇ ಇರುತ್ತದೆ. ಅವುಗಳನ್ನು ಪ್ರಜ್ಞಾಪೂರ್ವಕವಾಗಿ ಬಳಸುತ್ತಾ ನಿಮ್ಮ ಶಬ್ದ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತೀರಿ.

ನೀವು ಇವುಗಳನ್ನೆಲ್ಲಾ ನಿತ್ಯವೂ ಪಾಲಿಶ್ ಮಾಡುವುದೂ ಸಹಾ ಅಗತ್ಯ. ಅದಕ್ಕಾಗಿ ನಿತ್ಯವೂ ಮಂತ್ರಗಳ ಪಠಣ ಮಾಡಿ. ಹಾಡುಗಳನ್ನು ಗುನುಗುತ್ತಾ ಇರಿ. ಭಜನೆ ಮಾಡಿ, ಜಪಗಳನ್ನು ಮಾಡಿ. ಕಷ್ಟವಾದ ಶ್ಲೋಕಗಳನ್ನು ಹೇಳುತ್ತಿರಿ. ಒಳ್ಳೊಳ್ಳೆಯ ಪದ್ಯಗಳನ್ನು ಬಾಯಿಪಾಠ ಮಾಡಿ. ನಾನು ಎನ್ನುವುದನ್ನು ಕಡಿಮೆ ಮಾಡುತ್ತಾ, ನಾವು ಎನ್ನುವ ವಿಶಾಲತೆಯನ್ನು ರೂಢಿಸಿಕೊಳ್ಳಿ.

ವಿಶುದ್ಧ ಚಕ್ರವನ್ನು ಬಲಪಡಿಸುವ ಕೆಲವು ಪ್ರಯೋಗಗಳು:

- ನೀವು ಕಲಿಯಲು ಕಷ್ಟ ಎಂದಾದರೆ ಅದನ್ನು ಬಾಯಿಂದ ಹೇಳುತ್ತಾ ಬರೆದು ಕಲಿಯಿರಿ.
- ನಿಮ್ಮದೇ ಅನುಭವಗಳನ್ನು ಮೊದಲು ಹೇಳಿ, ಬಳಿಕ ಯಾರದೋ ಅನುಭವಗಳನ್ನು ಅನುಭವಿಸಿದಂತೆ ಹೇಳಿ
- ಮಾತನಾಡುವಲ್ಲಿ ಆತಂಕ ಇದೆ ಎಂದಾದರೆ, ಒಂದು ಗುಟುಕು ನೀರು ಕುಡಿಯಿರಿ ಅಥವಾ ಒಂದು ಚಾಕೋಲೇಟ್‌ನ್ನು ಬಾಯಿಗೆ ಹಾಕಿಕೊಳ್ಳಿ.
- ವೇದಿಕೆಯಲ್ಲಿ ನಿಂತಾಗ ಅಥವಾ ಸಂದರ್ಶನದಲ್ಲಿ ಒಮ್ಮೆ ದೀರ್ಘವಾದ ಉಸಿರನ್ನು ತೆಗೆದುಕೊಳ್ಳಿ. ಮುಖದಲ್ಲಿ ಒಂದು ಕಿರು ನಗುವನ್ನು ಕೃತಕವಾಗಿಯಾದರೂ ಭರಿಸಿಕೊಳ್ಳಿ. ಬಳಿಕ ಮಾತನ್ನು ಶುರು ಮಾಡಿ.
- ನಿಮ್ಮ ಮಾತಿನ ಮೇಲೆ ಹಿಡಿತ ಇರುವುದು ಅಗತ್ಯ. ಏಕೆಂದರೆ ವೇದಿಕೆಯಲ್ಲಿ ನೀವೇ ಮಾತನಾಡುತ್ತಾ ಕಳೆದುಹೋದರೆ ಏನೆಲ್ಲಾ ಹೇಳಿ ಸಿಕ್ಕಿ ಹಾಕಿಕೊಳ್ಳುತ್ತೀರಿ. ಸಂದರ್ಶನದ ವೇಳೆ ಏನೆಲ್ಲಾ ಹೇಳುತ್ತಾ ಹೋದರೆ ಕೆಲಸ ನಿಮ್ಮ ಕೈತಪ್ಪಿ ಹೋಗುವ ಸಾಧ್ಯತೆ ಇರುತ್ತದೆ.
- ಪೂರ್ವ ತಯಾರಿ ಯಾವುದೇ ಕೆಲಸಗಳಿಗೂ ತುಂಬಾ ಮುಖ್ಯ. ಅದೇ ರೀತಿ ಎಷ್ಟೆಲ್ಲಾ ನಿಮಗೆ ಗೊತ್ತಿದ್ದರೂ ಪ್ರತಿ ಸಾರಿ ಚಿಕ್ಕದಾದರೂ ಸರಿಯೇ ಪೂರ್ವ ತಯಾರಿ ಇಲ್ಲದೇ ಮಾತನ್ನು ಶುರು ಮಾಡಬೇಡಿ, ಸಂದರ್ಶನಕ್ಕೆ ಹಾಜರಾಗ ಬೇಡಿ.
- ಮೊದಲ ಸಾರಿ ನಿಮಗೆ ಮಾತನಾಡಲು ಬರದೇ ಇದ್ದಾಗ ಅದು ಒಂದು ಆಕಸ್ಮಿಕ ಮಾತ್ರ. ಎರಡನೇ ಸಾರಿ ನೀವು ಖಂಡಿತಾ ಮಾತನಾಡಬಲ್ಲಿರಿ.
- ಯಾವುದೇ ಕಾರಣಕ್ಕೂ ನಿಮಗೆ ವೇದಿಕೆಯ ಅಥವಾ ಸಂದರ್ಶನದ ಅವಕಾಶ ಸಿಕ್ಕಾಗ ತಪ್ಪಿಸಿಕೊಳ್ಳಬೇಡಿ
- ವಿಷಯದ ಬಗ್ಗೆ ನಿಮಗೆ ಸಂಪೂರ್ಣ ಜ್ಞಾನ ಇರುವುದು ಮುಖ್ಯ.
- ನಿಮಗೆ ಗೊತ್ತಿರುವ ವ್ಯಕ್ತಿಗಳು, ಸಹಕಾರ ನೀಡುವ ವ್ಯಕ್ತಿಗಳು, ಸ್ನೇಹಿತರು ಇದ್ದರೆ ಅವರನ್ನು ನೋಡುತ್ತಾ ಮಾತನ್ನು ಪ್ರಾರಂಭಿಸಿ. ಆಗ ನಿಮಗೆ ಅವರ ಮುಖ ಭಾವದಿಂದ ಆತಂಕ ಉಂಟಾಗುವುದಿಲ್ಲ.

ಡಯಾಫ್ರಾಗ್ಮಾಟಿಕ್ ಉಸಿರಾಟ

ಮನೆಯಲ್ಲಿ ಇರುವಾಗ ಬೆನ್ನನ್ನು ಕೆಳಗೆ ಮಾಡಿ ಮಲಗಿ. ಒಂದು ಕೈಯನ್ನು ಎದೆಯ ಮೇಲೆ ಮತ್ತೊಂದು ಕೈಯನ್ನು ಹೊಟ್ಟೆಯ ಮೇಲೆ ಇಟ್ಟುಕೊಳ್ಳಿ. ಮೂಗಿನ ಮೂಲಕ ಮಾತ್ರ ಉಸಿರಾಡಿ. ಎದೆಯನ್ನು ಉಬ್ಬಿಸಬೇಡಿ ಅದರೊಳಗಿನ ಡಯಾಫ್ರಮ್‌ನ್ನು ಮಾತ್ರ ಹಿಗ್ಗಿಸಿ ಮತ್ತು ಸಂಕುಚಿಸಿ. ಸ್ವಲ್ಪ ಸಮಯದ ಬಳಿಕ ಮೂಗಿನಿಂದ ಉಸಿರನ್ನು ತೆಗೆದುಕೊಂಡು ಬಾಯಿಂದ ಉಸಿರನ್ನು ಬಿಡಿ. ಇದು ನಾವು ಮಾತನಾಡುವ ವೇಗವನ್ನು, ಅದರೊಂದಿಗೆ ಸ್ಪಷ್ಟತೆಯನ್ನು ಸಮತೋಲನಗೊಳಿಸುತ್ತದೆ.

ಹಮ್ಮಿಂಗ್

ಆಳವಾಗಿ ಉಸಿರನ್ನು ಎಳೆದುಕೊಳ್ಳಿ. ನಿಧಾನವಾಗಿ ಆರಾಮದಾಯಕವಾದ ಸ್ವರಗಳಿಂದ ಗುನುಗುನು ಹಾಡನ್ನು ಹೇಳಿ. ಎದೆಯ ಕಂಪನ ಮತ್ತು ಗಂಟಲಿನ ಕಂಪನಗಳನ್ನು ಗಮನಿಸಿ. ಹಾಡನ್ನು ಏರಿಸುತ್ತಾ ಹೋಗಿ. ತಾರಕಕ್ಕೆ ಬಂದಾಗ ಇದ್ದಕ್ಕಿದ್ದಂತೆ ನಿಲ್ಲಿಸಿ. ನಿಮ್ಮೊಳಗೆ ಆ ಹಾಡು ಹಾಗೇ ಉಳಿದಿರುವುದನ್ನು ಗಮನಿಸಿ. ಇದು ಗಂಟಲು, ಶ್ವಾಸಕೋಶ, ನಾಲಿಗೆ ಹೀಗೆ ಎಲ್ಲದಕ್ಕೂ ವ್ಯಾಯಾಮ ವಾಗುತ್ತದೆ.

ಲಿಪ್ ಟ್ರಿಲ್

ಉಸಿರನ್ನು ತೆಗೆದುಕೊಳ್ಳಿ, ತುಟಿಗಳನ್ನು ಒತ್ತಿ ಹಿಡಿದು ಬುರ್... ಶಬ್ದವನ್ನು ಹೊರಡಿಸಿ. ನಿಮ್ಮ ತುಟಿಗಳು ಕಂಪಿಸಬೇಕು. ಅದರಿಂದಲೇ ಶಬ್ದ ಬರಬೇಕು. ಗಂಟಲಿನಿಂದ ಉಸಿರು ಒತ್ತಿ ಬರಬೇಕು. ಮೊದಲಿಗೆ ಹತ್ತು ಸೆಕೆಂಡ್‌ಗಳು, ಹೀಗೆ ಹೆಚ್ಚುತ್ತಾ ಹೋಗಿ ಎರಡು ನಿಮಿಷಗಳವರೆಗೆ ವಿಸ್ತರಿಸಬೇಕು. ತುಟಿ ಮತ್ತು ಗಂಟಲಿನ ಸ್ನಾಯುಗಳನ್ನು ಇದು ಸಡಿಲಗೊಳಿಸುತ್ತದೆ.

ಟಂಗ್ ಟ್ವಿಸ್ಟರ್

ನಾಲಿಗೆ ತಿರುಚುವ ಪದಗಳನ್ನು ಬೇಗ ಬೇಗನೆ ಹೇಳುವುದು. ಉದಾಹರಣೆಗೆ; ರಸ್ಕ್- ಲಸ್ಕ್, ತೆಂಗಿನ ಮರದಲಿ ಮೇಲೆರೆಡೋಲೆ ಕೆಳಗೆರೆಡೋಲೆ, ಕೆಂಪು ಕುಂಕುಮ- ಕಪ್ಪು ಕುಂಕುಮ, ನೀನನ್ನನೇನನ್ನು- ನಾನಿನ್ನನೇನನ್ನೆ, ಚಕ್ಕಾ ಪಾಪಡ್- ಪಕ್ಕಾ ಪಾಪಡ್. ಹೀಗೆ ತುಂಬಾ ಪದಗಳಿವೆ. ಇವುಗಳನ್ನೆಲ್ಲಾ ಮೊದಲು ನಿಧಾನವಾಗಿ ಹೇಳುತ್ತಾ ಜೋರಾಗಿ ಹೇಳುವುದನ್ನು ಅಭ್ಯಾಸ ಮಾಡಬೇಕು. ತಪ್ಪಿಲ್ಲದೇ ಹೇಳಬೇಕು. ಉಚ್ಚಾರಣೆ ಸ್ಪಷ್ಟವಾಗಿರುತ್ತದೆ. ಮಾತು ಸುರಳೀತವಾಗಿ ಹೊರ ಬರುತ್ತದೆ.

'ರಾಮನ್' ಎಂಬೋ ಮಾನುಷಾದ್ಭುತ!

ಇಂದು ರಾಷ್ಟ್ರೀಯ ವಿಜ್ಞಾನ ದಿನ. 'ರಾಮನ್ ಪರಿಣಾಮ'ವನ್ನು ಕಂಡುಕೊಂಡ ದಿನ.

▸ ಸುರೇಶ್ ಮರಕಾಲ



ಅದು 1902ನೇ ಇಸವಿ, ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನ ಬಿ.ಎ. ತರಗತಿ. ಕೇವಲ ಹದಿನಾಲ್ಕು ವಯಸ್ಸಿನ ಪುಟ್ಟ ಬಾಲಕನೊಬ್ಬ ಡಿಗ್ರಿ ತರಗತಿಯ ವಿದ್ಯಾರ್ಥಿಗಳ ಮಧ್ಯದಲ್ಲಿ ಕುಳಿತಿದ್ದ. ಅವನೇನು ತರಗತಿಗೆ ಬಂದ ಅಣ್ಣನೊಂದಿಗೆ ಬಂದು ಕುಳಿತ ಹುಡುಗನಾಗಿರಲಿಲ್ಲ! ಬದಲಿಗೆ, ಇನ್ನೂ 8ನೇ ತರಗತಿಯಲ್ಲಿರಬೇಕಾಗಿದ್ದ ಪೋರ ಆ ಯುವಕರೊಂದಿಗೆ ವಿದ್ಯಾಭ್ಯಾಸ ಮಾಡಲು ಬಂದು ತಾನೂ ಡಿಗ್ರಿ ವಿದ್ಯಾರ್ಥಿಯಾಗಿ ತರಗತಿಯೊಳಗೆ ಕುಳಿತಿದ್ದ! ಆ ಮೂರ್ತಿ ಪುಟ್ಟದಾಗಿದ್ದರೂ ಅವನೊಳಗಿನ ದಿವ್ಯ ಪ್ರತಿಭೆ ಮಾತ್ರ ಮನುಷ್ಯಮಾತ್ರರ ಎಣಿಕೆಗೂ ನಿಲುಕದಷ್ಟು ಅದ್ಭುತವಾಗಿತ್ತು! ಆತ ಜನ್ಮತಃ ಮಹಾನ್ ಪ್ರತಿಭಾವಂತನಾಗಿದ್ದ! ಈ ಪ್ರೆಸಿಡೆನ್ಸಿ ಕಾಲೇಜಿಗೆ ಸೇರುವ ಮೊದಲೇ ತನ್ನ ಹನ್ನೊಂದನೇ ವಯಸ್ಸಿಗೇ- ಎಂದರೆ ಐದಾರನೇ ತರಗತಿಯಲ್ಲಿರುವ ಎಳವೆಯಲ್ಲಿ ಮೆಟ್ರಿಕ್ಯುಲೇಶನ್ನನ್ನೇ ಪಾಸುಮಾಡಿದ್ದ! ಹೀಗಾಗಿಯೇ ಪ್ರೌಢಶಾಲೆಯ ಮೆಟ್ಟಿಲೇರಬೇಕಾಗಿದ್ದ ಪ್ರಾಯದಲ್ಲಿ ಡಿಗ್ರಿ ತರಗತಿಯೊಳಗೆ ವಿರಾಜಮಾನನಾಗಿದ್ದ! ವರ್ಷದ ಅಂತ್ಯದಲ್ಲಿ ಇಡೀ ಕಾಲೇಜ್‌ನ ಬಿ.ಎ. ವಿಭಾಗಕ್ಕೇ ಮೊದಲಸ್ಥಾನ ಬರುವ ಮೂಲಕ ಎಲ್ಲರ ಹುಬ್ಬೇರಿಸಿದ್ದ! ಮುಂದೆ ಆ ಬಾಲಕ ತನ್ನ ಜೀವನದುದ್ದಕ್ಕೂ ಹತ್ತುಹಲವು ಅಪ್ರತಿಮ ಸಾಧನೆಗಳನ್ನು ಮಾಡಿ, ಇಡೀ ಜಗತ್ತೇ ನಿಬ್ಬೆರಗಾಗುವಂತೆ ಮಾಡಿದ! ಅಂದು ಚೋಟುದ್ದ ಬಾಲಕನಾಗಿ ಡಿಗ್ರಿ ತರಗತಿಯಲ್ಲಿ ಕುಳಿತಿದ್ದ ಹುಡುಗನೇ ಜಗತ್ತಿಗೆ 'ರಾಮನ್ ಪರಿಣಾಮ'ವೆಂಬ ಭವ್ಯ ಸತ್ಯವನ್ನು ತೋರಿಸಿಕೊಟ್ಟ ಮಹೋನ್ನತ ವಿಜ್ಞಾನಿ ಸರ್. ಸಿ.ವಿ.ರಾಮನ್!



ಚಂದ್ರಶೇಖರ ವೆಂಕಟ ರಾಮನ್ ಬಾಲ್ಯದಿಂದಲೇ ಗಂಭೀರ ಓದಿನ ಹವ್ಯಾಸ ಹೊಂದಿದ್ದರು. ಶಾಸ್ತ್ರೀಯ ಸಂಗೀತ, ವಯೋಲಿನ್ ವಾದನಗಳೂ ರಕ್ತಗತವಾಗಿ ಬಂದಿದ್ದವು. ಬಾಲಕನಾಗಿದ್ದಾಗ ರಾಮನ್ ಮೇಲೆ ಎಡ್ವಿನ್ ಅರ್ನಾಲ್ಡ್‌ನ 'ಲೈಟ್ ಆಫ್ ಏಶಿಯಾ', ರೇಖಾಗಣಿತದ ಮೇಲಿನ 'ದಿ ಎಲಿಮೆಂಟ್ಸ್ ಆಫ್ ಯೂಕ್ಲಿಡ್' ಹಾಗೂ ಜರ್ಮನ್ ವಿಜ್ಞಾನಿ ಹೆಮೋಲ್ಟ್ಸ್‌ನ 'ದಿ ಸೆನ್ಸೇಶನ್ಸ್ ಆಫ್ ಟೋನ್ಸ್' ಎಂಬ ಮೂರು ಪುಸ್ತಕಗಳು ಗಾಢ ಪರಿಣಾಮ ಬೀರಿದ್ದವು. ಮುಂದೆ ವಿಶ್ವ ಪ್ರಸಿದ್ಧ ವಿಜ್ಞಾನಿಯಾದಾಗಲೂ ಅವರ ಸಂಶೋಧನೆ-ಬರಹಗಳಲ್ಲಿ ಈ ಮೂರು ಪುಸ್ತಕಗಳ ಪ್ರಭಾವವನ್ನು ಸ್ಪಷ್ಟವಾಗಿ ಕಾಣಬಹುದು.

ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿ.ಎ. ಮುಗಿಸಿ, ಎಂ.ಎ. ವಿದ್ಯಾಭ್ಯಾಸವನ್ನೂ ಅಲ್ಲಿಯೇ ಆರಂಭಿಸಿದರು. ಅಲ್ಲಿನ ವಾತಾವರಣ ರಾಮನ್‌ರ ಜೀವನಕ್ಕೆ ಹೊಸ ತಿರುವನ್ನೇ ನೀಡಿತು. ಎಂ.ಎ. ಅವಧಿಯಲ್ಲಿ ಸಂಶೋಧಿಸಿದ ಪಟ್ಟಕದಲ್ಲಿನ ಚದುರುವಿಕೆಯ ವಿಚಾರಗಳು ಜಗದ್ವಿಖ್ಯಾತ ಬ್ರಿಟಿಷ್ ಪತ್ರಿಕೆಯಾದ 'ಫಿಲಾಸಾಫಿಕಲ್ ಮ್ಯಾಗಜಿನ್'ನಲ್ಲಿ ಪ್ರಕಟವಾಯಿತು. ಎಂ.ಎ. ವಿದ್ಯಾಭ್ಯಾಸವನ್ನು ಎಲ್ಲರೂ ನಿರೀಕ್ಷಿಸಿದಂತೆ ಪ್ರಥಮ ರ್‍ಯಾಂಕ್‌ನೊಂದಿಗೆ ತೇರ್ಗಡೆಯಾದರು!

ಮುಂದೆ ರಾಮನ್ ಸಿವಿಲ್ ಸರ್ವಿಸ್ ಪರೀಕ್ಷೆಗೆ ಕುಳಿತು, 1907ರಲ್ಲಿ ಸಹಾಯಕ ಅಕೌಟೆಂಟ್ ಜನರಲ್ ಆಗಿ ಕೋಲ್ಕತ್ತಾಕ್ಕೆ ನೇಮಕವಾದರು. ಹುದ್ದೆಗೆ ಸೇರಿದ ದಿನದಿಂದ ಕಚೇರಿಗೆ ಹೋಗುವ ದಾರಿಬದಿಯ 'ಇಂಡಿಯನ್ ಅಸೋಸಿಯೇಶನ್ ಫಾರ್ ದ ಕಲ್ಟಿವೇಶನ್ ಆಫ್ ಸೈನ್ಸ್' ಎಂಬ ಸಂಸ್ಥೆಯ ನೋಟವು ರಾಮನ್‌ರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಾ ಮತ್ತೆಮತ್ತೆ ತನ್ನತ್ತ ಕರೆಯುತ್ತಿತ್ತು! ಮುಂದೆ ಇದೇ ಸಂಸ್ಥೆ ರಾಮನ್‌ರ ಜೀವನದ ದಿಕ್ಕನ್ನೇ ಸಂಪೂರ್ಣ ಬದಲಿಸಿತೆನ್ನುವುದೂ ಅಷ್ಟೇ ಸತ್ಯ! ಈ ಸಂಸ್ಥೆ ಸೇರಿದ ರಾಮನ್‌ರವರು ಶಬ್ದ-ತರಂಗಗಳ ಬಗ್ಗೆ ಅಸೀಮ ಆಸಕ್ತಿಯನ್ನು ತಾಳಿ, ಸಂಗೀತ ಉಪಕರಣಗಳ ಸಂಶೋಧನೆಗೆ ಒಪ್ಪಿಗೆ ಪಡೆದುಕೊಂಡರು.

ಆರಂಭದಲ್ಲಿ ಹೆಮೋಲ್ಟ್ಸ್‌ನ ಪರಿಕಲ್ಪನೆಯ ಸಹಾಯದಿಂದ ರಾಮನ್ ಏಕತಾರಿಯ (ಒಂದೇ ತಂತಿಯ ಹಿಮ್ಮೇಳದ ಸಂಗೀತಸಾಧನ) ಕಾರ್ಯ ವಿಧಾನವನ್ನು ಕಂಡುಹಿಡಿದರು. ಮುಂದೆ ತಮ್ಮಿಷ್ಟದ ಪಿಟೀಲನ್ನೇ ಅಧ್ಯಯನದ ವಸ್ತು ವಿಷಯವನ್ನಾಗಿ ಆರಿಸಿಕೊಂಡ ಅವರು ಪಿಟೀಲಿನ ಬಗ್ಗೆ ಆಮೂಲಾಗ್ರವಾಗಿ ಸಂಶೋಧನೆ ನಡೆಸಿದರು. ಪಿಟೀಲಿನ ಬಗ್ಗೆ ರಾಮನ್ ಅಪೂರ್ವ ಕೃತಿಯೊಂದನ್ನು ರಚಿಸಿದರು. ವಿಶೇಷವೇನೆಂದರೆ ಸೈಕಲ್ ರಿಪೇರಿ ಅಂಗಡಿಯಿಂದ ಬಿಡಿ ಭಾಗಗಳನ್ನು ತಂದು ತಮ್ಮದೇ ಕಲ್ಪನೆಯ ಪಿಟೀಲನ್ನು ತಯಾರಿಸಿದರು. ಅದು ನೋಡಲು ಯಾವ ಕೋನದಿಂದಲೂ ಪಿಟೀಲಾಗಿರಲಿಲ್ಲ! ಆದರೆ ಪಿಟೀಲು ಮಾಡುವ ಎಲ್ಲಾ ಕೆಲಸಗಳನ್ನು ನಿಜವಾದ ಪಿಟೀಲಿಗಿಂತಲೂ ಅಚ್ಚುಕಟ್ಟಾಗಿ ಮಾಡುತ್ತಿತ್ತು!

1920ರವರೆಗೆ ರಾಮನ್‌ರ ಗಮನ ಸಂಪೂರ್ಣವಾಗಿ ಶಬ್ದತರಂಗ ಸಂಶೋಧನಾ ಕೇಂದ್ರಿತವಾಗಿತ್ತು. ಅಲ್ಲಿಂದ ಮುಂದೆ ಅವರು ಬೆಳಕಿನ ಚದುರುವಿಕೆಯ ಸಂಶೋಧನೆ ಕಡೆಗೆ ತಮ್ಮ ಸರ್ವಸ್ವವನ್ನೂ ಅರ್ಪಿಸಿಕೊಂಡರು! ಇದಕ್ಕೆ ಅವರಿಗೆ ನೊಬೆಲ್ ಪ್ರಶಸ್ತಿಯೇ ಹುಡುಕಿಕೊಂಡು ಬಂತು!

1917ರಲ್ಲಿ ಕೋಲ್ಕತ್ತಾ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದ ಸರ್ ಅಶುತೋಷ್ ಮುಖರ್ಜಿಯವರು ಭೌತಶಾಸ್ತ್ರದ ತಾರಕಾನಾಥ ಪಲಿತ್ ಪ್ರೊಫೆಸರ್‌ಶಿಪ್ ಹುದ್ದೆಗೆ ಬಂದು ಸೇರುವಂತೆ ರಾಮನ್‌ರನ್ನು ಒತ್ತಾಯಿಸಿದರು. ಆದರೆ ವಿಶ್ವವಿದ್ಯಾಲಯದಲ್ಲಿ ಹಿಂದಿನಿಂದಲೂ ಬಂದ ಕಟ್ಟಲೆಯೊಂದಿತ್ತು- ಯಾರೇ ಭೌತಶಾಸ್ತ್ರದ ಪ್ರೊಫೆಸರ್ ಆಗಬೇಕಿದ್ದರೂ ವಿದೇಶದಲ್ಲಿ ವಿದೇಶೀಯರ ಕೈಕೆಳಗೆ ಕಾರ್ಯನಿರ್ವಹಿಸಿದ ಅನುಭವ ಪಡೆದಿರಬೇಕಿತ್ತು. ರಾಮನ್‌ಗೆ ಈ ಅನುಭವವಿರಲಿಲ್ಲವಾದ್ದರಿಂದ ವಿಶ್ವವಿದ್ಯಾಲಯದ ಪ್ರೊಫೆಸರ್‌ಗಳು ರಾಮನ್ ಹೆಸರನ್ನು ತಿರಸ್ಕರಿಸಿದರು. ಆಗ ಸ್ವಾಭಿಮಾನಿಯಾದ ರಾಮನ್ ಅಂತಹ ಹುದ್ದೆಯು ತಾನಾಗಿಯೇ ಬಂದರೂ ಬೇಡವೆಂದು, ಯಾವುದೇ ಕಾರಣಕ್ಕೂ ಭಾರತೀಯನಾದ ತಾನು ವಿದೇಶೀಯನೊಬ್ಬನಿಗೆ ಸಲಾಂ ಹೊಡೆಯಲಾರೆನೆಂದು ಖಡಕ್ಕಾಗಿ ಹೇಳಿದರು. ಆದರೆ ರಾಮನ್ ಎಂಬ ಹೊಳೆವ ವಜ್ರ ತಮ್ಮಲ್ಲಿರಲೇಬೇಕೆಂದು ಆಶುತೋಷರು ಅಷ್ಟರವರೆಗಿದ್ದ ಆ ಕಾನೂನನ್ನೇ ರದ್ದುಗೊಳಿಸಿ ರಾಮನ್‌ರನ್ನೇ ಪ್ರೊಫೆಸರಾಗಿ ನೇಮಕ ಮಾಡಿಕೊಂಡರು!! ಇದನ್ನು ನೋಡಿ ಎಲ್ಲರೂ ಹೌಹಾರಿದ್ದರೆ, ರಾಮನ್ ಕೂಡಾ ಸಹಾಯಕ-ಅಕೌಂಟೆಂಟ್ ಜನರಲ್ ಎಂಬ ಉನ್ನತ ಹಾಗೂ ಕೈತುಂಬ ಸಂಬಳ ತರುವ ಸರ್ಕಾರಿ ಹುದ್ದೆಯನ್ನು ತ್ಯಜಿಸಿ, ಅದರ ಅರ್ಧ ಸಂಬಳವಾಗಿದ್ದ ಪ್ರೊಫೆಸರಾಗಿ ಬಂದು ಸೇರಿ ಮತ್ತೊಂದು ಶಾಕ್ ನೀಡಿದ್ದರು!

1921ರಲ್ಲಿ ರಾಮನ್‌ಗೆ ಕೋಲ್ಕತ್ತಾ ವಿಶ್ವವಿದ್ಯಾಲಯ ಡಾಕ್ಟರೇಟ್ ನೀಡಿ ಗೌರವಿಸಿತು. ಅದೇ ವರ್ಷ ಆಶುತೋಷ್‌ರವರು ಯುರೋಪ್ ಅಧ್ಯಯನ ಪ್ರವಾಸಕ್ಕೆ ರಾಮನ್‌ರನ್ನು ಆಯ್ಕೆಮಾಡಿ ಕಳಿಸಿದರು. ಅದು ರಾಮನ್‌ರ ಪ್ರಥಮ ವಿದೇಶ ಪ್ರವಾಸವಾಗಿತ್ತು. ಯುರೋಪ್‌ನಲ್ಲಿ ರಾಮನ್ ರುದರ್‌ಫೋರ್ಡ್, ಬ್ರಾಗ್, ಜೆ.ಜೆ.ಥಾಮ್‌ಸನ್‌ರಂಥ ದಿಗ್ಗಜರನ್ನು ಭೇಟಿಯಾದರು. ಲಂಡನ್‌ನಲ್ಲಿ ಸೈಂಟ್ ಪೌಲ್ ಕೆಥೆಡ್ರಲ್‌ನ 'ಪಿಸುಗುಟ್ಟುವ ಗ್ಯಾಲರಿ'ಯನ್ನು ಮಕ್ಕಳಂತೆ ಆನಂದಿಸಿ, ಕೆಲವೊಂದು ಪ್ರಯೋಗಗಳನ್ನೂ ಕೈಗೊಂಡರು.

ಸಾಗರದ ನೀಲಿಗೆ ಆಕಾಶದ ನೀಲಿ ಬಣ್ಣದ ಪ್ರತಿಫಲನವೇ ಕಾರಣ ಎಂದು ಆ ಕಾಲದಲ್ಲಿ ಇಡೀ ಪ್ರಪಂಚವೇ ನಂಬಿತ್ತು. ಆದರೆ ಆಕಾಶದ ನೀಲಿ ಬಣ್ಣಕ್ಕೂ ಸಾಗರದ ಜಲರಾಶಿಯ ನೀಲಿಗೂ ಯಾವುದೇ ಕಾರ್ಯಕಾರಣ ಸಂಬಂಧವಿಲ್ಲವೆಂಬುದು ರಾಮನ್‌ಗೆ ಅನಿಸಿತ್ತು. ವಾಪಾಸ್ಸು ಬರುವಾಗ ಮೆಡಿಟರೇನಿಯನ್ ಸಮುದ್ರದ ನಯನಮನೋಹರ ನೀಲಿ ಜಲರಾಶಿಯನ್ನು ದಿನಗಟ್ಟಲೆ ನೋಡುತ್ತಾ ನೀರಿನ ನೀಲಿ ಬಣ್ಣಕ್ಕೆ ಕಾರಣವೇನಿರಬಹುದೆಂದು ಚಿಂತಿಸತೊಡಗಿದರು. ಗಾಳಿಯ ಅಣುಗಳಂತೆ ನೀರಿನ ಅಣುಗಳೂ ಬೆಳಕನ್ನು ಚದುರಿಸುತ್ತವೆಂದು ಅವರು ಕಂಡುಕೊಂಡು ಅದನ್ನು 'ನೇಚರ್' ಪತ್ರಿಕೆಗೆ ಕಳಿಸಿದರು. ಮುಂದೆ ಅವರ ಸಂಪೂರ್ಣ ಅಧ್ಯಯನ ಬೆಳಕಿನ ಅಣುಗಳ ಚದುರುವಿಕೆಯತ್ತ ಹಾಯಿತು. 1923ರಲ್ಲಿ 'ಕಾಂಪ್ಟನ್ ಪರಿಣಾಮ'ವೂ ರಾಮನ್‌ರ ಸಿದ್ಧಾಂತವನ್ನೇ ಎತ್ತಿಹಿಡಿದ ನಂತರ ರಾಮನ್ ತಮ್ಮದೇ ಆದ ಸಂಶೋಧನಾ ತಂಡವೊಂದನ್ನು ಕಟ್ಟಿಕೊಂಡರು.

1923, ಫೆಬ್ರವರಿ 27. ಅಂದು ನಡುರಾತ್ರಿಯವರೆಗೆ ರಾಮನ್ ತಂಡ ಪ್ರಯೋಗ ನಡೆಸಿದರೂ ಸರಿಯಾದ ಉತ್ತರ ಸಿಗಲಿಲ್ಲ. ಮರುದಿನ ಫೆಬ್ರವರಿ 28ರ ನಸುಕಿನಲ್ಲೇ ರಾಮನ್ ಪಾರದರ್ಶಕ ವಸ್ತುವಿನ ಮೂಲಕ ಒಳಹಾಯಿಸಿದ ಬೆಳಕಿನ ದಿಕ್ಕಿಗಿಂತ ಅದರಿಂದ ಹೊರಬರುವ ಕಿರಣಗಳು ಭಿನ್ನವಾದ ದಿಕ್ಕಿಗೆ ಹೊರಳಿದ್ದು, ಇದರಲ್ಲಿ ಕೆಲವೊಂದು ಭಾಗದ ಕಿರಣಗಳ (ರಾಮನ್ ಕಿರಣ) ತರಂಗಾಂತರವು ಮೂಲಕ್ಕಿಂತ ಬದಲಾಗಿರುತ್ತದೆ ಎಂದು ತಿಳಿದುಬಂತು. ಬೆಳಕು ದ್ರವ ಮಾಧ್ಯಮದಲ್ಲಿ ಚದುರಿಕೊಂಡು ಹಾಯುವಾಗ ತನ್ನ ತರಂಗಾಂತರವನ್ನು ಬದಲಿಸುತ್ತದೆ ಎಂಬ ದಿವ್ಯವಾದ ಸತ್ಯವೊಂದನ್ನು ಕಂಡುಕೊಂಡರು! ಇದೇ 'ರಾಮನ್ ಪರಿಣಾಮ'ವೆಂದು ಎಂದೆಂದಿಗೂ ಜನಮಾನಸದಲ್ಲಿ ಚಿರಸ್ಥಾಯಿಯಾಗಿ, ಭೌತಶಾಸ್ತ್ರದಲ್ಲಿ ಭಾರತ ಮಾತ್ರವಲ್ಲ ಏಶಿಯಾದಲ್ಲೇ ಮೊತ್ತಮೊದಲ ನೊಬೆಲ್ ಪ್ರಶಸ್ತಿ 1930ರಲ್ಲಿ ರಾಮನ್‌ರನ್ನು ಹುಡುಕಿಕೊಂಡು ಬಂತು!! 'ರಾಮನ್ ಪರಿಣಾಮ'ದ ದರ್ಶನ ಪಡೆದ ಫೆಬ್ರವರಿ 28ನ್ನು ಭಾರತ 'ರಾಷ್ಟ್ರೀಯ ವಿಜ್ಞಾನ ದಿನಾಚರಣೆ'ಯಾಗಿ ಆಚರಿಸುತ್ತಿದೆ.

ಕೋಲ್ಕತ್ತಾ ವಿ.ವಿ.ಯ ನಂತರ ಬೆಂಗಳೂರಿನ ಐ.ಐ.ಎಸ್.ಸಿ.ಯ ನಿರ್ದೇಶಕರಾಗಿ 1948ರಲ್ಲಿ ನಿವೃತ್ತರಾದರು. ನಂತರ ಜೀವಿತದ ಅಂತ್ಯದವರೆಗೆ 'ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್' ಹಾಗೂ 'ಇಂಡಿಯನ್ ಅಕಾಡೆಮಿ ಆಫ್ ಸೈನ್ಸ್' ಸಂಸ್ಥೆಗಳನ್ನು ನಡೆಸಿದರು. ಜೊತೆಗೆ 'ಕರೆಂಟ್ ಸೈನ್ಸ್' ಹಾಗೂ 'ದ ಪ್ರೊಸೀಡಿಂಗ್ಸ್ ಆಫ್ ಅಕಾಡೆಮಿ' ಎಂಬ ಪತ್ರಿಕೆಗಳ ಸಂಪಾದರೂ ಆಗಿದ್ದರು.

ರಾಮನ್ ಮತ್ತು ನೊಬೆಲ್ ಪ್ರಶಸ್ತಿ!

ನೊಬೆಲ್ ಪ್ರಶಸ್ತಿಗೆ ಕಾರಣವಾದ 'ರಾಮನ್ ಪರಿಣಾಮ'ವೆಂಬ ಶಬ್ದವನ್ನು ಸರ್ ಸಿ.ವಿ.ರಾಮನ್‌ರೇ ಹುಟ್ಟುಹಾಕಿರಬಹುದೆಂದು ಬಹುತೇಕರು ತಿಳಿಯುತ್ತಾರೆ. ಆದರೆ ಅಸಲಿಗೆ ಹಾಗಿಲ್ಲ. 'ರಾಮನ್ ಪರಿಣಾಮ'ವೆಂಬ ಶಬ್ದವನ್ನು ಹೆಸರಿಸಿದ್ದು ರಾಮನ್‌ರಲ್ಲ, ಬದಲಿಗೆ ಅವರ ಸಹೋದ್ಯೋಗಿಗಳು!!

ಅತ್ಯಂತ ಅಚ್ಚರಿಯ ವಿಚಾರವೆಂದರೆ ನೊಬೆಲ್ ಪ್ರಶಸ್ತಿಗೆ ಕಾರಣವಾದ ತಮ್ಮ ಪ್ರಯೋಗದ ಉಪಕರಣಗಳಿಗೆ ರಾಮನ್ ಖರ್ಚು ಮಾಡಿದ ಮೊತ್ತವೆಷ್ಟು ಗೊತ್ತೇ? ಕೇವಲ ಇನ್ನೂರು ರೂಪಾಯಿಗಳ ಆಸುಪಾಸು ಅಷ್ಟೇ..!!

ಪರೋಪಕಾರಾರ್ಥಂ ಇದಂ ಶರೀರಮ್

ಸಹಿಷ್ಣುತೆ ಹಾಗೂ ವಿವಿಧತೆಯಲ್ಲಿ ಏಕತೆಯನ್ನು ಕಾಣುವುದು ಹಿಂದೂ ಧರ್ಮದ ವೈಶಿಷ್ಟ್ಯ. ಪರೋಪಕಾರಕ್ಕೂ ಹಿಂದು ಧರ್ಮ ಆದ್ಯತೆ ನೀಡುತ್ತದೆ.

ಒಳನೋಟ
• ಹೆ.ಬಾ. ಮಲ್ಯ



ಭಾರತ ಹಿಂದಿನಿಂದಲೂ ತ್ಯಾಗಭೂಮಿ ಎನಿಸಿಕೊಂಡಿತ್ತು. ಆದರೆ ಇತ್ತೀಚಿನ ಕಾಲದಲ್ಲಿ ಭಾರತೀಯರೂ ಪಾಶ್ಚಾತ್ಯರ ಭೋಗ ಸಂಸ್ಕೃತಿಯನ್ನು ಅಳವಡಿಸಿಕೊಂಡು ಭೋಗಜೀವನಕ್ಕೆ ಅಂಟಿಕೊಳ್ಳುತ್ತಿರುವುದು ಕಂಡು ಬರುತ್ತಿದೆ. ಸ್ವಾರ್ಥಿಗಳೂ ಆಗುತ್ತಿದ್ದಾರೆ. ತಾನು, ಮಡದಿ, ಮಗು ಇಷ್ಟೇ ತನ್ನ ಪ್ರಪಂಚ ಎಂಬ ಭಾವನೆ ಹೆಚ್ಚಾಗುತ್ತಿದೆ. ಕುಟುಂಬದ ವ್ಯಾಪ್ತಿ ಮೀರಿ ಸಮಾಜ, ದೇಶ, ರಾಷ್ಟ್ರ, ಸಮಸ್ತ ಮಾನವಕುಲ, ಪಕ್ಷಿ, ಪ್ರಾಣಿ, ಜಂತು, ಪರಿಸರಗಳವರೆಗೆ ದೃಷ್ಟಿ ಹರಡುವುದಿಲ್ಲ. ''ವಾಸುದೈವ ಕುಟುಂಬಕಮ್'' ಎಂಬುದು ಭಾರತದ ವಿಶೇಷತೆಯಾಗಿತ್ತು. ದಾನ-ಧರ್ಮ, ಸೇವೆಗಳು ತ್ಯಾಗದ್ದೇ ಪರಿಣಾಮಗಳು. ಪರೋಪಕಾರ ಭಾರತೀಯರ ಸಹಜ ಗುಣ.

ನಾಲ್ಕು ಪ್ರಮುಖ ಸೆಮೆಟಿಕ್ ಮತಗಳು ಹುಟ್ಟಿದ್ದು ಮಧ್ಯಪೂರ್ವ ಹಾಗೂ ಪಾಶ್ಚಾತ್ಯ ಜಗತ್ತಿನಲ್ಲಿಯೇ. ಇಸ್ಲಾಂ, ಕ್ರೈಸ್ತ, ಯೆಹೂದಿ, ಕಮ್ಯೂನಿಸಂ ಇವೇ ಆ ನಾಲ್ಕು ಸೆಮೆಟಿಕ್ ಮತಗಳು. ಕಮ್ಯೂನಿಸಂ ಕೂಡಾ ಸೆಮೆಟಿಕ್ ಮತದ ಎಲ್ಲ ಲಕ್ಷಣಗಳನ್ನು ಹೊಂದಿದೆ. ಒಬ್ಬನೇ ದೇವರು, ಒಂದೇ ಪವಿತ್ರ ಗ್ರಂಥ, ಒಬ್ಬನೇ ಪ್ರವಾದಿ- ಅವರ ನಂತರ ಯಾವ ಹೊಸ ಪ್ರವಾದಿಯೂ ಹುಟ್ಟಲು ಸಾಧ್ಯವಿಲ್ಲ ಎಂಬ ನಂಬಿಕೆ ಇವರದು. ಗ್ರಂಥದಲ್ಲಿ ಪ್ರವಾದಿ ಹೇಳಿದ್ದು ಮಾತ್ರ ಸತ್ಯ. ಮಿಕ್ಕೆಲ್ಲವೂ ಅಸತ್ಯ. ಅದನ್ನು ಒಪ್ಪದವರು ನರಕಕ್ಕೆ ಹೋಗುತ್ತಾರೆ. ಅವರನ್ನು ನಾಶ ಮಾಡಬೇಕು. ಅಸಹಿಷ್ಣುತೆ, ಬಲವಂತದ ಮತಾಂತರ, ವಿರೋಧಿಸಿದರೆ ಕೊಲೆ, ಹಿಂಸೆ. ಇಸ್ಲಾಮಿನ ಜಿಹಾದಿ ಪಡೆ ಹಾಗೂ ಪೋಪ್‌ರ ಕ್ರುಸೇಡ್ಸ್ ಪಡೆಗಳೊಳಗೆ ನಡೆದ ಯುದ್ಧ, ರಕ್ತಪಾತಗಳಿಂದ ಪಾಶ್ಚಾತ್ಯ ಇತಿಹಾಸದ ಪುಟಗಳು ತುಂಬಿಹೋಗಿದೆ. ಹಿಟ್ಲರ್ 60 ಲಕ್ಷ ಯಹೂದಿಗಳ ಮಾರಣ ಹೋಮ ನಡೆಸಿದ. ಪಾಶ್ಚಾತ್ಯ ನೆಲದಲ್ಲಿ ಹುಟ್ಟಿದ ಕಮ್ಯೂನಿಸಂನ ಸ್ಟಾಲಿನ್, ಚೀನಾದ ಮಾವೋತ್ಸೆ ತುಂಗ್ ಕೋಟ್ಯಂತರ ವಿರೋಧಿಗಳ ಮಾರಣ ಹೋಮ ನಡೆಸಿದ್ದಕ್ಕೆ ದಾಖಲೆಗಳಿವೆ. ಭಾರತದಲ್ಲಿ ಕೂಡ ಕೇರಳದಲ್ಲಿ ಹಾಗೂ ಇತರೆಡೆ ಕಮ್ಯೂನಿಸ್ಟರು, ನಕ್ಸಲರು ಸಾವಿರಾರು ಮಂದಿಯ ಹತ್ಯೆ ಮಾಡಿದ್ದಾರೆ. ಇಂದಿಗೂ ಈ ಸೆಮೆಟಿಕ್ ಮತಗಳೊಳಗಿನ ಒಳಪಂಗಡಗಳು ತಮ್ಮೊಳಗೇ ಬಡಿದಾಡಿಕೊಂಡು ಸಾಯುತ್ತಿದ್ದಾರೆ. ಹಿಂದೂ ಧರ್ಮೀಯರ ವಿರುದ್ಧ ಇವರೆಲ್ಲರೂ ಒಂದಾಗಿದ್ದಾರೆ. ಸಾವಿರ ವರ್ಷಗಳ ಆಕ್ರಮಣಗಳನ್ನು ಎದುರಿಸಿ ಹಿಂದೂ ಸಮಾಜ, ಹಿಂದೂ ಧರ್ಮ ಇಂದಿಗೂ ಬದುಕುಳಿದಿದೆ ಎಂದರೆ ಇದರ ಅಂತಃಸತ್ವ ಎಷ್ಟು ಬಲಶಾಲಿಯಾಗಿದೆ ಎಂದು ಊಹಿಸಬಹುದು. ಅದಕ್ಕೇ ಇದನ್ನು ಸನಾತನ ಧರ್ಮ ಎನ್ನುತ್ತಾರೆ. ಇತರರ ವಿಷಯ ಭಾರತೀಯರಿಗೇಕೆ? ಹಿಂದು ಧರ್ಮದ ವಿಶೇಷತೆಗಳ ಬಗ್ಗೆ ಹಾಗೂ ಅದರಲ್ಲಿ ನುಸುಳಿರುವ ಲೋಪ, ದೋಷ, ದೌರ್ಬಲ್ಯಗಳ ಬಗ್ಗೆ ಒಂದಷ್ಟು ಚಿಂತಿಸೋಣ. ಪರೋಪಕಾರ ಹಿಂದು ಧರ್ಮದ ಒಂದು ವಿಶೇಷ ಲಕ್ಷಣ ಮಾತ್ರವಲ್ಲ, ಈ ಸೃಷ್ಟಿಯಲ್ಲೇ ಆ ಗುಣ ಅಡಗಿದೆ. ಈ ಸುಭಾಷಿತ ನೋಡಿ:

ಪರೋಪಕಾರಾಯ ಫಲಂತಿ ವೃಕ್ಷಾಃ ಪರೋಪಕಾರಾಯ ವಹಂತಿ ನದ್ಯಃ।
ಪರೋಪಕಾರಾಯ ದುಹಂತಿಗಾವಃ ಪರೋಪಕಾರಾರ್ಥಮಿದಂ ಶರೀರಂ॥

ಬೇರೆಯವರ ಉಪಯೋಗಕ್ಕೋಸ್ಕರವೇ ಮರಗಿಡಗಳು ಹೂ ಹಣ್ಣುಗಳನ್ನು, ನದಿಗಳು ನೀರನ್ನು , ಹಸುಗಳು ಹಾಲನ್ನು ನೀಡುತ್ತವೆ. ಮರಗಳು ಫಲಗಳನ್ನು ತಾವೇ ಸ್ವತಃ ತಿನ್ನುವುದಿಲ್ಲ, ಹಾಗೆಯೇ, ನದಿ ಹಾಗೂ ಹಸುಗಳು. ಮರಗಳು ತಂಪಾದ ನೆರಳನ್ನು ಇತರರಿಗಾಗಿ ಕೊಡುತ್ತವೆ, ತಾವು ಬಿಸಿಲಿನ ತಾಪ ಸಹಿಸಿಕೊಳ್ಳುತ್ತವೆ. ಭಗವಂತನ ಸೃಷ್ಟಿ ಎಷ್ಟು ವಿಚಿತ್ರ! ಮಾನವರೂ ಈ ತ್ಯಾಗದ ಭಾವನೆಯನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂಬುದೇ ಭಗವಂತನ ಹಾಗೂ ಪ್ರಕೃತಿ ಮಾತೆಯ ಸಂದೇಶ

ಋಣತ್ರಯಗಳು ಹಿಂದೂ ಧರ್ಮದ ಇನ್ನೊಂದು ವಿಶೇಷತೆ. ತಾನು ಯಾರಿಂದ ಉಪಕೃತನಾಗಿದ್ದಾನೋ ಅವರ ಬಗ್ಗೆ ಕೃತಜ್ಞತಾ ಭಾವನೆ ಇರಬೇಕು. ದೇವಋಣ, ಪಿತೃ(ಮಾತೃ)ಋಣ, ಆಚಾರ್ಯ ಋಣ, ಅತಿಥಿ ಋಣ, ರಾಷ್ಟ್ರ ಋಣ. ಇದೆಲ್ಲವೂ ದೇವರ ಕೊಡುಗೆ, ಅವನ ಕೃಪೆ. ಮೊದಲು ದೇವರಿಗೆ ಅರ್ಪಿಸಿ ನಂತರ ಅದನ್ನು ನೈವೇದ್ಯವೆಂದು ಭಾವಿಸಿ, ಕೃತಜ್ಞತಾಪೂರ್ವಕ ತಾನು ಸ್ವೀಕರಿಸುವುದು. ಜನ್ಮ ನೀಡಿ ಲಾಲನೆ ಪಾಲನೆ ಮಾಡಿದ ತಾಯಿ, ವ್ಯಾವಹಾರಿಕ ಸಂಗತಿಗಳ ಬಗ್ಗೆ ಕಲಿಸಿದ ತಂದೆ, ಜ್ಞಾನ ನೀಡಿದ ಆಚಾರ್ಯ, ಅನ್ನ ದಾನ ನೀಡಿ ಸೇವೆ ಮಾಡಲು ಪುಣ್ಯ ಸಂಪಾದಿಸಲು ಅವಕಾಶ ಕಲ್ಪಿಸಿದ ಅತಿಥಿ, ಜಗತ್ತು, ಸಮಸ್ತ ಸೃಷ್ಟಿಯೊಡನೆ ಸಂಬಂಧ ಕಲ್ಪಿಸಿಕೊಟ್ಟ ರಾಷ್ಟ್ರ ಇವರ ಹಾಗೂ ಇವುಗಳ ಬಗ್ಗೆ ಕೃತಜ್ಞತೆ. ವೃದ್ಧಾಪ್ಯದಲ್ಲಿ ತಮ್ಮ ತಂದೆ ತಾಯಿಗಳ ಆರೈಕೆ ಮಾಡುವುದು ದೇವರು ತನಗೆ ಕಲ್ಪಿಸಿಕೊಟ್ಟ ಒಂದು ಸದವಕಾಶ ಎಂದು ಭಾವಿಸಬೇಕು. ಅಂಗವಿಕಲ, ಮಾನಸಿಕ ಅಸ್ವಸ್ಥ ಅಣ್ಣ-ತಮ್ಮ -ತಂಗಿಯರನ್ನು ಪ್ರೀತಿಯಿಂದ ನೋಡಿಕೊಳ್ಳುವುದೂ ಪುಣ್ಯಕಾರ್ಯ. ವೃದ್ಧಾಶ್ರಮ ಪರಿಹಾರವಲ್ಲ, ನಾವು ಮಾಡಿದ ಈ ಪುಣ್ಯ ಕಾರ್ಯಗಳೇ ಮುಂದೆ ತಮ್ಮ ಜೀವನದಲ್ಲಿ, ವೃದ್ಧಾಪ್ಯದಲ್ಲಿ ಕಾಯುತ್ತವೆ. ಹಿಂದೆ ಸಮಾಜ ಜೀವನವು ತ್ಯಾಗ, ಪರೋಪಕಾರಗಳ ಆಧಾರದ ಮೇಲೆ ನಡೆಯುತ್ತಿತ್ತು. ಪಾಪ ಪುಣ್ಯಗಳ ವ್ಯಾಖ್ಯೆ ಏನು ಎಂದು ಯಾರೋ ಗುರು ವೇದವ್ಯಾಸರನ್ನು ಕೇಳಿದಾಗ ಅವರು ಕೊಟ್ಟ ಉತ್ತರ : ''ಪರೋಪಕಾರಾಯ ಪುಣ್ಯಾಯ ಪಾಪಾಯ ಪರಪೀಡನಮ್''. ಇಂಗ್ಲಿಷಿನಲ್ಲಿ ಪುಣ್ಯಕ್ಕೆ ಪರ್ಯಾಯ ಪದ ಇಲ್ಲ ಎನ್ನುತ್ತಾರೆ. ''ಎಲ್ಲ ಮನುಷ್ಯರೂ ಪಾಪದಿಂದಲೇ ಹುಟ್ಟುತ್ತಾರೆ. ಹಾಗಾಗಿ ಮನುಷ್ಯರೆಲ್ಲರೂ ಪಾಪಿಗಳು'' ಎಂಬುದು ಅನ್ಯ ಕೆಲವು ಮತಗಳ ಭಾವನೆ. ಹಿಂದು ಧರ್ಮ ಹೇಳುತ್ತದೆ :- ''ನೀವೆಲ್ಲರೂ ಅಮೃತ ಪುತ್ರರು.'' ಕಾಮದಿಂದ ಹುಟ್ಟಿದ ಮಾತ್ರಕ್ಕೆ ಪಾಪಿಗಳಾಗುವುದಿಲ್ಲ. ಕಾಮ ಪಾಪವಲ್ಲ. ಕಾಮಭಾವನೆಯನ್ನು ದೇವರೇ ಮನುಷ್ಯ ಹಾಗೂ ಸಕಲ ಪ್ರಾಣಿಗಳಲ್ಲಿ ಹಾಕಿರುವ ಒಂದು ಪವಿತ್ರ ಭಾವನೆ. ಸ್ವಯಂಚಾಲಿತರಾಗಿ ಸಂತತಿ (Species) ಮುಂದುವರಿದುಕೊಂಡು ಹೋಗಲು ಒಂದು ವ್ಯವಸ್ಥೆ. ನಾವು ನೋಡುವ ದೃಷ್ಟಿ ಶುದ್ಧವಾಗಿದ್ದರೆ ಇವೆಲ್ಲವೂ ಸುಲಭವಾಗಿ ಅರ್ಥವಾಗುತ್ತದೆ.

ತ್ಯಾಗ, ಪರೋಪಕಾರ ಭಾವನೆ, ಸೇವಾ ಭಾವನೆ, ದಾನ ಇವುಗಳು ಹಿಂದು ಧರ್ಮದಲ್ಲಿರುವುದರಿಂದಲೇ ಹಿಂದೆ ಭಾರತದಲ್ಲಿ ವಿದ್ಯೆ, ಆಹಾರ, ಔಷಧಿ ಹಾಗೂ ವೈದ್ಯಕೀಯ ಚಿಕಿತ್ಸೆಗಳು ಮಾರಾಟದ ವಸ್ತುಗಳಾಗಿರಲಿಲ್ಲ. ಇಂದು ಈ ಕ್ಷೇತ್ರಗಳೇ ವ್ಯಾಪಾರೀಕರಣಕ್ಕೊಳಗಾಗಿ ಹೆಚ್ಚು ಲಾಭ ತರುವಂಥ ಸಾಧನಗಳಾಗಿವೆ. ಎಲ್ಲವನ್ನೂ ಮಾತೃತ್ವದ ದೃಷ್ಟಿಯಿಂದ ನೋಡುವುದು ಹಿಂದು ಧರ್ಮದ ವೈಶಿಷ್ಟ್ಯ. ಸ್ವಂತ ತಾಯಿ, ಎಲ್ಲ ಸ್ತ್ರೀಯರು, ಭೂಮಿ, ಗೋವು, ನದಿಗಳು, ವನಶ್ರೀ ಎಲ್ಲದರಲ್ಲೂ ಮಾತೃತ್ವದ ದೃಷ್ಟಿ.

ಮಾತೃವತ್ ಪರದಾರೇಷು, ಪರದ್ರವ್ಯೇಷು ಲೋಷ್ಠವತ್।
ಆತ್ಮವತ್ ಸರ್ವಭೂತೇಷು ಯಃಪಶ್ಯತಿ ಸಃ ಪಂಡಿತಃ॥

ಎಲ್ಲ ಪರಸ್ತ್ರೀಯರನ್ನು ತಾಯಿಯಂತೆ, ಪರದ್ರವ್ಯವನ್ನು ಮಣ್ಣಿನ ಮುದ್ದೆಯಂತೆ, ಎಲ್ಲರನ್ನೂ ತನ್ನಂತೆಯೇ ಭಾವಿಸುವವನೇ ಜ್ಞಾನಿ ಎಂದರ್ಥ.

ಪರರ ಸೇವೆ ಎಂದಾಗ ವಾಸ್ತವದಲ್ಲಿ ತನ್ನ ಸೇವೆಯನ್ನು ತಾನೇ ಮಾಡಿಕೊಂಡಂತೆ. ಅದು ಹೇಗೆಂದರೆ ಹಿಂದು ತತ್ವಜ್ಞಾನದ ಪ್ರಕಾರ ದೇವರು ಸರ್ವವ್ಯಾಪಿ. ಅವನಿಲ್ಲದ ಜಾಗವೇ ಇಲ್ಲ, ಅವನೊಬ್ಬನೇ ಇರುವುದು. ನನ್ನಲ್ಲೂ, ಪರರಲ್ಲೂ ಇರುವವನು ಒಬ್ಬನೇ. ಅದರ ಜ್ಞಾನ ಇಲ್ಲದಿರುವುದರಿಂದಲೇ ನಾವು ಬೇರೆ ಬೇರೆ ಎಂದುಕೊಳ್ಳುತ್ತೇವೆ. ಸ್ವತಃ ನಮ್ಮೊಳಗೆ ಆತ್ಮ-ಜೀವಾತ್ಮದ ರೂಪದಲ್ಲಿ ಪರಮಾತ್ಮನಿದ್ದಾನೆ. ಈ ದೇಹವೇ ಆತ ನೆಲೆಸಿರುವ ದೇವಾಲಯ. ''ಅಹಂ ಬ್ರಹ್ಮಾಸ್ಮಿ, ತತ್ ತ್ವಂ ಅಸಿ'' ಎಂದು ಆಚಾರ್ಯ ಶಂಕರರು ಇದನ್ನೇ ಹೇಳಿರುವುದು. ಆದರೂ ಹಿಂದು ಧರ್ಮದಲ್ಲಿ ಆರಾಧನಾ ಸ್ವಾತಂತ್ರ್ಯವಿದೆ. ಆದ್ದರಿಂದಲೇ ಇಷ್ಟ ದೇವರ ಕಲ್ಪನೆ. ಕಣ್ಣಿಗೆ, ಪಂಚೇಂದ್ರಿಯಗಳಿಗೆ ಕಾಣದ ದೇವರ ಸ್ಥಾನದಲ್ಲಿ ತನಗಿಷ್ಟವಾದ ಕಣ್ಣಿಗೆ ಕಾಣುವ ಮೂರ್ತರೂಪವೊಂದನಿಟ್ಟು ಆರಾಧಿಸಿ ನೆಮ್ಮದಿ-ಶಾಂತಿ ಪಡೆದುಕೊಳ್ಳುವ ವ್ಯವಸ್ಥೆ. ನೂರು ಕೋಟಿ ಹಿಂದುಗಳಿಗೆ ನೂರು ಕೋಟಿ ದೇವತೆಗಳು. ದೈವಾರಾಧನೆ ವ್ಯಕ್ತಿಗತವಾದದ್ದು. ಹಾಗಾಗಿ ಮೊದಲು ರಾಷ್ಟ್ರಕ್ಕೆ ನಿಷ್ಠೆ, ರಾಷ್ಟ್ರ ಮೊದಲು, ನಂತರ ಮತ. ಆಗ ಎಲ್ಲರೂ ರಾಷ್ಟ್ರೀಯರೆನಿಸಿಕೊಳ್ಳುತ್ತಾರೆ. ಈ ಅರ್ಥದಲ್ಲಿ ಭಾರತದಲ್ಲಿ ಮೂಲತಃ ಎಲ್ಲರೂ ಹಿಂದುಗಳೇ. ಕೆಲವರು ಆಕ್ರಮಣ ಕಾಲದಲ್ಲಿ ಮತಾಂತರವಾದರು. ಅವರ ಮೊದಲ ನಿಷ್ಠೆ ರಾಷ್ಟ್ರದ ಬಗ್ಗೆ ಇದ್ದರೆ ಅವರು ಹಿಂದುಗಳೇ, ಭಾರತೀಯರೇ. ಸಹಿಷ್ಣುತೆ ಹಾಗೂ ವಿವಿಧತೆಯಲ್ಲಿ ಏಕತೆಯನ್ನು ಕಾಣುವುದು ಹಿಂದೂ ಧರ್ಮದ್ದೇ ವೈಶಿಷ್ಟ್ಯ. ಸತ್ಯವೊಂದೇ, ದೇವರೊಬ್ಬನೇ. ಜ್ಞಾನಿಗಳು ಅನೇಕ ವಿಧದಲ್ಲಿ ವ್ಯಾಖ್ಯಾನಿಸುತ್ತಾರೆ:- ''ಏಕಂಸದ್ವಿಪ್ರಾಃ ಬಹುಧಾವದಂತಿ''. ಅದೇ ರೀತಿ ''ಆಕಾಶಾತ್ ಪತಿತಂ ತೋಯಂ ಯಥಾಗಚ್ಛತಿ ಸಾಗರಂ। ಸರ್ವದೇವ ನಮಸ್ಕಾರಂ ಕೇಶವಂ ಪ್ರತಿಗಚ್ಛತಿ॥''

ಆಕಾಶದಿಂದ ಮಳೆಯಾಗಿ ಬಿದ್ದ ನೀರು ಅನೇಕ ನದಿ ತೊರೆಗಳಾಗಿ, ಬೇರೆ ಬೇರೆಯಾಗಿ ಹರಿದರೂ ಅಂತಿಮವಾಗಿ ಒಂದೇ ಮಹಾ ಸಾಗರವನ್ನು ಸೇರುವಂತೆ, ಯಾವುದೇ ಬೇರೆ ಬೇರೆ ದೇವರನ್ನು ಆರಾಧಿಸಿದರೂ, ಆ ಪ್ರಾರ್ಥನೆ ಹೋಗಿ ತಲುಪುವುದು ಆ ಒಬ್ಬನೇ ದೇವರಿಗೆ.

ಪಾಪ-ಪುಣ್ಯಗಳ ಫಲವಾಗಿ ಸುಖ-ದುಃಖಗಳು ಎಂಬ ಅದ್ಭುತವಾದ ಕರ್ಮಸಿದ್ಧಾಂತ, ಆತ್ಮನ ಅಮರತ್ವ, ಪುನರ್ಜನ್ಮ ಸಿದ್ಧಾಂತ ಇವು ಹಿಂದು ಧರ್ಮದ್ದೇ ವಿಶೇಷತೆಗಳು. ಅಂತಿಮವಾಗಿ ಮಾನವ ಇತರರ ಒಳಿತಿಗಾಗಿ ಬದುಕಬೇಕು ಎಂಬ ಪಾಠವನ್ನು ಈ ಎಲ್ಲಾ ಸಂಗತಿಗಳೂ ಒತ್ತಿ ಒತ್ತಿ ಹೇಳುತ್ತವೆ. ''ಸರ್ವೇ ಭವಂತು ಸುಖಿನಃ'' ಎಂಬ ಸರ್ವಸಮಾವೇಶಕ ದೃಷ್ಟಿ, ಈ ಎಲ್ಲದರ ಸಾರರೂಪವೇ ''ಪರೋಪಕಾರಾಯ ಪುಣ್ಯಾಯ'' ಎಂಬ ವ್ಯಾಸ ಮಹರ್ಷಿಗಳ ವಚನ.

ಅಫ್ಘಾನ್-ಪಾಕ್ ಸಮರ

ಪುಟ ೧ ➡ ನಮ್ಮ ತಾಳ್ಮೆ ಮಿತಿ ಮೀರಿದೆ. ಇನ್ನಿದು ನಮ್ಮ ಮತ್ತು ನಿಮ್ಮ ನಡುವಿನ ಯುದ್ಧ ಎಂದು ಪಾಕ್ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಎಕ್ಸ್ ಪೋಸ್ಟ್‌ನಲ್ಲಿ ಅಫ್ಘಾನಿಸ್ತಾನಕ್ಕೆ ಬೆದರಿಕೆ ಹಾಕಿದ್ದರು.

ಕಾಬೂಲ್ ಸೇರಿ 3 ನಗರಗಳ ಮೇಲೆ ದಾಳಿ: ಅಫ್ಘಾನ್ ರಾಜಧಾನಿ ಕಾಬೂಲ್ ಸೇರಿದಂತೆ ಕಂದಹಾರ್ ಮತ್ತು ಪಾಕ್ತಿಯಾ ನಗರಗಳ 21 ಕಡೆ ಪಾಕ್ ಸೇನೆ ಶುಕ್ರವಾರ ಭಾರೀ ದಾಳಿ ನಡೆಸಿದೆ. ಕಾಬೂಲ್ ನಗರದಲ್ಲಿಯೇ ಮೂರು ಪ್ರತ್ಯೇಕ ದಾಳಿಗಳನ್ನು ನಡೆಸಿದೆ. ಪಾಕ್ ದಾಳಿಗೆ ಕಾಬೂಲ್‌ನ ಎರಡು ದೊಡ್ಡ ಕಟ್ಟಡಗಳು ನೆಲಸಮಗೊಂಡಿವೆ.

ಏನಿದು ಡುರಾಂಡ್ ಗಡಿರೇಖೆ?

ಪುಟ ೧ ➡ ಆದರೆ ಅಫ್ಘಾನಿಸ್ತಾನವು ಇದನ್ನು ಪರಿಗಣಿಸಲು ನಿರಾಕರಿಸಿತು. 1947ರಲ್ಲಿ ಪಾಕಿಸ್ತಾನದ ವಿಶ್ವಸಂಸ್ಥೆ ಸದಸ್ಯತ್ವದ ವಿರುದ್ಧ ಅಫ್ಘಾನಿಸ್ತಾನವೊಂದೇ ಮತ ಚಲಾಯಿಸಿತ್ತು. ಪಾಕ್ ವಿರುದ್ಧ ಡುರಾಂಡ್ ಗಡಿರೇಖೆ ಭಿನ್ನಾಭಿಪ್ರಾಯ ಹಿನ್ನೆಲೆಯಲ್ಲಿ ಅಫ್ಘಾನಿಸ್ತಾನವು ಪಾಕ್ ವಿರುದ್ಧ ಮತ ಚಲಾಯಿಸಿತ್ತು. ಆದರೆ ಭಾರತ ತಟಸ್ಥ ನಿಲುವನ್ನು ತಳೆದಿದ್ದು, ಮತವನ್ನೇ ಚಲಾಯಿಸಿರಲಿಲ್ಲ.

ಭಾರತದ ಈವರೆಗಿನ ನಿಲುವು?

ಪುಟ ೧ ➡ ಈವರೆಗೆ ಡುರಾಂಡ್ ರೇಖೆ ವಿಚಾರವಾಗಿ ಭಾರತ ಸಾರ್ವಜನಿಕ ಅಭಿಪ್ರಾಯ ನೀಡಿಲ್ಲ, ತಟಸ್ಥ ನಿಲುವು ತಳೆಯುತ್ತಲೇ ಬಂದಿದೆ. ಆದರೆ 2021ರಲ್ಲಿ ತಾಲಿಬಾನ್ ಅಫ್ಘಾನ್‌ನಲ್ಲಿ ಅಧಿಕಾರದ ಗದ್ದುಗೆಯೇರಿದ ಬಳಿಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಎಚ್ಚರಿಕೆಯ ಹೆಜ್ಜೆಯನ್ನಿಟ್ಟಿದೆ.

ಐವಿಎಫ್ ಕೇಂದ್ರಗಳ ಮೇಲೆ ನಿಗಾ

ಅಂಡಾಣು ಮಾರಾಟ ದಂಧೆ

• **ಬೆಂಗಳೂರು:** ನಗರದಲ್ಲಿ ಅಂಡಾಣು ಮಾರಾಟ ದಂಧೆ ಪ್ರಾರಂಭವಾಗಿದೆ ಎಂಬ ಶಂಕೆ ಮೇರೆಗೆ ಆರೋಗ್ಯ ಇಲಾಖೆ ಇದೀಗ ನಗರದ ಐವಿಎಫ್ ಕೇಂದ್ರಗಳ ಮೇಲೆ ಕಟ್ಟುನಿಟ್ಟಿನ ನಿಗಾ ವಹಿಸಲು ಮುಂದಾಗಿದೆ.

ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ಅಂಡಾಣು ಮಾರಾಟ ದಂಧೆ ಬೆಳಕಿಗೆ ಬಂದ ಬೆನ್ನಲ್ಲೇ ಅದೇ ಮಾದರಿಯ ಜಾಲವು ಬೆಂಗಳೂರಿನ ಕೆಲವು ಆಸ್ಪತ್ರೆಗಳಲ್ಲಿಯೂ ಕಾರ್ಯನಿರ್ವಹಿಸುತ್ತಿದೆ ಎಂಬ ಅನುಮಾನ ಮೂಡಿದೆ. ಮತ್ತೊಂದೆಡೆ ಮಹಿಳೆಯರಿಗೆ ಹಣದ ಆಮಿಷವೊಡ್ಡಿ ಹಲವು ರಾಜ್ಯಗಳಿಂದ ನಗರಕ್ಕೆ ಕರೆತಂದು, ಕಾನೂನು ಬಾಹಿರ ಅಂಡಾಣು ಸಂಗ್ರಹಣೆ ನಡೆಸಲಾಗುತ್ತಿದೆ ಎಂಬ ಮಾಹಿತಿ ತನಿಖಾ ಸಂಸ್ಥೆಗಳಿಗೆ ಲಭ್ಯವಾಗಿದೆ ಎಂದು ಮೂಲಗಳು ತಿಳಿಸಿವೆ. ಈ ಹಿನ್ನೆಲೆ ರಾಜ್ಯ ಆರೋಗ್ಯ ಇಲಾಖೆ ಮುನ್ನೆಚ್ಚರಿಕಾ ಕ್ರಮವಾಗಿ ಐವಿಎಫ್ ಕೇಂದ್ರಗಳಲ್ಲಿ ನಿಗಾವಹಿಸಲು ಸೂಚನೆ ನೀಡಿದೆ.


ಜಾಲ ನಗರದಲ್ಲಿ ಮಾತ್ರವಲ್ಲದೇ ತೆಲಂಗಾಣ, ನಾಗ್ಪುರ, ಪುಣೆ, ನಾಸಿಕ್ ಸೇರಿದಂತೆ ಹಲವು ನಗರಗಳವರೆಗೂ ವಿಸ್ತರಿಸಿವೆ. ಈ ಮೂಲಕ ಅಮಾಯಕ ಮಹಿಳೆಯರ ಆರೋಗ್ಯ ಮತ್ತು ಜೀವನವನ್ನು ಅಪಾಯಕ್ಕೆ ಒಳಪಡಿಸುವ ಈ ಕೃತ್ಯವನ್ನು ಆರೋಗ್ಯ ಇಲಾಖೆ ಗಂಭೀರವಾಗಿ ಪರಿಗಣಿಸಿದೆ.

ಈ ಕುರಿತು ಮಹಾರಾಷ್ಟ್ರ ಆರೋಗ್ಯ ಇಲಾಖೆಯಿಂದ ಸಂಪೂರ್ಣ ಮಾಹಿತಿಯನ್ನು ಕೋರಲಾಗಿದ್ದು, ಪ್ರಕರಣವನ್ನು ಎಲ್ಲ ಆಯಾಮಗಳಿಂದ ಪರಿಶೀಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಅವರ ನಿರ್ದೇಶನ ಮೇರೆಗೆ ಆರೋಗ್ಯ ಇಲಾಖೆಯ ಆಯುಕ್ತರು ಹಾಗೂ ಹಿರಿಯ ಅಧಿಕಾರಿಗಳಿಗೆ ಸಮಗ್ರ ತನಿಖೆ ನಡೆಸುವಂತೆ ಸೂಚಿಸಲಾಗಿದೆ.

ಯಾವ ಆಸ್ಪತ್ರೆಗಳು, ವೈದ್ಯರು ಅಥವಾ ಮಧ್ಯವರ್ತಿಗಳು ಈ ಅಕ್ರಮ ಚಟುವಟಿಕೆಯಲ್ಲಿ ಶಾಮೀಲಾಗಿದ್ದಾರೆ ಎಂಬುದರ ಕುರಿತು ವಿವರವಾದ ವರದಿ ಸಿದ್ಧಪಡಿಸಲು ಸೂಚಿಸಲಾಗಿದೆ. ಅಗತ್ಯವಿದ್ದರೆ ಗೃಹ ಇಲಾಖೆಯ ಸಹಕಾರವನ್ನೂ ಪಡೆಯಲಾಗುವುದು ಎಂದು ತಿಳಿಸಲಾಗಿದೆ.

ಸ್ಪರ್ಧಾತ್ಮಕ ಪ್ರಗತಿಗೆ ಸಜ್ಜಾಗಲು ಸಕಾಲ

• **ಹೊಸದಿಲ್ಲಿ:** ಇದುವರೆಗಿನ ಬಜೆಟ್‌ಗಳಲ್ಲಿ ಅತ್ಯಂತ ಉತ್ತೇಜನಕಾರಿ ಬಂಡವಾಳ ವ್ಯಯ ಘೋಷಣೆ ಮತ್ತು ಉದ್ಯಮರಂಗಕ್ಕೆ ಪೂರಕ ನೀತಿನಿಯಮಗಳ ವಾತಾವರಣ ಸೃಜಿಸುವ ಮುಖೇನ ಸರ್ಕಾರ, ಉದ್ದಿಮೆ ರಂಗಕ್ಕೆ ಪ್ರೋತ್ಸಾಹ ನೀಡುತ್ತಿದೆ. ಹಾಗಾಗಿ ಹೂಡಿಕೆಗಳು



ಹಾಗೂ ಆವಿಷ್ಕಾರಗಳ ವರ್ಧಿಸುವಂತೆ ಮತ್ತು ಬಜೆಟ್ ಘೋಷಣೆಗಳ ಪ್ರಯೋಜನ ಪಡೆಯುವಂತೆ ಭಾರತೀಯ ಉದ್ಯಮಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಬಜೆಟ್ ನಂತರದಲ್ಲಿ ಪ್ರಪ್ರಥಮವಾಗಿ, ವಿಕಸಿತ ಭಾರತದ ಸಾಕಾರಕ್ಕಾಗಿ ತಂತ್ರಜ್ಞಾನ, ಸುಧಾರಣೆಗಳು ಹಾಗೂ ಹಣಕಾಸು ಕುರಿತ ವೆಬಿನಾರ್ ಉದ್ದೇಶಿಸಿ ಮಾತನಾಡಿದ ಅವರು, ಜಾಗತಿಕವಾಗಿ ಮುಂದಿನ ಹಂತದ ಸ್ಪರ್ಧಾತ್ಮಕ ಬೆಳವಣಿಗೆಗೆ ಅಣಿಯಾಗಲು ಇದು ಸಕಾಲ ಎಂದರು.

11 ವರ್ಷಗಳ ಹಿಂದೆ 2 ಲಕ್ಷ ಕೋಟಿ ರೂ.ಗಳಿದ್ದ ಸಾರ್ವಜನಿಕ ಬಂಡವಾಳ ವೆಚ್ಚವು 2026-27ರ ಕೇಂದ್ರ ಬಜೆಟ್‌ನಲ್ಲಿ 12 ಲಕ್ಷ ಕೋಟಿ ರೂ.ಗಳಿಗೆ ಏರಿದೆ. ತನ್ಮೂಲಕ ಉದ್ಯಮ ರಂಗದ ವಿಶ್ವಾಸಕ್ಕೆ ಬಲವಾದ ಬುನಾದಿ ಹಾಕಲಾಗಿದೆ ಎಂದು ಮಾಹಿತಿ ನೀಡಿದರು.

ಖಾಸಗಿ ರಂಗಕ್ಕೆ ಕರೆ: 2026-27ರ ಬಜೆಟ್ ಘೋಷಣೆಗಳ ಸಂಪೂರ್ಣ ಪ್ರಯೋಜನ ಪಡೆಯುವನ್ನಯ, ಹೊಸ ಚೈತನ್ಯದೊಂದಿಗೆ ಹೂಡಿಕೆ ಹೂಡಲು ಖಾಸಗಿ ರಂಗ ಮುಂದಾಗಬೇಕು. ಸರ್ಕಾರದ ಅತ್ಯಧಿಕ ಅನುದಾನಗಳ ಇಂಗಿತ ಇದೇ ಆಗಿದೆ ಎಂದು ವಿವರಿಸಿದರು. ಭಾರತದ ಉದ್ದಿಮೆಗಳು ಹೊಸ ಹೂಡಿಕೆ ಹಾಗೂ ಆವಿಷ್ಕಾರಗಳಿಗೆ ಮುಂದಾಗಬೇಕು. ಪ್ರಾಯೋಗಿಕ ಪರಿಹಾರಗಳ ವಿನ್ಯಾಸಗೊಳಿಸುವಲ್ಲಿ ಮತ್ತು ಮಾರುಕಟ್ಟೆ ವಿಶ್ವಾಸವನ್ನು ಸುಧಾರಿಸುವಲ್ಲಿ ಹಣಕಾಸು ಸಂಸ್ಥೆಗಳು ಮತ್ತು ವಿಶ್ಲೇಷಕರು ನೆರವಾಗಬೇಕು. ಸುಧಾರಣೆಗಳು ಮೂರ್ತ ಫಲಿತಾಂಶಗಳಾಗಿ ಪರಿವರ್ತಿತವಾಗಲು ಸರಕಾರ, ಉದ್ದಿಮೆ ಹಾಗೂ ಅನುಭವಿ ಪಾಲುದಾರರ ಮಧ್ಯೆ ನಿಕಟ ಸಹಯೋಗ ಅಗತ್ಯ ಎಂದರು. ಹಣಕಾಸು ಮಾದರಿಯಲ್ಲಿ ಮೂಲಸೌಕರ್ಯ ಹಾಗೂ ಆವಿಷ್ಕಾರ ರಂಗಗಳಲ್ಲಿ ನಾವು ಹೆಚ್ಚೆಚ್ಚು ಪಾಲ್ಗೊಳ್ಳಬೇಕು ಎಂದರು.

ಖಾಸಗಿ ರಂಗದ ಸ್ಫೂರ್ತಿ ಸಾಲದು

ಕಳೆದ ದಶಕದಿಂದೀಚೆಗೆ ಹೆದ್ದಾರಿ ನಿರ್ಮಾಣ, ರೈಲ್ವೆ, ಬಂದರುಗಳು, ವಿಮಾನ ನಿಲ್ದಾಣಗಳು, ಡಿಜಿಟಲ್ ಮೂಲಸೌಕರ್ಯ, ಇಂಧನ ಜಾಲಗಳಿಗೆ ಸರಕಾರ ಅನುದಾನವನ್ನು ಸಾಕಷ್ಟು ಹೆಚ್ಚಿಸಿದೆ. ಖಾಸಗಿ ಹೂಡಿಕೆಗೆ ಉತ್ತೇಜನ ಮತ್ತು ಮಧ್ಯಮ ಸ್ವರೂಪದ ಉತ್ಪಾದಕತೆಯನ್ನು ಮೇಲೆತ್ತುವುದು ಸರ್ಕಾರದ ಈ ರೀತಿ ದಾಖಲೆ ಬಂಡವಾಳ ವೆಚ್ಚದ ಆಶಯ. ತನ್ಮೂಲಕ ಸರ್ಕಾರವು ಭಾರತದ ಬೆಳವಣಿಗೆ ಗಾಥೆಯನ್ನು ತುಂಬು ದೃಢಗೊಳಿಸಿದೆ. ಆದರೂ ಖಾಸಗಿ ರಂಗದ ಸ್ಫೂರ್ತಿ ಮಾತ್ರ ನಿರೀಕ್ಷಿತ ಬಲಿಷ್ಠ ಮಟ್ಟದಲ್ಲಿಲ್ಲ ಎಂದು ಪ್ರಧಾನಿ ಮೋದಿ ಅತೃಪ್ತಿ ವ್ಯಕ್ತಪಡಿಸಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕನೇಜಿ

◈ ಪ್ರಧಾನಿ ಮೋದಿಯವರು ಯಾವುದೇ ಹೋರಾಟ ಮಾಡದೆ ಪುಕ್ಕಟೆಯಾಗಿ ಪಟ್ಟಕ್ಕೇರಿದ್ದಾರೆ - ಮಲ್ಲಿಕಾರ್ಜುನ ಖರ್ಗೆ
- ಮೊದಲನೆಯದಾಗಿ ಯಾವುದೇ ಶಸ್ತ್ರ ಹಿಡಿದು ಹೋರಾಟ ಮಾಡದೆ ಅವರು ಪಟ್ಟಕ್ಕೇರಿದ್ದಾರೆ ಎಂಬುದು ಹೆಮ್ಮೆಯ ಸಂಗತಿ, ಎರಡನೆಯದಾಗಿ ನೀವು ಈ ರೀತಿ ಮಾತನಾಡುವ ಮೂಲಕ ಮತದಾರರಿಗೆ ಪುಕ್ಕಟೆಯಾಗಿ ಮನೋರಂಜನೆ ನೀಡುತ್ತಿದ್ದೀರಿ ಎಂಬುದೂ ಕಡಿಮೆ ಹೆಮ್ಮೆಯ ಸಂಗತಿ ಖಂಡಿತ ಅಲ್ಲ!

ದಿನ ಭವಿಷ್ಯ

ಮೇಷ
ನಿಮಗೆ ಸಂಬಂಧಿಸಿ ಪ್ರಮುಖ ಬದಲಾವಣೆ ಉಂಟಾದೀತು. ಹಣದ ವಿಚಾರದಲ್ಲಿ ರಿಸ್ಕ್ ತೆಗೆದುಕೊಳ್ಳಬೇಡಿ. ಸಂಬಂಧದಲ್ಲಿ ಒಡಕು ಸಂಭವ.

ವೃಷಭ
ನಿಮ್ಮ ತಪ್ಪಿಗೆ ಇತರರನ್ನು ದೂರಬೇಡಿ. ಕಾದಿಟ್ಟ ರಹಸ್ಯವೊಂದು ಬಹಿರಂಗವಾದೀತು. ಎಲ್ಲರ ಜತೆ ಸೌಹಾರ್ದದಿಂದ ವರ್ತಿಸಿದರೆ ಒಳಿತು.

ಮಿಥುನ
ಕೆಲಸದ ಒತ್ತಡ ಅಧಿಕವಿದ್ದರೂ ನೀವು ವಿರಾಮ ಪಡೆಯಲು ಶಕ್ತರಾಗುವಿರಿ. ಖರ್ಚು ಅಧಿಕ ಮಾಡದಿರಿ. ಬಳಿಕ ಚಿಂತೆಗೆ ಕಾರಣವಾದೀತು.

ಕಟಕ
ಕೆಲಸವೊಂದು ಅನಿರೀಕ್ಷಿತ ಫಲ ನೀಡಲಿದೆ. ಒತ್ತಡ ನಿವಾರಣೆ. ಬಂಧುಗಳ ಜತೆ ಆತ್ಮೀಯ ಕಾಲಕ್ಷೇಪ. ಮಕ್ಕಳ ಸಾಧನೆಯ ತೃಪ್ತಿ.

ಸಿಂಹ
ಸವಾಲುಗಳ ದಿನ. ನಿಭಾಯಿಸಲು ಸಮರ್ಥ. ಕೆಲವು ವಿಷಯಗಳಲ್ಲಿ ಸಮತೋಲನ ಸಾಧಿಸಿರಿ. ಏಕಪಕ್ಷೀಯ ಧೋರಣೆ ತಾಳದಿರಿ. ಧನವ್ಯಯ.

ಕನ್ಯಾ
ಮನೆಯವರ ಹಿತಾಸಕ್ತಿಗೆ ಹೆಚ್ಚಿನ ಗಮನ ಕೊಡಿ. ನಿಮಗೆ ಅರಿವಿಲ್ಲದೇ ಬಿಕ್ಕಟ್ಟು ಬೆಳೆಯುತ್ತಿದೆ. ಎಲ್ಲರ ಜತೆ ಸಮಾಲೋಚನೆ ನಡೆಸಿ.

ತುಲಾ
ನಿಮ್ಮ ನಿರ್ವಹಣೆ ಇಂದು ಸುಧಾರಿಸಲಿದೆ. ಅದೃಷ್ಟವೂ ಜತೆಗಿದೆ. ಕ್ಲಿಷ್ಟಕರ ಪರಿಸ್ಥಿತಿಯೊಂದು ಅಚಾನಕ್ ಪರಿಹಾರ ಕಾಣುವುದು.

ವೃಶ್ಚಿಕ
ನಿಮ್ಮ ಒಳ್ಳೆ ಕೆಲಸ ಯಾರೂ ಗಮನಿಸುತ್ತಿಲ್ಲ ಎಂಬ ಕೊರಗು ಬಿಡಿ. ಸೂಕ್ತ ಪ್ರಶಂಸೆ ಸಿಕ್ಕೇ ಸಿಗುವುದು. ಮನೆಯಲ್ಲಿ ಸೌಹಾರ್ದ ಪರಿಸರ.

ಧನು
ಕಷ್ಟವೆಂದುಕೊಂಡ ಕೆಲಸ ಸಕಾಲದಲ್ಲಿ ಮುಗಿಸುವಿರಿ. ಆತ್ಮವಿಶ್ವಾಸ ವೃದ್ಧಿ. ಮನೆಯಲ್ಲಿ ಅಸಹಕಾರ ಎದುರಿಸುವಿರಿ. ಸಹನೆಯಿಂದಿರಿ.

ಮಕರ
ಮನವನ್ನು ಕಾಡುತ್ತಿರುವ ವಿಷಯ ಸರಿಯಾಗಿ ಇತ್ಯರ್ಥ ಪಡಿಸಿ. ಅದನ್ನು ಹಾಗೇ ಬೆಳೆಯಲು ಬಿಡಬೇಡಿ. ಕೌಟುಂಬಿಕ ಸಹಕಾರ.

ಕುಂಭ
ನಿಮ್ಮ ಪಾಲಿಗೆ ಗುಣಾತ್ಮಕ ಬದಲಾವಣೆ ಉಂಟಾಗಲಿದೆ. ಮನೆಯವರ ಮಾತಿಗೆ ರೇಗದಿರಿ. ಸಮಾಧಾನದ ಪ್ರತಿಕ್ರಿಯೆ ನೀಡಿ.

ಮೀನ
ಇತ್ತೀಚೆಗೆ ಮೂಡಿದ್ದ ಕೆಲವು ಸಂಶಯಗಳಿಗೆ ಇಂದು ಪರಿಹಾರ ಸಿಗಲಿದೆ. ಮನಸ್ಸು ನಿರಾಳ. ಆರ್ಥಿಕ ಪರಿಸ್ಥಿತಿ ಉತ್ತಮ. ಖರ್ಚು ಹೆಚ್ಚಿದರೂ ಚಿಂತೆ ಕಾಡದು.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 2,5,8,1

ಅಸಂಘಟಿತ ಕಾರ್ಮಿಕರಿಗೆ ಅನುಕೂಲ: ಸಚಿವ ಸಂತೋಷ್ ಲಾಡ್

4 ಮಸೂದೆ ಜಾರಿಗೆ ಚಿಂತನೆ

• **ಬೆಂಗಳೂರು:** ಕಾರ್ಮಿಕರ ಕಲ್ಯಾಣಕ್ಕಾಗಿ ಕಾರ್ಮಿಕ ಇಲಾಖೆಯು 4 ಮಸೂದೆಗಳನ್ನು ಈಗಾಗಲೇ ಜಾರಿಗೊಳಿಸಿದ್ದು, ಇದರೊಂದಿಗೆ ಇನ್ನೂ 4 ಮಸೂದೆಗಳನ್ನು ಜಾರಿ ಮಾಡಲು ಉದ್ದೇಶಿಸಲಾಗಿದೆಂದು ಕಾರ್ಮಿಕ ಸಚಿವ ಸಂತೋಷ್ ಎಸ್. ಲಾಡ್ ಹೇಳಿದರು.



ಶುಕ್ರವಾರ ನಗರದ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ರಾಜ್ಯದ ವಿವಿಧ ಕೈಗಾರಿಕೆಗಳು, ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ವಿಶೇಷಚೇತನರಿಗೆ ಮೋಟಾರು ಚಾಲಿತ ತ್ರಿಚಕ್ರ ವಾಹನಗಳ ವಿತರಣಾ ಸಮಾರಂಭದಲ್ಲಿ ಮಾತನಾಡಿದ ಅವರು, ಮನೆಗೆಲಸದ ಕಾರ್ಮಿಕರು, ವಿಧವೆಯರು, ಅಂಗವಿಕಲರಿಗೆ ಸಂಬಂಧಿಸಿದ ಮಸೂದೆಗಳನ್ನು ಜಾರಿ ಮಾಡಲು ಉದ್ದೇಶಿಸಲಾಗಿದೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಸ್ವಲ್ಪಮಟ್ಟಿನ ಸುಂಕ ವಿಧಿಸಿ ಅಸಂಘಟಿತ ಕಾರ್ಮಿಕ ಕಲ್ಯಾಣಕ್ಕೆ ಬಳಸುವ ಉದ್ದೇಶವಿದೆ. ಕೋಟ್ಯಂತರ ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಹೊಸ ಮಸೂದೆಗಳನ್ನು ಸಿದ್ಧಪಡಿಸಲಾಗುತ್ತಿದೆ ಎಂದು ಹೇಳಿದರು.

ಕಳೆದ ಎರಡೂವರೆ ವರ್ಷಗಳಲ್ಲಿ ನಮ್ಮ ಕಾರ್ಮಿಕ ಇಲಾಖೆ ಹಲವಾರು ಯೋಜನೆ ಮತ್ತು ಕಾರ್ಯಕ್ರಮಗಳನ್ನು ಜಾರಿ ಮಾಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಇಲಾಖೆ ಹೊಸ-ಹೊಸ ಸೌಲಭ್ಯಗಳನ್ನು ಅನುಷ್ಠಾನ ಮಾಡಿದೆ ಎಂದರು.

ವಿಶೇಷ ಚೇತನರ ಸಮಸ್ಯೆಗಳನ್ನು, ನೋವನ್ನು ನಾನು ತೀರಾ ಹತ್ತಿರದಿಂದ ನೋಡಿದ್ದೇನೆ. ಅವರು ಬದುಕು ನಡೆಸಲು ಕಷ್ಟಪಡುವುದನ್ನು ಕಂಡಿದ್ದೇನೆ. ಇಂತಹವರಿಗೆ ಏನಾದರೂ ಸಹಾಯ ಮಾಡಬೇಕು. ಅವರ ಜೀವನಕ್ಕೆ ಊರುಗೋಲಾಗಬೇಕು ಎಂಬ ಸದುದ್ದೇಶದಿಂದ ಇಂತಹ ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ ಎಂದು ತಿಳಿಸಿದರು.

ಬಜೆಟ್‌ನಲ್ಲೂ ಹಲವು ಕಾರ್ಯಕ್ರಮಗಳಿಗೆ ಮನವಿ: ನಮ್ಮ ರಾಜ್ಯ ಸರ್ಕಾರವು ಗ್ಯಾರಂಟಿಗಳ ಮೂಲಕ ನಾಡಿನ ಕೋಟ್ಯಂತರ ಜನರಿಗೆ ನೆರವಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರಿಗೆ ಗ್ಯಾರಂಟಿಗಳು ಸಹಾಯ ಮಾಡಿವೆ. ಈ ಬಾರಿಯ ಬಜೆಟ್‌ನಲ್ಲೂ ಅಸಂಘಟಿತ ಕಾರ್ಮಿಕರಿಗೆ ಮತ್ತಷ್ಟು ಅನುಕೂಲವಾಗುವ ಕಾರ್ಯಕ್ರಮಗಳಿಗೆ ಮನವಿ ಮಾಡಿದ್ದೇವೆ ಎಂದು ನುಡಿದರು.

ಶಿವಮೊಗ್ಗ ನಿಟ್ಟೂರಿನ ಶ್ರೀ ನಾರಾಯಣ ಗುರು ಮಹಾಸಂಸ್ಥಾನದ ಶ್ರೀ ರೇಣುಕಾನಂದ ಸ್ವಾಮೀಜಿ, ಚಿತ್ರದುರ್ಗ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಹರಿಹರ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ, ಮಾದಾರ ಚೆನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿಗಳು ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಕಾರ್ಮಿಕ ಆಯುಕ್ತ ಡಾ. ಎಚ್.ಎನ್. ಗೋಪಾಲಕೃಷ್ಣ, ಕಾರ್ಮಿಕ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಸಲ್ಮಾ ಕೆ. ಫಾಹೀಂ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರವಿ ಡಿ. ಚೆನ್ನಣ್ಣನವರ್ ಇದ್ದರು.

ಕಾರ್ಮಿಕ ಇಲಾಖೆ ಕಾರ್ಮಿಕರಿಗೆ ರಕ್ಷಣೆ ನೀಡುತ್ತಿದೆ

ವಿಶೇಷ ಚೇತನರಿಗೆ ವಿವಿಧ ಸಂಸ್ಥೆಗಳ ಮೂಲಕ ತ್ರಿಚಕ್ರ ವಾಹನಗಳನ್ನು ನೀಡುವ ಮೂಲಕ ಒಳ್ಳೆಯ ಕೆಲಸ ಮಾಡಿದೆ. ಸಂತೋಷ್ ಲಾಡ್ ಅವರಿಗೆ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಅಪಾರವಾದ ಅರಿವು ಇದೆ. ಕಾರ್ಮಿಕರಿಲ್ಲದೆ ಕೆಲಸಗಳು ನಡೆಯುವುದಿಲ್ಲ. ಕಾರ್ಮಿಕ ಇಲಾಖೆಯು ಹೊಸ ಕಾನೂನುಗಳನ್ನು ಜಾರಿ ಮಾಡಿ ಕಾರ್ಮಿಕರಿಗೆ ರಕ್ಷಣೆ ಕೊಡುತ್ತಿದೆ. ಇನ್ನೂ ಜಗತ್ತಿನಾದ್ಯಂತ 130 ಕೋಟಿ, ಭಾರತದಲ್ಲಿ 2.6 ಕೋಟಿ ಹಾಗೂ ಕರ್ನಾಟಕದಲ್ಲಿ 13.2 ಲಕ್ಷ ವಿಶೇಷಚೇತನರು ಇದ್ದಾರೆ. ವಿಶೇಷಚೇತನರು ಯಾರೂ ಮಾನಸಿಕವಾಗಿ ಧೃತಿಗೆಡಬಾರದು. ರಾಜ್ಯ ಸರ್ಕಾರದಿಂದ ನಿಮಗೆ ಎಂದಿಗೂ ಬೆಂಬಲ ಇದೆ. ನಿಮ್ಮ ವಿಶ್ವಾಸ ಎಂದಿಗೂ ಕಡಿಮೆಯಾಗಬಾರದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಶೇಷಚೇತನರಿಗೆ ಹುರಿದುಂಬಿಸಿದರು.

ಕೃಷ್ಣಾ ಮೇಲ್ದಂಡೆಗೆ ಗಟ್ಟಿ ಹೋರಾಟ

ಪುಟ ೧ ➡ ನಾವೆಲ್ಲರೂ ಒಗ್ಗಟ್ಟಾಗಿ ಸಮೃದ್ಧ ಕರ್ನಾಟಕ ಕಟ್ಟೋಣ. ಕನ್ನಡಾಂಬೆಯ ಮಕ್ಕಳು ನಾವೆಲ್ಲರೂ ಒಂದಾಗೋಣ. ಸಮೃದ್ಧನಾಡು ಕಟ್ಟುವುದೇ ನನ್ನ ಕೊನೆಯ ಆಸೆ ಎಂದರು. ನನಗೀಗ 93 ವರ್ಷ. ನಾನು ಮುಂದೆ ಪ್ರಧಾನಮಂತ್ರಿಯಾಗಲ್ಲ, ಮುಖ್ಯಮಂತ್ರಿಯಾಗಲ್ಲ, ನಾನು ನನಗಾಗಿ ಇಲ್ಲಿಗೆ ಬಂದಿಲ್ಲ, ಹಿರಿಯರು ಭೀಕರ ಬರಗಾಲ ನೋಡಿದರು. ದುಡಿಯಲು ಗೋವಾ, ಮಹಾರಾಷ್ಟ್ರಕ್ಕೆ ಗುಳೇ ಹೋದರು. ಇಲ್ಲಿನ ದಾರುಣ ಪರಿಸ್ಥಿತಿ ಕಣ್ಣಾರೆ ಕಂಡಿರುವೆ. ವಿರೋಧ ಪಕ್ಷದ ನಾಯಕನಾಗಿದ್ದ ಸಂದರ್ಭದಲ್ಲಿ ಈ ಭಾಗದಲ್ಲಿ ಮೂಲೆ ಮೂಲೆ ಸುತ್ತಿದ್ದೇನೆ. ಈ ಭಾಗದಲ್ಲಿಯೇ ರೊಟ್ಟಿ, ಹೋಳಿಗೆ ತಿಂದಿರುವೆ. ದಿ.ಮೊರಾರ್ಜಿ ದೇಸಾಯಿ ಅವರು ಈ ಪಕ್ಷವನ್ನು ಬೆಳೆಸುವ ಜವಾಬ್ದಾರಿಯನ್ನು ನನ್ನ ತಲೆಗೆ ಕಟ್ಟಿದರು. ಅದನ್ನು ನಿಷ್ಠೆಯಿಂದ ನಿಭಾಯಿಸಿರುವೆ ಎಂದರು.

ಕಾಂಗ್ರೆಸ್ ಪಾಪದ ಫಲ- ನಿಖಿಲ್: ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾತನಾಡಿ, ಕಾಂಗ್ರೆಸ್ ನಡಿಗೆ- ಕೃಷ್ಣೆಯ ಕಡೆಗೆ ಎಂದು ಪಾದಯಾತ್ರೆ ಮಾಡಿ, ಲಕ್ಷ ಕೋಟಿ ರೂ. ಅನುದಾನ ನೀಡುವ ವಾಗ್ದಾನ ನೀಡಿ, ಅಧಿಕಾರಕ್ಕೆ ಬಂದ ಕಾಂಗ್ರೆಸ್ ತಾನು ನೀಡಿದ ಮಾತು ಈಡೇರಿಸಲಿಲ್ಲ. ಅಂದೇ ಯುಕೆಪಿ ಯೋಜನೆಗೆ ಆದ್ಯತೆ ನೀಡಿದ್ದರೆ ಯೋಜನಾ ವೆಚ್ಚ ಏರಿಕೆಯಾಗುತ್ತಿರಲಿಲ್ಲ, ಆದರೆ ಕಾಂಗ್ರೆಸ್ ಪಾಪದ ಫಲವಾಗಿ ಈ ಯೋಜನಾ ವೆಚ್ಚ 87 ಸಾವಿರ ಕೋಟಿ ರೂ.ಗೆ ಏರಿಕೆಯಾಗಿದೆ. ಸದ್ಯಕ್ಕಂತೂ ಗ್ಯಾರಂಟಿ ಹೆಸರಿನಲ್ಲಿ ನೀರಾವರಿ ಯೋಜನೆಗಳನ್ನೇ ಕಾಂಗ್ರೆಸ್ ಸರ್ಕಾರ ಸ್ಥಗಿತಗೊಳಿಸಿಬಿಟ್ಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ ಬಾಬು, ಶರಣಗೌಡ ಕಂದಕೂರ, ಮಾಜಿ ಸಚಿವರಾದ ಬಂಡೆಪ್ಪ ಕಾಶೆಂಪೂರ, ಆಲ್ಕೋಡ ಹನುಮಂತಪ್ಪ, ವೆಂಕಟರಾವ ನಾಡಗೌಡ, ಮಾಜಿ ಶಾಸಕ ಬಿ.ಜಿ. ಪಾಟೀಲ ಹಲಸಂಗಿ ಇದ್ದರು.

ಬಡವರ ಬದುಕು ಬೀದಿಗೆ: ಎಚ್‌ಡಿಕೆ

ಪುಟ ೧ ➡ ಸ್ಥಿತಿವಂತರು ಗ್ಯಾರಂಟಿ ಬೇಡ ಎಂದು ಬರೆದುಕೊಡುವಂತೆ ಹೇಳಲು ಸರ್ಕಾರ ಈಗ ಮುಂದಾಗಿದೆ. 2 ಸಾವಿರ ರೂ. ನೀಡಲು ಹಲವು ರೀತಿಯ ತೆರಿಗೆ ಹೊರೆ ಹೊರಿಸಿದ ರಾಜ್ಯ ಕಾಂಗ್ರೆಸ್ ಸರ್ಕಾರ ಬಡವರ ಬದುಕನ್ನು ಬೀದಿಗೆ ತಂದಿದೆ ಎಂದರು.



ಎರಡು ಬಾರಿ ಮುಖ್ಯಮಂತ್ರಿಯಾಗಿರುವ ನನಗೆ ಯಾವೊಬ್ಬ ಗುತ್ತಿಗೆದಾರನೂ ಕಮಿಷನ್ ಕೊಟ್ಟಿದ್ದೇನೆ ಎಂದು ಹೇಳುವುದಿಲ್ಲ. ಪಾರದರ್ಶಕವಾಗಿ ಗುತ್ತಿಗೆದಾರರಿಗೆ ಬಿಲ್ ನೀಡುವ ವ್ಯವಸ್ಥೆ ನನ್ನ ಅವಧಿಯಲ್ಲಿತ್ತು. ಈಗ ಕಮಿಷನ್ ದಂಧೆಯಿಂದಾಗಿ ರಾಜ್ಯದ ಜನತೆಯನ್ನು ಕಾಂಗ್ರೆಸ್ ಸರ್ಕಾರ ಲೂಟಿ ಮಾಡುತ್ತಿದೆ.

■ **ಎಚ್.ಡಿ. ಕುಮಾರಸ್ವಾಮಿ,** ಕೇಂದ್ರ ಸಚಿವ

ಬೆಂಗಳೂರು ಸೃಜನಶೀಲ ರಾಜಧಾನಿ ಆಗಲಿ: ಸಿಎಂ

ಪುಟ ೧ ➡ **ಪ್ರತಿ ಜಿಲ್ಲೆಯಿಂದ ನಾವೀನ್ಯಕಾರರು ಬರಬೇಕು:** ಬೆಂಗಳೂರಿನಾಚೆಗೂ ಅಂದರೆ, ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಕಲಬುರಗಿ ಮತ್ತು ಇತರ ಉದಯೋನ್ಮುಖ ನಗರಗಳಲ್ಲಿ ಡಿಜಿಟಲ್ ಸೃಜನಶೀಲ ಕ್ಲಸ್ಟರ್‌ಗಳನ್ನು ಉತ್ತೇಜಿಸುತ್ತಿದ್ದೇವೆ. ಮುಂದಿನ ಶ್ರೇಷ್ಠ ಗೇಮ್ ಡಿಸೈನರ್ ಅಥವಾ ವಿಎಫ್‌ಎಕ್ಸ್ ನಾವೀನ್ಯಕಾರರು ಕರ್ನಾಟಕದ ಪ್ರತಿ ಜಿಲ್ಲೆಯಿಂದಲೂ ಹೊರಹೊಮ್ಮಬೇಕೆಂದು ನಾವು ಬಯಸುತ್ತೇವೆ ಎಂದರು. ಕರ್ನಾಟಕದ ಯುವಕರು ಕೇವಲ ಉದ್ಯೋಗಾಕಾಂಕ್ಷಿಗಳಲ್ಲ, ಅವರು ಪ್ರಪಂಚಗಳ ಸೃಷ್ಟಿಕರ್ತರು. ಮುಂದಿನ 5 ವರ್ಷಗಳಲ್ಲಿ 20 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಸಾಮರ್ಥ್ಯವಿರುವ ಈ ವಲಯವು ವಿನ್ಯಾಸ, ಕೋಡಿಂಗ್, ಕಥೆ ಹೇಳುವಿಕೆ, ಸಂಗೀತ, ಮೋಷನ್ ಕ್ಯಾಪ್ಚರ್, ಎಐ ಮಾಡೆಲಿಂಗ್ ಮತ್ತು ಉತ್ಪಾದನಾ ನಿರ್ವಹಣೆಯಾದ್ಯಂತ ಉದ್ಯೋಗ ಸೃಷ್ಟಿಸುತ್ತದೆ. ಇದು ಕಲೆ, ಗಣಿತ, ಮನೋವಿಜ್ಞಾನ ಮತ್ತು ತಂತ್ರಜ್ಞಾನವನ್ನು ಸಂಯೋಜಿಸುತ್ತದೆ ಎಂದು ಸಿಎಂ ಹೆಮ್ಮೆ ವ್ಯಕ್ತಪಡಿಸಿದರು.

ಪ್ರತಿಭಾವಂತರಿಗೆ ಕರ್ನಾಟಕ ಕಾಯಕ ಭೂಮಿ: ಡಿಸಿಎಂ

ಪುಟ ೧ ➡ ಆದರೆ ಇದರ ಬಗ್ಗೆ ನಾವು 2016ರಲ್ಲಿಯೇ ನೀತಿ ರೂಪಿಸಿದ್ದೆವು. ಈ ಕ್ಷೇತ್ರದ ಬೆಳವಣಿಗೆಗೆ ಪೂರವಾಗಿ ನಮ್ಮ ಸರ್ಕಾರ ಕೆಲಸ ಮಾಡಿದೆ. ಪ್ರತಿವರ್ಷ 1.50 ಲಕ್ಷ ಯುವ ಹಾಗೂ ಪ್ರತಿಭಾವಂತ ಐಟಿ ಉದ್ಯೋಗಿಗಳು ಕರ್ನಾಟಕದಿಂದ ಹೊರಹೊಮ್ಮುತ್ತಿದ್ದಾರೆ. ಇಡೀ ಜಗತ್ತೇ ನಮ್ಮ ಕಡೆ ನೋಡುತ್ತಿದೆ. ನಮ್ಮ ರಾಜ್ಯವು ಈಗಾಗಲೇ ವಿಶ್ವಾದ ಅತ್ಯಂತ ಬಲಿಷ್ಠ ತಂತ್ರಜ್ಞಾನ ವ್ಯವಸ್ಥೆ ಹೊಂದಿರುವ ರಾಜ್ಯವಾಗಿದೆ ಎಂದು ಹೇಳಿದರು.

50,000 ವಿದ್ಯಾರ್ಥಿಗಳಿಗೆ ಎವಿಜಿಸಿ- ಎಕ್ಸ್‌ಆರ್ ತರಬೇತಿ ಗುರಿ: ಕರ್ನಾಟಕ ಚಲನಚಿತ್ರ ಉದ್ದಿಮೆ ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆದಿದೆ. ಈಗಾಗಲೇ ನಮ್ಮ ಚಲನಚಿತ್ರಗಳು ಹಾಲಿವುಡ್ ಚಿತ್ರಗಳಿಗೆ ಪ್ರತಿಸ್ಪರ್ಧಿಯಾಗಿವೆ. ಎವಿಜಿಸಿ- ಎಕ್ಸ್‌ಆರ್ ವಿಭಾಗದಲ್ಲಿ 2028ರ ವೇಳೆಗೆ ಸುಮಾರು 50 ಸಾವಿರ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ. ಸುಮಾರು ಶೇ.70ರಷ್ಟು ಉದ್ಯೋಗಿಗಳು ಸೃಜನಶೀಲ ವೃತ್ತಿಪರರಾಗಿದ್ದಾರೆ. ಈ ಮೂಲಕ, 2028ರ ವೇಳೆಗೆ 30 ಸಾವಿರಕ್ಕೂ ಹೆಚ್ಚು ಉತ್ತಮ ಗುಣಮಟ್ಟದ ಉದ್ಯೋಗ ಸೃಷ್ಟಿಸುವ ಗುರಿ ಹೊಂದಲಾಗಿದೆ ಎಂದರು.

ಭವಿಷ್ಯವನ್ನು ಗುರಿಯಲ್ಲಿಟ್ಟುಕೊಂಡು ಕರ್ನಾಟಕದಲ್ಲಿ 6.5 ಲಕ್ಷ ಉದ್ಯೋಗಿಗಳಿಗೆ 2023-2024ರಲ್ಲಿ ಎಐ ಕೌಶಲ್ಯಗಳ ಕುರಿತು ತರಬೇತಿ ನೀಡಲಾಗಿದೆ. 2022ಕ್ಕೆ ಹೋಲಿಸಿ ನೋಡಿದರೆ 2023ರಲ್ಲಿ ಎಐ ಸಂಬಂಧಿತ ತರಬೇತಿ ಚಟುವಟಿಗಳು ಶೇ.9ರಷ್ಟು ಹೆಚ್ಚಳವಾಗಿದೆ.

■ **ಡಿ.ಕೆ.ಶಿವಕುಮಾರ್,** ಡಿಸಿಎಂ

ಎಸ್‌ಐಆರ್ ಪ್ರಕ್ರಿಯೆ ಸ್ಥಗಿತಕ್ಕೆ ನೆಪ ಬೇಡ

ಪುಟ ೧ ➡ ಅರ್ಜಿದಾರರ ಪರ ಹಿರಿಯ ವಕೀಲರಾದ ಕಪಿಲ್ ಸಿಬಲ್ ಮತ್ತು ಕಲ್ಯಾಣ್ ಬ್ಯಾನರ್ಜಿ ವಾದ ಮಂಡಿಸಿದರು. ಚುನಾವಣಾ ಆಯೋಗದ ಪರ ಹಿರಿಯ ವಕೀಲ ಡಿ.ಎಸ್. ನಾಯ್ಡು ಹಾಜರಿದ್ದರು. ವಿಚಾರಣೆ ವೇಳೆ ಕಪಿಲ್ ಸಿಬಲ್ ಅವರು, ಚುನಾವಣಾ ಆಯೋಗವು ನ್ಯಾಯಾಂಗ ಅಧಿಕಾರಿಗಳಿಗೆ ಯಾವ ದಾಖಲೆಗಳನ್ನು ಸ್ವೀಕರಿಸಬೇಕು, ಯಾವುದನ್ನು ತಿರಸ್ಕರಿಸಬೇಕು ಎಂಬುದಾಗಿ ಸೂಚನೆ ನೀಡಿರುವ ತರಬೇತಿ ಮಾಡ್ಯೂಲ್ ರೂಪಿಸಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿಗಳು, ಇದು ಹೇಗೆ ಪ್ರಮುಖವಾಗುತ್ತದೆ? ಅಂತಿಮ ತೀರ್ಮಾನವನ್ನು ನ್ಯಾಯಾಂಗ ಅಧಿಕಾರಿಗಳೇ ಕೈಗೊಳ್ಳುತ್ತಾರೆ ಎಂದರು.

ನಿವಾಸ ಪ್ರಮಾಣಪತ್ರ ಸೇರಿದಂತೆ ಕೆಲವು ದಾಖಲೆಗಳನ್ನು ಸ್ವೀಕರಿಸಬಾರದು ಎಂಬ ಸೂಚನೆ ನೀಡಲಾಗಿದೆ ಎಂದು ಸಿಬಲ್ ವಾದಿಸಿದರು. ಇದಕ್ಕೆ ಪೀಠ, ದಾಖಲೆಗಳನ್ನು ಸ್ವೀಕರಿಸುವ ಅಧಿಕಾರ ಇದೆ, ಆದರೆ ಅಂತಿಮ ನಿರ್ಧಾರ ನ್ಯಾಯಾಂಗ ಅಧಿಕಾರಿಗಳದ್ದೇ ಎಂದು ತಿಳಿಸಿತು. ಸಂಪೂರ್ಣ ಪ್ರಕ್ರಿಯೆಯ ವ್ಯವಸ್ಥೆಗಳ ಬಗ್ಗೆ ಮುಖ್ಯ ನ್ಯಾಯಮೂರ್ತಿಗಳು ನಿರ್ಧರಿಸುತ್ತಾರೆ. ಸಣ್ಣಪುಟ್ಟ ನೆಪಗಳನ್ನು ಹೇಳಿ ಸಂಪೂರ್ಣ ಪ್ರಕ್ರಿಯೆ ಸ್ಥಗಿತಗೊಳಿಸಲು ಸಾಧ್ಯವಿಲ್ಲ. ಇದಕ್ಕೆ ಒಂದು ಅಂತ್ಯ ಇರಬೇಕು ಎಂದು ಪೀಠ ಖಡಕ್ ಸೂಚನೆ ನೀಡಿದೆ.

ಬಂಗಾಳ ಸರ್ಕಾರಕ್ಕೆ ಸೂಚನೆ: ಎಸ್‌ಐಆರ್ ಪ್ರಕ್ರಿಯೆಗೆ ರಾಜ್ಯದ ನ್ಯಾಯಾಂಗ ವ್ಯವಸ್ಥೆಯನ್ನೇ ಬಳಸಿಕೊಳ್ಳಲಾಗುತ್ತಿದೆ, ಆದ್ದರಿಂದ ಎಲ್ಲರೂ ಸಹಕಾರ ನೀಡಬೇಕು ಎಂದು ಪೀಠ ತಿಳಿಸಿದೆ. ರಾಜ್ಯದ ಮುಖ್ಯ ಕಾರ್ಯದರ್ಶಿಗಳು, ನ್ಯಾಯಾಂಗ ಅಧಿಕಾರಿಗಳು ಮತ್ತು ವಿಶೇಷ ವೀಕ್ಷಕರೊಂದಿಗೆ ಸಮನ್ವಯದಿಂದ ಕೆಲಸ ಮಾಡಬೇಕು ಎಂದು ನ್ಯಾಯಮೂರ್ತಿಗಳು ಸೂಚಿಸಿದರು. ನ್ಯಾಯಾಧೀಶರು ತಮ್ಮ ಕೆಲಸವನ್ನು ಶಾಂತಿಯುತವಾಗಿ ಮಾಡಲು ಅವಕಾಶ ಮಾಡಿಕೊಡಿ ಎಂದು ಹೇಳುವ ಮೂಲಕ ವಿಚಾರಣೆ ಮುಕ್ತಾಯಗೊಳಿಸಲಾಯಿತು.

ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ತರುವೆ

ಪುಟ ೧ ➡ ಈ ನಾಡು ಕಟ್ಟುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿಕೊಂಡು ಬಂದಿದ್ದು, ಮುಂದೆಯೂ ಅದನ್ನೇ ಮಾಡುತ್ತೇನೆ ಎಂದರು.

ರಾಜ್ಯದಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ: ಯಡಿಯೂರಪ್ಪ ಅವರನ್ನು ಅಭಿನಂದಿಸಿ ಮಾತನಾಡಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಜನನಾಯಕ ಯಡಿಯೂರಪ್ಪನವರ ಮಾರ್ಗದರ್ಶನದಲ್ಲಿ ಕಾಂಗ್ರೆಸ್ಸೇತರ ಸರ್ಕಾರವಾಗಿ ಬಿಜೆಪಿ ಮತ್ತೊಮ್ಮೆ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ. ಇಡೀ ದಕ್ಷಿಣ ಭಾರತದಲ್ಲಿ ಶೂನ್ಯದಲ್ಲಿದ್ದ ಬಿಜೆಪಿಯನ್ನು ಕರ್ನಾಟಕದಲ್ಲಿ ಅಧಿಕಾರಕ್ಕೆ ತರುವಲ್ಲಿ ಅವರ ಪಾತ್ರ ಮಹತ್ವದ್ದಾಗಿತ್ತು. ಅಂತಹ ಶಕ್ತಿ ಮತ್ತೊಮ್ಮೆ ಬರಲಿದೆ ಎಂದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಡಿಸಿಎಂ ಗೋವಿಂದ ಕಾರಜೋಳ, ಮಾಜಿ ಸಚಿವರಾದ ಬಿ. ಶ್ರೀರಾಮುಲು, ಸಿ.ಟಿ. ರವಿ., ಬಿ.ಸಿ. ಪಾಟೀಲ್, ಮಾಜಿ ಶಾಸಕಿ ರೂಪಾಲಿ ನಾಯ್ಕ್, ಹರತಾಳು ಹಾಲಪ್ಪ, ಸಂಸದ ಪಿ.ಸಿ. ಮೋಹನ್, ಶಾಸಕರಾದ ಎಸ್.ಎನ್. ಚೆನ್ನಬಸಪ್ಪ, ಗುರುರಾಜ ಗಂಟಿಹೊಳಿ, ಡಾ. ಧನಂಜಯ ಸರ್ಜಿ ಹಾಗೂ ವಿವಿಧ ಮಠಾಧೀಶರು, ಹಲವು ಗಣ್ಯರು ಇದ್ದರು.

ಹುದ್ದೆ ಭರ್ತಿಗೆ ರಾಜ್ಯ ಸರ್ಕಾರಕ್ಕೆ ಮನಸ್ಸಿಲ್ಲ: ಎಚ್‌ಡಿಕೆ

• **ವಿಜಯಪುರ:** ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಮನಸ್ಸು ಇಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕಿಡಿಕಾರಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಲಕ್ಷಾಂತರ ಖಾಲಿ ಹುದ್ದೆಗಳು ಇವೆ. ಆದರೆ, ಸರ್ಕಾರ ಮಾತ್ರ ವಿದ್ಯಾರ್ಥಿಗಳ ಜೊತೆಗೆ ಚೆಲ್ಲಾಟವಾಡುತ್ತಿದೆ ಎಂದರು.

ಇನ್ನು ಗ್ಯಾರಂಟಿಗಳಿಂದ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ, ಸದ್ಯ ಡಿಸಿಎಂ ಡಿ.ಕೆ.ಶಿವಕುಮಾರ ಅವರಿಗೆ ಜ್ಞಾನೋದಯ ಆಗಿದೆ. ಗ್ಯಾರಂಟಿಯಿಂದ ಸರ್ಕಾರಕ್ಕೆ ಹೊರೆ ಆಗುತ್ತಿದೆ ಎಂದಿದ್ದಾರೆ.

ಅದಕ್ಕಾಗಿ ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರ ಅಭಿವೃದ್ಧಿ ಕಡೆಗೆ ಗಮನ ಕೊಡಬೇಕು ಎಂದರು. ಅಲ್ಲದೇ, ಮುಂದಿನ ಚುನಾವಣೆ ಬಿಜೆಪಿ ಜೊತೆಗೆ ಮೈತ್ರಿಯೊಂದಿಗೆ ಚುನಾವಣೆ ಸ್ಪರ್ಧೆ ಮಾಡುತ್ತೇವೆ ಎಂದರು.

ಕೇಜ್ರಿವಾಲ್, ಸಿಸೋಡಿಯಾ ಸೇರಿ 23 ಮಂದಿ ಖುಲಾಸೆ

ಪುಟ ೧ ➡ ಸರಿಯಾದ ಕ್ರಮದಲ್ಲಿ ರೂಪಿಸಿ, ಕಾನೂನುಬದ್ಧವಾಗಿ ಜಾರಿಗೆ ತಂದಿರುವ ನೀತಿಯಿಂದ ಲಾಭ ಪಡೆಯಲು ಪ್ರಯತ್ನಿಸಿದ ಖಾಸಗಿ ವ್ಯಕ್ತಿಗಳನ್ನು ಅಪರಾಧದ ವಿಚಾರಣೆಗೆ ಗುರಿಪಡಿಸುವುದು ಸರಿಯಲ್ಲ ಎಂದು ಹೇಳಿದ್ದಾರೆ. ಸಿಬಿಐ ತನಿಖೆಯು ಮೊದಲೇ ನಿರ್ಧರಿಸಿದ ದಾರಿಯಲ್ಲಿ ನಡೆದಂತಿದೆ. ಇದೊಂದು ಕಾಲ್ಪನಿಕ ಕಥೆಯಂತೆ ಕಾಣುತ್ತಿದೆ ಎಂದು ನ್ಯಾಯಾಲಯ ಹೇಳಿದೆ. ಗೋವಾ ಚುನಾವಣೆಗೂ ಈ ನೀತಿಗೂ ಸಂಬಂಧ ಕಲ್ಪಿಸಲು ಸಿಬಿಐ ಪ್ರಯತ್ನಿಸಿದೆ. ಇದು ಕೇವಲ ಊಹೆಗಳ ಮೇಲೆ ನಿಂತಿದೆಯೇ ಹೊರತು ಸರಿಯಾದ ಕಾನೂನು ದಾಖಲೆಗಳ ಮೇಲಲ್ಲ ಎಂದು ಕೋರ್ಟ್ ಹೇಳಿದೆ.

ನಿಯಮಗಳ ಪಾಲನೆ: ಸಂಬಂಧಿತ ಸಂಸ್ಥೆಗಳ ಮೇಲಿನ ನಿರ್ಬಂಧಗಳನ್ನು ಮೀರಿರುವ ಅಥವಾ ಕ್ರಿಮಿನಲ್ ಮೊಕದ್ದಮೆ ಹೂಡಲು ಕಾರಣವಾಗುವಂತಹ ಯಾವುದೇ ನೀತಿ ಉಲ್ಲಂಘನೆ ಇಲ್ಲಿ ಕಂಡುಬಂದಿಲ್ಲ. ಲಭ್ಯವಿರುವ ದಾಖಲೆಗಳನ್ನು ನೋಡಿದರೆ, ಈ ನೀತಿಯನ್ನು ಸಾಕಷ್ಟು ಚರ್ಚೆ ಮತ್ತು ಆಲೋಚನೆ ನಡೆಸಿದ ನಂತರವೇ ರೂಪಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ ಎಂದು ನ್ಯಾಯಾಲಯ ಹೇಳಿದೆ. ಲೆಫ್ಟಿನೆಂಟ್ ಗವರ್ನರ್ ಅವರ ಸಲಹೆಗಳನ್ನು ಕೂಡ ಪಡೆದು ಈ ನೀತಿಯಲ್ಲಿ ಅಳವಡಿಸಿಕೊಳ್ಳಲಾಗಿತ್ತು. ಹಾಗಾಗಿ, ಸರಿಯಾದ ರೀತಿಯಲ್ಲಿ ಜಾರಿಗೆ ಬಂದ ನೀತಿಯಲ್ಲಿ ಅಪರಾಧ ಹುಡುಕುವುದು ಸರಿಯಲ್ಲ ಎಂದು ನ್ಯಾಯಾಧೀಶರು ಹೇಳಿದ್ದಾರೆ.

ಸಿಬಿಐ ಮೇಲ್ಮನವಿ

ಈ ತೀರ್ಪಿನ ವಿರುದ್ಧ ದಿಲ್ಲಿ ಹೈಕೋರ್ಟ್‌ನಲ್ಲಿ ತಕ್ಷಣವೇ ಮೇಲ್ಮನವಿ ಸಲ್ಲಿಸುವುದಾಗಿ ಸಿಬಿಐ ತಿಳಿಸಿದೆ. ತನಿಖೆಯ ಹಲವು ಪ್ರಮುಖ ಅಂಶಗಳನ್ನು ವಿಚಾರಣಾ ನ್ಯಾಯಾಲಯ ಸರಿಯಾಗಿ ಗಮನಿಸಿಲ್ಲ ಎಂದು ಸಿಬಿಐ ವಕ್ತಾರರು ಹೇಳಿದ್ದಾರೆ.

ಕೇಜ್ರಿವಾಲ್ ಕಣ್ಣೀರು

ತೀರ್ಪಿನ ನಂತರ ಮಾತನಾಡಿದ ಕೇಜ್ರಿವಾಲ್, ಇದು ಸ್ವತಂತ್ರ ಭಾರತದ ಇತಿಹಾಸದಲ್ಲೇ ಅತಿದೊಡ್ಡ ರಾಜಕೀಯ ಪಿತೂರಿ



ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದೇ ವೇಳೆ ಮಾಧ್ಯಮದ ಮುಂದೆ ಕಣ್ಣೀರು ಹಾಕಿ ನೋವು ತೋಡಿಕೊಂಡಿದ್ದಾರೆ. ಆರು ತಿಂಗಳು ಜೈಲಿನಲ್ಲಿದ್ದ ಕೇಜ್ರಿವಾಲ್ ಮತ್ತು ಸುಮಾರು ಎರಡು ವರ್ಷ ಜೈಲು ಶಿಕ್ಷೆ ಅನುಭವಿಸಿದ ಸಿಸೋಡಿಯಾ, ಈ ತೀರ್ಪು ದೊಡ್ಡ ನಿರಾಳತೆ ನೀಡಿದೆ. ತಾವು ಪ್ರಾಮಾಣಿಕರು ಎಂಬುದು ಈ ಮೂಲಕ ಸಾಬೀತಾಗಿದೆ ಎಂದು ಎಎಪಿ ನಾಯಕರು ಸಂಭ್ರಮಿಸಿದ್ದಾರೆ.

ಇಂದಿನಿಂದ ಪಿಯುಸಿ ಪರೀಕ್ಷೆ, ಮೊಬೈಲ್ ನಿಷೇಧ

• **ಬೆಂಗಳೂರು:** ಪ್ರಸಕ್ತ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-1 ರಾಜ್ಯಾದ್ಯಂತ ಶನಿವಾರದಿಂದ (ಫೆ.28) ಆರಂಭವಾಗಲಿದೆ. ಪರೀಕ್ಷೆಗೆ ಒಟ್ಟು 7,10,363 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ವೆಬ್ ಕಾಸ್ಟಿಂಗ್ ಮುಖಾಂತರ ಪರೀಕ್ಷೆಯನ್ನು ವೀಕ್ಷಿಸಲಾಗುತ್ತದೆ.

ಒಟ್ಟು 6,46,801 ಹೊಸಬರು, 50,540 ಪುನಾವರ್ತಿತ ಮತ್ತು 13,022 ಖಾಸಗಿ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಪರೀಕ್ಷೆಗೆ ಒಟ್ಟು 5,174 ಶಾಲೆ, ಕಾಲೇಜುಗಳು ನೋಂದಾಯಿಸಿದ್ದು, 1,217 ಪರೀಕ್ಷಾ ಕೇಂದ್ರಗಳನ್ನು ಸಜ್ಜುಗೊಳಿಸಲಾಗಿದೆ ಜತೆಗೆ ಪ್ರತಿ ಪರೀಕ್ಷಾ ಕೇಂದ್ರಗಳಲ್ಲೂ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ.

ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ನಿಷೇಧಿತ ಪ್ರದೇಶ ಎಂದು ಘೋಷಿಸಲಾಗಿದ್ದು, ಆಯಾ ಜಿಲ್ಲೆಗಳ ಎಸ್‌ಪಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮುಂಜಾಗ್ರತಾ ಕ್ರಮ ವಹಿಸಿದ್ದಾರೆ. ಪರೀಕ್ಷಾ ಕೇಂದ್ರದ ಒಳಗೆ ಮೊಬೈಲ್, ವಿದ್ಯುನ್ಮಾನ ಉಪಕರಣಗಳನ್ನು ನಿಷೇಧಿಸಲಾಗಿದೆ.

ಉಚಿತ ಸಾರಿಗೆ ಸೌಲಭ್ಯ: ವಿದ್ಯಾರ್ಥಿಗಳು ಯಾವುದೇ ತೊಂದರೆಯಿಲ್ಲದೆ ಪರೀಕ್ಷಾ ಕೇಂದ್ರಗಳನ್ನು ತಲುಪುವ ಉದ್ದೇಶದಿಂದ ವಿದ್ಯಾರ್ಥಿಗಳಿಗೆ ಪರೀಕ್ಷಾ ಅವಧಿಯಲ್ಲಿ ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಹಾಲ್ ಟಿಕೆಟ್‌ನ್ನು ತೋರಿಸಿ ಉಚಿತವಾಗಿ ಪ್ರಯಾಣಿಸಬಹುದು.

ಪರೀಕ್ಷಾ ಕೇಂದ್ರಗಳಲ್ಲಿ ಭದ್ರತೆ ಕ್ರಮ

ರಾಜ್ಯಾದ್ಯಂತ ಫೆ. 28 ರಿಂದ ದ್ವಿತೀಯ ಪಿಯುಸಿ ಪರೀಕ್ಷೆಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಗಿಯುವವರೆಗೆ (ಏ.2) ಪರೀಕ್ಷಾ ಕೇಂದ್ರಗಳನ್ನು ಸುರಕ್ಷಿತಗೊಳಿಸುವ ನಿಟ್ಟಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ನಿಯೋಜಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಭದ್ರತೆಯನ್ನು ಹೆಚ್ಚಿಸಲಾಗಿದ್ದು, ಎಲ್ಲ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಸೆಕ್ಷನ್ 163 ಬಿಎನ್‌ಎಸ್‌ಎಸ್ ಜಾರಿಗೊಳಿಸಿ, 200 ಮೀ. ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಯಾರೂ ಸೇರದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಇಲಾಖೆ ಮಹಾನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಪರೀಕ್ಷೆ ಬರೆಯುವಾಗ ಯಾವುದೇ ರೀತಿಯಲ್ಲಿ ಭಯಪಡದೆ ಧೈರ್ಯದಿಂದ ಪರೀಕ್ಷೆ ಎದುರಿಸಿ. ಸಾಮಾಜಿಕ ಜಾಲತಾಣಗಳಲ್ಲಿ ಬಂದ ವದಂತಿಗಳಿಗೆ ಕಿವಿಗೊಡಬೇಡಿ. ಅಂತಹವರಿಗೆ ಇಲಾಖೆಯಿಂದ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು. ಮಕ್ಕಳಿಗೆ ತೊಂದರೆಯಾಗದಂತೆ ಕಾರ್ಯನಿರ್ವಹಿಸಲು ಶಿಕ್ಷಣ ಇಲಾಖೆ ಸಿದ್ಧವಿದೆ.

■ **ಮಧು ಬಂಗಾರಪ್ಪ,** ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ

ಕಿರು ಸುದ್ದಿ

ನಾಳೆ ಬಾಗಲಕೋಟೆ ಹೋಳಿ ಹಲಗೆ ಮೇಳ

• **ಬೆಂಗಳೂರು:** ಉತ್ತರ ಕರ್ನಾಟಕದ ವೈಭವಮಯ ಸಂಸ್ಕೃತಿ ಪರಂಪರೆಯನ್ನು ಪ್ರತಿಧ್ವನಿಸುವ ಭವ್ಯ ಬಾಗಲಕೋಟೆ ಹೋಳಿ ಹಲಗೆ ಮೇಳ -2026 ಮಾ.1 ರಂದು ಸಂಜೆ 5.30ಕ್ಕೆ ರಾಜಾಜಿನಗರದ ಕೆಎಲ್‌ಇ ಕಾಲೇಜ್ ಮೈದಾನದಲ್ಲಿ ನಡೆಯಲಿದೆ.ಚಾಲುಕ್ಯ ಸಾಂಸ್ಕೃತಿಕ ಸಂಘದ ವತಿಯಿಂದ ಆಯೋಜಿಸುತ್ತಿರುವ ಈ ಮಹೋತ್ಸವದಲ್ಲಿ ಬಾಗಲಕೋಟೆಯ ಪ್ರಸಿದ್ಧ ಹಲಗೆ ಮೇಳ ಜನಮನ ಸೆಳೆಯಲಿದೆ. ಹಲಗೆ ಮೇಳವು ಉತ್ತರ ಕರ್ನಾಟಕದ ಸಾಂಪ್ರದಾಯಿಕ ಜಾನಪದ ಕಲೆಯ ಪ್ರತೀಕವಾಗಿದ್ದು, ಅದರ ಘನಘನಿಸುವ ತಾಳಮದ್ದಳೆಗಳ ನಾದವು ಸಂಭ್ರಮ, ಏಕತೆ ಮತ್ತು ಸಂಸ್ಕೃತಿಯ ಸಂಕೇತವಾಗಿದೆ.ಹೋಳಿ ಹಬ್ಬದ ಅಂಗವಾಗಿ ನಡೆಯುವ ಈ ಮೇಳದಲ್ಲಿ ಹಲಗೆ, ಶೆಹನಾಯ್ ಸೇರಿದಂತೆ ವಿವಿಧ ಜಾನಪದ ವಾದ್ಯಗಳ ಸಮ್ಮೇಳನದಿಂದ ಉತ್ಸಾಹಭರಿತ ವಾತಾವರಣ ನಿರ್ಮಾಣವಾಗಲಿದೆ. ಬಾಗಲಕೋಟೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಂದ ನೂರಾರು ಕಲಾವಿದರು ಭಾಗವಹಿಸಲಿದ್ದು, ಇದು ಬೆಂಗಳೂರಿನಲ್ಲಿ ನಡೆಯುವ ಅತ್ಯಂತ ದೊಡ್ಡ ಹಲಗೆ ಮೇಳಗಳಲ್ಲಿ ಒಂದಾಗಲಿದೆ. ಎಲ್ಲಾ ಸಮುದಾಯದ ಜನರನ್ನು ಒಂದೇ ವೇದಿಕೆಯಲ್ಲಿ ಸೇರಿಸಿ, ಬಣ್ಣಗಳ ಹಬ್ಬವನ್ನು ಸಂಸ್ಕೃತಿ, ಸಂಗೀತ ಮತ್ತು ಏಕತೆಯೊಂದಿಗೆ ಆಚರಿಸುವ ಉದ್ದೇಶ ಹೊಂದಿದೆ. ನಮ್ಮ ನಾಡಿನ ಜಾನಪದ ಪರಂಪರೆಯನ್ನು ಉಳಿಸಿ ಬೆಳೆಸುವ ದಿಟ್ಟ ಹೆಜ್ಜೆಯಾಗಿ ಈ ಕಾರ್ಯಕ್ರಮ ರೂಪುಗೊಂಡಿದೆ.

ಪಿಸ್ತೂಲ್, 50 ಜೀವಂತ ಗುಂಡು ವಶ

ಅಕ್ರಮ ಶಸ್ತ್ರಾಸ್ತ್ರ ಸರಬರಾಜು ಜಾಲ ಪತ್ತೆ

• **ಬೆಂಗಳೂರು:** ನಗರದಲ್ಲಿ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುತ್ತಿದ್ದ ಜಾಲವನ್ನು ಭೇದಿಸಿರುವ ಸಿಸಿಬಿ ಪೊಲೀಸರು, ಇಬ್ಬರು ಆರೋಪಿಗಳನ್ನು ಬಂಧಿಸಿ ಅವರಿಂದ ಒಂದು ಕಂಟ್ರಿಮೇಡ್ ಪಿಸ್ತೂಲ್ ಹಾಗೂ 50 ಜೀವಂತ ಗುಂಡುಗಳನ್ನು ವಶಪಡಿಸಿಕೊಂಡಿದ್ದಾರೆ.ಟುಪಲ್ ಮೂಲದ ಜಾವೇದ್ (19) ಬೆಂಗಳೂರು ಮೂಲದ ಸೈಯದ್ ಮಸೂದ್(26) ಬಂಧಿತರು.

ಈ ಇಬ್ಬರು ವ್ಯಕ್ತಿಗಳು ಪರವಾನಗಿ ಇಲ್ಲದೆ ನಿಷೇಧಿತ ಶಸ್ತ್ರಾಸ್ತ್ರಗಳನ್ನು ತಂದು ತಮ್ಮ ವಶದಲ್ಲಿಟ್ಟುಕೊಂಡಿರುವ ಬಗ್ಗೆ ಸಿಸಿಬಿ ಪೊಲೀಸರಿಗೆ ಖಚಿತ ಮಾಹಿತಿ ಲಭಿಸಿತ್ತು. ಮಾಹಿತಿ ಅನ್ವಯ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗಿತ್ತು.ಬಂಧಿತ ಆರೋಪಿಗಳಲ್ಲಿ ಒಬ್ಬ ಬೆಂಗಳೂರಿನ ವ್ಯಕ್ತಿಯಾಗಿದ್ದು, ಈತ ಹೊರ ರಾಜ್ಯದಿಂದ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ತರಿಸಿಕೊಳ್ಳುತ್ತಿದ್ದನು. ಮತ್ತೊಬ್ಬ ಆರೋಪಿಯು ಹೊರ ರಾಜ್ಯದವನಾಗಿದ್ದು, ಶಸ್ತ್ರಾಸ್ತ್ರ ಸರಬರಾಜು ಮಾಡುವ ಜಾಲದಲ್ಲಿ ತೊಡಗಿದ್ದನು. ಪೊಲೀಸರು ಈ ಇಬ್ಬರನ್ನು ಬಂಧಿಸಿ ಅವರಿಂದ 0.32 ಎಂ.ಎಂ. ಪಿಸ್ತೂಲ್ ಮತ್ತು ಮಾರಕವಾದ 50 ಜೀವಂತ ಗುಂಡುಗಳನ್ನು ಜಪ್ತಿ ಮಾಡಿದ್ದಾರೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಸದ್ಯ ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಹಾಪುರುಷರಿಗೆ ಗೌರವ ಸಲ್ಲಿಸುವುದು ಎಲ್ಲರ ಕರ್ತವ್ಯ: ವಿಶ್ವನಾಥ್


• **ಯಲಹಂಕ:** ಭಾರತದಲ್ಲಿ ಸಾವಿರಾರು ಮಹಾಪುರುಷರು ಜನ್ಮತಾಳಿ, ಸತ್ಸಂದೇಶ ಸಾರಿರುವುದರಿಂದಲೇ ಇನ್ನೂ ನಮ್ಮ ದೇಶ, ಹಿಂದುಧರ್ಮ ಮತ್ತು ಸಂಸ್ಕೃತಿ ಉಳಿದುಕೊಂಡಿದ್ದು, ಅವರಿಗೆ ಗೌರವ ಸಲ್ಲಿಸಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು. ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಂಡು ಬದುಕಿನಲ್ಲಿ ಮುಂದೆ ಸಾಗಬೇಕು ಎಂದು ಶಾಸಕ ಎಸ್.ಆರ್. ವಿಶ್ವನಾಥ್ ಹೇಳಿದರು.

ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ಸಂಘ, ರೆಡ್ಡಿ ಜನಸಂಘ, ರೆಡ್ ಕ್ರಾಸ್ ಸಂಸ್ಥೆಯ ಸಹಯೋಗದಲ್ಲಿ ಮಹಾಯೋಗಿ ವೇಮನರ 614ನೇ ಜಯಂತ್ಯೋತ್ಸವದ ಪ್ರಯುಕ್ತ ಯಲಹಂಕ ಉಪನಗರದಲ್ಲಿ ಆಯೋಜಿಸಿದ್ದ ಬೃಹತ್ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಮಹಾಯೋಗಿ ವೇಮನ ಮಹರ್ಷಿಗಳು ಸಮಾಜಕ್ಕೆ ನೀಡಿದ ತತ್ವ, ಸಂದೇಶ ಹಾಗೂ ವಿಚಾರಧಾರೆಗಳು ಎಂದೆಂದಿಗೂ ಪ್ರಸ್ತುತವಾಗಿವೆ. ಇಂದು ಜನಸಂಖ್ಯೆ ಹೆಚ್ಚಾಗುತ್ತಿದ್ದು, ರಕ್ತದಾನಿಗಳ ಸಂಖ್ಯೆ ಕಡಿಮೆಯಾಗುತ್ತಿರುವ ಪರಿಣಾಮ ಬ್ಲಡ್ ಬ್ಯಾಂಕ್ ಗಳಲ್ಲಿ ರಕ್ತದ ಕೊರತೆಯಿದೆ. ಆಪತ್ಕಾಲದಲ್ಲಿ ಮನುಷ್ಯನ ಪ್ರಾಣ ಉಳಿಸಲು ರಕ್ತ ಬಹಳ ಅವಶ್ಯಕ. ಈ ದಿಸೆಯಲ್ಲಿ ವೇಮನ ಮಹರ್ಷಿ ಅವರ ಹೆಸರಿನಲ್ಲಿ ಪ್ರತಿವರ್ಷ ರಕ್ತದಾನ ಶಿಬಿರ ಆಯೋಜಿಸಿದ್ದು, ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುತ್ತಿದ್ದಾರೆ ಎಂದರು.

ಶಿಬಿರದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡಿದರು. ದಾನಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ರಕ್ತದಾನ ಶಿಬಿರದಲ್ಲಿ ಒಟ್ಟು 501 ಯೂನಿಟ್‌ಗಳಷ್ಟು ರಕ್ತ ಸಂಗ್ರಹಿಸುವ ಮೂಲಕ ಹೊಸ ದಾಖಲೆ ಸೃಷ್ಟಿಯಾಯಿತು. ಕಾರ್ಯಕ್ರಮದಲ್ಲಿ ಸಹಕಾರಿ ಸಂಘದ ಅಧ್ಯಕ್ಷ ಎಸ್.ಎನ್. ಸಂಪತ್‌ಕುಮಾರ್ ಇತರರಿದ್ದರು.

ರಾಜಕೀಯ ಜಿದ್ದಾಜಿದ್ದಿಗೆ ಕಾರಣವಾದ ಕೈಗಾರಿಕಾ ಸ್ಥಾಪನೆಯ ಚರ್ಚೆ

ಕೈಗಾರಿಕಾ ಸ್ಥಾಪನೆ ಭರವಸೆಗಷ್ಟೇ ಸೀಮಿತ



ದಿಗಂತ ವಿಶೇಷ

• **ಮಂಡ್ಯ:** ಜಿಲ್ಲೆಯ ನಿರುದ್ಯೋಗಿ ಯುವಕರು ಉದ್ಯೋಗಕ್ಕಾಗಿ ಮೈಸೂರು-ಬೆಂಗಳೂರಿನಂತಹ ಮಹಾನಗರಗಳನ್ನು ಅವಲಂಬಿಸಿರುವ ಹೊತ್ತಿನಲ್ಲಿ ಕೈಗಾರಿಕಾ ಸ್ಥಾಪನೆ ಎಂಬ ಭರವಸೆ ಇದುವರೆಗೂ ರಾಜಕೀಯ ಚರ್ಚೆ ಮತ್ತು ಪ್ರತಿಷ್ಠೆಗಷ್ಟೇ ಸೀಮಿತವಾಗಿದೆ.

ಬಹುಕಾಲದಿಂದಲೂ ಮಂಡ್ಯ ಜಿಲ್ಲೆಯಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗಬೇಕು. ನಿರುದ್ಯೋಗ ನಿವಾರಣೆಯಾಗಬೇಕೆಂಬ ಕೂಗು ದಟ್ಟವಾಗಿ ಕೇಳಿಬರುತ್ತಲೇ ಇತ್ತು. ಅದಕ್ಕೆ ಸ್ಪಂದನೆ ಎಂಬಂತೆ ಆರಂಭಗೊಂಡ ಕೈಗಾರಿಕಾ ಸ್ಥಾಪನೆಯ ಚರ್ಚೆ ಈಗ ಎರಡೂ ಪಕ್ಷಗಳ ರಾಜಕೀಯ ಜಿದ್ದಾಜಿದ್ದಿಗೆ ಕಾರಣವಾಗಿದೆ.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಜಿಲ್ಲೆಗೆ ಬಂದಾಗಲೆಲ್ಲಾ ಕೈಗಾರಿಕಾ ಸ್ಥಾಪನೆಗೆ ತಾವು ಆಸಕ್ತಿ ಹೊಂದಿರುವುದಾಗಿ ಘೋಷಿಸಿಕೊಂಡು ರಾಜ್ಯ ಸರ್ಕಾರ ಮತ್ತು ಜಿಲ್ಲೆಯ ಕಾಂಗ್ರೆಸ್ ನಾಯಕರು ಅಗತ್ಯ ಸ್ಥಳಾವಕಾಶ ನೀಡುತ್ತಿಲ್ಲ, ಆರೋಪವನ್ನು ಪದೇ ಪದೇ ಮಾಡುತ್ತಿದ್ದರು. ಇದರ ಬೆನ್ನಲ್ಲೇ ಜಿಲ್ಲೆಯ ಕಾಂಗ್ರೆಸ್ ಸಚಿವರು ಮತ್ತು ಶಾಸಕರು ಭೂಮಿ ನೀಡುವುದಾಗಿ ಸವಾಲು ಹಾಕಿದ್ದರು.

ಸಂಸದರಾಗಿ ಮತ್ತು ಕೇಂದ್ರ ಸಚಿವರಾಗಿ ಎರಡು ವರ್ಷದ ಬಳಿಕ ಎಚ್.ಡಿ.ಕುಮಾರಸ್ವಾಮಿ ಅವರು ಅಮೆರಿಕ ಮೂಲದ ಸ್ಯಾನ್ಸನ್ ಗ್ರೂಪ್ ಕಂಪನಿ ಸೆಮಿಕಂಡಕ್ಟರ್ ಫ್ಯಾಬ್ರಿಕೇಷನ್ ಯೂನಿಟ್ ಸ್ಥಾಪನೆಗೆ ನೂರು ಎಕರೆ ಭೂಮಿ ಕೋರಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆಯುವ ಮೂಲಕ ಕೈಗಾರಿಕೆ ಸ್ಥಾಪನೆಯ ಆಸೆ ಚಿಗುರೊಡೆಯುವಂತೆ ಮಾಡಿದರು.

ಚಿಗುರೊಡೆದ ಆಸೆ ಕಮರಿತು: ಇದಕ್ಕಾಗಿ ಮಂಡ್ಯ ತಾಲೂಕಿನ ಮುದ್ದನಘಟ್ಟ ಮತ್ತು ಹೆಗ್ಗಡಹಳ್ಳಿ ಬಳಿ 105 ಎಕರೆ ಸರ್ಕಾರಿ ಜಮೀನನ್ನು ನೀಡುವುದಕ್ಕೆ ಜಿಲ್ಲಾಡಳಿತ ಮುಂದಾಯಿತು. ಅಲ್ಲಿಗೇ ಅಮೆರಿಕಾ ಮೂಲದ ಸ್ಯಾನ್ಸನ್ ಕಂಪನಿಯ ಸೆಮಿಕಂಡಕ್ಟರ್ ಯೋಜನೆ ವಿಚಾರ ಸಮಾಪ್ತಿಗೊಂಡಿತು.

ಅನಂತರದಲ್ಲಿ ವರಸೆ ಬದಲಿಸಿದ ಹೆಚ್.ಡಿ.ಕುಮಾರಸ್ವಾಮಿ ಅವರು ಜಿಲ್ಲೆಯಲ್ಲಿ 500 ಕೋಟಿ ರು. ವೆಚ್ಚದಲ್ಲಿ ಆಟೋಮೋಟಿವ್ ರೀಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ ವತಿಯಿಂದ ಸಂಶೋಧನಾ ಕೇಂದ್ರವನ್ನು ತೆರೆಯುವುದಾಗಿ ಘೋಷಿಸಿದರು. ಅದಕ್ಕೂ ನೂರು ಎಕರೆ ಭೂಮಿ ಅಗತ್ಯವಿದ್ದು, ಅದಷ್ಟು ಬೇಗ ಭೂಮಿಯನ್ನು ಹಂಚಿಕೆ ಮಾಡುವಂತೆ ಸರ್ಕಾರದೆದುರು ಕೋರಿಕೆ ಇಟ್ಟರು. ಆ ಪ್ರಕ್ರಿಯೆ ಕೂಡ ಮುಂದುವರೆಯಲೇ ಇಲ್ಲ. ಹೀಗಾಗಿ ಜಿಲ್ಲೆಯೊಳಗೆ ಕೈಗಾರಿಕೆಗಳ ಸ್ಥಾಪನೆ, ಉದ್ಯೋಗ ಸೃಷ್ಟಿ ಎಲ್ಲವೂ ಈಗಲೂ ಕನಸಾಗಿಯೇ ಉಳಿದುಕೊಂಡಿದೆ.

ಯಾವುದೂ ಕಾರ್ಯಗತಗೊಂಡಿಲ್ಲ: ಇನ್ನು ಕುಮಾರಸ್ವಾಮಿ ಅವರಿಗೆ ಸೆಡ್ಡು ಹೊಡೆಯುವಂತೆ ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರು ನಾಗಮಂಗಲ ತಾಲೂಕಿನ ಹೊಣಕೆರೆ ಹೋಬಳಿ ಮಣ್ಣಹಳ್ಳಿ ಗ್ರಾಮದಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡಲು ಸರ್ವೆ ನಂ.298ರಲ್ಲಿರುವ 28.20 ಎಕರೆ ಭೂಮಿಯನ್ನು ಮಂಜೂರು ಮಾಡುವಂತೆ ಸರ್ಕಾರದೆದುರು ಪ್ರಸ್ತಾವನೆ ಸಲ್ಲಿಸಿರುವುದಾಗಿ ಘೋಷಿಸಿದರು. ಈ ಮಾತು ಹೇಳಿ 2 ತಿಂಗಳಾದರೂ ಅದು ಕೂಡ ಕಾರ್ಯಗತಗೊಳ್ಳದೆ ನಿಂತಲ್ಲೇ ನಿಂತಿದೆ

ಶಾಸಕ ರವಿಕುಮಾರ್ ಕೂಡ ಅಮೆರಿಕದ ಸಾಫ್ಟ್‌ವೇರ್ ಕಂಪನಿ ಸ್ವರ್ಣಸಂದ್ರದಲ್ಲಿ ಕಾರ್ಯಾರಂಭ ಮಾಡಲಿದೆ. ಮುಂದಿನ ಆರು ತಿಂಗಳಲ್ಲಿ ಜಿಲ್ಲೆಯ ವಿವಿಧೆಡೆ ಗಾರ್ಮೆಂಟ್ಸ್ ಕಂಪನಿಗಳು ತೆರೆಯಲಿದ್ದು 20 ಸಾವಿರ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಹೊಸ ಭರವಸೆ ನೀಡಿದ್ದಾರೆ. ಹೀಗೆ ಕೈಗಾರಿಕೆ ಸ್ಥಾಪನೆ, ಕಂಪನಿ ಗಳ ಕಾರ್ಯಾರಂಭ, ಉದ್ಯೋಗ ಸೃಷ್ಟಿ ಸಂಬಂಧಿಸಿದಂತೆ ರಾಜಕೀಯವಾಗಿ ಚರ್ಚೆಗಳು ಬಿರುಸಾಗಿ ನಡೆಯುತ್ತಿರುವಷ್ಟೇ ವೇಗದಲ್ಲಿ ಕಾರ್ಯಗತವಾಗುತ್ತಿಲ್ಲ, ಇದು ಜಿಲ್ಲೆಯ ನಿರುದ್ಯೋಗಿಗಳಲ್ಲಿ ತೀರಾ ಬೇಸರವನ್ನು ಉಂಟುಮಾಡಿದೆ.

ಕಣ್ಣೊರೆಸುವ ತಂತ್ರವೇ?: ಕೈಗಾರಿಕೆಗಳು, ಕಾರ್ಖಾನೆಗಳ ಸ್ಥಾಪನೆಗೆ ಜಿಲ್ಲೆಯಲ್ಲಿ ಪೂರಕ ಅವಕಾಶಗಳಿವೆ. ಆದರೆ, ಜಿಲ್ಲೆಯ ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗವಕಾಶಗಳನ್ನು ಸೃಷ್ಟಿಸುವುದಕ್ಕೆ ಪೂರಕವಾದ ಕಂಪನಿಗಳನ್ನು ಮನವೊಲಿಸಿ ತರುವಲ್ಲಿ ಕಾಂಗ್ರೆಸ್-ಜೆಡಿಎಸ್ ಪಕ್ಷದ ನಾಯಕರು ವೈಫಲ್ಯ ಸಾಧಿಸುತ್ತಿದ್ದಾರೆ. ಇದು ಸಾಮಾನ್ಯ ಜನರು ಹಾಗೂ ನಿರುದ್ಯೋಗಿ ಯುವಜನರ ಕಣ್ಣೊರೆಸುವ ತಂತ್ರದ ಭಾಗವಾಗಿ ಕಂಡುಬರುತ್ತಿದೆ ಎಂದು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿರುವ ಮಾತಾಗಿದೆ.

ಜಿಲ್ಲೆಯೊಳಗೆ ಯಾವ ವಿದ್ಯಾರ್ಹತೆ ಹೊಂದಿರುವ ಯುವಕ-ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರ ವಿದ್ಯಾರ್ಹತೆಗೆ ಅನುಗುಣವಾಗಿ ಯಾವ ಕಂಪನಿಗಳನ್ನು ಇಲ್ಲಿಗೆ ತರುವುದಕ್ಕೆ ಸಾಧ್ಯವಿದೆ. ಅವುಗಳನ್ನು ಎಲ್ಲಿ ಸ್ಥಾಪನೆ ಮಾಡಿದರೆ ಅನುಕೂಲವಾಗಲಿದೆ ಎಂಬೆಲ್ಲಾ ಅಂಶಗಳ ಕುರಿತಂತೆ ಸರ್ವೆ ನಡೆಸಿ ಕಾರ್ಯಗತಕ್ಕೆ ಪ್ರಯತ್ನ ನಡೆಸಬೇಕು. ಆದರೆ, ಈ ನಿಟ್ಟಿನಲ್ಲಿ ರಾಜಕೀಯ ನಾಯಕರು ಪ್ರಯತ್ನ ನಡೆಸಿದಂತೆ ಕಂಡುಬರುತ್ತಿಲ್ಲ.

ಜಿಲ್ಲೆಯ ನಿರುದ್ಯೋಗ ಸಮಸ್ಯೆಗೆ ಪರಿಹಾರ ದೊರಕಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರಲ್ಲಿ ಇಂತಹ ಆಲೋಚನೆಗಳು ಮೂಡಬೇಕು. ಅದನ್ನು ಬಿಟ್ಟು ಕೈಗಾರಿಕಾ ಸ್ಥಾಪನೆ ಮತ್ತು ಸ್ಥಳಾವಕಾಶ ಕಲ್ಪಿಸುವುದು ಕೇವಲ ಸವಾಲು ಮತ್ತು ಪ್ರತಿ ಸವಾಲಿಗೆ ಸೀಮಿತವಾದರೆ ಆಸಕ್ತ ವಿದ್ಯಾವಂತ ಯುವಜನರಲ್ಲಿ ಉದ್ಯೋಗ ಸ್ಥಾಪನೆಯ ಕನಸು ಕೈಗೂಡಲು ಇನ್ನಷ್ಟು ವಿಳಂಬವಾಗುವುದು ನಿಚ್ಚಳವಾಗಿದೆ.

ಕಾರ್ಖಾನೆಗಳ ಸ್ಥಾಪನೆ ಸಾರ್ಥಕಗೊಳ್ಳಲಿ

ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ, ಡಿಪ್ಲೋಮಾ, ಐಟಿಐ, ಇಂಜಿನಿಯರಿಂಗ್ ವ್ಯಾಸಂಗ ಮಾಡಿರುವ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಜಿಲ್ಲೆಯಲ್ಲಿ ಉದ್ಯೋಗವಿಲ್ಲದೆ ಅಲೆದಾಡುತ್ತಿದ್ದಾರೆ. ಜಿಲ್ಲೆಯೊಳಗೆ ಸ್ಥಾಪನೆಯಾಗುವ ಕೈಗಾರಿಕೆ, ಕಾರ್ಖಾನೆಗಳು ಸ್ಥಳೀಯರನ್ನು ಸೆಕ್ಯೂರಿಟಿ ಗಾರ್ಡ್, ಅಡುಗೆ ಕೆಲಸ, ಸ್ವಚ್ಛತಾ ಕೆಲಸ, ಡ್ರೈವರ್, ಜವಾನ ಹುದ್ದೆಗಳಿಗೆ ನೇಮಿಸಿಕೊಂಡರೆ ಪ್ರಯೋಜನವೇನು. ಇದಕ್ಕೆ ಬದಲು ಕಾರು ಉತ್ಪಾದನಾ ಘಟಕಗಳು, ಇ-ಮೋಟಾರ್ಸ್ ಬಿಡಿಭಾಗಗಳ ಉತ್ಪಾದನಾ ಘಟಕಗಳು, ಆಟೋ ಇಂಜಿನಿಯರಿಂಗ್ ವರ್ಕ್ಸ್ ಸೇರಿದಂತೆ ಹಲವು ಕಂಪನಿಗಳು ಬಂದರೆ ಕೌಶಲ್ಯಕ್ಕೆ ತಕ್ಕಂತೆ ಕೆಲಸ, ಉತ್ತಮ ವೇತನ ದೊರೆತು ಸ್ಥಳೀಯರಿಗೇ ಹೆಚ್ಚು ಉದ್ಯೋಗವಕಾಶಗಳು ಲಭಿಸುತ್ತದೆ. ಇದರಿಂದ ಕೈಗಾರಿಕೆ, ಕಾರ್ಖಾನೆಗಳ ಸ್ಥಾಪನೆ ಉದ್ದೇಶ ಸಾರ್ಥಕತೆ ಪಡೆಯುತ್ತದೆ.

ಎಂತಹ ಉದ್ಯೋಗಗಳು ಜಿಲ್ಲೆಗೆ ಅವಶ್ಯ

ಅಮೆರಿಕ ಮೂಲದ ಸ್ಯಾನ್ಸನ್ ಗ್ರೂಪ್ ಕಂಪನಿಯ ಸೆಮಿಕಂಡಕ್ಟರ್ ಫ್ಯಾಬ್ರಿಕೇಷನ್ ಯೂನಿಟ್‌ನಲ್ಲಿ ಸ್ಥಳೀಯರಿಗೆ ಉದ್ಯೋಗ ಸಿಗಲಿದೆಯೇ. ಅದಕ್ಕೆ ಬೇಕಾದ ವಿದ್ಯಾರ್ಹತೆ ಏನು, ಎಷ್ಟು ಸಂಖ್ಯೆಯ ಉದ್ಯೋಗವಕಾಶಗಳು ದೊರಕಲಿವೆ ಎಂಬ ಮಾಹಿತಿಯೇ ಇಲ್ಲ, ಇದಲ್ಲದೆ ಎಆರ್‌ಐ ಸಂಶೋಧನಾ ಕೇಂದ್ರದಲ್ಲಿ ಸ್ಥಳೀಯ ಯುವಜನರು ಕಾರ್ಯನಿರ್ವಹಿಸಲು ಅವಕಾಶಗಳಿವೆಯೇ. ಅಲ್ಲಿ ಕೆಲಸ ಮಾಡುವುದಕ್ಕೆ ಬೇಕಾದ ವಿದ್ಯಾರ್ಹತೆ ಏನು, ಸೃಷ್ಟಿಯಾಗಬಹುದಾದ ಉದ್ಯೋಗಗಳು ಹೀಗೊಂದು ನಿಖರವಾದ ಮಾಹಿತಿ, ಪಕ್ಷನೋಟವೇ ಇಲ್ಲದೆ ದೊಡ್ಡ ದೊಡ್ಡ ಕಂಪನಿಗಳನ್ನು ತರುವುದಾಗಿ ನಂಬಿಸುತ್ತಾ ವಿನಾಕಾರಣ ಕಾಲಹರಣ ಮಾಡುತ್ತಿದ್ದಾರೆ. ದೊಡ್ಡ ಕೈಗಾರಿಕೆ, ಕಾರ್ಖಾನೆಗಳನ್ನು ತಂದು ಸ್ಥಳೀಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗವಕಾಶಗಳು ದೊರಕದಿದ್ದ ಮೇಲೆ ಅವುಗಳನ್ನು ಇಲ್ಲಿಗೆ ತಂದು ಏನು ಪ್ರಯೋಜನ ಎನ್ನುವುದು ಯುವಜನರು, ಸಾರ್ವಜನಿಕರ ಪ್ರಶ್ನೆಯಾಗಿದೆ.

ಕಿರಿಯ ವಯಸ್ಸಿಗೆ ಮಣಿಕಂಠ ನ್ಯಾಯಾಧೀಶ

▸ ನಂದನ್‌ಪುಟ್ಟಣ್ಣ



ದಿಗಂತ ವಿಶೇಷ

• **ಚನ್ನರಾಯಪಟ್ಟಣ:** ಬಡತನದಲ್ಲಿ ಹುಟ್ಟಿದ್ದು, ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಛಲ ದೊಂದಿಗೆ ವಿದ್ಯಾಭ್ಯಾಸ ಮಾಡಿದ ಗ್ರಾಮೀಣ ಪ್ರತಿಭೆಯೊಬ್ಬರು ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆ ಯಾಗಿದ್ದಾರೆ.

ತಾಲೂಕಿನ ಮಾಳೇನಹಳ್ಳಿ ಗ್ರಾಮದ ಮಣಿಕಂಠ ಎಂಬುವವರು ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾಗಿದ್ದಾರೆ. ಬಡತನದ ಹಿನ್ನೆಲೆಯಿಂದ ಬಂದ ಮಣಿ ಕಂಠ, ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ, ಬಳಿಕ ಚನ್ನರಾಯಪಟ್ಟಣದಲ್ಲಿ ಪ್ರೌಢಶಾಲೆ ಮತ್ತು ಪದವಿ ಶಿಕ್ಷಣ ಪಡೆದು, ಹಾಸನ ನಗರದ ಎಂ. ಕೃಷ್ಣ ಕಾಲೇಜಿನಲ್ಲಿ ಕಾನೂನು ಪದವಿ ಪಡೆದಿದ್ದಾರೆ.

2021ರಲ್ಲಿ ಕೆ.ಎನ್.ಸುಂದರ್‌ರಾಜ್ ಎಂಬುವವರ ಕಚೇರಿಯಲ್ಲಿ ಜೂನಿಯರ್ ಆಗಿ ವಕೀಲ ವೃತ್ತಿ ಪ್ರಾರಂಭಿಸಿ, 2 ವರ್ಷದ ಬಳಿಕ ಸ್ವಂತ ಕಚೇರಿ ತೆರೆದಿದ್ದಾರೆ. ವಕೀಲರಾದ ಬಳಿಕ ಜಡ್ಜ್ ಆಗಬೇಕೆಂದು ಮೊದಲ ಪ್ರಯತ್ನ ನಡೆಸಿದಾಗ ಕೇವಲ ಒಂದೆರಡು ಅಂಕಗಳಿಂದ ಕನಸು ಕೈತಪ್ಪಿತು. ಆದರೂ ಛಲಬಿಡದ ಮಣಿಕಂಠ, 2ನೇ ಪ್ರಯತ್ನದಲ್ಲಿ ಸಕ್ಸಸ್ ಆಗಿ ಕೇವಲ ಐದು ವರ್ಷಗಳ ಅಂತರದಲ್ಲಿ ನೂತನ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾಗಿದ್ದಾರೆ.

ವಕೀಲ ಶಿವಕುಮಾರ್ ಎಂಬುವವರು ಮಾತನಾಡಿ, ಮಣಿಕಂಠ ನನ್ನ ಸ್ನೇಹಿತ. ನಾನು ಪಕ್ಕದ ಮಂಡ್ಯ ಜಿಲ್ಲೆಯ ಕೆ. ಆರ್. ಪೇಟೆ ತಾಲೂಕಿನಲ್ಲಿ ವಕೀಲವೃತ್ತಿಯತರಬೇತಿ ಪಡೆಯುವಸಂದರ್ಭದಲ್ಲಿ ನನಗೆ ಕೆಲವು ಕ್ಲಿಷ್ಟಕರ ವಿಷಯ ಬಂದಾಗ, ನನಗೆ ದೂರವಾಣಿಯ ಮೂಲಕವೇ ಎಲ್ಲವನ್ನು ತಿಳಿಸಿ ಕೊಡುತ್ತಿದ್ದರು. ನನ್ನೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಮುಂದಿನ ದಿನದಲ್ಲಿ ಅವರು ನೊಂದವರ ಬದುಕಿಗೆ ಆಶಾಕಿರಣವಾಗಲಿದ್ದಾರೆ. ಅವರ ವೃತ್ತಿ ಬದುಕು ಮತ್ತಷ್ಟು ಉಜ್ವಲವಾಗಲಿ' ಎಂದು ಹರಸಿದರು.

ಜೂನಿಯರ್ ಆಗಿ ಕೇವಲ ಮೂರು ವರ್ಷದಲ್ಲಿಯೇ ಸ್ವಂತ ಕಚೇರಿ ಮಾಡಿಕೊಂಡು ಬಂದಾಗ, ನೀನು ನನಗೆ ಗುರುದಕ್ಷಿಣೆ ಕೊಡುವುದಾದರೇ ಏನನ್ನು ಕೊಡುತ್ತೀಯಾ ಎಂದು ತಮಾಷೆಗೆ ಕೇಳುತ್ತಿದ್ದೆ. ಆತ ನಿಜವಾಗಿಯೂ ನ್ಯಾಯಾಧೀಶರಾಗಿ ಹೋಗುತ್ತಿರುವುದು ನನಗೆ ಮತ್ತು ತಾಲೂಕಿಗೆ ಖುಷಿ ತಂದಿದೆ ಎನ್ನುತ್ತಾರೆ ಮಣಿಕಂಠನ ಸೀನಿಯರ್ ವಕೀಲ ಕೆ. ಎನ್. ಸುಂದರ್ ರಾಜ್ ಮಾತಾಗಿದೆ.

ಮಾ.14ರಂದು ಜಗದ್ಗುರು ರೇಣುಕಾಚಾರ್ಯ ಜಯಂತಿ



• **ದಾಬಸ್‌ಪೇಟೆ:** ಮಾ. 14ರಂದು ಶಿವಗಂಗಾ ಮೇಲಣ ಗವಿಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಹಮ್ಮಿಕೊಳ್ಳಲಾಗಿದೆ ಎಂದು ಶಿವಗಂಗೆಯ ಮೇಲಣ ಗವಿಮಠ ಪೀಠಾಧ್ಯಕ್ಷರಾದ ಶ್ರೀ ಮಲಯ ಶಾಂತಮುನಿ ಶಿವಾಚಾರ್ಯ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಆಚರಣೆಯ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿ, ಶ್ರೀ ಜಗದ್ಗುರು ರೇಣುಕಾಚಾರ್ಯ ಸ್ವಾಮೀಜಿಗಳಿಗೂ ಈ ಮಠಕ್ಕೂ ನಿಕಟಪೂರ್ವ ಸಂಬಂಧ ಇದೆ. ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು ಅವರ ನೆನಪಿಗಾಗಿ ಆಚರಣೆ ಮಾಡಿಕೊಂಡು ಬರುತ್ತಿದ್ದೇವೆ ಎಂದು ಹೇಳಿದರು.

ಮೇಲಣ ಗವಿಮಠ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಅವರಿಗೆ ದೀಕ್ಷೆ ಮಾಡಿದ ಸ್ಥಳವು ಕೂಡ. ಜಗದ್ಗುರು ರೇಣುಕಾಚಾರ್ಯರು ತಮ್ಮ ದೈವ ಶಕ್ತಿ ಮತ್ತು ಯೋಗ ದಂಡದಿಂದ ಶಿವಗಂಗೆಯ ತಪ್ಪಲಲ್ಲಿ ಒಳಕಲ್ಲು ತೀರ್ಥ ಸ್ಥಾಪನೆ ಮಾಡಿದರು. ಇಲ್ಲಿ ವರ್ಷದ 12 ತಿಂಗಳು ದೈವ ಶಕ್ತಿಯ ತೀರ್ಥವನ್ನು ನೀವು ಕಾಣಬಹುದು.

ವೀರಶೈವ ಮತ್ತು ಪುರಾಣವನ್ನು ರಚಿಸಿದ ಗುಬ್ಬಿ ಮಲ್ಲಣ್ಣ ಆರ್ಯರು ಮೇಲಣ ಗವಿಮಠದ ಇತಿಹಾಸ ಕುರಿತು ಸುಮಾರು 900 ಪುಟಗಳ ಬೃಹತ್ ಗ್ರಂಥ ಬರೆದಿದ್ದಾರೆ. ಇದೇ ಸಂದರ್ಭದಲ್ಲಿ ಚಲನಚಿತ್ರ ನಟ ದೊಡ್ಡಣ್ಣನವರಿಗೆ ಶಿವಗಂಗಾ ಸಿರಿ ಪ್ರಶಸ್ತಿ ಪ್ರಧಾನ ಮಾಡಲಾಗುವುದು.

ಈ ಕಾರ್ಯಕ್ರಮಕ್ಕೆ ಸಿದ್ಧಗಂಗಾ ಮಠದ ಮಠಾಧೀಶರಾದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿಗಳು, ಕಾಡು ಸಿದ್ದೇಶ್ವರ ಮಠದ ಶ್ರೀ ಕರಿ ವೃಷಭ ದೇಶಿಕೇಂದ್ರ, ಶಿವಯೋಗಿ, ಸ್ವರ ದೋಣೂರು ಜಾನುಕೋಟೆ ಮಠ ಕೊಟ್ಟೂರಿನ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಅಖಿಲ ಕರ್ನಾಟಕ ವೀರಶೈವ ಮಹಾಸಭಾ ಅಧ್ಯಕ್ಷ ಈಶ್ವರ್ ಖಂಡ್ರೆ, ಸಂಸದ ಡಾ. ಕೆ.ಸುಧಾಕರ್, ಶಾಸಕ ಎನ್.ಶ್ರೀನಿವಾಸ್ ಆಗಮಿಸುತ್ತಿದ್ದಾರೆ.

ಈ ಸಂದರ್ಭದಲ್ಲಿ ಭಕ್ತರಾದ ನಾಗೇಂದ್ರ, ಪ್ರಸಾದ್, ಉಮಾಶಂಕರ್, ಹೊನ್ನಗಂಗಶೆಟ್ಟಿ, ಶಿವಗಂಗೆ ಗ್ರಾಪಂ ಮಾಜಿ ಅಧ್ಯಕ್ಷ ಶ್ರೀನಿವಾಸ್, ಗ್ರಾಪಂ ಮಾಜಿ ಅಧ್ಯಕ್ಷ ಕೆ.ಬಿ. ಪ್ರಭುದೇವ್, ಪಂಚಾಕ್ಷರಿ, ವಕೀಲ ಎಸ್.ವೈ. ಮಹೇಶ್, ರೇಣುಕಾ ಪ್ರಸಾದ್, ಪ್ರಕಾಶ್ ಎಲ್‌ಐಸಿ, ಮುಪ್ಪಿನ ಸ್ವಾಮಿ, ಕಂಬಾಳು ಲಕ್ಷ್ಮೀಶ್ (ಬಾಬು), ಬಾಲಚಂದ್ರ, ಬಾಬು ಹೊಸಹಳ್ಳಿ, ಶಿವಗಂಗೆ ಜಗದೀಶ್, ಮಂಜಣ್ಣ, ಬಸವರಾಜ್, ಮುತ್ತುರಾಜ್, ನಾಗರಾಜ್, ಶಿಕ್ಷಕ ವೀರೇಶ್, ನಿರಂಜನಮೂರ್ತಿ ಕಂಬಾಳು, ಮುಖ್ಯಶಿಕ್ಷಕ ವಿಜಯ್ ಕುಮಾರ್, ಶಿಕ್ಷಕ ರವಿಕಿರಣ್, ಜ್ಞಾನೇಶ್ ಇನ್ನು ಅನೇಕ ಭಕ್ತರಿದ್ದರು.

ಮನೆಕೆಲಸದಾಕೆ ಸೆರೆ: ಬೆಳ್ಳಿ ವಸ್ತುಗಳು ವಶ



• **ಬೆಂಗಳೂರು:** ಕೆಲಸ ಮಾಡುತ್ತಿದ್ದ ಮನೆಯಲ್ಲೇ ಕಳ್ಳತನ ಮಾಡಿದ್ದ ಮಹಿಳೆಯೊಬ್ಬಳನ್ನು ಜೀವನ್ ಬೀಮಾ ನಗರ ಠಾಣೆ ಪೊಲೀಸರು ಬಂಧಿಸಿ, 35 ಲಕ್ಷ ರೂ. ಮೌಲ್ಯದ ಬೆಳ್ಳಿಯ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ದಾವಣಗೆರೆ ಮೂಲದ ಚೈತ್ರಾ, ಬಂಧಿತ ಆರೋಪಿ. ನಗರದ ಪ್ರತಿಷ್ಠಿತ ಆಸ್ಪತ್ರೆಯೊಂದರ ಸರ್ಜನ್ ಒಬ್ಬರ ಮನೆಯಲ್ಲಿ ಕಳೆದ ಒಂದೂವರೆ ವರ್ಷದಿಂದ ಚೈತ್ರಾ, ಮನೆ ಕೆಲಸ ಮಾಡಿಕೊಂಡಿದ್ದಳು. ಮಾಲೀಕರು ಮನೆಯ ಮಹಡಿಯ ಮೇಲಿದ್ದ ಕೊಠಡಿಯೊಂದರಲ್ಲಿ ಬೆಳ್ಳಿಯ ಪಾತ್ರೆ ಹಾಗೂ ಪೂಜಾ ಸಾಮಗ್ರಿಗಳನ್ನು ಸಂಗ್ರಹಿಸಿಟ್ಟಿದ್ದರು. ಆ ಸಾಮಗ್ರಿಗಳನ್ನು ಕೇವಲ ಹಬ್ಬದ ಸಂದರ್ಭಗಳಲ್ಲಿ ಮಾತ್ರ ಹೊರತೆಗೆಯಲಾಗುತ್ತಿತ್ತು. ಇದನ್ನು ಗಮನಿಸಿದ ಚೈತ್ರಾ, ಮಾಲೀಕರಿಗೆ ತಿಳಿಯದಂತೆ ಮಹಡಿಯಲ್ಲಿದ್ದ ಬೆಳ್ಳಿ ಸಾಮಗ್ರಿಗಳನ್ನು ಒಂದೊಂದಾಗಿ ಕದಿಯಲು ಆರಂಭಿಸಿದ್ದಳು.

ಕಳೆದ ಒಂದು ವರ್ಷದಿಂದ ಹಂತ ಹಂತವಾಗಿ ಒಟ್ಟು 12.5 ಕೆ.ಜಿ ತೂಕದ ಬೆಳ್ಳಿ ಪಾತ್ರೆಗಳನ್ನು ಕಳವು ಮಾಡಿದ್ದಳು. ದೀಪಾವಳಿ ಹಬ್ಬಕ್ಕೂ ಕೆಲವು ದಿನಗಳ ಮೊದಲೇ ಚೈತ್ರಾ, ಇದ್ದಕ್ಕಿದ್ದಂತೆ ಕೆಲಸ ಬಿಟ್ಟಿದ್ದಳು. ಹಬ್ಬದ ಪೂಜೆಗಾಗಿ ಮನೆಯವರು ಬೆಳ್ಳಿ ಪಾತ್ರೆಗಳಿದ್ದ ಚೀಲವನ್ನು ತೆರೆದಾಗ ಕಳ್ಳತನದ ಕೃತ್ಯ ಬಯಲಾಗಿತ್ತು. ತಕ್ಷಣ ಮಾಲೀಕರು ಪೊಲೀಸರಿಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡಾಗ, ಕೆಲಸ ಬಿಟ್ಟಿದ್ದ ಮಹಿಳೆಯ ಮೇಲೆ ಅನುಮಾನ ವ್ಯಕ್ತಪಡಿಸಿ, ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಅಸಲಿ ಸತ್ಯ ಹೊರಬಂದಿದೆ. ಪತಿ ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿದ್ದುದರಿಂದ ಚಿಕಿತ್ಸೆಗೆ ಹೆಚ್ಚಿನ ಹಣದ ಅವಶ್ಯಕತೆ ಇತ್ತು. ಆದ್ದರಿಂದ ಬೆಳ್ಳಿ ಸಾಮಗ್ರಿಗಳನ್ನು ಕದ್ದು ಅಡವಿಟ್ಟು ಹಣ ಪಡೆದಿರುವುದಾಗಿ ಒಪ್ಪಿಕೊಂಡಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ. ಬಂಧಿತಳಿಂದ ಸದ್ಯ ಸುಮಾರು 35 ಲಕ್ಷ ರೂಪಾಯಿ ಮೌಲ್ಯದ 12.5 ಕೆಜಿ ಬೆಳ್ಳಿ ಸಾಮಗ್ರಿಗಳು ಹಾಗೂ 7.5 ಗ್ರಾಂ ಚಿನ್ನಾಭರಣವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಜಿ.ಇ. ಹೆಲ್ತ್ ಕೇರ್ ಸಂಸ್ಥೆಯ ವಿವಾಸ್ವನ್ ಶಾಸ್ತ್ರಿ ಅಭಿಪ್ರಾಯ

ತಂತ್ರಜ್ಞಾನದಿಂದ ದೇಶದ ಪ್ರಗತಿ ಸಾಧ್ಯ



• **ಯಲಹಂಕ:** ತಂತ್ರಜ್ಞಾನ ಮತ್ತು ಸಂಸ್ಕೃತಿ ಅವಿನಾಭಾವದಿಂದ ಒಟ್ಟಿಗೆ ಸಾಗಿದಾಗ ಮಾತ್ರ, ಭಾರತದಂತಹ ರಾಷ್ಟ್ರವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಲು ಸಾಧ್ಯ ಎಂದು ಜಿ.ಇ. ಹೆಲ್ತ್ ಕೇರ್ ಸಂಸ್ಥೆಯ ವಿವಾಸ್ವನ್ ಶಾಸ್ತ್ರಿ ಅಭಿಪ್ರಾಯಪಟ್ಟರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ರಾಷ್ಟ್ರಮಟ್ಟದ ತಂತ್ರಜ್ಞಾನ ಮತ್ತು ಸಂಸ್ಕೃತಿ ಉತ್ಸವ ಅನಾದ್ಯಂತ 2026ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಸ್ತುತವಾಗಿ ಭಾರತ ಜಗತ್ತಿನ ತಂತ್ರಜ್ಞಾನದ ಶಕ್ತಿ ಕೇಂದ್ರವಾಗುವತ್ತ ದಾಪುಗಾಲಿಡುತ್ತಿದೆ. ಇದಕ್ಕೆ ಸಂಸ್ಕೃತಿಯ ನಿರಂತರ ಸಾಂಗತ್ಯ ಹಾಗೂ ಸ್ವದೇಶೀಕರಣ ಪ್ರಕ್ರಿಯೆ ಕಾರಣ. ನಮ್ಮ ನೆಲದ ಔದಾರ್ಯತೆ, ಪರಂಪರಾಗತ ಅರಿವು ಮತ್ತು ಬಹುತ್ವದ ಪ್ರತಿಪಾದನೆ ಭಾರತದ ತಂತ್ರಜ್ಞಾನದ ಆವಿಷ್ಕಾರ ಗಳಲ್ಲಿ ಬಿಂಬಿತವಾಗುತ್ತಿರುವುದರಿಂದ ನಮ್ಮ ದೇಶ ಜಾಗತಿಕ ಮಟ್ಟದಲ್ಲಿ ವಿಭಿನ್ನ ಹಾಗೂ ವಿಶಿಷ್ಟ ಸ್ಥಾನವನ್ನು ಗಳಿಸಿದೆ ಎಂದರು.

ಪ್ರತಿಯೊಬ್ಬ ತಂತ್ರಜ್ಞಾನದ ವಿದ್ಯಾರ್ಥಿ ದಿಸೆಯಲ್ಲಿ ತನ್ನ ಶಕ್ತಿ ಮತ್ತು ಪ್ರತಿಭೆಯ ಬಗ್ಗೆ ಅರಿತುಕೊಂಡು, ತನ್ಮಯತೆಯಿಂದ ಗಮನ ಕೇಂದ್ರೀಕರಿಸಿ ವ್ಯಾಸಂಗ ಮಾಡಬೇಕು. ಜತೆಗೆ ಕೌಶಲ್ಯತೆಯನ್ನು ಮೈಗೂಡಿಸಿಕೊಳ್ಳುವತ್ತ ಗಮನ ಹರಿಸ ಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನಿಟ್ಟೆ ಶಿಕ್ಷಣ ಸಂಸ್ಥೆಯ ಟ್ರಸ್ಟಿ ರೋಹಿತ್ ಪೂಂಜ, ಪ್ರಾಂಶುಪಾಲ ಡಾ. ಎಚ್.ಸಿ.ನಾಗರಾಜ್, ನಟ ವಿರಾಟ್, ವಿದ್ಯಾರ್ಥಿ ಕಲ್ಯಾಣ ವಿಭಾಗದ ಮುಖ್ಯಸ್ಥ ಡಾ.ಹಿತ ಡಿ.ಶೆಟ್ಟಿ, ಡಾ. ರಾಮಚಂದ್ರ ಎ.ಸಿ., ಪಠ್ಯಕ್ರಮ ಅಭಿವೃದ್ಧಿ ಮತ್ತು ಶೈಕ್ಷಣಿಕ ನಿರ್ದೇಶಕ ಡಾ.ಜೆ. ಸುಧೀಂದ್ರ ರೆಡ್ಡಿ, ಉತ್ಸವದ ವಿದ್ಯಾರ್ಥಿ ಸಂಯೋಜಕ ಅನುಶ್ರವ ಸೇರಿದಂತೆ ಇತರರಿದ್ದರು.

ಎಸ್‌ಐಎಟಿಐ ಅಧ್ಯಕ್ಷ ಪ್ರೊ.ಡಾ. ಸಿ.ಜಿ.ಕೃಷ್ಣದಾಸ್ ನಾಯರ್ ಅಭಿಪ್ರಾಯ

ಆತ್ಮನಿರ್ಭರ ಭಾರತಕ್ಕಾಗಿ ಎಲ್ಲರ ಪ್ರೋತ್ಸಾಹ ಅಗತ್ಯ



• **ಬೆಂಗಳೂರು:** ಪ್ರಸಕ್ತ ಸನ್ನಿವೇಶದಲ್ಲಿ ಪಾಲುದಾರಿಕೆ ಯಿಂದ ಬೆಳವಣಿಗೆ ಸಾಧ್ಯವಾಗುತ್ತದೆ, ಬದಲು ಸ್ಪರ್ಧೆಯಿಂದಲ್ಲ, ಆತ್ಮನಿರ್ಭರ ಭಾರತಕ್ಕಾಗಿ ಸಹಕಾರವನ್ನು ಪ್ರೋತ್ಸಾಹಿಸಬೇಕು ಎಂದು ಭಾರತೀಯ ಏರೋಸ್ಪೇಸ್ ತಂತ್ರಜ್ಞಾನ ಮತ್ತು ಕೈಗಾರಿಕೆಗಳ ಸಂಘ (ಎಸ್‌ಐಎಟಿಐ) ಅಧ್ಯಕ್ಷ ಪ್ರೊ.ಡಾ. ಸಿ.ಜಿ.ಕೃಷ್ಣದಾಸ್ ನಾಯರ್ ಅಭಿಪ್ರಾಯಪಟ್ಟಿದ್ದಾರೆ.

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್)ನ ಕಾರ್ಪೊರೇಟ್ ಕಚೇರಿಯಲ್ಲಿ ಶುಕ್ರವಾರ ನಡೆದ ತಮ್ಮ ಇಂಡಿಯನ್ ಏರ್‌ಕ್ರಾಫ್ಟ್ ಇಂಡಸ್ಟ್ರಿ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯದ ಕೈಗಾರಿಕೆಗಳು, ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಸ್‌ಎಂಇಗಳು), ಆರ್‌ಟಿಡಿ ಮತ್ತು ಶೈಕ್ಷಣಿಕ ಸಂಸ್ಥೆಗಳು, ಗುಣಮಟ್ಟ ಮತ್ತು ನಿಯಂತ್ರಕ ಸಂಸ್ಥೆಗಳು ಹಾಗೂ ಅಂತಾರಾಷ್ಟ್ರೀಯ ಸಹಕಾರದ ನಡುವಿನ ಪಾಲುದಾರಿಕೆಯು ಏರೋಸ್ಪೇಸ್ ಮತ್ತು ರಕ್ಷಣಾ ಉದ್ಯಮದ ಮೂಲಸೌಕರ್ಯ ಮತ್ತು ಸಾಮರ್ಥ್ಯಗಳ ನಿರಂತರ ಬೆಳವಣಿಗೆ ಸಾಧಿಸಲಿದೆ. ಭಾರತೀಯ ವಿಮಾನ ಕೈಗಾರಿಕೆಗಳ ಪುನರುಜ್ಜೀವನ, ವಿನ್ಯಾಸ, ಉತ್ಪಾದನೆ ಮತ್ತು ತಂತ್ರಜ್ಞಾನ, ಸಾರ್ವಜನಿಕ ಮತ್ತು ಖಾಸಗಿ ವಲಯದ ಕೈಗಾರಿಕೆಗಳು, ಎಸ್‌ಎಂಇಗಳು, ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಶೈಕ್ಷಣಿಕ ಸಂಸ್ಥೆಗಳ ಸಹಭಾಗಿತ್ವವೂ ಮೂಲಸೌಕರ್ಯ ಮತ್ತು ಸಾಮರ್ಥ್ಯ ಹೆಚ್ಚಿಸುತ್ತದೆ ಎಂದು ವಿವರಿಸಿದರು.

> ಎಚ್‌ಎಎಲ್ ಮತ್ತು ಇತರೆ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಕೌಶಲಾಭಿವೃದ್ಧಿಯ ಅಗತ್ಯ ಬಹಳಷ್ಟಿದೆ. ಇದು ಕೇವಲ ರಕ್ಷಣಾ ಉದ್ಯಮ ವಲಯ ಮಾತ್ರವಲ್ಲದೇ ನಮ್ಮ ಪಾಲುದಾರರ ಅಭಿವೃದ್ಧಿಗೂ ಇದು ಅನಿವಾರ್ಯವಾಗಿದೆ.
> ■ ಪ್ರೊ. ಡಾ. ಸಿ.ಜಿ.ಕೃಷ್ಣದಾಸ್ ನಾಯರ್, ಅಧ್ಯಕ್ಷ, ಎಸ್‌ಐಎಟಿಐ

ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯದ ಕೈಗಾರಿಕೆಗಳ ನಡುವೆ ಸ್ಪರ್ಧೆಯನ್ನು ಪರಿಚಯಿಸಲಾಗುತ್ತದೆ ಎಂದು ಕೆಲವರು ಭಯಪಟ್ಟರೆ; ಭಾರತೀಯ ಪೂರೈಕೆ ಸರಪಳಿ ಎಸ್‌ಎಂಇಗಳು, ವಿದೇಶಿ ಪೂರೈಕೆದಾರರು ಮತ್ತು ಹಲವರು ಇದು ಸಕಾರಾತ್ಮಕ ವಿಧಾನವಲ್ಲ ಎಂದು ಭಾವಿಸುತ್ತಾರೆ. ಈ ಭಯ ಮತ್ತು ಸಲಹೆಗಳನ್ನು ಈ ಪುಸ್ತಕದಲ್ಲಿ ಚರ್ಚಿಸಿದ್ದೇನೆ. ಆತ್ಮನಿರ್ಭರ ಭಾರತದ ರಾಷ್ಟ್ರೀಯ ಧ್ಯೇಯವನ್ನು ಸಾಧಿಸಲು ಭಾರತೀಯ ಕೈಗಾರಿಕೆಗಳ ನಡುವೆ ಮತ್ತು ಅಂತಾರಾಷ್ಟ್ರೀಯ ಕೈಗಾರಿಕೆಗಳೊಂದಿಗಿನ ಸಹಕಾರ ಮುಂದುವರಿಯುವ ಮಾರ್ಗವನ್ನು ಪ್ರಸ್ತುತಪಡಿಸಿದ್ದೇನೆ ಎಂದು ತಿಳಿಸಿದರು. ಸುಧಾರಿತ ಸಲಕರಣೆಗಳು, ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದು, ಹೆಲಿಕಾಪ್ಟರ್‌ಗಳು ಮತ್ತು ಯುದ್ಧ ವಿಮಾನಗಳಲ್ಲಿ ವಿಶ್ವ ದರ್ಜೆಯ ವಿನ್ಯಾಸ ಸಾಮರ್ಥ್ಯವನ್ನು ನಿರ್ಮಿಸುವುದು, ದೇಶದ ಸಾರ್ವಜನಿಕ ಮತ್ತು ಖಾಸಗಿ ಕೈಗಾರಿಕೆಗಳು, ರಾಷ್ಟ್ರೀಯ ಪ್ರಯೋಗಾಲಯಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳ ಸಾಮರ್ಥ್ಯಗಳ ಮಧ್ಯೆ ನೆಟ್‌ವರ್ಕಿಂಗ್ ಸ್ಥಾಪಿಸಿರುವುದು ದೊಡ್ಡ ಸಾಧನೆಯಾಗಿದೆ. ಇದರಿಂದ ಭಾರತವು ಏರೋಸ್ಪೇಸ್ ಉದ್ಯಮ ವಲಯದಲ್ಲಿ ಜಾಗತಿಕವಾಗಿ ಗುರುತಿಸಿಕೊಂಡಿದೆ ಎಂದು ಹೇಳಿದರು.

ಪುಸ್ತಕ ಬಿಡುಗಡೆ ಮಾಡಿದ ಎಚ್‌ಎಎಲ್‌ನ ನಿರ್ದೇಶಕ (ಮಾನವ ಸಂಪನ್ಮೂಲ) ಎಂ.ಜಿ. ಬಾಲಸುಬ್ರಹ್ಮಣ್ಯ ಮಾತನಾಡಿ, ಏರೋಸ್ಪೇಸ್ ಮತ್ತು ರಕ್ಷಣಾ ಉದ್ಯಮ ವಲಯವು ಬೇರೆ ಉದ್ಯಮಗಳಿಂದ ಭಿನ್ನವಾಗಿದೆ. ಈ ಪುಸ್ತಕವು ಏರೋಸ್ಪೇಸ್ ಉದ್ಯಮ ವಲಯದ ಸವಾಲುಗಳು, ತಾಂತ್ರಿಕ ಸಾಧನೆಯ ಮೈಲಿಗಲ್ಲುಗಳ ಸಹಿತ ಹಿಂದಿನ ಪಯಣವನ್ನು ದಾಖಲೀಕರಿಸುವುದು ಮಾತ್ರವಲ್ಲದೇ ಭವಿಷ್ಯದಲ್ಲಿನ ಸವಾಲುಗಳು, ಕ್ರಾಂತಿಕಾರಿ ಬೆಳವಣಿಗೆಗಳ ಕುರಿತು ದೃಷ್ಟಿ ನೀಡುತ್ತದೆ ಎಂದು ತಿಳಿಸಿದರು. ಎಚ್‌ಎಎಲ್‌ನ ಮಾಜಿ ಅಧ್ಯಕ್ಷರಾದ ಅಶೋಕ್ ಬವೇಜ, ಸುವರ್ಣರಾಜ್ ಮಾತನಾಡಿದರು.

ಗ್ರಾಮೀಣ ಪ್ರದೇಶ, ದುರ್ಗಮ ಪ್ರವಾಸಿ ತಾಣಗಳಿಗೆ ಸೌಲಭ್ಯ

ವೈಫೈ ಸಂವಹನ ಯೋಜನೆ ಲೋಕಾರ್ಪಣೆ



• **ಬೆಂಗಳೂರು:** ದೇಶದ ತೀರಾ ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ದುರ್ಗಮ ಪ್ರವಾಸಿ ತಾಣಗಳಲ್ಲಿ ಜಿಎನ್‌ಎ ಸಂಸ್ಥೆಯಿಂದ ವೈಫೈ ಸಂವಹನ ಕಲ್ಪಿಸುವ ವಿಶೇಷ ಯೋಜನೆಯನ್ನು ಲೋಕಾರ್ಪಣೆಗೊಳಿಸಲಾಯಿತು.

ಗುರುವಾರ ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಡಾ. ವಿಶಾಲ್‌ರಾವ್ ಮತ್ತು ಕೇಂದ್ರ ಮಾಜಿ ಸಚಿವ ಅನಂತಕುಮಾರ್ ಹೆಗಡೆ ಅವರು ಈ ವಿಶೇಷ ಯೋಜನೆಯನ್ನು ಲೋಕಾರ್ಪಣೆಗೊಳಿಸಿದರು.

ಬಳಿಕ ಮಾತನಾಡಿದ ಡಾ. ವಿಶಾಲ್‌ರಾವ್ ಈ ವಿಶೇಷ ಯೋಜನೆಯಿಂದ ಈವರೆಗೂ ಇಂಟರ್ನೆಟ್ ಮತ್ತು ಇತರ ಸಂವಹನ ಸಂಪರ್ಕದ ಸಿಗ್ನಲ್ ತಲುಪದೇ ಉಳಿದಿದ್ದ ದೂರದ ದುರ್ಗಮ ಪ್ರದೇಶಗಳಿಗೂ ಸುಲಭವಾಗಿ ಸಂಪರ್ಕ ಕಲ್ಪಿಸುವ ವೈಫೈ ಒದಗಿಸುವ ಸೌಲಭ್ಯ ಸಾಧ್ಯವಾಗಲಿದ್ದು, ಇದರಿಂದ ಭವಿಷ್ಯದಲ್ಲಿ ಹೊಸ ಡಿಜಿಟಲ್ ಕ್ರಾಂತಿ ಕೈಗೂಡಲಿದೆ ಎಂದು ಅಭಿಪ್ರಾಯಪಟ್ಟರು.

ಜಿಎನ್‌ಎ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ನಾಗರಾಜ್ ಮುನಿದಾಸಪ್ಪ ಮಾತನಾಡಿ, ಈಗಾಗಲೇ ಉತ್ತರ ಕನ್ನಡದ ಯಾಣ ಮತ್ತು ಸಹಸ್ರಲಿಂಗದಂತಹ ದೂರದ ಪ್ರವಾಸಿ ಗ್ರಾಮೀಣ ಪ್ರದೇಶಗಳಿಗೆ ಜಿಎನ್‌ಎ ಸಂಸ್ಥೆಯು ಯಶಸ್ವಿಯಾಗಿ ಅಳವಡಿಸಿರುವ ಈ ವೈಫೈ ಸೌಲಭ್ಯಗಳಿಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಭವಿಷ್ಯದಲ್ಲಿ ಭಾರತದಾದ್ಯಂತ ಇದನ್ನು ವಿಸ್ತರಿಸುವ ಉದ್ದೇಶವಿದೆ ಎಂದು ತಿಳಿಸಿದರು. ಜಪಾನಿನ ಕೈಗಾರಿಕೋದ್ಯಮಿ ತಡಾಶಿ ಇಜುಮಿ ಅವರ ನೇತೃತ್ವದ ಜಪಾನ್ ನಿಯೋಗವು ಸೇರಿದಂತೆ, ಡಿಜಿಟಲ್ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಅನೇಕ ಗಣ್ಯಮಾನ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

> ಪ್ರಸ್ತುತ ಮೋದಿಯವರ ಸರ್ಕಾರ ಕೈಗೊಳ್ಳುತ್ತಿರುವ ಅನೇಕ ಹೊಸ ಉಪಕ್ರಮಗಳಿಂದ ಡಿಜಿಟಲ್ ಕ್ರಾಂತಿ ಸಾಕಾರಗೊಳ್ಳುತ್ತಿದೆ. ಇದನ್ನು ದೇಶದ ಮೂಲೆ ಮೂಲೆಗಳಿಗೂ ತಲುಪಿಸುವ ನಿಟ್ಟಿನಲ್ಲಿ ಖಾಸಗಿ ಸಂಸ್ಥೆಗಳ ಸಹಭಾಗಿತ್ವವು ಅಷ್ಟೇ ಅಗತ್ಯ.
> ■ ಅನಂತಕುಮಾರ್, ಕೇಂದ್ರ ಮಾಜಿ ಸಚಿವ

ಕಿರುಸುದ್ದಿ

ಮಾ.3ಕ್ಕೆ ಕತ್ತಿಬೀಸನಹಳ್ಳಿಯಲ್ಲಿ ಆದಿಪರಾಶಕ್ತಿಯ ಬ್ರಹ್ಮರಥೋತ್ಸವ

• **ಕೋಲಾರ:** ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನ ಯಲ್ದೂರು ಗ್ರಾಮದ ವ್ಯಾಪ್ತಿಯ ಕತ್ತಿಬೀಸನಹಳ್ಳಿ ಗ್ರಾಮದ ಶ್ರೀ ಆದಿಪರಾಶಕ್ತಿಯ ಬ್ರಹ್ಮರಥೋತ್ಸವ ಮಾರ್ಚ್ 3 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ನಡೆಯಲಿದ್ದು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ದೇವಾಲಯ ಸಮಿತಿ ಅಧ್ಯಕ್ಷ ಆರ್ ಮುನಿರೆಡ್ಡಿಸ್ವಾಮಿ ಹಾಗೂ ಕೆ.ಎಂ ಅನಂತರೆಡ್ಡಿ ಸ್ವಾಮಿ ಪತ್ರಿಕಾ ಹೇಳಿಕೆ ಮೂಲಕ ತಿಳಿಸಿದ್ದಾರೆ. ಗ್ರಾಮದ ಶ್ರೀ ಪಟಾಲಮ್ಮ, ಶ್ರೀ ಕಾಟೇರಮ್ಮ ಹಾಗೂ ಶ್ರೀ ಚನ್ನಕೇಶವಸ್ವಾಮಿ ಸೇವಾ ಸಮಿತಿ (ರಿ.) ವತಿಯಿಂದ ಮಾರ್ಚ್ 1 ರಿಂದ 3 ರ ವರೆಗೆ ಮೂರು ದಿನಗಳ ಕಾಲ ವಿವಿಧ ಕಾರ್ಯಕ್ರಮಗಳಾದ ಶ್ರೀ ಪಾರ್ವತಿ ಸಮೇತ ಶ್ರೀ ಪರಮೇಶ್ವರಸ್ವಾಮಿ ಕಲ್ಯಾಣೋತ್ಸವ ಮತ್ತು ಬ್ರಹ್ಮರಥೋತ್ಸವ, ದೀಪೋತ್ಸವ, ಅಗ್ನಿಕುಂಡೋತ್ಸವ, ಹಾಗೂ 118 ಕಳಸೋತ್ಸವ ಹಮ್ಮಿಕೊಳ್ಳಲಾಗಿದ್ದು ಜಿಲ್ಲೆ ಸೇರಿದಂತೆ ಆಂಧ್ರಪ್ರದೇಶ, ತಮಿಳುನಾಡಿನ ಕಡೆಯ ಭಕ್ತಾದಿಗಳು ಭಾಗವಹಿಸಲಿದ್ದಾರೆ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಸಲ್ಲಿಕೆಗೆ ಮಾ.3ಕಡೆ ದಿನ

• **ಬೆಂಗಳೂರು:** ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ನಾಲ್ಕನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಆರಂಭವಾಗಿದ್ದು, ಈವರೆಗೂ ಅರ್ಜಿ ಸಲ್ಲಿಸದೇ ಇರುವವರಿಗೆ ಮಾ. 3ರ ಒಳಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ)ದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ. ಅರ್ಜಿ ಸಲ್ಲಿಸಿದವರು ಮಾ. 2 ಮತ್ತು 3 ರಂದು ಕೆಇಎಗೆ ಬಂದು ಮೂಲ ದಾಖಲೆಗಳನ್ನು ಸಲ್ಲಿಸಬೇಕು ಎಂದು ಹೇಳಿದ್ದಾರೆ. ನಾಲ್ಕನೇ ಸುತ್ತಿನಲ್ಲಿ ಭಾಗವಹಿಸಲು ಇಚ್ಛಿಸುವವರು 7 ಲಕ್ಷ ರೂ. ಕಾಷನ್ ಡೆಪಾಸಿಟ್ ಅನ್ನು ಮಾ.2 ರಿಂದ 4ರ ಒಳಗೆ ಕಟ್ಟಬೇಕು. ಅಂತಹವರಿಗೆ ಮಾ.4 ರಿಂದ 6 ರವರೆಗೆ ಆಪ್ಷನ್ ದಾಖಲಿಸಲು ಅವಕಾಶ ನೀಡಲಾಗುತ್ತದೆ. ಮಾ. 6 ರಂದು ಸಂಜೆ ತಾತ್ಕಾಲಿಕ ಫಲಿತಾಂಶ ಹಾಗೂ ಮಾ.7ರಂದು ಅಂತಿಮ ಫಲಿತಾಂಶ ಪ್ರಕಟಿಸಲಾಗುತ್ತದೆ. ಸೀಟು ಹಂಚಿಕೆಯಾದವರು ಮಾ.9 ರಿಂದ 11 ರ ಒಳಗೆ ಶುಲ್ಕ ಪಾವತಿಸಿ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಬೇಕು. ಮಾ.12ರ ಒಳಗೆ ಕಾಲೇಜುಗಳಿಗೆ ವರದಿ ಮಾಡಿಕೊಳ್ಳಬೇಕು ಎಂದು ವಿವರಿಸಿದ್ದಾರೆ. ಈವರೆಗೂ ಯಾರಿಗೆ ಸೀಟು ಹಂಚಿಕೆಯಾಗಿಲ್ಲವೋ ಅಂತಹವರಿಗೆ ಮಾತ್ರ ಈ ಸುತ್ತಿನಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿದೆ. 3ನೇ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿರುವವರು ಶುಲ್ಕ ಪಾವತಿಸಿ ಮಾ.4 ರ ಒಳಗೆ ಕಾಲೇಜುಗಳಿಗೆ ಪ್ರವೇಶ ಪಡೆಯಬೇಕು. ಒಂದು ವೇಳೆ ಪ್ರವೇಶ ಪಡೆಯದಿದ್ದರೆ ಅಂತಹವರ ಸೀಟುಗಳನ್ನು ಕೂಡ 4ನೇ ಸುತ್ತಿಗೆ ಪರಿಗಣಿಸಲಾಗುತ್ತದೆ ಎಂದು ತಿಳಿಸಿದ್ದಾರೆ. 3ನೇ ಸುತ್ತಿನಲ್ಲಿ ಹಂಚಿಕೆಯಾಗದೆ ಉಳಿದಿರುವ 817 ಪಿಜಿ ವೈದ್ಯಕೀಯ ಹಾಗೂ 17 ಡಿಎನ್ ಬಿ ಸೀಟುಗಳಿಗೆ ಕೌನ್ಸೆಲಿಂಗ್ ನಡೆಯಲಿದೆ ಎಂದು ಮಾಹಿತಿ ನೀಡಿದ್ದಾರೆ.

ಸೀಟು ಹಂಚಿಕೆ ಪ್ರಕ್ರಿಯೆ ಆರಂಭ

ಸಾಮೂಹಿಕ ಸ್ವಚ್ಛತಾ ಅಭಿಯಾನ

• **ಬೆಂಗಳೂರು:** ಕೇಂದ್ರ, ನಗರ ಪಾಲಿಕೆ ವ್ಯಾಪ್ತಿಯ ಆರು ವಿಧಾನಸಭಾ ಕ್ಷೇತ್ರಗಳ ವಿವಿಧ ಪ್ರದೇಶಗಳಲ್ಲಿ ವಿಶೇಷ ಸಾಮೂಹಿಕ ಸ್ವಚ್ಛತಾ ಅಭಿಯಾನ ಹಾಗೂ ಬ್ಲ್ಯಾಕ್ ಸ್ಪಾಟ್ ನಿವಾರಣಾ ಕಾರ್ಯಾಚರಣೆಗಳನ್ನು ಯಶಸ್ವಿಯಾಗಿ ಕೈಗೊಳ್ಳಲಾಗಿದೆ ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದ್ದಾರೆ. ನಗರದ ವಿವಿಧ ಭಾಗಗಳಲ್ಲಿ ಕಸದ ಸಂಗ್ರಹಣೆ ಹೆಚ್ಚಾಗಿರುವ ಸ್ಥಳಗಳನ್ನು ಗುರುತಿಸಿ, ದೈನಂದಿನ ಸ್ವಚ್ಛತಾ ಕಾರ್ಯಗಳೊಂದಿಗೆ ವಿಶೇಷ ಸ್ವಚ್ಛತಾ ಕಾರ್ಯಗಳನ್ನು ನಿರಂತರವಾಗಿ ನಡೆಸುವ ಮೂಲಕ ನಾಗರಿಕರಿಗೆ ಸ್ವಚ್ಛ, ಆರೋಗ್ಯಕರ ಮತ್ತು ಸುಗಮ ಪರಿಸರ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು. ಸಂಗಮ್ ಸರ್ಕಲ್ ಹಾಗೂ ಪಾದರಾಯನಪುರ ರಸ್ತೆಯ ವ್ಯಾಪ್ತಿ, ವಾರ್ಡ್-118ಎಚ್.ಸಿದ್ದಯ್ಯ ರಸ್ತೆ, ಅಕ್ಕಪಕ್ಕ ರಸ್ತೆಗಳು ಹಾಗೂ ಕೆಂಪೇಗೌಡನಗರ ಉಪ ವಿಭಾಗದ ಚಿಕ್ಕಪೇಟೆ ವಿಭಾಗ ರಸ್ತೆಗಳಲ್ಲಿ, ಕೆ.ಸಿ. ಜನರಲ್ ಆಸ್ಪತ್ರೆ, ಎದುರು, ಆಂಜನೇಯ ದೇವಸ್ಥಾನ ರಸ್ತೆ 2ನೇ ಕ್ರಾಸ್ ಹಾಗೂ ರಾಜಶಂಕರ್ ಕುಳ್ಳ ಪಾರ್ಕ್ ಎದುರಿನ ರಸ್ತೆಗಳಲ್ಲಿ, ಎ.ಕೆ. ಕಾಲೋನಿ ಇನ್ನಿತರೆ ಕಡೆಗಳಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಯಿತು.

ಹೊಸದುರ್ಗ ಕನಕ ಪೀಠಾಧಿಪತಿ ಈಶ್ವರಾನಂದಪುರಿ ಸ್ವಾಮಿ ಅಭಿಮತ

ದೇವಾಲಯ ಉಳಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ

• **ತಾವರೆಕೆರೆ:** ನಮ್ಮ ಹಿರಿಯರು ನಿರ್ಮಿಸಿರುವ ದೇವಾಲಯಗಳು ನಮ್ಮ ಸಂಸ್ಕೃತಿಯ ಪ್ರತೀಕವಾಗಿದ್ದು ಅವುಗಳನ್ನು ಉಳಿಸುವುದು ನಮ್ಮ ಆದ್ಯ ಕರ್ತವ್ಯ ಎಂದು ಕಾಗಿನೆಲೆ ಕನಕ ಗುರುಪೀಠದ ಹೊಸದುರ್ಗ ಮಠದ ಪೀಠಾಧಿಪತಿ ಈಶ್ವರಾನಂದಪುರಿ ಸ್ವಾಮಿಗಳು ತಿಳಿಸಿದರು.

ತಾಲೂಕಿನ ಸೂಲಿಬೆಲೆ ಹೋಬಳಿಯ ಬಿದರಹಳ್ಳಿಯಲ್ಲಿ ಸಾವಿರಾರು ವರ್ಷಗಳಿಂದ ನೆಲೆಸಿರುವ ಬಿದರಹಳ್ಳಿ ಬತ್ತೇಶ್ವರ ಸ್ವಾಮಿ ದೇವಾಲಯ ಶಿಥಿಲಗೊಂಡ ಹಿನ್ನೆಲೆ ದೇವಾಲಯ ಅಭಿವೃದ್ಧಿ ಟ್ರಸ್ಟ್ ಪದಾಧಿಕಾರಿಗಳು, ಭಕ್ತರು, ದಾನಿಗಳ ಸಹಕಾರದಿಂದ 3 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದ್ದ ದೇವಾಲಯ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇವಾಲಯಗಳು ನಮ್ಮ ಭಕ್ತಿ ಮಾರ್ಗದ ಮೂಲಕ ಮೋಕ್ಷ ನೀಡುವ ಕೇಂದ್ರಗಳಾಗಿದ್ದರೆ, ಶಿಕ್ಷಣ ಸಂಸ್ಥೆಗಳು ಜ್ಞಾನ ನೀಡುವ ಕೇಂದ್ರಗಳಾಗಿ ಆ ನಿಟ್ಟಿನಲ್ಲಿ ಜ್ಞಾನ ಮತ್ತು ಭಕ್ತಿ ಜೊತೆಜೊತೆಯಾಗಿದ್ದರೆ ಸಂಸ್ಕಾರ ಸಿಗುತ್ತದೆ ಎಂದು ದೊಡ್ಡಬಳ್ಳಾಪುರ ಶಾಸಕರಾದ ಧೀರಜ್ ಮುನಿರಾಜು ಮಾತನಾಡಿ, ಅವರು ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣದೊಂದಿಗೆ ಪ್ರಾಮುಖ್ಯತೆ ಭಕ್ತಿಗೂ ನೀಡಬೇಕು. ಮೂಢನಂಬಿಕೆಯಿಂದ ಹೊರಬರಬೇಕು ಎಂದರು.

ದೇವಾಲಯ ಅಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷ ಜಗದೀಶ್ ಮಾತನಾಡಿ, ಕೆಲಸ ಪ್ರಾರಂಭವಾಗಿ ಕೇವಲ ಒಂದೇ ವರ್ಷದಲ್ಲಿ ಇಂತಹ ಸುಂದರ ದೇವಾಲಯ 3 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವುದೇ ಬತ್ತೇಶ್ವರ ಸ್ವಾಮಿಯ ಪವಾಡ ಎಂಬುದಕ್ಕೆ ಸಾಕ್ಷಿಯಾಗಿದ್ದು, ಸಹಕರಿಸಿದ ಎಲ್ಲರಿಗೂ ಸಮಿತಿಯಿಂದ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಅಲ್ಲದೆ ಮೂರು ದಿನಗಳ ಕಾಲ ಪುನರ್ ಪ್ರತಿಷ್ಠಾಪನ ಕಾರ್ಯ ನಡೆದಿದ್ದು, ಸುಮಾರು 6 ಸಾವಿರಕ್ಕೂ ಹೆಚ್ಚು ಭಕ್ತಾದಿಗಳು ಬತ್ತೇಶ್ವರನ ದರ್ಶನ ಪಡೆದು ಅನ್ನ ಪ್ರಸಾದ ಸ್ವೀಕರಿಸಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಿದರಹಳ್ಳಿ ಬತ್ತೇಶ್ವರ ಸ್ವಾಮಿ ಅಭಿವೃದ್ಧಿ ಟ್ರಸ್ಟ್ ಪದಾಧಿಕಾರಿಗಳು, ಕಂಬಿ ಯಜಮಾನರು, ಕುಲಸ್ಥರು, ಭಕ್ತರು ಉಪಸ್ಥಿತರಿದ್ದರು.



ಸಿದ್ದರಾಮಯ್ಯರಿಂದ 27ನೇ ಬಜೆಟ್ ಮಂಡನೆ

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಮಾತನಾಡಿ, ಸಿದ್ದರಾಮಯ್ಯನವರು ಕುರುಬ ಸಮುದಾಯದಲ್ಲಿ ಜನಿಸಿ ಹಿಂದುಳಿದ ವರ್ಗಗಳ ಧ್ವನಿಯಾಗಿ ಇಡೀ ದೇಶದಲ್ಲಿ ಬಡವರ ಪರ ಧ್ವನಿ ಎತ್ತುವ ನಾಯಕರಾಗಿದ್ದು, 27ನೇ ಬಜೆಟ್ ಮಂಡಿಸುತ್ತಿರುವ ಏಕೈಕ ನಾಯಕರಾಗಿದ್ದಾರೆ. ಅವರು ಬಜೆಟ್ ಮೀಟಿಂಗ್ ಕಾರಣ ಬರಲಾಗಿಲ್ಲ, ಅವರಿಗೂ ಕೂಡ ಬತ್ತೇಶ್ವರನ ಆಶೀರ್ವಾದ ದೊರೆಯಲಿ ಎಂದರು.

ಗ್ರಾಮೀಣಾಭಿವೃದ್ಧಿಗೆ ನಬಾರ್ಡ್ ಕೊಡುಗೆ ಅನನ್ಯ: ಸಚಿವ ದಿನೇಶ್

• **ಬೆಂಗಳೂರು:** ಗ್ರಾಮೀಣ ಭಾಗದ ಅಭಿವೃದ್ಧಿಗೆ ನಬಾರ್ಡ್ ಕೊಡುಗೆ ಅನನ್ಯವಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ನಬಾರ್ಡ್ ಪ್ರಾದೇಶಿಕ ಕಚೇರಿಯಲ್ಲಿ, ನಬಾರ್ಡ್ ವತಿಯಿಂದ ಕೃಷಿ ಸಂಸ್ಕರಣೆಯಲ್ಲಿ ಮಹಿಳಾ ರೈತರು ಮತ್ತು ಎಂ.ಎಸ್.ಎಂ.ಇ ಗಳ ಬಲವರ್ಧನೆಗೆ ಸಮಗ್ರ ಸಾಲ ವ್ಯವಸ್ಥೆ ಕುರಿತು ನಡೆದ ಖಿಶಿಬಿಶಿಖ ಇಭಿಛಜಿಶಿ ಖಿಭಿಜಾಜ್ಞೆಟ್ಟ -2026ನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾರ್ಯಕ್ರಮದ ಪ್ರಸೆಂಟೇಶನ್ ಬಹಳ ವಿಶೇಷವಾದದ್ದು. 1982 ರಿಂದ ಕೆಲಸ ಮಾಡುತ್ತಿರುವ ನಬಾರ್ಡ್ ಶೇ.99 ರಷ್ಟು ಗುರಿ ಸಾಧಿಸುತ್ತಿದೆ. ಗ್ರಾಮೀಣ ಭಾಗದಲ್ಲಿ ಆರೋಗ್ಯ, ರಸ್ತೆ, ಹಣಕಾಸಿನ ನೆರವು, ಈ ಎಲ್ಲ ವಿಭಾಗಗಳಲ್ಲಿ ನಬಾರ್ಡ್ ಬದ್ಧತೆಯಿಂದ ಕೆಲಸ ನಿರ್ವಹಿಸುತ್ತಿದ್ದು, ಗ್ರಾಮೀಣ ಭಾಗದ ಅಭಿವೃದ್ಧಿಗೆ ನಬಾರ್ಡ್ ಕೊಡುಗೆ ಅನನ್ಯ ಎಂದರು.

ನಮ್ಮ ಆರೋಗ್ಯ ಇಲಾಖೆಗೂ ನಬಾರ್ಡ್ ಸಾಕಷ್ಟು ಅನುದಾನ ನೀಡುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣ ಮಾಡುವುದಕ್ಕೆ, ರಸ್ತೆಗಳ ನಿರ್ಮಾಣಕ್ಕೆ ಸಹಕಾರ ನೀಡುತ್ತದೆ. ಮುಂದಿನ ದಿನಗಳಲ್ಲಿ ಆರೋಗ್ಯದ ಕುರಿತು ಜಾಗೃತಿ ಅಭಿಯಾನದತ್ತಲೂ ನಬಾರ್ಡ್ ಕಾರ್ಯ ನಿರ್ವಹಿಸಲಿ. ನಬಾರ್ಡ್ ಐಕೆಸಿಸಿ ಟೆಕ್ನಾಲಜಿ ಬಳಕೆ ಮಾಡಿಕೊಳ್ಳುವ ಮೂಲಕ ಪಾರದರ್ಶಕವಾಗಿ ಕಾರ್ಯ ನಿರ್ವಹಿಸಲು ಸಹಕಾರಿಯಾಗಿದೆ. ರೈತರಿಗೆ ತ್ವರಿತವಾಗಿ ಸಾಲ ಸೌಲಭ್ಯ ಪಡೆಯಲು ಅನುಕೂಲವಾಗಿದೆ. ರಾಜ್ಯದ ಕಟ್ಟಕಡೆಯ ರೈತನಿಗೂ ಸೌಲಭ್ಯ ಸಿಗಬೇಕು ಎನ್ನುವುದು ನಮ್ಮ ಆಶಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಆರ್‌ಬಿಐ ಜನರಲ್ ಮ್ಯಾನೇಜರ್ ಕಾರ್ತಿಕೇಯನ್, ಕೆನರಾ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಭವೇಂದ್ರ ಕುಮಾರ್, ನಬಾರ್ಡ್ ಚೀಫ್ ಜನರಲ್ ಮ್ಯಾನೇಜರ್ ಸುರೇಂದ್ರ ಬಾಬು ಸೇರಿದಂತೆ ಇತರರಿದ್ದರು.



ಮಾಜಿ ಸೈನಿಕರ ಉದ್ಯೋಗ ಮೇಳ

• **ಬೆಂಗಳೂರು:** ರಕ್ಷಣಾ ಸಚಿವಾಲಯದ ಮಾಜಿ ಸೈನಿಕರ ಕಲ್ಯಾಣ ಇಲಾಖೆ (ಡಿಒಇಎಸ್‌ಡಬ್ಲ್ಯು) ಅಧೀನದಲ್ಲಿ ಬರುವ ಪುನರ್ವಸತಿ ನಿರ್ದೇಶನಾಲಯ (ಡಿಜಿಆರ್) ಶುಕ್ರವಾರ ಬೆಂಗಳೂರಿನ ಎಂಇಜಿ ಸೆಂಟರ್‌ನಲ್ಲಿ ಮಾಜಿ ಸೈನಿಕರ (ಇಎಸ್‌ಎಂ) ಉದ್ಯೋಗ ಮೇಳ ಆಯೋಜಿಸಿತು.

ಇದರಲ್ಲಿ ಮಾಜಿ ಸೈನಿಕರು ಮತ್ತು ಕೈಗಾರಿಕೆಗಳು ಅತ್ಯುತ್ಸಾಹದಿಂದ ಭಾಗವಹಿಸಿದ್ದು ಕಂಡು ಬಂದಿತು. 850ಕ್ಕೂ ಅಧಿಕ ಮಾಜಿ ಸೈನಿಕರು (ಇಎಸ್‌ಎಂ) ಮತ್ತು 51 ಪ್ರಮುಖ ರಾಷ್ಟ್ರೀಯ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಪಾಲ್ಗೊಂಡಿದ್ದವು. ವಿವಿಧ ವಲಯಗಳಲ್ಲಿ 780ಕ್ಕೂ ಅಧಿಕ ಉದ್ಯೋಗಾವಕಾಶಗಳನ್ನು ಒದಗಿಸಿಕೊಟ್ಟವು. ಬಿಇಎಲ್, ಜೆನ್‌ಪ್ಯಾಕ್ಟ್, ಸಿಮೆಂಡಿಯಾ ಮತ್ತು ಟೊಯೋಟಾ ಕಿರ್ಲೋಸ್ಕರ್ ಆಟೋ ಪಾರ್ಟ್ಸ್ ಸೇರಿದಂತೆ ಹಲವು ಪ್ರತಿಷ್ಠಿತ ಸಂಸ್ಥೆಗಳು ಪ್ರಮುಖ ನೇಮಕಾತಿ ಸಂಸ್ಥೆಗಳು ಪಾಲ್ಗೊಂಡಿದ್ದವು.

ಉದ್ಯೋಗ ಮೇಳವನ್ನು ಎಎಸ್‌ಸಿ ಸೆಂಟರ್ ಆ್ಯಂಡ್ ಕಾಲೇಜಿನ ಲೆಫ್ಟಿನೆಂಟ್ ಜನರಲ್ ಕಮಾಂಡೆಂಟ್ ಜೆ.ಕೆ. ಗೇರಾ ಮತ್ತು ಡಿಜಿಆರ್ ಪ್ರಧಾನ ನಿರ್ದೇಶಕ ಕಮಾಂಡರ್ ವಿಕ್ರಾಂತ್ ಕಿಶೋರ್ ಉದ್ಘಾಟಿಸಿದರು. ಹಿರಿಯ ಅಧಿಕಾರಿಗಳು ಮೇಳದಲ್ಲಿ ಭಾಗವಹಿಸಿದ್ದ ಮಾಜಿ ಸೈನಿಕರು ಮತ್ತು ಕಾರ್ಪೊರೇಟ್ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸಿದರು.

ಈ ಸಮಾರಂಭದಲ್ಲಿ ಲೆಜೆಂಡ್ ಟೆಕ್ನಾಲಜೀಸ್ (ಇಂಡಿಯಾ) ಪ್ರೈ.ಲಿ.ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕರ್ನಾಟಕದ ಎಸ್‌ಐಡಿಎಂ ಸಹ-ಅಧ್ಯಕ್ಷ ಡಾ. ಎಂಟಿ ರಂಗಾರೆಡ್ಡಿ ಗೌರವ ಅತಿಥಿಯಾಗಿ ಭಾಗವಹಿಸಿದ್ದರು.



ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿಯಿಂದ ಸಂಭ್ರಮಾಚರಣೆ

ಭೂಸ್ವಾಧೀನ ಪ್ರಕ್ರಿಯೆ ಕೈ ಬಿಟ್ಟ ಸರ್ಕಾರ

• **ದೇವನಹಳ್ಳಿ:** ತಾಲೂಕಿನ ಚನ್ನರಾಯಪಟ್ಟಣ ಹೋಬಳಿಯಲ್ಲಿ ಕೈಗಾರಿಕೆಗಳ ಸ್ಥಾಪನೆಗಾಗಿ 1777 ಎಕರೆ ಭೂಸ್ವಾಧೀನಕ್ಕೆ ಮುಂದಾಗಿದ್ದ ಸರಕಾರದ ವಿರುದ್ಧ ನಿರಂತರವಾಗಿ 4 ವರ್ಷಗಳ ಕಾಲ, ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ ಹೋರಾಟ ಮಾಡಿದ್ದರ ಪ್ರತಿಫಲವಾಗಿ ಸರಕಾರ, ಭೂಸ್ವಾಧೀನ ಪ್ರಕ್ರಿಯೆ ಕೈ ಬಿಟ್ಟಿದ್ದ ಹಿನ್ನೆಲೆಯಲ್ಲಿ, ಚನ್ನರಾಯಪಟ್ಟಣದಲ್ಲಿ ಭೂಮಿ ಪೂಜೆ, ವಿಜಯೋತ್ಸವ ಆಚರಣೆ ಮಾಡಿದರು. ರಾಜ್ಯ ಮಟ್ಟದ ವಿವಿಧ ಸಂಘಟನೆಗಳ ಹೋರಾಟಗಾರರು, ವಿಜಯೋತ್ಸವದಲ್ಲಿ ಪಾಲ್ಗೊಂಡಿದ್ದರು.

ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿಯ ಸಂಚಾಲಕ ಕಾರಹಳ್ಳಿ ಶ್ರೀನಿವಾಸ್ ಮಾತನಾಡಿ, ಹೋರಾಟದ ಗಾಳಿ, ಗಂಧವೇ ಗೊತ್ತಿಲ್ಲದ ಮುಗ್ಧ ರೈತರು, ಸರಕಾರದ ವಿರುದ್ಧ ನಿರಂತರವಾಗಿ ಹೋರಾಟ ಮಾಡಿ, ಜಯಗಳಿಸಿರುವುದು, ಇಡೀ ದೇಶಕ್ಕೆ ಮಾದರಿಯಾಗಿದೆ. ದೇಶದ ವಿವಿಧ ಮೂಲೆಗಳಿಂದ ರೈತರ ಹೋರಾಟಕ್ಕೆ ಬೆಂಬಲ ನೀಡಿದ ರೈತಪರ ಸಂಘಟನೆಗಳಿಗೆ ನಾವು ಋಣಿಗಳಾಗಿದ್ದೇವೆ. ನೈಜವಾದ ಹೋರಾಟಕ್ಕೆ ಎಂದಿಗೂ ಸೋಲಾಗುವುದಿಲ್ಲ ಎಂದರು.



ಶಾಶ್ವತ ನೀರಾವರಿ ಹೋರಾಟ ಸಮಿತಿಯ ಸಂಚಾಲಕ ಆಂಜನೇಯರೆಡ್ಡಿ ಮಾತನಾಡಿ, ಭೂಮಿ ಹೊಂದುವುದು ಪ್ರತಿಯೊಬ್ಬರ ಹಕ್ಕು, ಯಾವುದೇ ಸರಕಾರಗಳಿರಲಿ, ರೈತರಿಂದ ಭೂಮಿಯನ್ನು ಕಸಿಯಬಾರದು. ಭೂಮಿ ಮತ್ತು ರೈತರ ನಡುವಿನ ಸಂಬಂಧ, ತಾಯಿ, ಮಕ್ಕಳ ನಡುವೆ ಇರುವ ಸಂಬಂಧವಾಗಿದೆ. ಸರಕಾರ, ರೈತರ ಹೋರಾಟ ನೈಜವಾದದ್ದು ಎಂಬುದನ್ನು ಅರ್ಥ ಮಾಡಿಕೊಂಡು ರೈತರ ಧ್ವನಿಗೆ ನ್ಯಾಯ ಸಿಗುವಂತೆ ಮಾಡಿದೆ ಎಂದರು.

ಸುಬ್ಬಾರೆಡ್ಡಿ ಶಾಸಕತ್ವ ಅಸಿಂಧು ತೀರ್ಪಿಗೆ ಸುಪ್ರೀಂ ತಡೆ

• **ಬೆಂಗಳೂರು:** 2023ರ ವಿಧಾನಸಭಾ ಚುನಾವಣೆಯಲ್ಲಿ ಬಾಗೇಪಲ್ಲಿ ಕ್ಷೇತ್ರದಿಂದ ಗೆದ್ದ ಕಾಂಗ್ರೆಸ್ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಅವರ ಆಯ್ಕೆಯನ್ನು ಅಸಿಂಧುಗೊಳಿಸಿದ್ದ ಹೈಕೋರ್ಟ್ ತೀರ್ಪಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆಯಾಜ್ಞೆ ನೀಡಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಬ್ಬಾರೆಡ್ಡಿ ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯ ಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾ. ಜೋಯ್ಮಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠ ಈ ಆದೇಶ ನೀಡಿದೆ. ಹಿರಿಯ ವಕೀಲರಾದ ಕಪಿಲ್ ಸಿಬಲ್ ಮತ್ತು ದೇವದತ್ ಕಾಮತ್ ಅವರು ಅರ್ಜಿದಾರರ ಪರ ವಾದ ಮಂಡಿಸಿದರು.

ಅರ್ಜಿದಾರ ಎಸ್.ಎನ್.ಸುಬ್ಬಾರೆಡ್ಡಿ ಅವರನ್ನು ಎಲ್ಲಾ ಪ್ರಾಯೋಗಿಕ ಉದ್ದೇಶಗಳಿಗಾಗಿ ವಿಧಾನಸಭೆಯ ಸದಸ್ಯ ರೆಂದು ಪರಿಗಣಿಸಬೇಕು. ಪ್ರತಿವಾದಿ ಬಿಜೆಪಿ ಅಭ್ಯರ್ಥಿ ಸಿ.ಮುನಿರಾಜು ಅವರು ಪ್ರತಿಯಾಗಿ ಅಫಿಡವಿಟ್ ಸಲ್ಲಿಸ ಬೇಕೆಂದು ಪೀಠ ಹೇಳಿತು.

ಸುಪ್ರೀಂ ಕೋರ್ಟ್‌ನಲ್ಲಿ ಸುಬ್ಬಾರೆಡ್ಡಿ ಅವರ ಮೇಲ್ಮನವಿಯನ್ನು ವಿರೋಧಿಸಿದ ಮುನಿರಾಜು ಅವರ ವಕೀಲರು, ಅವರು ತಮ್ಮ ಮಧ್ಯ ವ್ಯವಹಾರವನ್ನು ಬಹಿರಂಗಪಡಿಸಿಲ್ಲ ಎಂದು ವಾದಿಸಿದರು. ನಂತರ ಸಿಜೆಐ, ನೀವು ಚುನಾವಣೆಯಲ್ಲಿ ಗೆಲ್ಲದಿದ್ದಾಗ, ನೀವು ಅಂತಹ ಆಧಾರಗಳನ್ನು ಹುಡುಕುತ್ತೀರಿ ಎಂದರು. ಸುಬ್ಬಾರೆಡ್ಡಿ ಆತಿಥ್ಯ ವ್ಯವಹಾರವನ್ನು ಬಹಿರಂಗಪಡಿಸಿದ್ದಾರೆ, ಆದರೆ ಅವರ ಮದ್ಯ ವ್ಯವಹಾರವನ್ನು ಬಹಿರಂಗಪಡಿಸಲಿಲ್ಲ ಎಂದು ವಾದಿಸಿದರು. ಇದಕ್ಕೆ ಪೀಠ, ಆದಾಯವನ್ನು ಬಹಿರಂಗಪಡಿಸುವುದು ಅಗತ್ಯವಾಗಿದೆಯೇ ಹೊರತು ವ್ಯವಹಾರದ ಸ್ವರೂಪವಲ್ಲ, ನ್ಯಾಯಾಲಯಗಳು ಚಾರ್ಟರ್ಡ್ ಅಕೌಂಟೆಂಟ್ ಪಾತ್ರವನ್ನು ನಿರ್ವಹಿಸಲು ಸಾಧ್ಯವಿಲ್ಲ ಎಂದು ಹೇಳಿತು. ವಾದ ಪ್ರತಿವಾದ ಆಲಿಸಿದ ನ್ಯಾಯಾಲಯವು, 2026ರ ಸೆಪ್ಟೆಂಬರ್‌ಗೆ ಮುಂದಿನ ವಿಚಾರಣೆಗೆ ನಿಗದಿಪಡಿಸಿದೆ.

ಪ್ರಕರಣದ ಹಿನ್ನೆಲೆ: 2023ರ ಮೇ 10ರಂದು ಕರ್ನಾಟಕ ವಿಧಾನಸಭೆಯ 224 ಕ್ಷೇತ್ರಗಳಿಗೆ ಚುನಾವಣೆ ನಡೆದಿತ್ತು. ಮೇ 13ರಂದು ಚುನಾವಣಾ ಫಲಿತಾಂಶ ಪ್ರಕಟಗೊಂಡಿತ್ತು. ಬಾಗೇಪಲ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಸುಬ್ಬಾರೆಡ್ಡಿ ಅವರು 82,128 ಮತಗಳನ್ನು ಪಡೆದು ಜಯಗಳಿಸಿದ್ದರು. ಸಮೀಪದ ಪ್ರತಿಸ್ಪರ್ಧಿಯಾಗಿದ್ದ ಬಿಜೆಪಿಯ ಅಭ್ಯರ್ಥಿ ಸಿ.ಮುನಿರಾಜು ಅವರು 62,949 ಮತಗಳನ್ನು ಪಡೆದಿದ್ದರು.

ಕಿರುಸುದ್ದಿ

ನಾಳೆ ಶ್ರೀಕೃಷ್ಣ ಸಂಧಾನ ನಾಟಕ ಪ್ರದರ್ಶನ

• **ದಾಬಸ್‌ಪೇಟೆ:** ನೆಲಮಂಗಲ ತಾಲೂಕು ವನಕಲ್ಲು ಮಲ್ಲೇಶ್ವರ ಜಾತ್ರೆ ಪ್ರಯುಕ್ತ, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮಾರ್ಚ್ 1ರಂದು ರಾತ್ರಿ, 8.30ಕ್ಕೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ 'ಕುರುಕ್ಷೇತ್ರ' ಪೌರಾಣಿಕ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ.

ಪಾತ್ರದಾರಿಗಳು: ಶ್ರೀಕೃಷ್ಣ-ರಾಮಕೃಷ್ಣ ಈ (ಸಿಆರ್ ಪಿ ಹೊನ್ನೇನಹಳ್ಳಿ), ಧರ್ಮರಾಯ-ಪ್ರಕಾಶ್ (ಮು.ಶಿ. ಜಕ್ಕಸಂದ್ರ), ಭೀಮ-ಎಚ್. ಯೋಗಾನಂದ (ತಾ. ಅಧ್ಯಕ್ಷರು ಎಸ್ ಸಿ/ಎಸ್‌ಟಿ ಸಂಘಟನೆ), ಅರ್ಜುನ-ಬಿ.ಪಿ.ಜಯಣ್ಣ (ಶಿಕ್ಷಕರು ನಿಜಗಲ್ ಕೆಂಪೋಹಳ್ಳಿ), ಅಭಿಮನ್ಯು-ಎಂ.ಸಿ.ಪ್ರೇಮ್ ಕುಮಾರ್ (ಸಿಆರ್‌ಪಿ ನರಸೀಪುರ), ಬಲರಾಮ-ಜಿ. ರಾಜಣ್ಣ (ನಿ.ಶಿಕ್ಷಕರು ಸೋಂಪುರ), ದುರ್ಯೋಧನ-ಎ. ಗೋಪಾಲ್ (ಶಿ.ಇಮಚೇನಹಳ್ಳಿ), ದುಶ್ಯಾಸನ ಹಾಗೂ ಸಾತ್ಯಕಿ-ಅಂಜನಮೂರ್ತಿ (ಶಿ.ಎಪಿಡಿ), ಕರ್ಣ-ಶಿವಕುಮಾರ್ (ಅಂಬಲಗೆರೆ), ಶಕುನಿ-ಕೆ. ಎನ್.ನಾಗೇಶ್ (ಅಧ್ಯಕ್ಷರು ಕ.ರಾ.ಸ ನೌ.ಸಂಘಟನೆ.), ವಿಧುರ-ಎ.ಸಿ.ಲವಕುಮಾರ್ (ಸಿಆರ್‌ಪಿ ಹಸಿರುವಳ್ಳಿ), ಸೈಂದವ-ಬಿ.ಶಿವಕುಮಾರ್ (ಶಿ.ಬರಗೂರು ಕಾಲೋನಿ), ಭೀಷ್ಮ/ಮಂತ್ರಿ ಹನುಮಂತರಾಜು (ಹಾಲೇನಹಳ್ಳಿ), ದ್ರೋಣ/ಸೈನ್ಯಾಧಿ-ವೆಂಕಟಸ್ವಾಮಿ (ಮಾಕೇನಹಳ್ಳಿ), ಸಂಗೀತ ನಿರ್ದೇಶನ/ಹಾರ್ಮೋನಿಯಂ - ತಿಮ್ಮಯ್ಯ, ಶಿ.ಎಲ್‌ಪಿಎಸ್ ಹುಚ್ಚವೀರಯ್ಯನಪಾಳ್ಯ, ತಬಲ-ಹನುಮಂತರಾಜು ನರಸೀಪುರ, ಕ್ಯಾಷಿಯೋ-ಸೂರ್ಯ ಮಾನಂಗಿ, ಕ್ಲಾರೋನೆಟ್ -ನವೀನ್, ಅಮೃತೂರು, ತಾಳವಾದ್ಯ-ಶ್ರೀನಿವಾಸ್, ಅಲ್ಲಯ್ಯನ ಪಾಳ್ಯ

ಸ್ತ್ರೀ ಪಾತ್ರ ಪರಿಚಯ: 1ನೇ ಉತ್ತರೆ/ನೃತ್ಯ- ಕು.ಶೈಲು, ತುಮಕೂರು, ರುಕ್ಮಿಣಿ, 2ನೇ ಉತ್ತರೆ, ನೃತ್ಯ-ಕು.ನಂದಿನಿ ಬೆಂಗಳೂರು, ದ್ರೌಪದಿ, ಕುಂತಿ, ಗಾಂಧಾರಿ -ಶ್ರೀಮತಿ ವಾಣಿಶ್ರೀ ತುಮಕೂರು.

ವಕೀಲರು ನೊಂದವರ ಧ್ವನಿಯಾಗಲಿ

• **ದೊಡ್ಡಬಳ್ಳಾಪುರ:** ಸಮಾಜದಲ್ಲಿ ನೊಂದವರ ಸಮಸ್ಯೆಗಳಿಗೆ, ಶೋಷಿತರ ಧ್ವನಿಯಾಗಿ ನ್ಯಾಯ ಒದಗಿಸಿಕೊಡುವಂತಹ ಕೆಲಸ ನಮ್ಮ ವಕೀಲರ ಹೊಣೆಗಾರಿಕೆಯಾಗಿದೆ ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶ, ತಾಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ದಾಸರಿ ಕ್ರಾಂತಿ ಕಿರಣ್ ಹೇಳಿದರು.

ಅವರು ತಾಲೂಕಿನ ಗುಂಜೂರು ಗ್ರಾಮದಲ್ಲಿ ಪ್ರೆಸಿಡೆನ್ಸಿ ಕಾನೂನು ವಿಶ್ವವಿದ್ಯಾಲಯ ಹಾಗೂ ತಾಲೂಕು ವಕೀಲರ ಸಂಘದದಿಂದ ಆಯೋಜಿಸಿದ್ದ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮದಲ್ಲಿ ಮಾತನಾಡಿದರು. ಜನರಿಗೆ ನ್ಯಾಯ ಒದಗಿಸುವಲ್ಲಿ ವಕೀಲ ವೃತ್ತಿ ಮಹತ್ವದ್ದಾಗಿದ್ದಾಗಿದೆ. ಈ ವೃತ್ತಿಯ ಘನತೆ ಎತ್ತಿಹಿಡಿಯಬೇಕಾದ ಹೊಣೆಗಾರಿಕೆ ಕಾನೂನು ವಿದ್ಯಾರ್ಥಿ ಗಳಿಗಿದೆ. ಕಾನೂನಿನ ಬಗ್ಗೆ ಎಲ್ಲರಿಗೂ ಗೌರವವಿರಬೇಕು. ಎಲ್ಲರಿಗೂ ಕಾನೂನು ಸಮಾನವಾಗಿದೆ.

ಕಾನೂನು ವಿದ್ಯಾರ್ಥಿಗಳು ಸಮಾಜಕ್ಕೆ ಮಾದರಿಯಾಗಬೇಕಿದೆ. ಸಮಾಜದಲ್ಲಿ ನೊಂದ ವರ್ಗದವರಿಗೆ ರಕ್ಷಣೆಯನ್ನು ಕೊಡುವಲ್ಲಿ ಮಹತ್ತರ ಪಾತ್ರವನ್ನು ನ್ಯಾಯಾಲಯಗಳು ನಿರ್ವಹಿಸುತ್ತದೆ ಎಂಬುದನ್ನು ಹಾಗೂ ಕಾನೂನಿನ ಬಗ್ಗೆ ಅರಿವನ್ನು ಜನರಿಗೆ ತಿಳಿಸಬೇಕು ಎಂದರು.

ತಾಲೂಕುಮಟ್ಟದ ಉದ್ಯೋಗ ಮೇಳದಲ್ಲಿ ಸಚಿವ ಕೆ.ಎಚ್.ಮುನಿಯಪ್ಪ ಸಲಹೆ

ಸ್ಥಳೀಯರಿಗೆ ಉದ್ಯೋಗ ಆದ್ಯತೆ ನೀಡಿ

• **ದೊಡ್ಡಬಳ್ಳಾಪುರ:** ಕೈಗಾರಿಕಾ ಪ್ರದೇಶ ಅಭಿವೃದ್ಧಿಗೆ ಜಮೀನು ನೀಡಿದ ರೈತರ ಮಕ್ಕಳಿಗೆ ಕಂಪನಿಗಳು ಉದ್ಯೋಗಾವಕಾಶದಲ್ಲಿ ಮೊದಲ ಆದ್ಯತೆ ನೀಡಬೇಕು ಎಂದು ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ನಗರದ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಹಾಗೂ ದೊಡ್ಡಬಳ್ಳಾಪುರ ತಾಲೂಕು ಆಡಳಿತ ಮತ್ತು ತಾಲೂಕು ಕೈಗಾರಿಕೆಗಳ ಸಂಘದ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ನಡೆದ ತಾಲೂಕು ಮಟ್ಟದ ಉದ್ಯೋಗ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಅತಿಹೆಚ್ಚು ಕೈಗಾರಿಕಾ ಪ್ರದೇಶ ಹೊಂದಿರುವ ಭಾಗ ದೊಡ್ಡಬಳ್ಳಾಪುರ ಆಗಿದೆ. ಸುಮಾರು 10,000 ಸಾವಿರ ಎಕರೆ ಜಮೀನು ಕೈಗಾರಿಕಾ ಪ್ರದೇಶಕ್ಕೆ ಒಳಪಟ್ಟಿದೆ. ಆದ್ದರಿಂದ, ಭೂ ವಂಚಿತ ಕುಟುಂಬಗಳಿಗೆ ಸೌಲಭ್ಯ ಕಲ್ಪಿಸಬೇಕು. ಉದ್ಯೋಗ ಆಕಾಂಕ್ಷಿಗಳು ಯಾವುದೇ ರೀತಿಯ ತರಬೇತಿ ಪಡೆಯಬೇಕಾದಲ್ಲಿ ಜಿಲ್ಲಾಡಳಿತಕ್ಕೆ ಸಂಪರ್ಕಿಸಬಹುದಾಗಿದೆ. ಅಗತ್ಯವಿರುವ ತರಬೇತಿ ನೀಡಲು ಸರ್ಕಾರ ಸಿದ್ಧವಿದೆ. ತಾಲೂಕಿನಲ್ಲಿ ಉದ್ಯೋಗ ಮೇಳ ಆಯೋಜನೆ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದೆ. ಮುಂದಿನ ದಿನದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳ ಏರ್ಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ಎನ್ ಅನುರಾಧ, ಎಸಿ ದುರ್ಗಾಶ್ರೀ, ಕೈಗಾರಿಕಾ ಜಂಟಿ ಅಧಿಕಾರಿ ನರೇಂದ್ರ ಬಾಬು, ಡಿವೈಎಸ್ಪಿ ಪಾಂಡುರಂಗ, ತಹಸೀಲ್ದಾರ್ ಮಲ್ಲಪ್ಪ ಯರಗೋಳ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಜಗನ್ನಾಥ, ಪ್ರಾಂಶುಪಾಲ ಸದಾಶಿವ ರಾಮಚಂದ್ರಗೌಡ ಸೇರಿದಂತೆ ಕಂಪನಿಗಳ ಪ್ರತಿನಿಧಿಗಳು ಹಾಗೂ ಉದ್ಯೋಗಾಕಾಂಕ್ಷಿಗಳು ಇದ್ದರು.





ಡಿಪ್ಲೊಮಾ ಕಾಲೇಜು ಸ್ಥಾಪನೆಗೆ ಮನವಿ

ಶಾಸಕ ಧೀರಜ್ ಮುನಿರಾಜು ಮಾತನಾಡಿ, ತಾಲೂಕಿನಲ್ಲೇ ಅತಿ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ಕೀರ್ತಿಗೆ ಸರಕಾರಿ ಪ್ರಥಮ ದರ್ಜೆ ಕಾಲೇಜು ಪಾತ್ರವಾಗಿದೆ. ಈಗಾಗಲೇ 10,000ಕ್ಕು ಹೆಚ್ಚು ಉದ್ಯೋಗ ಅವಕಾಶಗಳಿವೆ. ಸರ್ಕಾರದ ವತಿಯಿಂದ ದೊಡ್ಡಬಳ್ಳಾಪುರಕ್ಕು ಡಿಪ್ಲೊಮಾ ಕಾಲೇಜು ಮಂಜೂರಾತಿಯಾದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಕಂಪನಿಗಳಲ್ಲಿ ಅತಿ ಹೆಚ್ಚು ಉದ್ಯೋಗಾವಕಾಶಗಳು ಇದ್ದು, ವಿದ್ಯಾರ್ಥಿಗಳಿಗೆ ಡಿಪ್ಲೊಮಾ ಕಾಲೇಜು ತೆರೆಯುವುದರಿಂದ ಓದಿನ ನಂತರ ಉದ್ಯೋಗ ಪಡೆಯಲು ಅನುಕೂಲವಾಗುತ್ತದೆ ಎಂದರಲ್ಲದೆ, 6 ತಿಂಗಳಿಗೊಮ್ಮೆ ಪ್ರತಿ ತಾಲೂಕಿನಲ್ಲಿ ಉದ್ಯೋಗ ಮೇಳ ನಡೆಸಬೇಕು ಎಂದು ತಿಳಿಸಿದರು.

ಇಂಜಿನಿಯರ್ ಮಹದೇವಯ್ಯಗೆ ಬೀಳ್ಕೊಡುಗೆ

• **ಆನೇಕಲ್:** ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಇಂಜಿನಿಯರ್ ವಿಭಾಗ ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗಳಲ್ಲಿ ಇಂಜಿನಿಯರ್ ಎನ್.ಮಹದೇವಯ್ಯ ಅವರು 22 ವರ್ಷ ಕಾಲ ಸುದೀರ್ಘವಾಗಿ ಸೇವೆ ಸಲ್ಲಿಸಿ ಗ್ರಾಮೀಣ ಭಾಗದ ಜನರಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ಪ್ರಮಾಣಿಕವಾಗಿ ಕೆಲಸ ಮಾಡಿದ ಅಂಗವಾಗಿ ತಾಲೂಕಿನ ಜನತೆ ಹಾಗೂ ಗುತ್ತಿಗೆದಾರರು ಬೀಳ್ಕೊಡುಗೆ ನೀಡಿ ಅನೇಕರು ಅಭಿನಂದಿಸಿ ಅವರ ಕಾರ್ಯ ವೈಕರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಇಂಜಿನಿಯರ್ ವಿಭಾಗದ ಕಾರ್ಯಪಾಲಕ ಅಭಿಯಂತರ ರಾಜು ಮಾತನಾಡಿ, ಆನೇಕಲ್ ತಾಲೂಕಿನ ಪಂಚಾಯತ್ ರಾಜ್ ಇಲಾಖೆ ಮತ್ತು ಇಂಜಿನಿಯರ್ ಇಲಾಖೆಯಲ್ಲಿ ಉತ್ತಮವಾಗಿ ಕೆಲಸ ಮಾಡಿ ಜನಸ್ನೇಹಿಯಾಗಿ ಹೆಸರು ಗಳಿಸಿದ ಎನ್.ಮಹದೇವಯ್ಯ ಅವರ ಕಾರ್ಯವೈಖರಿಯನ್ನು ಗುರುತಿಸಿ ಸನ್ಮಾನಿಸುವುದು ಶ್ಲಾಘನೀಯವಾಗಿದೆ, ಇನ್ನು ಅವರ ನಿವೃತ್ತಿ ಜೀವನ ಮತ್ತು ಆರೋಗ್ಯ ಉತ್ತಮವಾಗಿ ಇರಲಿ ಎಂದರು.

ಇಂಜಿನಿಯರ್ ಎನ್.ಮಹದೇವಯ್ಯ ಮಾತನಾಡಿ, ಆನೇಕಲ್ ತಾಲೂಕಿನಲ್ಲಿ 22 ವರ್ಷಗಳ ಕಾಲ ಹಿರಿಯ ಅಧಿಕಾರಿಗಳು ಮತ್ತು ಸಾರ್ವಜನಿಕರ ಸಹಕಾರದಿಂದ ತಾಲೂಕಿನ ಎಲ್ಲಾ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಕುಡಿಯುವ ನೀರು, ಚರಂಡಿ, ರಸ್ತೆ ಮತ್ತು ಸರ್ಕಾರಿ ಅಂಗನವಾಡಿ, ಸರ್ಕಾರಿ ಶಾಲೆ, ಕಟ್ಟಡಗಳು ನಿರ್ಮಾಣ ಸೇರಿದಂತೆ ಅನೇಕ ಅಭಿವೃದ್ಧಿ ಕೆಲಸ ಮಾಡಿ ಜನರ ಪ್ರೀತಿ ವಿಶ್ವಾಸ ಗಳಿಸಲಾಗಿದೆ. ಬಹಳ ಮುಖ್ಯವಾಗಿ ತಾಲೂಕಿನಲ್ಲಿ ಬಹಳಷ್ಟು ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿ, ಹಾಗಾಗಿ ಈ ಸಮಸ್ಯೆಯನ್ನು ನೀಗಿಸಲು ಪ್ರಾಮಾಣಿಕವಾಗಿ ಕೆಲಸ ಮಾಡಿದ ಹಿನ್ನಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಕಾರದಿಂದ ಜಲ ಜೀವನ್ ಮಿಷನ್ ಹಾಗೂ ಹರ್ ಗರ್ ಯೋಜನೆ ಅಡಿಯಲ್ಲಿ ಎಲ್ಲಾ ಗ್ರಾಮಗಳಲ್ಲಿ ಮನೆ ಮನೆಗೆ ನೀರು ಒದಗಿಸಲಾಗಿದೆ. ಇನ್ನು ಸರ್ಕಾರಿ ನೌಕರರಾಗಿ ಇಲಾಖೆಯಲ್ಲಿ 39 ವರ್ಷ ಕಾಲ ಸೇವೆ ಸಲ್ಲಿಸಿ ಯಾವುದೇ ತೊಂದರೆಯಾಗದೇ ನಿವೃತ್ತಿಯಾಗುವುದೇ ಒಂದು ಸಾಧನೆ ಹಾಗಾಗಿ ನನ್ನ ಇಷ್ಟು ವರ್ಷಗಳ ಕಾಲ ಸೇವೆ ಸಲ್ಲಿಸಲು ಜನಪ್ರತಿನಿಧಿಗಳು ಹಾಗೂ ಜನತೆಗೆ ಕೃತಜ್ಞತೆಗಳನ್ನು ಸಲ್ಲಿಸಲಾಗುವುದು ಎಂದು ತಿಳಿಸಿದರು.



▸▸ ಗ್ರಾಮಸ್ಥರು, ಗುತ್ತಿಗೆದಾರರಿಂದ ಸೇವೆ ಶ್ಲಾಘನೆ
▸▸ ಕಾರ್ಯವೈಖರಿಗೆ ಮೆಚ್ಚುಗೆ

ಇನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ದೀರ್ಘ ಕಾಲ ಸೇವೆ ಸಲ್ಲಿಸಿದ ಅವರು, ಆನೇಕಲ್ ತಾಲೂಕು ಪ್ರದೇಶದಲ್ಲಿ ಕುಡಿಯುವ ನೀರಿನ ಸರಬರಾಜು ಹಾಗೂ ನೈರ್ಮಲ್ಯ ವ್ಯವಸ್ಥೆ ಸುಧಾರಣೆಗೆ ಮಹತ್ವದ ಕೊಡುಗೆ ನೀಡಿದ್ದರು.

ಕಾರ್ಯಕ್ರಮದಲ್ಲಿ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿ, ಅವರ ಕಾರ್ಯನಿಷ್ಠೆ, ಪ್ರಾಮಾಣಿಕತೆ ಮತ್ತು ಜನಸೇವೆಯನ್ನು ಕೊಂಡಾಡಿದರು. ಇದೇ ಸಂದರ್ಭದಲ್ಲಿ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಇಂಜಿನಿಯರ್ ಆನೇಕಲ್ ವಿಭಾಗದ ಸಹಾಯಕ ಕಾರ್ಯ ಅಭಿಯಂತರರಾದ ಚಿನ್ನಪ್ಪ, ಹಂಚಿನಾಳ, ಗುತ್ತಿಗೆದಾರರಾದ ಶ್ರೀನಿವಾಸ್ ರೆಡ್ಡಿ, ಗೋವಿಂದರಾಜು, ಅರೇಹಳ್ಳಿ ಮಂಜುನಾಥ್, ಸುರೇಶ್, ಮಂಜುನಾಥ್, ಯಲ್ಲಪ್ಪ ಅನೇಕರು ಹಾಜರಿದ್ದರು.

ಸಂಭವನೀಯ ಕ್ಯಾನ್ಸರ್ ತಡೆಗೆ ಲಸಿಕೆ

▸▸ ಲಯನ್ಸ್ ಕ್ಲಬ್ ಆಫ್ ಆರ್.ಎಲ್.ಜಾಲಪ್ಪ ಇನ್‌ಸ್ಟಿಟ್ಯೂಷನ್ಸ್ ನಿಂದ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ



• **ದೊಡ್ಡಬಳ್ಳಾಪುರ:** ಶಿಸ್ತುಬದ್ಧ ಜೀವನಶೈಲಿ ಮತ್ತು ನಿರಂತರ ದೈಹಿಕ, ಮಾನಸಿಕ ಚಟುವಟಿಕೆಗಳು ಆರೋಗ್ಯಯುತ ಬದುಕಿನ ಮಾರ್ಗದರ್ಶಿ ಸೂತ್ರಗಳಾಗಿರುತ್ತವೆ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಮಕ್ಕಳ ಕ್ಯಾನ್ಸರ್ ವಿಭಾಗದ ಮುಖ್ಯಸ್ಥ ಡಾ.ಅರುಣ್‌ಕುಮಾರ್ ಹೇಳಿದರು.

ಇಲ್ಲಿನ ಲಯನ್ಸ್ ಕ್ಲಬ್ ಆಫ್ ದೊಡ್ಡಬಳ್ಳಾಪುರ ಆರ್.ಎಲ್.ಜಾಲಪ್ಪ ಇನ್‌ಸ್ಟಿಟ್ಯೂಷನ್ಸ್‌ನ ನೇತೃತ್ವದಲ್ಲಿ ಶ್ರೀ ದೇವರಾಜ ಅರಸ್ ವ್ಯವಹಾರ ನಿರ್ವಹಣಾ ಮಹಾವಿದ್ಯಾಲಯ ಮತ್ತು ಆರ್.ಎಲ್.ಜಾಲಪ್ಪ ತಾಂತ್ರಿಕ ಮಹಾವಿದ್ಯಾಲಯಗಳಲ್ಲಿ ಶುಕ್ರವಾರ ಆಯೋಜಿಸಿದ್ದ ಪೀಡಿಯಾಟ್ರಿಕ್ ಕ್ಯಾನ್ಸರ್ (ಮಕ್ಕಳ ಕ್ಯಾನ್ಸರ್) ಜಾಗೃತಿ ಕಾರ್ಯಕ್ರಮದಲ್ಲಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡು ಮಾತನಾಡಿದರು. ಮಕ್ಕಳಲ್ಲಿ ಅನಿಯಂತ್ರಿತ ಜೀವಕೋಶದ ಬೆಳವಣಿಗೆಯಿಂದ ಉಂಟಾಗುವ ಅಪರೂಪದ ಕಾಯಿಲೆ ಇದಾಗಿದ್ದು, ಲ್ಯುಕೇಮಿಯಾ (ರಕ್ತದ ಕ್ಯಾನ್ಸರ್) ಅತ್ಯಂತ ಸಾಮಾನ್ಯವಾಗಿದೆ, ನಂತರದ ಸ್ಥಾನಗಳಲ್ಲಿ ಲಿಂಫೋಮಾ ಮತ್ತು ಮೆದುಳಿನ ಗೆಡ್ಡೆಗಳಿವೆ. ಇವುಗಳಲ್ಲಿ ಶೇ.90ರಷ್ಟು ಆನುವಂಶಿಕವಲ್ಲ, ಆದರೆ ಆನುವಂಶಿಕ ರೂಪಾಂತರಗಳು ರೋಗಕ್ಕೆ ಕಾರಣವಾಗಬಹುದು. ಸಕಾಲಿಕ ಚಿಕಿತ್ಸೆ, ಕಿಮೋಥೆರಪಿ ಮತ್ತು ಆರೈಕೆಯೊಂದಿಗೆ ಸಂಪೂರ್ಣವಾಗಿ ಗುಣಮುಖರಾಗಬಹುದು ಎಂದು ತಿಳಿಸಿದರು.

ಎಚ್‌ಪಿವಿ ಲಸಿಕೆ ಜಾಗೃತಿ

9 ರಿಂದ 14 ವರ್ಷದ ಮಕ್ಕಳಿಗೆ ಹ್ಯೂಮನ್ ಪ್ಯಾಪಿಲೋಮಾ ವೈರಸ್-ಎಚ್‌ಪಿವಿ ಲಸಿಕೆಯನ್ನು ಹಾಕಿಸುವುದು ಅಗತ್ಯ. ಇದು ಸಂಭವನೀಯ ಕ್ಯಾನ್ಸರ್ ಅನ್ನು ತಡೆಗಟ್ಟಬಹುದು. ಇದೀಗ ಭಾರತ ಸರ್ಕಾರವು ಈ ಲಸಿಕೆಯನ್ನು ಸಾರ್ವತ್ರೀಕರಣಗೊಳಿಸುವ ಅಭಿಯಾನ ಆರಂಭಿಸುತ್ತಿದ್ದು, ಮುಂದಿನ ದಿನಗಳಲ್ಲಿ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಆಸ್ಪತ್ರೆಗಳಲ್ಲಿ ಲಸಿಕೆ ದೊರೆಯುವ ಸಾಧ್ಯತೆ ಇದೆ ಎಂದು ಡಾ.ಅರುಣ್‌ಕುಮಾರ್ ತಿಳಿಸಿದರು.

ಸಿರಿಧಾನ್ಯ ಹಬ್ಬ, ಕಿಸಾನ್ ಮೇಳ ಇಂದು

• **ದೇವನಹಳ್ಳಿ:** ಮುಂದಿನ ಪೀಳಿಗೆಗೆ ಸಿರಿಧಾನ್ಯ ಬೆಳೆಗಳ ಬಗ್ಗೆ ಅರಿವು ಮೂಡಿಸಲು ಹಾಗೂ ಸಿರಿಧಾನ್ಯ ಬೆಳೆಯುವ ರೈತರನ್ನು ಪ್ರೋತ್ಸಾಹಿಸಲು ಮತ್ತು ರೈತರು ತಯಾರಿಸುವ ಸಿರಿಧಾನ್ಯದ ಉತ್ಪನ್ನಗಳ ಮೌಲ್ಯವರ್ಧಿತ ಪದಾರ್ಥಗಳ ಕುರಿತು ಜನಸಾಮಾನ್ಯರ ಅರಿವು ಮೂಡಿಸುವ ನಿಟ್ಟಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕೃಷಿ ಇಲಾಖೆ ವತಿಯಿಂದ ಜಿಲ್ಲಾ ಮಟ್ಟದ ಸಿರಿಧಾನ್ಯ ಹಬ್ಬ-2026ರ ಅಂಗವಾಗಿ ಸಿರಿಧಾನ್ಯ ಮತ್ತು ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆಯನ್ನು ಶನಿವಾರ ಬೆಳಗ್ಗೆ 11 ಗಂಟೆಗೆ ದೊಡ್ಡಬಳ್ಳಾಪುರ ತಾಲೂಕಿನ ಮೆಳೇಕೋಟೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಆಯೋಜಿಸಲಾಗಿದೆ.

ಸಿರಿಧಾನ್ಯ ಹಬ್ಬ ಮತ್ತು ಕಿಸಾನ್ ಮೇಳದ ಉದ್ಘಾಟನೆಯನ್ನು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಹಾಗೂ ಬೆಂ. ಗ್ರಾ. ಜಿಲ್ಲೆ ಉಸ್ತುವಾರಿ ಸಚಿವ ಕೆ.ಎಚ್.ಮುನಿ ಯಪ್ಪ ನೆರವೇರಿಸಲಿದ್ದಾರೆ. ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, 5ನೇ ಹಣಕಾಸು ಆಯೋಗದ ಅಧ್ಯಕ್ಷ ಸಿ.ನಾರಾಯಣಸ್ವಾಮಿ ಇತರರು ಉಪಸ್ಥಿತರಿರುವರು.

ಮುಖ್ಯ ಅತಿಥಿಗಳಾಗಿ ಸಂಸದ ಡಾ.ಕೆ.ಸುಧಾಕರ್, ವಿಧಾನ ಪರಿಷತ್ ಸದಸ್ಯರಾದ ಎಸ್.ರವಿ, ಪುಟ್ಟಣ್ಣ, ಎನ್.ನಾಗರಾಜು(ಎಂ.ಟಿ.ಬಿ), ರಾಮೋಜಿ ಗೌಡ, ಶಾಸಕರಾದ ಧೀರಜ್ ಮುನಿರಾಜು, ಎನ್.ಶ್ರೀನಿವಾಸ್, ಬೆಂಗಳೂರು ಗ್ರಾಮಾಂತರ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಬಿ.ರಾಜಣ್ಣ, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶಾಭಿವೃದ್ಧಿ ಯೋಜನೆ ಪ್ರಧಿಕಾರ ಅಧ್ಯಕ್ಷ ಶಾಂತಕುಮಾರ್, ದೊಡ್ಡಬಳ್ಳಾಪುರ ತಾಲೂಕಿನ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ವಿಶ್ವನಾಥರೆಡ್ಡಿ, ಆರ್ಥಿಕ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ಹಾಗೂ ಜಿಪಂ ಆಡಳಿತಾಧಿಕಾರಿಗಳು ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪಿ.ಸಿ.ಜಾಫರ್ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಡಾ.ಕೆ.ಎನ್.ಅನುರಾಧ, ಜಿಲ್ಲಾ ಪೊಲೀಸ್ ಅಧೀಕ್ಷಕರು ಚಂದ್ರಕಾಂತ್, ಉಪಸ್ಥಿತರಿರುತ್ತಾರೆ.



▸▸ ಸಿರಿಧಾನ್ಯ , ಮರೆತುಹೋದ ಖಾದ್ಯಗಳ ಪಾಕ ಸ್ಪರ್ಧೆ ಆಯೋಜನೆ

ಜಿಲ್ಲಾ ಕೃಷಿಕ ಸಮಾಜ ಅಧ್ಯಕ್ಷ ರವಿಕುಮಾರ್ ಆರ್., ದೊಡ್ಡಬಳ್ಳಾಪುರ ತಾಲೂಕು ಕೃಷಿಕ ಸಮಾಜ ಅಧ್ಯಕ್ಷ ಮುರುಳಿಧರ ಆರ್., ದೇವನಹಳ್ಳಿ ತಾಲೂಕು ಕೃಷಿಕ ಸಮಾಜ ಅಧ್ಯಕ್ಷ ಚನ್ನೇಗೌಡ.ಕೆ.ಆರ್., ಹೊಸಕೋಟೆ ತಾಲೂಕು ಕೃಷಿಕ ಸಮಾಜ ಅಧ್ಯಕ್ಷ ಹರೀಶ್ ಕುಮಾರ್ ವಿ., ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರ ಮುಖ್ಯಸ್ಥ ಡಾ.ಹನುಮಂತರಾಯ ವಿಶೇಷ ಆಹ್ವಾನಿತರು.

ಜಿಲ್ಲಾಡಳಿತದಿಂದ ಸಕಲ ಸಿದ್ಧತೆ

• **ದೇವನಹಳ್ಳಿ:** 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಗಳು ಫೆಬ್ರವರಿ 28ರಿಂದ ಮಾರ್ಚ್ 17ರವರೆಗೆ ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಜರುಗಲಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಿಲ್ಲಾಡಳಿತದಿಂದ ಪರೀಕ್ಷೆಗೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಜಿಲ್ಲೆಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ-1ಕ್ಕೆ ನಿಗದಿಪಡಿಸಿರುವ ಪರೀಕ್ಷಾ ಕೇಂದ್ರಗಳು ದೇವನಹಳ್ಳಿ ತಾಲೂಕಿನಲ್ಲಿ 4, ದೊಡ್ಡಬಳ್ಳಾಪುರ ತಾಲೂಕಿನಲ್ಲಿ 3, ಹೊಸಕೋಟೆ ತಾಲೂಕಿನಲ್ಲಿ 7, ನೆಲಮಂಗಲ ತಾಲೂಕಿನಲ್ಲಿ 6 ಒಟ್ಟು 20 ಪರೀಕ್ಷಾ ಕೇಂದ್ರಗಳು ಇವೆ.

ಪರೀಕ್ಷೆಗೆ ನೋಂದಾಯಿಸಿಕೊಂಡ ಹೊಸ ವಿದ್ಯಾರ್ಥಿಗಳು 10,821, ಖಾಸಗಿ ವಿದ್ಯಾರ್ಥಿಗಳು 166, ಪುನರಾವರ್ತಿತ ವಿದ್ಯಾರ್ಥಿಗಳು 578 ಸೇರಿ ಪರೀಕ್ಷೆಗೆ ಹಾಜರಾಗಲಿರುವ ವಿದ್ಯಾರ್ಥಿಗಳ ಸಂಖ್ಯೆ 11,565 ಇದ್ದು, ಕಲಾ ವಿಭಾಗ ದಲ್ಲಿ 833 ವಿದ್ಯಾರ್ಥಿಗಳು, ವಾಣಿಜ್ಯ ವಿಭಾಗದಲ್ಲಿ 5,405, ವಿಜ್ಞಾನ ವಿಭಾಗದಲ್ಲಿ 4,583, ಸರ್ಕಾರಿ ಕಾಲೇಜುಗಳಲ್ಲಿ 1,724 ವಿದ್ಯಾರ್ಥಿಗಳು, ಅನುದಾನಿತ ಕಾಲೇಜಿನಲ್ಲಿ 1,074, ಅನುದಾನರಹಿತ ಕಾಲೇಜಿನಲ್ಲಿ 8,023 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಪರೀಕ್ಷೆಗೆ ಹಾಜರಾಗುವ ಗಂಡು ಮಕ್ಕಳ ಸಂಖ್ಯೆ 4,695, ಹೆಣ್ಣುಮಕ್ಕಳ ಸಂಖ್ಯೆ 6,126 ಸೇರಿ ಒಟ್ಟು 10,821 ವಿದ್ಯಾರ್ಥಿಗಳು ಪರೀಕ್ಷೆಯನ್ನು ಎದುರಿಸಲಿದ್ದಾರೆ, ಪರೀಕ್ಷೆಗಳು ಪಾರದರ್ಶಕತೆ, ಸುವ್ಯವಸ್ಥಿತವಾಗಿ ನಡೆಸುವ ನಿಟ್ಟಿನಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯಿಂದ ಮತ್ತು ಜಿಲ್ಲಾಡಳಿತದಿಂದ ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದು, ಜಿಲ್ಲೆಯ ನಾಲ್ಕು ತಾಲೂಕಿನ ಎಲ್ಲಾ ಪರೀಕ್ಷಾ ಕೇಂದ್ರಗಳ ಕೊಠಡಿಗಳಲ್ಲಿ ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಿ, ವೆಬ್ ಕ್ಯಾಸ್ಟಿಂಗ್ ವ್ಯವಸ್ಥೆಯನ್ನು ಮಾಡಲಾಗಿದೆ.



ದ್ವಿತೀಯ ಪಿಯುಸಿ ಸುಗಮವಾಗಿ, ಸುಲಲಿತವಾಗಿ ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ಯಾವುದೇ ಭಯ-ಭೀತಿ ಇಲ್ಲದೇ ಧೈರ್ಯದಿಂದ ಪರೀಕ್ಷೆ ಎದುರಿಸಿ. ಪರೀಕ್ಷೆ ಬರೆಯಲಿರುವ ಮಕ್ಕಳಲ್ಲಿ ಪೋಷಕರು ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಬೇಕು.

■ ಡಾ.ಕೆ.ಎನ್.ಅನುರಾಧ, ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ

▸▸ ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ

ಮಹಿಳಾ ಮೋರ್ಚಾದಿಂದ ದೂರು



▸▸ ಪ್ರಧಾನಿ ನರೇಂದ್ರ ಮೋದಿ ಅವರ ಫೋಟೋ ವಿಕೃತಗೊಳಿಸಿದ ಬಿಂದು ಸಿರಿ ವಿರುದ್ಧ ದೂರು

• **ನೆಲಮಂಗಲ:** ಪ್ರಧಾನಿ ನರೇಂದ್ರ ಮೋದಿಯವರ ಭಾವಚಿತ್ರವನ್ನು ಅಶ್ಲೀಲ ಹಾಗೂ ವಿಕೃತವಾಗಿ ಸುಳ್ಳು ಮಾಹಿತಿಯ ಪೋಸ್ಟ್ ಮಾಡಿದ್ದ ಬಿಂದು ಸಿರಿ ಎಂಬುವವರ ವಿರುದ್ಧ ನೆಲಮಂಗಲ ಬಿಜೆಪಿ ಮಹಿಳಾ ಮೋರ್ಚಾದಿಂದ ದೂರು ನೀಡಿದ್ದು ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಿಜೆಪಿ ಮಹಿಳಾ ಮೋರ್ಚಾದ ತಾಲೂಕು ಅಧ್ಯಕ್ಷೆ ಮಂಜುಳ ಸುರೇಶ್ ಮಾತನಾಡಿ, ದೇಶ ಹಾಗೂ ದೇಶದ ಮಹಿಳೆಯರಿಗೆ ಅಪಾರ ಗೌರವ ನೀಡುವ ಪ್ರಧಾನಿಯನ್ನು ಈ ರೀತಿ ಕೆಟ್ಟದಾಗಿ ಬಿಂಬಿಸಿರುವುದು ಬಿಜೆಪಿ ಮಹಿಳಾ ಮೋರ್ಚಾ ಖಂಡಿಸುತ್ತದೆ, ಕ್ರಮ ವಹಿಸದಿದ್ದರೆ ಮಹಿಳಾ ಮೋರ್ಚಾದಿಂದ ಉಗ್ರಹೋರಾಟ ಮಾಡಬೇಕಾಗುತ್ತದೆ. ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿಯವರ ಭಾವಚಿತ್ರವನ್ನು ವಿಕೃತಗೊಳಿಸಿ, ಅಶ್ಲೀಲವಾಗಿ ಪೋಸ್ಟರ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಾಕಿಕೊಂಡಿರುವ ಕಾಂಗ್ರೆಸ್ ಕಾರ್ಯಕರ್ತೆ ಬಿಂದು ಸಿರಿ ಅವರ ವಿರುದ್ಧ ಕಾನೂನು ಕ್ರಮವಹಿಸಿ ಪೋಸ್ಟರ್ ಡಿಲೀಟ್ ಮಾಡಿ ಕ್ಷಮೆಯಾಚಿಸಬೇಕು ಎಂದು ನೆಲಮಂಗಲ ನಗರ ಪೊಲೀಸ್ ಠಾಣೆ ಹಾಗೂ ಡಿವೈಎಸ್‌ಪಿಯವರಿಗೆ ದೂರು ನೀಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಜಗದೀಶ್ ಚೌದರಿ, ಪ್ರಧಾನ ಕಾರ್ಯದರ್ಶಿ ಸತೀಶ್, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಬ್ರಂಗೇಶ್, ಶ್ಯಾಮಗೊಂಡ್ಲು ಶಕ್ತಿಕೇಂದ್ರ ಅಧ್ಯಕ್ಷ ಅರುಣ್‌ಕುಮಾರ, ಪುರಸಭೆ ಮಾಜಿ ಅಧ್ಯಕ್ಷ ರವಿ, ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶೀಲಾ, ಪದಾಧಿಕಾರಿಗಳಾದ ಲತಾ, ಶೈಲಜಾ, ಶಾರದ, ಸುಮಲತಾ, ಗೀತಾರಾಧ, ನೀಲಮ್ಮ, ತೇಜು, ಮಂಜುಳಾ ಸೇರಿದಂತೆ ಮತ್ತಿತರರಿದ್ದರು.

ಎಳನೀರು ದರ ತುಸು ಹೆಚ್ಚಳ | ಹೆದ್ದಾರಿ ಇಕ್ಕೆಲಗಳಲ್ಲಿ ಭರ್ಜರಿ ಮಾರಾಟ | ಕಲ್ಲಂಗಡಿ ಆರೋಗ್ಯಕ್ಕೆ ಉತ್ತಮ

ಬಿಸಿಲ ಬೇಗೆಯಿಂದ ಕಲ್ಲಂಗಡಿ ಹಣ್ಣಿನ ಮೊರೆಹೋದ ಜನ


▸ ತಾವರೆಕೆರೆ ಟಿ.ನಾಗರಾಜ್

• **ತಾವರೆಕೆರೆ:** ಬೇಸಿಗೆ ಆರಂಭವಾಗುತ್ತಿದ್ದಂತೆ ದಾಹ ತಣಿಸಲು ಜನ ತಂಪು ಪಾನೀಯಗಳ ಮೊರೆ ಹೋಗುವುದು ಸಾಮಾನ್ಯ. ಅದರಲ್ಲೂ ಪ್ರಿಯವಾದ ಪಾನೀಯವೆಂದರೆ ಎಳನೀರು, ದರಸ್ವಲ್ಪ ದುಬಾರಿ, ಅದಕ್ಕೆ ಪರ್ಯಾಯವೆಂಬಂತೆ ಕಲ್ಲಂಗಡಿ ಸೇವಿಸಿದರೂ ಸಹ ನೀರಿನ ದಾಹ ತಣಿಯುತ್ತದೆ. ಹಾಗಾಗಿ ಇತ್ತೀಚೆಗೆ ಕಲ್ಲಂಡಿಗೆ ಬೇಡಿಕೆ ಹೆಚ್ಚಾಗಿದೆ.

ಜನರು ಬಿಸಿಲಿನ ತಾಪಕ್ಕೆ ಹೈರಾಣಾಗುತ್ತಿದ್ದಾರೆ. ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿ ಶೀತ ಚಳಿ, ಬೆಳಗ್ಗೆ ಮಂಜಿನ ವಾತಾವರಣವಿದ್ದು ಕ್ರಮೇಣ ಕಡಿಮೆಯಾಗುತ್ತ ಬಂದಿದ್ದು ಬಿಸಿಲ ಬೇಗೆ ಹೆಚ್ಚಾಗುತ್ತಿದ್ದಂತೆ ಕಲ್ಲಂಗಡಿ ಹಣ್ಣು ಲಗ್ಗೆ ಇಟ್ಟಿದ್ದು, ರಸ್ತೆ ಬದಿಗಳಲ್ಲಿ ಬರ್ಜರಿ ಮಾರಾಟ ಆರಂಭವಾಗಿದೆ. ಈಗ ಎಲ್ಲೆಡೆ ಗ್ರಾಹಕರು ಬಿಸಿಲಿನ ಬೇಗೆಯಿಂದ ದಣಿವಾರಿಸಿಕೊಳ್ಳಲು ಕಲ್ಲಂಗಡಿ ಹಣ್ಣಿನ ಮೊರೆ ಹೋಗುತ್ತಿದ್ದಾರೆ.

ಎಷ್ಟೇ ನೀರು ಕುಡಿದರು ದಾಹ ನೀಗುವುದಿಲ್ಲ, ತಂಪು ಪಾನೀಯ ಸೇವಿಸಿದರೂ ಗಂಟಲು ಒಣಗುವುದು ಕಡಿಮೆಯಾಗಿಲ್ಲ, ಬಿಸಿಲಿನ ಬೇಗೆಯಿಂದ ಪಾರಾಗಲು ಜನ ತಂಪು ಪಾನೀಯದ ಜೊತೆಗೆ ಕಲ್ಲಂಗಡಿ ಹಣ್ಣು ಹಾಗೂ ಎಳನೀರಿನ ಮೊರೆ ಹೋಗುತ್ತಿದ್ದಾರೆ. ಎಳನೀರು ಒಂದಕ್ಕೆ 40 ರಿಂದ 50 ರೂ. ಕೊಡಬೇಕಾಗುತ್ತದೆ. ಆದರೆ ಕಡಿಮೆ ಬೆಲೆಗೆ ಸಿಗುತ್ತಿರುವ ಕಲ್ಲಂಗಡಿ ಹಣ್ಣು ಖರೀದಿಗೆ ಕಳೆದ ವಾರದಿಂದ ಜನ ಮುಗಿಬೀಳುತ್ತಿದ್ದಾರೆ. ಈ ನಿಟ್ಟಿನಲ್ಲಿ ಬೇಸಿಗೆಗೂ ಮುನ್ನವೇ ಲೋಡುಗಟ್ಟಲೇ ಕಲ್ಲಂಗಡಿ ಹಣ್ಣು ಪಟ್ಟಣ ಮತ್ತು ಹೆದ್ದಾರಿಗಳ ಬದಿಗಳಲ್ಲಿ ತಂದು ಇಳಿಸಿದ್ದಾರೆ.

ಕಲ್ಲಂಗಡಿ ಹಣ್ಣು ಆರೋಗ್ಯಕ್ಕೆ ಉತ್ತಮವಾಗಿದ್ದು ದಾಹ ತಣಿಸಲು ಮತ್ತು ಸೌಂದರ್ಯಕ್ಕೂ ಸಹಕಾರಿಯಾಗುತ್ತದೆ. ಜನತೆಗೆ ಕಲ್ಲಂಗಡಿ ಹಣ್ಣಿನಲ್ಲಿ ಶೇಕಡಾ 90 ಭಾಗದಷ್ಟು ನೀರಿನಾಂಶವಿದ್ದು ರೋಗನಿರೋಧಕಶಕ್ತಿಯನ್ನು ಹೊಂದಿದೆ. ಇದರ ಸೇವನೆಯಿಂದ ರಕ್ತದೊತ್ತಡ ಕಡಿಮೆಯಾಗುತ್ತದೆ. ಮೂಳೆ, ಸ್ನಾಯುಗಳು ಬಲಗೊಳ್ಳುತ್ತವೆ. ಕಿಡ್ನಿ, ಕಣ್ಣನ್ನು ಆರೋಗ್ಯವಾಗಿರಿಸುತ್ತದೆ, ಇದರ ಸೇವನೆಯಿಂದ ಅನೇಕ ಉಪಯೋಗವಿರುವುದರಿಂದ ಕಲ್ಲಂಗಡಿ ಹಣ್ಣನ್ನು ಹೆಚ್ಚು ಮಂದಿ ಸೇವಿಸುತ್ತಾರೆ. ಈಗಾಗಲೇ ಹಲವಾರು ಸ್ಥಳಗಳಲ್ಲಿ ಕಲ್ಲಂಗಡಿ ಹಣ್ಣುಗಳನ್ನು ರಾಶಿ ಹಾಕಿಕೊಂಡು ಮಾರಾಟ ನಡೆಸುತ್ತಿದ್ದು, ಜನರು ಅದರ ಖರೀದಿಗೆ ಮುಗಿಬಿದ್ದಿದ್ದಾರೆ.



ಸಾಮಾನ್ಯವಾಗಿ 1ಕೆಜಿ ಹಣ್ಣಿನ ಬೆಲೆ 20ರಿಂದ 30ರೂ. ಇದ್ದು, ಸುಲಭವಾಗಿ ಎಲ್ಲರಿಗೂ ಲಭ್ಯವಾಗುವ ದರದಲ್ಲಿ ಮಾರಾಟವಾಗುತ್ತಿದೆ. ತಂಪು ಪಾನೀಯಗಳಿಗಿಂತ ಬಿಸಿಲಿನ ತಾಪದಿಂದ ಆರೋಗ್ಯ ರಕ್ಷಣೆಗೆ ಎಳನೀರು ಮತ್ತು ಕಲ್ಲಂಗಡಿ ಉತ್ತಮವಾಗಿದ್ದು, ಖರೀದಿಗೆ ಸಾರ್ವಜನಿಕರು ಮುಗಿಬೀಳುತ್ತಿರುವ ದೃಶ್ಯ ಎಲ್ಲೆಲ್ಲೂ ಕಂಡುಬರುತ್ತಿದೆ.

■ ಕಿರಣ್‌ಕುಮಾರ್, ಗ್ರಾಹಕ

ಸ್ಥಳೀಯವಾಗಿ ಕಲ್ಲಂಗಡಿ ಹಣ್ಣು ಬೆಳೆಯುತ್ತಿಲ್ಲ ಹೊರ ರಾಜ್ಯಗಳಿಂದ ತಂದು ಇಲ್ಲಿ ಮಾರಾಟ ಮಾಡುತ್ತೇವೆ. ಅದರಲ್ಲೂ ಅಗತ್ಯಕ್ಕೆ ತಕ್ಕಂತೆ ಬಿಸಿಲು ಹೆಚ್ಚಾದಂತೆ ದಿನದಿಂದ ದಿನಕ್ಕೆ ಕಲ್ಲಂಗಡಿ ಹಣ್ಣಿನ ವ್ಯಾಪಾರ ಜೋರಾಗುತ್ತದೆ. ಚಿಕ್ಕ ಮಕ್ಕಳಿಂದ ಹಿಡಿದು ದೊಡ್ಡವರು ಸಹ ಬಾಯಿ ಚಪ್ಪರಿಸಿ ತಿನ್ನುತ್ತಾರೆ. 1 ಪ್ಲೇಟಿಗೆ 10ರೂ. ದರವಿದ್ದು, ಪ್ರತಿ ದಿನ ಕಾಯಿ ಸೇರಿ 2 ರಿಂದ 3 ಸಾವಿರ ರೂ. ವ್ಯಾಪಾರವಾಗುತ್ತಿದೆ. ಹಣಕ್ಕಿಂತ ಹಣ್ಣಿನ ರುಚಿಗೆ ಹೆಚ್ಚಿನ ಗಮನ ಹರಿಸುತ್ತಾರೆ. ಗ್ರಾಹಕರ ಅಗತ್ಯಕ್ಕೆ ತಕ್ಕಂತೆ ಉತ್ತಮವಾದ ಹಣ್ಣುಗಳನ್ನು ತಂದು ಮಾರಾಟ ಮಾಡಲಾಗುತ್ತದೆ.

■ ಪೆರುಮಾಳ್, ಕಲ್ಲಂಗಡಿ ವ್ಯಾಪಾರಿ

ಡಿಸಿಯಾಗಿ ಡಾ.ಅನುರಾಧ ಅಧಿಕಾರ ಸ್ವೀಕಾರ



• **ದೇವನಹಳ್ಳಿ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೂತನ ಜಿಲ್ಲಾಧಿಕಾರಿಯಾಗಿ ಡಾ.ಕೆ.ಎನ್.ಅನುರಾಧ ಅವರು ಶುಕ್ರವಾರ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿದರು.

ಈ ಸಮಯದಲ್ಲಿ ಡಿ.ಸಿ.ಕೆ.ಎನ್.ಅನುರಾಧ ಮಾತನಾಡಿ, ಜಿ.ಪಂ. ಕಾರ್ಯವೈಖರಿಯನ್ನು ಮೆಚ್ಚಿ ಸರ್ಕಾರ ನನ್ನನ್ನು ಜಿಲ್ಲಾಧಿಕಾರಿಯನ್ನಾಗಿ ನೇಮಿಸಿರುವುದು ಸಂತಸ ತಂದಿದೆ. ಜಿ.ಪಂ.ನಲ್ಲಿ ಸಹಕಾರ ನೀಡಿದ ಎಲ್ಲಾ ಅಧಿಕಾರಿಗಳಿಗೆ ಕೃತಜ್ಞತೆಗಳನ್ನು ತಿಳಿಸುತ್ತೇನೆ, ಸರ್ಕಾರ ನೀಡಿರುವ ಈ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸುತ್ತೇನೆ ಎಂದರು. ಈ ಸಮಯದಲ್ಲಿ ಅಪರ ಜಿಲ್ಲಾಧಿಕಾರಿ ಸೈಯದಾ ಆಯಿಷಾ, ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಶಿವಕುಮಾರ್, ಇಂಜಿನಿಯರ್ ಸುನಿಲ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹೂಗುಚ್ಛ ನೀಡಿ ಸ್ವಾಗತಿಸಿದರು. ಜಿಲ್ಲಾ ಮಟ್ಟದ ಅಧಿಕಾರಿಗಳು, ಕಂದಾಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

CHANGE OF NAME

I, SUMA KALLANAKUPPE RAMAKRISHNA (Old Name), aged about 54 years, W/o. N.MUNIRAJU, RESIDING AT NO.2402, MAYA INDRADHANUSH, JUDICIAL LAYOUT, MALLASANDRA, THALAGHATTAPURA, BENGALURU-560062, KARNATAKA, declare that I have changed my name from SUMA KALLANAKUPPE RAMAKRISHNA (Old Name) to SUMA MUNIRAJU (New Name), henceforth I shall be known and called as SUMA MUNIRAJU (New Name) for all my personal, official & legal purpose, vide Affidavit dated : 27/02/2026 before Notary GANGARAJU.B.N. at BENGALURU

PUBLIC NOTICE

I the undersigned counsel for the petitioner filed a petition on behalf of the petitioner BHAGYAMMA and other, -V/s- Registrar of Birth and Death, Bengaluru before,1st ACJM at Bengaluru, Bengaluru rural, in Cri. Misc No. 296/2026 recording the death of petitioner father that CHIKKA RAMAIAH SON OF LATE RANGAPPA, expired on 23-01-1953 at. AECS LAYOUT, KUNDHALAHALLI, BENGALURU-560037, any person interested in this matter may appeal before the above court at 11:00 AM on **10-03-2026.**

MANJUNATH, Advocate
No.4, 3rd floor, MSKS Building, Shiruru Park Road, Behind Nataraja theater, Sheshadripuram, Bengaluru-560020.

PUBLIC NOTICE

I the undersigned counsel for the petitioner filed a petition on behalf of the petitioner V. BHAGYAMMA and other, -V/s- Registrar of Birth and Death, Bengaluru before,1st ACJM at Bengaluru, Bengaluru rural, in Cri. Misc No. 398/2026 recording the death of petitioner mother that KRISHNAMMA WIFE OF LATE VENKATAPPA, expired on 26-12-2019 at. No.48, 1st CROSS, NEAR SHIVA TEMPLE, CHALLAGATTA, MARARHALLI COLONY, BENGALURU, any person interested in this matter may appeal before the above court at 11:00 AM on **23-03-2026**

MANJUNATH, Advocate
No.4, 3rd floor, MSKS Building, Shiruru Park Road, Behind Nataraja theater, Sheshadripuram, Bengaluru-560020.

PUBLIC NOTICE

I the undersigned counsel for the petitioner filed a petition on behalf of the petitioner ALLAN CHARIES and other, -V/s- Registrar of Birth and Death, Bengaluru before,1st ACJM at Bengaluru, Bengaluru rural, in Cri. Misc No. 394/2026 recording the death of petitioner mother that BANU CATHERENE WIFE OF LATE ANTHONY RAJ CHARLES, expired on 19-06-2021 at. No.42, 12TH CROSS, 2ND BLOCK AKSHYA NAGAR, T C PALYA, R M NAGAR, BENGALURU 560016, any person interested in this matter may appeal before the above court at 11:00 AM on **23-03-2026**

MANJUNATH, Advocate
No.4, 3rd floor, MSKS Building, Shiruru Park Road, Behind Nataraja theater, Sheshadripuram, Bengaluru-560020.

IN THE COURT OF THE HON'BLE I ADDITIONAL SENIOR CIVIL JUDGE AT TUMAKURU.
MA.No.27/2024

Appellant: Puttasidamma and another
-V/S-
Respondent: Marisidamma and others

DRAFT PAPER PUBLICATION.

Notice to the respondent No.3

D-3. Rekha W/o Rajanna, D/o Revanna Siddaiah, aged about 42 years, R/at Guluru Village, Guluru Hobli, Tumakuru Taluk

Whereas, the appellant has filed the above suit against the respondents for reliefs sought in the appeal and the notice and summons were ordered to serve from the Hon'ble Court through court summons and also through RPAD to defendants, but the respondent No.3 are avoiding to take summons from this Hon'ble Court to drag on the proceedings. Hence the summons is issued through by way of paper publication.

The respondent No.3 are hereby directed to appear before this Hon'ble I Additional Senior Civil Judge at Tumakuru on 18/04/26 at 11:00 A.M. in persons or through their counsel or through an authorized agent, failing which the above case will be decided ex-parte and determined as per law. Given under my hand and seal of this court, this day of 27/02/2026.

By Order of the Court
IN THE COURT OF THE HON'BLE I ADDITIONAL SENIOR CIVIL JUDGE AT TUMAKURU.

Advocate for Appellant
E Hanumatharappa B.Com. L.L.M.
Advocate and Arbitrator, 1st Cross, MG Road, Chikkapete, Tumakuru,
Mobile No.9880515969

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ದಾಸನಪುರ, ಬೆಂಗಳೂರು

ಸಂಖ್ಯೆ: [illegible]/3422/2025-26
ದಿನಾಂಕ: 25.02.2026

-: ಸಾರ್ವಜನಿಕ ಪ್ರಕಟಣೆ :-

[illegible]

ಸಹಿ/- ಕಾರ್ಯದರ್ಶಿ

PUBLIC NOTICE

This is to inform the general public Notices that my client **Sri. Mahendra Choudhary** S/o. Sri. Roparam Choudhary Sri. Ramchandra S/o. Sri. Khuma Ram both are residing at No 38 4th floor Milan House 1st stage 5th phase 2nd cross Mahaganapathi nagar VTC Rajajinagar 3rd Block Bangalore are the absolute Owner of the property which is morefully described in the schedular hereunder and acquired through a registered Sale Deed which is registered as Document No. RJN-1-01183/2023-24, Book-1, and stored in C.D. No. RND1431, in the office of the Sub Registrar Rajajinagar, Bangalore Hence, the original allotment letter dated 19.07.1982 has loss by the previous owner Gowramma and she has lodged Complaint in the jurisdictional police station on 13.10.2022 Therefore, any person(s) having any claim in respect of the below referred property or part thereof by any right/title/interest/otherwise claiming, howsoever, are hereby advised to approach in writing together with supporting documents to the undersigned within a period of 3 days (both days inclusive) of the publication hereof failing which the claim of such person(s) will deemed to have been waived and/or abandoned

All that piece and parcel of the Residential property bearing No. 38, Municipal Corporation No. 38 and PID No.20-38-38, the layout formed by the City improvement trust board (now called as Bangalore development authority BDA) the layout by named as 'West of Chord Road 1st Stage 5th Phase Extension', situated at 2nd Cross Road, West of Chord Road 1st Stage, 5th Phase, Bengaluru, within the limits of BBMP Ward No.107 of Shivanagar and assigned as E-Aasthi property No. 102/38 and E-PID No. 4194679530, measuring East to West: 36½ feet and North to South: 30 feet, totally measuring 1095 Square feet together with house comprising of Ground and First floor.

SMT. SUNANDA .S RATHOD, Advocate
Office at No.8, offices No. 317, Prabhath complex, 1st floor, Bangalore-560 009.
Mob: 9945681973. Date: 27/02/2026

ಸಾರ್ವಜನಿಕ ಪ್ರಕಟಣೆ

[illegible]

[illegible] ಶ್ರೀಮಾನ್ [illegible] ದಿನಾಂಕ: 17/2025

[illegible] ದಿನಾಂಕ:02.04.2026 [illegible]

ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದೊಡ್ಡಬಳ್ಳಾಪುರ

[illegible]

IN THE COURT OF THE 4th ADDITIONAL CIVIL JUDGE AND JMFC AT TUMKUR.
C.MISC No. 35/2026

BETWEEN: S.Nagaraju ... PETITIONER
AND: The Deputy Thasildhar and others ... **RESPONDENT**

NOTICE

Whereas the above named petitioner have filed the above case against the respondent seeking direction to the respondent to issue Death Certificate of his Mother, Who is Late Huccharanarasamma W/o Late H.Suggaiah who was died on 30/06/1972.

Wherefore, is there interested parties in this matter may come and join the case as respondents and appear in person or through an advocate duly instructed before this Hon'ble court on **04/04/2026** and in default, the matter will be heard and dispose of as exparte.

Given under my hand and sign of the court on this 26/02/2026

By order of the Court, Civil Judge and JMFC at Tumkur.

N.H. RANGANATHA, Advocate
Tumkur

ಸಾರ್ವಜನಿಕ ಪ್ರಕಟಣೆ

ಈ ಮೂಲಕ [illegible] ಶ್ರೀಮತಿ [illegible] ವಯಸ್ಸು ಸುಮಾರು 44 ವರ್ಷಗಳು, [illegible] 27, 3ನೇ ಮೇನ್, 7ನೇ ಕ್ರಾಸ್, [illegible] ಬೆಂಗಳೂರು- 560 078, [illegible] 10-06-1983 [illegible] ನಂ. 107, 3ನೇ ಮೇನ್ [illegible] 12ನೇ 'A' ಕ್ರಾಸ್, [illegible] ಬೆಂಗಳೂರು- 560078, [illegible] XXVI ಎ.ಸಿ.ಜೆ.ಎಂ., ಬೆಂಗಳೂರು [illegible]

[illegible] ದಿನಾಂಕ: 04-03-2026 [illegible] 1100 [illegible]

ನ್ಯಾಯಾಲಯದ ಆದೇಶದ ಮೇರೆಗೆ, ಶಿರಸ್ತೇದಾರರು, XXVI ಎ.ಸಿ.ಜೆ.ಎಂ., ಬೆಂಗಳೂರು ನಗರ

ಶ್ರೀ [illegible], ವಕೀಲರು

IN THE COURT OF THE 2ND SENIOR CIVIL JUDGE AND C.J.M AT CHICKBALLAPUR
O.S. NO.18/2017

Plaintiffs :1. Smt. Shanthamma W/o late Subba Reddy, aged about 55 years, Hosahalli village, Mandikal Post and hobli, Chickballapur taluk. **2. Smt. Manjula** W/o Narayanaswamy aged about 25 years, Thirumani village, Somenahalli hobli, Gudibande taluk, Chickballapur District.-**V/S-**
Defendants: Sri. Venkateshappa and others.

DRAFT PAPER PUBLICATION

NOTICE TO THE **DEFENDANT NO.3 LR'S** UNDER ORDER 5 RULE 20(1), READ WITH SECTION 151 OF THE CODE OF CIVIL PROCEDURE.

3. Smt. Subbalakshmamma (dead by LR's)
a) Sri. Jagadish, S/o Late Munegowda & Subbalakshmamma, Aged about 22 years,
b) Sri. Chethan, S/o Late Munegowda & Subbalakshmamma, Aged about 20 years, Both are R/at Cheedachikanahalli Village, Nandi Hobli, Chickballapur Taluk and district.

The Plaintiffs have filed above suit against the defendants for the relief of partition and separate possession and such other reliefs in respect of the schedule properties. You the Defendant No.3 LR's are hereby summoned to appear before this Hon'ble court to answer all such questions relating to the above proceedings in order to enable the court effectually and completely to adjudicate upon and settled all the questions involved.

The above matter is coming up for hearing on 09.03.2026 Defendant No.3 LR's may appear before this court in persons or through your advocate on that day at 11.00.am to file his objections if any. Failing which the matter will be heard and determined exparte in your absence. Given under my and seal of the court this 29th Day of. Jan 2026

SCHEDULE

1. Agriculture land in Sy.No.26/4, measuring 0-10 guntas, situated at Mogalaguppe Village, Kasaba Hobli, Chickballapur Taluk and District, bound as follows:- East by : Land of Jayappa, West by : Land of Jayappa, North by : Land of A.K.Narayanappa, South by : Land of M.R.Venkateshachari. **2.** Agriculture land in Sy.No.50/4, measuring 0-03 guntas, situated at Mogalaguppe Village, Kasaba Hobli, Chickballapur Taluk and District, bound as follows: East by : Land of Lakshmaiah, West by : Land of Gopalareddy, North by : Karab land, South by : Land of Munishamy. **3.** Agriculture land in Sy.No.26/7, measuring 0-7 guntas, situated at Mogalaguppe Village, Kasaba Hobli, Chickballapur Taluk and District, bound as follows: East by : Government School, West by : Land of Jayappa, North by : Land of A.K.Narayanappa,South by : Land of M.R.Venkateshachari. **4.** Agriculture land in Sy.No. 11/2, measuring 0-07 guntas, situated at Mogalaguppe Village, Kasaba Hobli, Chickballapur Taluk and District, bound as follows: East by : Land of Keshavareddy, West by: Land of Rathnamma, North by: Halla, South by: Land of Rathnamma. **5.** Agriculture land in Sy.No.31/1, measuring 01-08 guntas, situated at Mogalaguppe Village, Kasaba Hobli, Chickballapur Taluk bound as follows: East by: Land of Lalithamma, West by: Land of Narayanamma & Chikkaveerappa, North by: Land of Sriramreddy, South by: Land of Lalithamma. **6.** Agriculture land in Sy.No.33/1, measuring 01-19 guntas, situated at Mogalaguppe Village, Kasaba Hobli, Chickballapur Taluk and District, bound as follows: - East by : Lands of Pemmareddy & Sriramreddy, West by : Lands of Anjinappa & Savithramma, North by: Land of Narayanachari, South by: Land of Jayappa. **7.** Agriculture land in Sy.No.2/1, measuring 0-06 guntas, situated at Mogalaguppe Village, Kasaba Hobli, Chickballapur Taluk and District, bound as follows: - East by: Land of 6th defendant, West by: Land of 6th defendant, North by: Land of 6th defendant, South by: Land of 6th defendant. **8.** Agriculture land in Sy.No. 18/2, measuring 0-20 guntas, situated at Mogalaguppe Village, Kasaba Hobli, Chickballapur Taluk and District, bound as follows: East by : Land of Devappa, West by : Land of Jayappa, North by: Land of Venkatarayappa, South by: Land of Pemma Reddy. **9.** Agriculture land in Sy.No.47/2, measuring 0-06 guntas, situated at Mogalaguppe Village, Kasaba Hobli, Chickballapur Taluk and District, bound as follows: - East by: Land of M.R.Venkatachari, West by: Land of RRVenkatachari, North by: Land of R R Venkatachari, South by: Land of R R Venkatachari. **10.** Residential property bearing H.L.No.8, east to west 13 feet and north to south 16 feet situated at Mogalaguppe Village, Kasaba Hobli, Chickballapur Taluk. East by: Vacant site, West by: Road, North by: Vacant space+Byrappa, South by: Road. **11.** Residential property bearing H.L.No.41, east to west 23 feet and north to south 39 feet situated at Mogalaguppe Village, Kasaba Hobli, Chickballapur Taluk and District, bound as follows: East by : Property of Paalu Narayanappa, West by : Property of Byrappa, North by : Property of Doddaveerappa, South by : Vacant space. **12.** Residential property bearing H.L.No.63, east to west 19 feet and north to south 20 feet situated at Mogalaguppe Village, Kasaba Hobli, Chickballapur Taluk and District, bound as follows:- East by : Property of Paalu Narayanappa, West by: Sy.No. property, North by: Property of Ramachari, South by: Property of Chikkanarayanappa.

Take notice that in default of your appearance on the date before mentioned in the suit, it will be heard and determine ex-parte.

By Order of the Court
Sheristhedar, 2nd addl. Senior Civil Judge & J.M.F.C Court, CHICKBALLAPURA-562 101
Advocate for service
P.C.Somashekar, Advocate, Chickballapur

IN THE COURT OF THE 3rd ADDL. CIVIL JUDGE AND JMFC AT ANEKAL
C.Misc. No. 349/2026

BETWEEN : **1. Smt. Gowramma .S**, D/o Late Sampangappa Aged about 64 years, **2. Sri.Prakash .S** S/o Late Sampangappa, Aged about 63 years, **3. Sri. Lokesh .S** S/o Late Sampangappa, Aged about 62 years, **4. Smt. Nagarathna .S**, D/o Late Sampangappa. Aged about 61 years, **5. Sri. Suresh .S** S/o Late Sampangappa. Aged about 60 years, All are R/at Parvathinagar, Attibele Village & Hobli, Anekal Taluk, Bangalore District. **...Petitioner**
AND : The Tahasildhar, Anekal Taluk. **...Respondent**

PAPER PUBLICATION

Whereas the petitioners have filed the above petition for seeking the death certificate of petitioner's mother namely **Munimaramma W/o Late Sampangappa who was died on 10.09.1997** at Parvathinagara, Attibele Village & Hobli, Anekal Taluk, Bangalore District before the 3rd Addl. Civil Judge and JMFC at Anekal, whereas the above petition is fixed for hearing **date 15.04.2026 at 11.00 AM** if anybody interest in this matter regard to appear in this court in personally or by a pleader to file objections the same of you failing which the petition will be disposed on enquiry.

Given under my hand and seal of the court on this 27.02.2026.

By Order of the Court, Sheristedar,
Civil Judge (Jr.Dv.) and JMFC Court, Anekal.
Advocate for Petitioners :
Sri M.V. Manjunath, Advocate
Office at STB Complex, Attibele Main Road, Anekal Town, Anekal Taluk, Bangalore District.

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ದಾಸನಪುರ, ಬೆಂಗಳೂರು

ಸಂಖ್ಯೆ: [illegible]/3423/2025-26
ದಿನಾಂಕ: 25.02.2026

-: ಸಾರ್ವಜನಿಕ ಪ್ರಕಟಣೆ :-

[illegible] ದಿನಾಂಕ:24.02.2026 [illegible] ದಿನಾಂಕ:04.12.2022 [illegible]

ಸಹಿ/- ಕಾರ್ಯದರ್ಶಿ

PUBLIC NOTICE

Public are informed that my client Smt. Anandamma W/o.Govindappa residing at Kemmathimanahalli, Bangalore rural Karnataka-562110.

My client is the absolute owner in possession of the Converted land bearing Site No.16/A, measuring East to West 3ft and North to South 40ft., total measuring 120Sq.ft formed in Sy.No.10/3, Situated at K.Narayanapura Village, K.R. Puram Hobli, Bangalore East Taluk and bounded on;

East by : Site No16;
West by : Site No.16/B
North by : Road;
South by : Private property.

My client has lost the Original property documents i.e. Registered Sale Deed bearing BNS-1-05214/2007-08 dated 26.03.2008, registered in the Office of the Sub-Registrar Banaswadi Bangalore

The said property is in possession of Smt. Anandamma since 26.03.2008 She is the absolute owner and free from all encumbrance whatsoever.

My Client had lost the above mentioned Sale deeds inspite of several efforts the Original deed is not found and she has lodged the police complaint through online dated 06.02.2026, Lost report No. 2048545/2026

If any person found or anyone having any claim or interest over the said property, he/she is requested to forward their claims along with the relevant documents to us within 07 days of this public notice. If we do not receive any claim from any person within 07 days, it will be strictly presumed that this property is absolutely free from any claim or encumbrance and no one has any claim over this property and if any One found the above deed kindly contact below mentioned

PREMA B DUBAE - ADVOCATE
FF0 VI, 4th Floor, Sampoorna Chambers, Vasavi Temple Road, V.V. Puram Bengluru-560004.
Ph. No. 080-42053588/080-42296989

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಯಾದಗಿರ.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಕೆಕೆಆರ್‌ಡಿಬಿ/2025-26/2051 ದಿನಾಂಕ: 26.02.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW 3

(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) 2ನೇ ಕರೆ

1) ಕಾಮಗಾರಿಗಳ ವಿವರ.: Pck. No.YDG-YDG-01-2025-26 (4 Worsk) (1)ಯಾದಗಿರಿ ತಾಲ್ಲೂಕಿನ ಗೌಡಗೇರಾ ಗ್ರಾಮದ ಅಂಗನವಾಡಿ-01 ಕಟ್ಟಡ ನಿರ್ಮಾಣ. (2) ಗುರುಮಿಠಕಲ್ ತಾಲ್ಲೂಕಿನ ಹೊನಗೇರಾ ಗ್ರಾಮದ ಅಂಗನಾವಡಿ-03 ಕಟ್ಟಡ ನಿರ್ಮಾಣ. (3) ಗುರುಮಿಠಕಲ್ ತಾಲ್ಲೂಕಿನ ಶಿವಪೂರ ಗ್ರಾಮದ ಅಂಗನವಾಡಿ-01 ಕಟ್ಟಡ ನಿರ್ಮಾಣ.(4) ಯಾದಗಿರಿ ತಾಲ್ಲೂಕಿನ ಕೌಳೂರು ಗ್ರಾಮದ ಅಂಗನವಾಡಿ-03 ಕಟ್ಟಡ ನಿರ್ಮಾಣ. RDPR/2025-26/BD/WORK_INDENT24509/CALL-2 CAT-I Bidders Only 2) ಲೆಕ್ಕ ಶೀರ್ಷಿಕೆ :2025-26ನೇ ಕೆ.ಕೆ.ಆರ್.ಡಿ.ಬಿ. ಯೋಜನೆ 3) ಟೆಂಡರಿಗಿಟ್ಟ ಅಂದಾಜು ಮೊತ್ತ: ಕನಿಷ್ಠ ಮತ್ತು ಗರಿಷ್ಠ ರೂ. 64.00 ಲಕ್ಷ 4) ಗುತ್ತಿಗೆದಾರರ ದರ್ಜೆ: 3ನೇ ದರ್ಜೆ ಮೇಲ್ಪಟ್ಟು 5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ: 27.02.2026 ರಿಂದ 07.03.2026 ಸಾಯಂಕಾಲ 4:00 ಗಂಟೆವರೆಗೆ 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲಾ) 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 07.03.2026 ಸಾಯಂಕಾಲ 4:00 ಗಂಟೆವರೆಗೆ 8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್ (ಕೆ.ಡಬ್ಲ್ಯೂ- 3): 09.03.2026 ಬೆಳಗ್ಗೆ 11:00 ನಂತರ 9) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ (ಕೆ.ಡಬ್ಲ್ಯೂ- 3): 13.03.2026 ಬೆಳಗ್ಗೆ 11:00 ನಂತರ 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ): ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಯಾದಗಿರ. 11) ಅಂತರಜಾಲ ತಾಣದ ವಿಳಾಸ:https://kppp.karnataka.gov.in

ಸೂಚನೆ :- ಟೆಂಡರರಿಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/- ಕಾರ್ಯಪಾಲಕ ಇಂಜನೀಯರರು,
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಯಾದಗಿರ.

ವಾ.ಸಾ.ಸಂ.ಇ/ಯಾದಗಿರ/556/ಕೆ.ಎಸ್.ಎಂ.ಸಿ.ಎ/2025-26

ಮಾನ್ಯ 15ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬೆಂಗಳೂರು

ಕ್ರಿಮಿನಲ್ ಮಿಸ್. ನಂ. 9978/2025

[illegible]

By the order of the Court, Senior Sheristedar,
XV Addl. Chief Judicial Magistrate Court.
Bengaluru City.

[illegible]

PUBLIC NOTICE

All the General Public are hereby informed that Zinath Unnisa W/o. Anasar Pasha, R/at No.08, 7th Cross, Araleri Road, Adarshanagar, Malur, Kolar - 563130 is the absolute owner of Schedule Property, have lost Original Sale Deed1 1). Dt 12-12-1991, Registered as Doc No. 5993/1991-92 at Sub Registrar Office, Bangalore North Taluk Bangalore, 2). Dt 23-11-2013, Doc No. 4480/2013-14 3). Dt 16-02-2015, Doc No.6090/2014-15 4). Dt 06-05-2017, Doc No. 587/2017-18 at Gandhinagar (Kacharkarahalli) Sub Registrar Office.

Since the Original Sale Deed mentioned above in respect of the Schedule Property was lost by the owner during transit; this public notice is issued, as it is a legal & mandatory requirement. The owner Zinath Unnisa has already given police complaint in this regard as per the Lost Report No. 2083383/2026 dated 26-02-2026. So, the general public are hereby requested that, if any person gets the above-mentioned Original Sale Deeds the same can be handed over to the undersigned or to my client directly and oblige.

SCHEDULE PROPERTY

All that piece and parcel of Eastern Portion of Site No.14, having new municipal No.140/1/14, Assessment No.140/1, Old No.2382/2, of VP Katha No.3716, measuring EW: 20 feet and NS: 45 feet totally measuring 900 Sq feet out of 3375 sq ft) situated at 2nd Cross, 2nd Block, Kacharahalli Village, Kasaba Hobli, Bangalore North Taluk, (White House Road Cross, Near Subash Layout, beside HBR Layout) presently comes under BBMP Ward No.24, Bangalore and bounded by: East by : Property No.15, West by : Property belongs to U MUniswamy, North by : 20 Feet Road, South by : Property No.17

Shridhara Murthy, Advocate
No.79/80, 1st Floor, Kothanur Dinne Main Road, Oppt to Smart Bazar, JP Nagar 7th Phase, Bangalore – 560078.

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಮಾಲೂರು.
ಸಿ.ಮಿಸ್..ಸಂಖ್ಯೆ: 239/2025.

[illegible] ದಿನಾಂಕ : 20.02.2026 [illegible]

ನ್ಯಾಯಾಲಯದ ಆಜ್ಞೆ ಮೇರೆಗೆ
ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮತ್ತು ಜೆ.ಎಂ.ಎಫ್.ಸಿ. ಮಾಲೂರು.

[illegible]

ಮಾನ್ಯ 15ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬೆಂಗಳೂರು

ಕ್ರಿಮಿನಲ್ ಮಿಸ್. ನಂ. 9980/2025

[illegible] ದಿನಾಂಕ 15.04.2026 ರಂದು ಬೆಳಗ್ಗೆ 11.00 ಗಂಟೆಗೆ [illegible] ದಿನಾಂಕ: 18.02.2026 [illegible]

By the order of the Court, Senior Sheristedar,
XV Addl. Chief Judicial Magistrate Court.
Bengaluru City.

[illegible]

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜನಿಯರಿಂಗ್ ವಿಭಾಗ

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಆಕುಕ ಇಂಜನಿಯರಿಂಗ್ ವಿಭಾಗ,
ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.
(Ph. No: 0821-2979772 E-mail:-khsdrp.divmys@gmail.com)

ಸಂಖ್ಯೆ: ಆಕುಕ/ಇಂ.ವಿ./ಕಾ.ಅ/ಮೈ/ಸಇ-1&2/ಟೆಂಡರ್-32 ಮತ್ತು 29-2ನೇ ಕರೆ/ಪಿ.ಎಂ.ಸಿ/2025-26 ದಿ: 24.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜನಿಯರಿಂಗ್ ವಿಭಾಗ, ಮೈಸೂರು ವ್ಯಾಪ್ತಿಗೆ ಒಳಪಡುವ ಕೊಡಗು, ಹಾಸನ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಈ ವಿಭಾಗ ವತಿಯಿಂದ ಕೈಗೊಂಡಿರುವ ನಿರ್ಮಾಣ, ನವೀಕರಣ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಯೋಜನಾ ನಿರ್ವಹಣೆ ಸಮಾಲೋಚಕರನ್ನು ನೇಮಿಸಲು ಸೇವಾ ಟೆಂಡರ್‌ಗಳನ್ನು ದ್ವಿ-ಟೆಂಡರ್ ದಾಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (Karnataka Public Procurement portal) ಮೂಲಕ ಆಹ್ವಾನಿಸಲಾಗಿದೆ. ಸೇವಾ ಟೆಂಡರ್‌ಗಳ ಅಂದಾಜು ಮೊತ್ತ ಗರಿಷ್ಠ ರೂ.41.74 ಲಕ್ಷಗಳು ಕನಿಷ್ಠ ರೂ.2.26 ಲಕ್ಷಗಳಾಗಿರುತ್ತದೆ.

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 05.03.2026 ರಂದು 16.00 ಗಂಟೆಯವರೆಗೆ **2)** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): 06.03.2026 ರಂದು 16.30 ಗಂಟೆಗೆ. ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸೂಚನೆ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **2)** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಆಕುಕ ಇಂಜನಿಯರಿಂಗ್ ವಿಭಾಗ, ಮೈಸೂರು.

DIPR/DDMYS/1756/KSMCA/991/2025-26

ನಮೂನೆ ಐ.ಎನ್.ಸಿ.-25ಎ

ಸಾರ್ವಜನಿಕ ಕಂಪನಿಯನ್ನು ಖಾಸಗಿ ಕಂಪನಿಯಾಗಿ ಪರಿವರ್ತಿಸುವ ಬಗ್ಗೆ ವಾರ್ತಾಪತ್ರಿಕೆಯಲ್ಲಿ ಪ್ರಕಟಿಸಬೇಕಾದ ಜಾಹೀರಾತು

ಪ್ರಾದೇಶಿಕ ನಿರ್ದೇಶಕರು, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ, ನೈರುತ್ಯ ಪ್ರದೇಶ, ಬೆಂಗಳೂರು

ಕಂಪನಿಗಳ ಕಾಯಿದೆ, 2013, ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 14 ಮತ್ತು ಕಂಪನಿಗಳ (ಸ್ಥಾಪನೆ) ನಿಯಮಗಳು, 2014 ನಿಯಮ 41 ರ ವಿಷಯದಲ್ಲಿ

ಮತ್ತು

ಮೆ. ತುಂಗಭದ್ರಾ ಬೆನಿಫಿಶಿಯೇಷನ್ ಲಿಮಿಟೆಡ್, ನೋಂದಾಯಿತ ಕಛೇರಿ ವಿಳಾಸ: ನಂ.52/44, 2ನೇ ಕ್ರಾಸ್, ಗಣೇಶ ಬ್ಲಾಕ್, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560096 ವಿಷಯದಲ್ಲಿ

.... ಅರ್ಜಿದಾರ

[illegible] ಫೆಬ್ರವರಿ 09, 2026 [illegible]

ಅರ್ಜಿದಾರರು ಮತ್ತು ಪರವಾಗಿ
ಮೆ. ತುಂಗಭದ್ರಾ ಬೆನಿಫಿಶಿಯೇಷನ್ ಲಿಮಿಟೆಡ್

ಮ್ಯಾನೇಜಿಂಗ್ ಡೈರೆಕ್ಟರ್
(ಡಿಐಎನ್: 00502359)

ಅರ್ಜಿದಾರ ಕಂಪನಿಯ ನೋಂದಾಯಿತ ಕಛೇರಿ ವಿಳಾಸ:
ಮೆ. ತುಂಗಭದ್ರಾ ಬೆನಿಫಿಶಿಯೇಷನ್ ಲಿಮಿಟೆಡ್
ಸಿಐಎನ್: **U01100KA2010PLC055188**
ನಂ. 52/44, 2ನೇ ಕ್ರಾಸ್, ಗಣೇಶ ಬ್ಲಾಕ್, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560096

ದಿನಾಂಕ:28–02–2026
ಸ್ಥಳ: ಬೆಂಗಳೂರು

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ-75 ರಸ್ತೆ ಕೆಫೆ ಕಾಫಿಡೇ ಹತ್ತಿರ, ನರಸಾಪುರ-563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಇ-ಮೇಲ್: eemidklr@rediffmail.com, eemigwddkolar@gmail.com ದೂರವಾಣಿ ಸಂಖ್ಯೆ: 08152-200049

ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/2845/2025-26/ ದಿನಾಂಕ:23.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 31/2025-26/ ದಿನಾಂಕ: 23.02.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆಡಬ್ಲ್ಯೂ-1&2 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 20 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಮೊತ್ತ ರೂ.49.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ. 7.00 ಲಕ್ಷ. ನಿಗದಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ-ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ-ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ **www.kppp.karnataka.gov.in** ನಲ್ಲಿ **ದಿನಾಂಕ: 24.02.2026 ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download).** ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ **(Upload) ಕೊನೆಯ ದಿನಾಂಕ: 03.03.2026 ಸಂಜೆ 04:30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.03.2026ರ ಸಂಜೆ 04:30 ಗಂಟೆಯ ನಂತರ.** ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ **www.kppp.karnataka.gov.in** ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:518/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ

ಗದಗ-ಬೆಟಗೇರಿ ವ್ಯಾಪಾರ ಸಂಸ್ಕೃತಿ ಮತ್ತು ವಸ್ತು ಪ್ರದರ್ಶನ ಪ್ರಾಧಿಕಾರ

(ನಗರಾಭಿವೃದ್ಧಿ ಇಲಾಖೆ)
ಜಿಲ್ಲಾಧಿಕಾರಿಗಳ ಕಾರ್ಯಾಲಯ (ಜಿಲ್ಲಾಆಡಳಿತ ಭವನ)
PH No. 08372-231877 ka.gadag.dudc@gmail.com. deo.gadag@gmail.com

ಸಂಖ್ಯೆ: ಗಬೆವ್ಯಾಸಂ&ವಪ್ರಾ/ವಹಿ-15/2025-26 ದಿನಾಂಕ : 27-02-2026

ಟೆಂಡರ್ ಪ್ರಕಟಣೆ

ಗದಗ-ಬೆಟಗೇರಿ ವ್ಯವಹಾರ, ಸಂಸ್ಕೃತಿ ಮತ್ತು ಪ್ರದರ್ಶನ ಪ್ರಾಧಿಕಾರದ ಆಯುಕ್ತರು, ಕರ್ನಾಟಕ ಸರ್ಕಾರದ ಮೂಲಸೌಕರ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡಿನ ಜಲ ಸಾರಿಗೆ ಇಲಾಖೆ **(IDP&IWTD)** ನಿಂದ ಎಂಪನೇಲ್ ಮಾಡಲಾದ ಸಲಹೆಗಾರರಿಂದ **RFP** ದಾಖಲೆಗಳನ್ನು ಬಳಸಿಕೊಂಡು ಪೂರ್ವ-ಅರ್ಹ ಬಿಡ್ಡರ್‌ಗಳ ಟೆಂಡರ್‌ಅನ್ನು ಆಹ್ವಾನಿಸುತ್ತಾರೆ. ದಿನಾಂಕ : 01.06.2023 ರಂದು ಅಧಿಸೂಚನೆ ಸಂಖ್ಯೆ **IDP&IWTD 94 ITS 2022,** ಕರ್ನಾಟಕದ ಗದಗ ಜಿಲ್ಲೆಯ ಗದಗ-ಬೆಟಗೇರಿಯಲ್ಲಿ ವ್ಯಾಪಾರ ಕೇಂದ್ರದ ಅಭಿವೃದ್ಧಿಗಾಗಿ ವಹಿವಾಟು ಸಲಹಾ ಸೇವೆಗಳನ್ನು ಒದಗಿಸಲು ಸಲಹೆಗಾರರನ್ನು ಆಯ್ಕೆ ಮಾಡಲು **ರೂ. 500** ಕೋಟಿ ಯೋಜನಾ ವೆಚ್ಚ ಮತ್ತು ಸಾಮಾಜಿಕ ಮತ್ತು ವಾಣಿಜ್ಯ ವಲಯ. ಹಾಗೂ ಇಂಡೆಂಟ್ ಸಂಖ್ಯೆ. **GBBCEA/2025-26/SE0001/CALL-2.** ಬಿಡ್ಡರ್‌ಗಳು **www.kppp.karnataka.gov.in**ನಲ್ಲಿ **KPP** ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಬಹುದು ಮತ್ತು ಸಲ್ಲಿಸಬಹುದು. ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **26-03-2026** ರಂದು ಸಂಜೆ 5.30 ಗಂಟೆಯವರೆಗೆ ಮತ್ತು ಟೆಂಡರ್‌ಗಳನ್ನು ತೆರೆಯುವ ದಿನಾಂಕ (ಆರ್ಥಿಕ ಬಿಡ್) ದಿನಾಂಕ : **30-03-2026** ರಂದು ಸಂಜೆ 11.00 ಗಂಟೆಯವರೆಗೆ. ಕಾರ್ಯಕ್ರಮಗಳ ಕ್ಯಾಲೆಂಡರ್ ಅನ್ನು ಮುಂದೂಡುವುದು (ಯಾವುದೇ ತಿದ್ದುಪಡಿ/ಅನುಬಂಧಗಳಿದ್ದರೆ) ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಮತ್ತು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/- ಆಯುಕ್ತರು
ಗದಗ-ಬೆಟಗೇರಿ ವ್ಯಾಪಾರ ಸಂಸ್ಕೃತಿ ಮತ್ತು ವಸ್ತು ಪ್ರದರ್ಶನ ಪ್ರಾಧಿಕಾರ ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/683/2025-26

ಸ್ಥಾಪನೆ: 1907

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ, ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18
ಕಛೇರಿ ☎ 26678572 : 26600512 : 26609066 : 57765582
ವೆಬ್: bccbl.co.in, ಇ-ಮೇಲ್ ಐಡಿ : recovery@bccbl.co.in

ಸ್ಥಿರ ಸ್ವತ್ತುಗಳ ಸ್ವಾಧೀನದ ಬಗ್ಗೆ ಪ್ರಕಟಣೆ (ವಾಸ್ತವಿಕ)

[illegible]

ಕ್ರ.ಸಂ.	ಸಾಲಗಾರರ ಹೆಸರು	ಬಾಕಿ ಇರುವ ಮೊತ್ತ	ಸ್ವತ್ತುಗಳ ವಿವರ ಮತ್ತು ಚಕ್ಕುಬಂದಿ
ಎಲೆಕ್ಟ್ರಾನಿಕ್ ಸಿಟಿ ಶಾಖೆ:			
01	[illegible]	ತಾಗಾದೆ ನೋಟೀಸ್ ದಿನಾಂಕ : 01.12.2025; ಸ್ವಾಧೀನ ನೋಟೀಸ್ ದಿನಾಂಕ : 23.02.2026; ಬಾಕಿ ಇರುವ ಮೊತ್ತ : ರೂ. 99,10,928/-; ದಿನಾಂಕ : 23.02.2026 ಕ್ಕೆ ಇದ್ದಂತೆ	[illegible] ಖಾತಾ ನಂ.223/222, [illegible] ಖಾತಾ ನಂ.224/223/222, [illegible] ಪೂರ್ವ ಪಶ್ಚಿಮ: 44.9 ಅಡಿ, ದಕ್ಷಿಣದ ಕಡೆ: 44.9 ಅಡಿ [illegible] ಉತ್ತರ ದಕ್ಷಿಣ: 40 ಅಡಿ, [illegible] 28.9 ಅಡಿ [illegible]
02	[illegible]	ತಾಗಾದೆ ನೋಟೀಸ್ ದಿನಾಂಕ : 01.12.2025; ಸ್ವಾಧೀನ ನೋಟೀಸ್ ದಿನಾಂಕ : 23.02.2026; ಬಾಕಿ ಇರುವ ಮೊತ್ತ : ರೂ. 19,38,539/-; ದಿನಾಂಕ : 23.02.2026 ಕ್ಕೆ ಇದ್ದಂತೆ	[illegible] 54/2, [illegible] 53 CMC ಖಾತಾ [illegible] 961, [illegible] 2102, [illegible] 20 ಅಡಿ, 15 ಅಡಿ [illegible]

ಸ್ಥಳ : ಬೆಂಗಳೂರು
ದಿನಾಂಕ : 27.02.2026

ಸಹಿ/- ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿ.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್. ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561 203
ದೂರವಾಣಿ : 080-29562046

ಸಂಖ್ಯೆ: DPA/TP/CLU/78/2025-26 ದಿನಾಂಕ: 27.02.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು 'ವ್ಯವಸಾಯ' ವಲಯದಿಂದ 'ವಾಣಿಜ್ಯ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು (RTC ರನ್ವಯ)	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ (ಎ-ಗು)	ಡಿಬಿಎಪಿಎ ಯೋಜನಾ ಪ್ರಾಧಿಕಾರದ ಮಹಾಯೋಜನೆಯಲ್ಲಿನ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1.	ಶ್ರೀ ಎಸ್. ಮಂಜುನಾಥ್ ಬಿನ್ ಶಂಕರಪ್ಪ	ದೊಡ್ಡಬಳ್ಳಾಪುರ	ಕಸಬಾ	ರಾಜಘಟ್ಟ	21/8	0-19.50	ವ್ಯವಸಾಯ	ವಾಣಿಜ್ಯ

ಷರಾ:- ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಾಣಿಜ್ಯ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಹಾಗೂ ಸಾರ್ವಜನಿಕರು ವಾಣಿಜ್ಯ ಚಟುವಟಿಕೆಗಳನ್ನು ನಡೆಸಲು ಸಹಕಾರಿಯಾಗಲಿದೆ ಎಂಬುದಾಗಿ ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಾಣಿಜ್ಯ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಕಾಂಗ್ರೆಸ್ ವಿರುದ್ಧ ಪ್ರಧಾನಿ ಮೋದಿ ಕಿಡಿ

ಭಾರತದ ಪ್ರತಿಷ್ಠೆಗೆ ಧಕ್ಕೆ ತರುವ ಯತ್ನ

• **ಹೊಸದಿಲ್ಲಿ:** ಎಐ ಇಂಪ್ಯಾಕ್ಟ್ ಸಮಿಟ್ ವೇಳೆ ನಡೆದ ಯುವ ಕಾಂಗ್ರೆಸ್ ಶರ್ಟ್‌ರಹಿತ ಪ್ರತಿಭಟನೆ ಸಂಬಂಧ ಮತ್ತೊಮ್ಮೆ ಕಿಡಿಕಾರಿರುವ ಪ್ರಧಾನಿ ನರೇಂದ್ರ ಮೋದಿ ಅವರು, ದೇಶದ ಅತಿಥಿಗಳೆದುರೇ ಭಾರತದ ಚಿತ್ರವನ್ನು ಹಾಳು ಮಾಡಲು ಯತ್ನಿಸಿದೆ ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಖಾಸಗಿ ವಾಹಿನಿಯೊಂದು ಆಯೋಜಿಸಿದ್ದ ರೈಸಿಂಗ್ ಭಾರತ ಎಂಬ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಫೆ.21ರಂದು ಮುಕ್ತಾಯವಾದ ಎಐ ಶೃಂಗಸಭೆ ದೇಶದ ಹೆಮ್ಮೆಯ ಕ್ಷಣವಾಗಿತ್ತು. ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಭಾರತ ಜಾಗತಿಕ ಚರ್ಚೆಯನ್ನು ರೂಪಿಸುತ್ತಿರುವ ಸಂದರ್ಭದಲ್ಲಿ ಈ ರೀತಿಯ ಪ್ರತಿಭಟನೆ 'ಕೀಳು ತಂತ್ರ' ಎಂದು ಪ್ರಧಾನಿ ಟೀಕಿಸಿದರು. ವಿದೇಶಿ ಅತಿಥಿಗಳ ಸಮ್ಮುಖದಲ್ಲಿ ಕಾಂಗ್ರೆಸ್ ತನ್ನ 'ಸೈದ್ಧಾಂತಿಕ ದಿವಾಳಿತನ' ಬಯಲು ಮಾಡಿಕೊಂಡಿದೆ ಎಂದು ಹೇಳಿದರು.

'ಕಾಂಗ್ರೆಸ್ ಎಷ್ಟೇ ಶರ್ಟ್ ಹರಿದರೂ ನಾವು ನಮ್ಮ ಕೆಲಸ ಮಾಡುತ್ತೇವೆ,' ಎಂದು ಸ್ಪಷ್ಟಪಡಿಸಿದ ಪ್ರಧಾನಿ, ವಿಫಲತೆಗಳಿಂದ ಹುಟ್ಟಿದ ನಿರಾಶೆ ಮತ್ತು ಅಹಂಕಾರವೇ ಅವರ ಇಂಥ ಅಂಧ ವಿರೋಧಗಳಿಗೆ ಕಾರಣ ಎಂದು ಕಿಡಿಕಾರಿದರು.

ಬಾಪು ಹೆಸರಿನಿಂದ ತಪ್ಪು ಮುಚ್ಚುವ ಪ್ರಯತ್ನ: ಪ್ರತಿಭಟನೆಗೆ ಸಂಬಂಧಿಸಿ ಮಹಾತ್ಮ ಗಾಂಧಿಯ ಹೆಸರನ್ನು ಮುಂದಿಟ್ಟಿರುವ ಕುರಿತು ಮಾತನಾಡಿದ ಪ್ರಧಾನಿ, ಕಾಂಗ್ರೆಸ್ ತನ್ನ ತಪ್ಪುಗಳನ್ನು ಮುಚ್ಚಲು ಸದಾ ಬಾಪು ಹೆಸರನ್ನು ಬಳಸುತ್ತದೆ, ಆದರೆ ಶ್ರೇಯಸ್ಸು ಬಂದಾಗ ಒಂದೇ ಕುಟುಂಬಕ್ಕೆ ನೀಡುತ್ತದೆ ಎಂದು ಆರೋಪಿಸಿದರು.

370 ವಿಧಿ ರದ್ದು, ತ್ರಿವಳಿ ತಲಾಖ್ ನಿಷೇಧ, ಸಿಎಎ, ಮಹಿಳಾ ಮೀಸಲು ಮಸೂದೆ, ಯುಸಿಜಿ, ಸರ್ಜಿಕಲ್ ಸ್ಟ್ರೈಕ್, ಅಶೋಕ ಸ್ತಂಭ ಸೇರಿದಂತೆ ಹಲವು ವಿಚಾರಗಳಲ್ಲಿ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿದೆ ಎಂದು ಉಲ್ಲೇಖಿಸಿದ ಅವರು, 'ಸಿದ್ಧಾಂತದ ಹೆಸರಿನಲ್ಲಿ ಕಾಂಗ್ರೆಸ್ ಈಗ ಕೇವಲ ಟೂಲ್‌ಕಿಟ್ ಆಗಿ ಕುಗ್ಗಿದೆ,' ಎಂದು ಟೀಕಿಸಿದರು.



ಪ್ರತಿಪಕ್ಷ ಪರ್ಯಾಯ ದೃಷ್ಟಿಕೋನ ನೀಡಲಿ

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಪ್ರತಿಪಕ್ಷದ ಪಾತ್ರ ಅಂಧವಿರೋಧವಲ್ಲ; ಪರ್ಯಾಯ ದೃಷ್ಟಿಕೋನ ಮಂಡಿಸುವುದಾಗಿದೆ ಎಂದು ಪ್ರಧಾನಿ ತಿಳಿಸಿದರು. 2047ರೊಳಗೆ ಆತ್ಮನಿರ್ಭರ, ಶಕ್ತಿಶಾಲಿ ಭಾರತ ನಿರ್ಮಾಣ ನಮ್ಮ ಗುರಿ. ಕಾಂಗ್ರೆಸ್ ಎಷ್ಟೇ ವಿರೋಧಿಸಿ ದರೂ ನಾವು ನಿರಂತರವಾಗಿ ಕೆಲಸ ಮುಂದು ವರಿಸಿಕೊಂಡು ಹೋಗುತ್ತೇವೆ ಎಂದು ಹೇಳಿದರು.

ಆತ್ಮವಿಶ್ವಾಸಿ ಭಾರತವೇ ವ್ಯಾಪಾರ ಒಪ್ಪಂದಗಳ ಆಧಾರ: ಕಳೆದ 11 ವರ್ಷಗಳಲ್ಲಿ ಭಾರತ ತನ್ನ ಶಕ್ತಿಯನ್ನು ಮರು ಅನ್ವೇಷಿಸಿಕೊಂಡು ವಿಶ್ವಾಸದ ಮನೋಭಾವದಿಂದ ಹೊರಬಂದಿದೆ ಎಂದು ಪ್ರಧಾನಿ ಹೇಳಿದರು. ಒಂದು ಕಾಲದಲ್ಲಿ ವಿದೇಶಿ ತಂತ್ರಜ್ಞಾನವನ್ನು ನಕಲಿಸುತ್ತಿದ್ದ ಭಾರತ, ಇಂದು ಅಭಿವೃದ್ಧಿಹೊಂದಿದ ರಾಷ್ಟ್ರಗಳೇ ವ್ಯಾಪಾರ ಒಪ್ಪಂದಕ್ಕೆ ಮುಂದಾಗುವ ಮಟ್ಟಿಗೆ ಬೆಳೆದಿದೆ. ಕೆಲವರಿಗೆ ಇದು ನಂಬಲಾಗದ ಸಂಗತಿ ಎಂದರು.

ಬ್ಯಾಂಕಿಂಗ್ ವ್ಯವಸ್ಥೆ ಬಲಪಡಿಸುವುದು, ದರ ಏರಿಕೆಯನ್ನು ನಿಯಂತ್ರಿಸುವುದು, ಭಾರತವನ್ನು ಜಾಗತಿಕ ಬೆಳವಣಿಗೆಯ ಎಂಜಿನ್ ಆಗಿ ರೂಪಿಸುವುದು ದೇಶದ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿದೆ ಎಂದು ಹೇಳಿದರು.

ವ್ಯಾಪಾರ ವೃದ್ಧಿಸಲು ಪ್ರವಾಸ: ಕಾರ್ನಿ

• **ಮುಂಬೈ:** ಭಾರತ ವಿಶ್ವದಲ್ಲಿಯೇ ಅತಿ ವೇಗದಲ್ಲಿ ಮುನ್ನುಗ್ಗುತ್ತಿರುವ ಆರ್ಥಿಕತೆಯಾಗಿದ್ದು, ಕೆನಡಾದ ಕಾರ್ಮಿಕರು ಮತ್ತು ಉದ್ಯಮಗಳಿಗೆ ಹೊಸ ವ್ಯಾಪಾರ ಅವಕಾಶಗಳನ್ನು ಸೃಷ್ಟಿಸಬಲ್ಲ ಪಾಲುದಾರಿಕೆ ಸಂಬಂಧ ಬೆಸೆಯುವುದಕ್ಕಾಗಿ ಭಾರತಕ್ಕೆ ಭೇಟಿ ನೀಡಿದ್ದೇನೆ ಎಂದು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಶುಕ್ರವಾರ ಹೇಳಿದ್ದಾರೆ.

ತಮ್ಮ ನಾಲ್ಕು ದಿನಗಳ ಭಾರತ ಪ್ರವಾಸದ ಹಿನ್ನೆಲೆ ಶುಕ್ರವಾರ ಮುಂಬೈಗೆ ಬಂದಿಳಿದ ಕೆನಡಾ ಪ್ರಧಾನಿಗೆ ಕೆಂಪು ಹಾಸಿನ ಸ್ವಾಗತವನ್ನು ನೀಡಲಾಯಿತು.

ಕಾರ್ನಿ ತಮ್ಮ ನಿಯೋಗದೊಂದಿಗೆ ಸೋಮವಾರ ದಿಲ್ಲಿಗೆ ಪ್ರಯಾಣಿಸಲಿದ್ದು, ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿಯಾಗಿ ಚರ್ಚೆ ನಡೆಸಲಿದ್ದಾರೆ.

ಮೋದಿ ಜತೆ ವ್ಯಾಪಾರ, ಹೂಡಿಕೆ ಮತ್ತು ಖಲಿಸ್ತಾನಿ ಉಗ್ರ ಸಂಘಟನೆಯ ನಿಗ್ರಹ ಸೇರಿ ಹಲವು ಕ್ಷೇತ್ರಗಳಲ್ಲಿನ ದ್ವಿಪಕ್ಷೀಯ ಸಹಯೋಗದ ಕುರಿತು ಕಾರ್ನಿ ಚರ್ಚೆ ನಡೆಸಲಿದ್ದಾರೆ.

ಟ್ರುಡೊ ಕುತಂತ್ರ ಮರೆಸುವ ಯತ್ನ: ಕೆನಡಾ ಮಾಜಿ ಪ್ರಧಾನಿ ಜಸ್ಟಿನ್ ಟ್ರುಡೊಯಿಂದಾಗಿ ಹಳಸಿದ ಭಾರತದೊಂದಿಗಿನ ಸಂಬಂಧ ಸುಧಾರಣೆಗೆ ಕಾರ್ನಿ ಉತ್ತೇಜನ ನೀಡುತ್ತಿದ್ದು, ಖಲಿಸ್ತಾನಿ ವಿಚಾರದಲ್ಲಿ ಟ್ರುಡೊಯ ಭಾರತ ವಿರೋಧಿ ನಿಲುವನ್ನು ಕಾರ್ನಿ ಬದಲಿಸುವ ನಿರೀಕ್ಷೆಯಿದೆ.

ತಾಜ್ ಹೋಟೆಲ್‌ನಲ್ಲಿ ಕಾರ್ನಿ: ಮುಂಬೈಗೆ ಬಂದಿಳಿದ ಪ್ರಧಾನಿ ಕಾರ್ನಿ ಮತ್ತು ಅವರ ಪತ್ನಿ ಡಯಾನಾ ಫಾಕ್ಸ್ ಕಾರ್ನಿ ತಾಜ್ ಹೋಟೆಲ್‌ನಲ್ಲಿ ವಿಶ್ರಾಂತಿ ಪಡೆದಿದ್ದಾರೆ.

ಭಾರತದ ನೆರೆಯ ಇಸ್ಲಾಮಿಕ್ ರಾಷ್ಟ್ರಗಳೆರಡರ ನಡುವಿನ ಸಂಘರ್ಷ ತಾರಕಕ್ಕೇರಿದ್ದು, ಅಫ್ಘಾನಿಸ್ತಾನದ ವಿರುದ್ಧ ಪಾಕಿಸ್ತಾನ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಯುದ್ಧ ಘೋಷಿಸಿದ್ದಾರೆ. ಅಫ್ಘಾನ್ ಇಂದಿಗೂ ಒಪ್ಪಿಕೊಳ್ಳದ ಖೈಬರ್ ಪಖ್ತುನ್‌ಖ್ವಾದಲ್ಲಿನ 2,611 ಕಿ.ಮೀ. ವ್ಯಾಪ್ತಿಯ ಡುರಾಂಡ್ ರೇಖೆ ಗಡಿ ಪ್ರದೇಶದಲ್ಲಿ ಉದ್ವಿಗ್ನವಾಗಿದೆ. ಇತ್ತೀಚೆಗೆ ಪಾಕಿಸ್ತಾನ ನಡೆಸಿದ್ದ ವಾಯುದಾಳಿಯಿಂದಾಗಿ ಈ ಪ್ರದೇಶದಲ್ಲಿ ಮತ್ತೊಮ್ಮೆ ದೊಡ್ಡ ಮಟ್ಟದ ಅಶಾಂತಿ ಸೃಷ್ಟಿಯಾಗಿದೆ. ಪಾಕಿಸ್ತಾನ ನಡೆಸಿದ ದಾಳಿಗೆ ಪ್ರತ್ಯುತ್ತರವಾಗಿ ಗುರುವಾರ ಅಫ್ಘಾನಿಸ್ತಾನ ಪ್ರತಿದಾಳಿ ನಡೆಸಿದ್ದು, ಶುಕ್ರವಾರ ಮುಂಜಾನೆ ಪಾಕಿಸ್ತಾನವು ಕಾಬೂಲ್ ಸೇರಿದಂತೆ ಇನ್ನೆರಡು ಅಫ್ಘಾನ್ ಪ್ರಾಂತ್ಯಗಳಲ್ಲಿ ವಾಯುದಾಳಿ ನಡೆಸಿರುವುದಾಗಿ ತಾಲಿಬಾನ್ ಸರ್ಕಾರದ ವಕ್ತಾರ ಆರೋಪಿಸಿದ್ದಾರೆ. ಕತಾರ್ ಮಧ್ಯಸ್ಥಿಕೆಯಲ್ಲಿ ನಡೆದಿದ್ದ ಕದನವಿರಾಮ ಒಪ್ಪಂದವನ್ನು ಪಾಕ್ ಉಲ್ಲಂಘಿಸಿತ್ತು. ತಕ್ಷಣ ಕದನವಿರಾಮ ಘೋಷಿಸಲು ಚೀನಾ, ರಷ್ಯಾ ಸಲಹೆ ನೀಡಿವೆ. ಪಾಕ್-ಅಫ್ಘಾನ್ ನಡುವಿನ ಗಡಿ ಬಿಕ್ಕಟ್ಟಿನ ಹಿನ್ನೆಲೆ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಪಾಕ್ ವಾಯುದಾಳಿ; ಅಫ್ಘಾನ್ ಪ್ರತೀಕಾರ

ಕಳೆದ ಭಾನುವಾರ ಅಫ್ಘಾನ್ ಗಡಿ ಪ್ರದೇಶಗಳ ಮೇಲೆ ನಡೆದ ಪಾಕಿಸ್ತಾನದ ಮಾರಕ ವಾಯುದಾಳಿಗೆ ಪ್ರತೀಕಾರವಾಗಿ ಅಫ್ಘಾನಿಸ್ತಾನವು ಗುರುವಾರ ರಾತ್ರಿ, ಗಡಿದಾಟಿ ಪಾಕಿಸ್ತಾನದ ವಿರುದ್ಧ ದಾಳಿ ನಡೆಸಿತ್ತು. ಪಾಕ್ ಸೈನ್ಯದ ಹನ್ನೆರಡಕ್ಕೂ ಹೆಚ್ಚು ಚೌಕಿಗಳನ್ನು ವಶಪಡಿಸಿಕೊಂಡಿದ್ದಾಗಿ ಅಫ್ಘಾನ್ ಅಧಿಕಾರಿಗಳು ತಿಳಿಸಿದ್ದಾರೆ. ಭಾನುವಾರದ ವಾಯುದಾಳಿ ಉಗ್ರರ ಮೇಲೆ ನಡೆಸಿದ ದಾಳಿ ಎಂದು ಪಾಕ್ ಸರ್ಕಾರ ಹೇಳಿದ್ದು, ಗುರುವಾರದ ಅಫ್ಘಾನ್ ದಾಳಿ ಯಾವುದೇ ಪ್ರಚೋದನೆಯಿಲ್ಲದೆ ಮಾಡಿದ ದಾಳಿ ಎಂದು ಹೇಳಿದೆ. ಸೈನಿಕ ಚೌಕಿಗಳು ವಶ ಆಗಿರುವುದನ್ನು ಪಾಕ್ ತಳ್ಳಿ ಹಾಕಿದೆ.



ಶುಕ್ರವಾರ ಮತ್ತೆ ಪಾಕ್ ವಾಯುದಾಳಿ

ಅಫ್ಘಾನಿಸ್ತಾನದ ಕಾಬೂಲ್, ಕಂದಹಾರ್ ಮತ್ತು ಪಾಕ್ತಿಯಾ ಪ್ರದೇಶಗಳ ಮೇಲೆ ಪಾಕಿಸ್ತಾನ ಶುಕ್ರವಾರ ವಾಯುದಾಳಿ ನಡೆಸಿದೆ. ಕಾಬೂಲ್‌ನಲ್ಲೇ ಮೂರು ಸ್ಫೋಟಗಳ ಶಬ್ದ ಕೇಳಿಸಿದೆ. ಆದರೆ ಸ್ಫೋಟದ ಪರಿಣಾಮ, ಹಾನಿ ಕುರಿತು ಯಾವುದೇ ಸ್ಪಷ್ಟತೆಯಿಲ್ಲ.

ಯಾಕಿದು ಅಪಾಯಕಾರಿ?

- ಇಬ್ಬರು ನೆರೆ ರಾಷ್ಟ್ರಗಳ ಮಧ್ಯೆ ನೇರ ಮಿಲಿಟರಿ ಸಂಘರ್ಷ
- ಪ್ರಾದೇಶಿಕ ಅಸ್ಥಿರತೆಯ ಅಪಾಯ
- ಕದನವಿರಾಮ ಉಲ್ಲಂಘನೆ, ಯುದ್ಧ ಸಾಧ್ಯತೆ
- ಪ್ರಾದೇಶಿಕ ಶಕ್ತಿಗಳ ಮತ್ತು ಕತಾರ್ ಮಧ್ಯೆ ಬಿರುಕು ಮೂಡುವ ಸಾಧ್ಯತೆ

ಭಾರತದ ನಿಲುವು ಏನಿರಲಿದೆ?

ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ನಡುವೆ ಹೋಲಿಸಿದರೆ, ಭಾರತ ಅಫ್ಘಾನಿಸ್ತಾನದ ಪರ ಮೃದು ಧೋರಣೆ ಹೊಂದಿದೆ. ಪಾಕ್ ಹೊರತುಪಡಿಸಿ ಅಫ್ಘಾನಿಸ್ತಾನ ಹಾಗೂ ಇತರ ನೆರೆ ರಾಷ್ಟ್ರಗಳೊಂದಿಗೆ ಭಾರತ ನೆರೆಹೊರೆಯವರು ಮೊದಲು ಎಂಬ ನಿಲುವು ಹೊಂದಿದೆ.

ಹೊಸದಿಲ್ಲಿ: ಕ್ರಿಕೆಟಿಗ ರಿಂಕು ಸಿಂಗ್ ಅವರ ತಂದೆ ಕಾಂಚೆಂದ್ ಕ್ಯಾನ್ಸರ್‌ನಿಂದ ನಿಧನರಾದರು. ಪ್ರಸ್ತುತ ಟಿ20 ವಿಶ್ವಕಪ್ ತಂಡದ ಭಾಗವಾಗಿರುವ ರಿಂಕು ಸಿಂಗ್ ತಂದೆಯ ಅಂತಿಮ ಸಂಸ್ಕಾರ ನಿಮಿತ್ತ ತಮ್ಮ ಗ್ರಾಮಕ್ಕೆ ತೆರಳಿದ್ದಾರೆ. ವಿಶ್ವಕಪ್ ಪಂದ್ಯಾವಳಿಯಲ್ಲಿ 5 ಪಂದ್ಯಗಳನ್ನಾಡಿರುವ ರಿಂಕು ಸಿಂಗ್, ದ.ಆಫ್ರಿಕಾ ವಿರುದ್ಧ ನಡೆದ ಟಿ20 ಪಂದ್ಯದಲ್ಲಿ ಭಾರತ ತಂಡದ ಭಾಗವಾಗಿದ್ದರು. ಆದರೆ ಮಂಗಳವಾರದಂದು ಅವರ ತಂದೆ ನೋಯ್ಡಾದ ಸ್ಥಳೀಯ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಕಾರಣ ತಮ್ಮ ಊರಿಗೆ ಹೊರಟಿದ್ದರು. ಆದಾಗ್ಯೂ ಬುಧವಾರ ಬೆಳಗ್ಗೆ ತಂಡಕ್ಕೆ ಸೇರ್ಪಡೆಯಾಗಿದ್ದ ರಿಂಕು ಸಿಂಗ್ ಸೂಪರ್-8ರ ಭಾರತದ ಎರಡನೇ ಪಂದ್ಯದಲ್ಲಿ ಸ್ಥಾನ ಪಡೆದಿರಲಿಲ್ಲ. ಶುಕ್ರವಾರದಂದು ತಮ್ಮ ತಂದೆಯ ನಿಧನ ಸುದ್ದಿ ಕೇಳಿದ ರಿಂಕು ಸಿಂಗ್ ಅಂತಿಮ ಸಂಸ್ಕಾರಕ್ಕಾಗಿ ತೆರಳಿದ್ದಾರೆ. ರಿಂಕು ಸಿಂಗ್ ಕ್ರಿಕೆಟಿಗರಾಗುವಲ್ಲಿ ತಂದೆಯ ಪಾತ್ರ ದೊಡ್ಡದಿತ್ತು. ಅವರ ನಿಧನಕ್ಕೆ ಹರ್ಭಜನ್ ಸಿಂಗ್, ವಿರಾಟ್ ಕೊಹ್ಲಿ ಸೇರಿದಂತೆ ಕ್ರಿಕೆಟಿಗರು, ಮಾಜಿ ಕ್ರಿಕೆಟಿಗರು ಸಂತಾಪ ಸೂಚಿಸಿದ್ದಾರೆ.

ಐಪಿಎಲ್ ಮುಂದೂಡಿಕೆ?

ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಆರಂಭ ಎರಡು ದಿನ ಮುಂದೂಡ ಬಹುದು ಎನ್ನಲಾಗಿದೆ. ಅಬು-ಧಾಬಿಯಲ್ಲಿ ನಡೆದಿದ್ದ 2026ರ ಐಪಿಎಲ್‌ನ ಹರಾಜಿನ ವೇಳೆ ಮಾರ್ಚ್ 26ಕ್ಕೆ ಐಪಿಎಲ್ ಆರಂಭವಾಗುವ ಬಗ್ಗೆ ಹೇಳಲಾಗಿತ್ತು. ಆದರೆ ಐಪಿಎಲ್ 28 ಅಥವಾ 29ರಂದು ಆರಂಭವಾಗುವ ಸಾಧ್ಯತೆ ಇದೆ. ಐಪಿಎಲ್ ಫ್ರಾಂಚೈಸಿಗಳಿಗೆ ಈ ಬಗ್ಗೆ ಇನ್ನೂ ಮಾಹಿತಿ ನೀಡಲಾಗಿಲ್ಲ. ಆದರೆ ಈ ಬಗ್ಗೆ ಬಿಸಿಸಿಐ ಚಿಂತನೆ ನಡೆಸಿದೆ ಎನ್ನಲಾಗಿದೆ. ಶೀಘ್ರದಲ್ಲೇ ಐಪಿಎಲ್ ಫ್ರಾಂಚೈಸಿಗಳೊಂದಿಗೆ ಬಿಸಿಸಿಐ ಸಭೆಯೊಂದನ್ನು ನಡೆಸಲಿದೆ. ಇದೇ ವೇಳೆ ಈ ಬಗ್ಗೆ ತೀರ್ಮಾನ ಮಾಡಿ ಅಧಿಕೃತ ವೇಳಾಪಟ್ಟಿ ಬಿಡುಗಡೆ ಮಾಡಲಿದೆ. ಉದ್ಘಾಟನಾ ಪಂದ್ಯ ಬೆಂಗಳೂರಿನಲ್ಲೇ ನಡೆಯಲಿದೆ ಎಂದು ಹೇಳಲಾಗುತ್ತಿದೆ.

ರಣಜಿ ಟ್ರೋಫಿ: ಕರ್ನಾಟಕದ ಕನಸು ಭಗ್ನ | ಎರಡನೇ ಇನ್ನಿಂಗ್ಸ್‌ನಲ್ಲೂ ಜಮ್ಮು ಉತ್ತಮ ಬ್ಯಾಟಿಂಗ್

ಚೊಚ್ಚಲ ಪ್ರಶಸ್ತಿಯತ್ತ ಕಾಶ್ಮೀರದ ಹೆಜ್ಜೆ

▸ ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಪ್ರಶಸ್ತಿ ಪಡೆಯುವ ನೆಚ್ಚಿನ ತಂಡವಾಗಿ ಹುಬ್ಬಳ್ಳಿಗೆ ಬಂದಿದ್ದ ಆತಿಥೇಯ ಕರ್ನಾಟಕ ತಂಡದ ಕನಸನ್ನು ಪ್ರವಾಸಿ ಜಮ್ಮು ಮತ್ತು ಕಾಶ್ಮೀರ ತಂಡದ ಆಟಗಾರರು ನುಚ್ಚುನೂರು ಮಾಡಿದರು.

ಮೂರನೇ ದಿನ ರಾಜ್ಯದ ಐದು ವಿಕೆಟ್ ಗಳಿಸಿ ಮೇಲುಗೈ ಸಾಧಿಸಿದ್ದ ಕಾಶ್ಮೀರ ತಂಡ, 4ನೇ ದಿನದ ಮೊದಲ ಅವಧಿಯಲ್ಲೇ ಮಿಕ್ಕ 4 ವಿಕೆಟ್‌ಗಳನ್ನು ಕಬಳಿಸಿ 293ಕ್ಕೇ ನಿಯಂತ್ರಿಸುವ ಮೂಲಕ 291ರನ್‌ಗಳ ಬೃಹತ್ ಮುನ್ನಡೆ ಗಳಿಸಿತು. ಎರಡನೇ ಇನ್ನಿಂಗ್ಸ್‌ನಲ್ಲೂ ಉತ್ತಮ ಬ್ಯಾಟಿಂಗ್ ಮೂಲಕ ಪ್ರಶಸ್ತಿಯತ್ತ ಮತ್ತೊಂದು ಹೆಜ್ಜೆ ಮುಂದಿರಿಸಿದೆ.

ಪಂದ್ಯ 5ನೇ ದಿನಕ್ಕೆ ಸಾಗಿದ್ದರೂ, ಕುತೂಹಲವೇ ಉಳಿಯದ್ದರಿಂದ ಕೊನೆಯ ದಿನ ಪ್ರವಾಸಿ ತಂಡಕ್ಕೆ ಟ್ರೋಫಿ ನೀಡುವ ಔಪಚಾರಿಕತೆ ಮಾತ್ರ ಬಾಕಿ ಉಳಿದಂತಾಗಿದೆ. ಹಿರಿಯ ಆಟಗಾರ ಮಯಾಂಕ್ ಅಗರವಾಲ್ ಶತಕಗಳಿಸಿ ಸಣ್ಣ ಆಸೆಯೊಂದನ್ನು ಉಳಿಸಿದ್ದರಾದರೂ, ನಾಲ್ಕನೇ ದಿನದಾಟದ ಮೊದಲ ಅವಧಿಯಲ್ಲಿ ಎದುರಾಳಿ ತಂಡದ ಕರಾರುವಾಕ್ ದಾಳಿಗೆ ಶರಣಾದರು. ಮತ್ತೆ 73ರನ್ ಗಳಿಸುವಷ್ಟರಲ್ಲಿ ಉಳಿದ 4 ವಿಕೆಟ್ ಪಡೆದ ಜಮ್ಮು-ಕಾಶ್ಮೀರ ದೊಡ್ಡ ಹೊಡೆತವನ್ನೇ ನೀಡಿತು.

ಎರಡನೇ ಇನ್ನಿಂಗ್ಸ್ ಆರಂಭಿಸಿದ ಜಮ್ಮು-ಕಾಶ್ಮೀರ ತಂಡ 4ನೇ ದಿನದಾಟದ ಅಂತ್ಯಕ್ಕೆ 57 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 186 ರನ್ ಗಳಿಸಿ ಸುಭದ್ರ ಸ್ಥಿತಿಯನ್ನು ತಲುಪಿದೆ. ಮೊದಲ ಇನ್ನಿಂಗ್ಸ್‌ನಲ್ಲಿ ವಿಫಲವಾಗಿದ್ದ ಆರಂಭಿಕ ಆಟಗಾರ ಕಮ್ರಾನ್ ಇಕ್ಬಾಲ್ (94 ರನ್, 160 ಎಸೆತ, 11 ಬೌಂಡರಿ, 1 ಸಿಕ್ಸರ್) ಎರಡನೇ ಇನ್ನಿಂಗ್ಸ್‌ನಲ್ಲಿ ಶತಕದ ಸನಿಹದಲ್ಲಿದ್ದು, ಸಾಹಿಲ್ ಲೋತ್ರಾ (16 ರನ್, 41 ಎಸೆತ, 2 ಬೌಂಡರಿ) ಅವರೊಂದಿಗೆ ಕ್ರೀಸ್ ಕಾಯ್ದುಕೊಂಡಿದ್ದಾರೆ.

ಒಂದು ದಿನದ ಆಟ ಬಾಕಿ ಇರುವಂತೆಯೇ 477 ರನ್‌ಗಳ ಭಾರೀ ಮುನ್ನಡೆ ಸಾಧಿಸಿದ್ದು, ಗೆಲುವನ್ನು ಒಂದು ದಿನ ಮೊದಲೇ ಖಚಿತಪಡಿಸಿಕೊಂಡಂತಾಗಿದೆ. ಶನಿವಾರದ ಮೊದಲ ಅವಧಿಯಲ್ಲಿ ಕಡಿಮೆ ಮೊತ್ತಕ್ಕೆ ಮಿಕ್ಕ ಆರು ವಿಕೆಟ್ ಗಳಿಸಿ ಗೆಲುವಿನ ಗುರಿ ತಲುಪುವ ಅವಕಾಶ ಆತಿಥೇಯ ತಂಡಕ್ಕಿದೆಯಾದರೂ, ಅದಕ್ಕೆ ಪವಾಡವೇ ಘಟಿಸಬೇಕಿದೆ.

ವೈಫಲ್ಯ: 4ನೇ ದಿನ ವಿಕೆಟ್ ಕೀಪರ್ ಕೃತಿಕ್ ಕೃಷ್ಣ (36 ರನ್) ಅವರನ್ನು ಸಾಹಿಲ್ ಲೋತ್ರಾ, ಎಲ್.ಬಿ ಬಲೆಗೆ ಕೆಡವಿದರು. ಬಳಿಕ ಬಂದ ವಿದ್ಯಾಧರ ಪಾಟೀಲ್, ಪ್ರಸಿದ್ಧ ಕೃಷ್ಣ ಹೆಚ್ಚು ಹೊತ್ತು ನಿಲ್ಲಲಿಲ್ಲ. ಅಜೇಯ 130 ರನ್‌ಗಳಿಸಿದ್ದ ಹಿರಿಯ ಆಟಗಾರ ಮಯಾಂಕ್ ಶುಕ್ರವಾರವೂ ತಾಳ್ಮೆಯ ಆಟವಾಡಿ ನೆರೆದಿದ್ದ ಪ್ರೇಕ್ಷಕರನ್ನು ರಂಜಿಸಿದರು. ಒಟ್ಟು 443 ನಿಮಿಷ ಕ್ರೀಸ್‌ನಲ್ಲಿದ್ದ ಮಯಾಂಕ್ 260 ಎಸೆತಗಳಲ್ಲಿ 160 ರನ್ ಗಳಿಸಿದರು. ಕಾಶ್ಮೀರದ 2ನೇ ಇನ್ನಿಂಗ್ಸ್‌ನ ಆರಂಭದಲ್ಲಿ ಪ್ರಸಿದ್ಧ ಕೃಷ್ಣ ಹಾಗೂ ವೈಶಾಖ್ ವಿಜಯಕುಮಾರ ಅವರು ಯಾವರ್ ಹಸನ್ ಹಾಗೂ ಶುಭಂಸಿಂಗ್ ಪುಂಡೀರ್ ಅವರ ವಿಕೆಟ್ ಪಡೆದು ಕುತೂಹಲ ಮೂಡಿಸಿದ್ದರಾದರೂ ಆ ಸಂಭ್ರಮವನ್ನು ನಾಯಕ ಪರಾಸ್ ಡೋಗ್ರಾ, ಕಮ್ರಾನ್ ಇಕ್ಬಾಲ್, ಅಬ್ದುಲ್ ಸಮದ್ ತಡೆದರು.

ಮಾತಿನ ಚಕಮಕಿ: 48ನೇ ಓವರ್ ಬೌಲ್ ಮಾಡಿದ ವೇಗಿ ವೈಶಾಖ್ ವಿಜಯಕುಮಾರ್ ಅವರೊಂದಿಗೆ ಇಕ್ಬಾಲ್ ಮಾತಿನ ಚಕಮಕಿ ನಡೆಸಿದ್ದು, ಗ್ಯಾಲರಿಯಲ್ಲಿದ್ದ ಪ್ರೇಕ್ಷಕರ ಆಕ್ರೋಶಕ್ಕೂ ಕಾರಣವಾಯಿತು.

ನಬಿಗೆ ಐದು ವಿಕೆಟ್: ಪ್ರಸಕ್ತ ಸಾಲಿನ ರಣಜಿ ಋತುವಿನಲ್ಲಿ ಅತ್ಯುತ್ತಮ ಬಾಲಿಂಗ್ ಮಾಡುತ್ತಿರುವ ಕಾಶ್ಮೀರದ ವೇಗಿ ಅಕೀಬ್ ನಬಿದಾರ್ ನಿರ್ಣಾಯಕ ಪಂದ್ಯದಲ್ಲಿ ಸಾಮರ್ಥ್ಯ ಮೀರಿ ಉತ್ತಮ ಬೌಲಿಂಗ್ ಮಾಡುವ ಮೂಲಕ ತಮ್ಮ ತಂಡವನ್ನು ಗೆಲುವಿನ ಸನಿಹಕ್ಕೆ ಕರೆದೊಯ್ದಿದ್ದಾರೆ. ಫೈನಲ್ ಪಂದ್ಯದಲ್ಲಿ 5 ವಿಕೆಟ್ ಗೊಂಚಲು ಪಡೆದ ಅವರು ಪ್ರಸಕ್ತ ಟೂರ್ನಿಯಲ್ಲಿನ ತಮ್ಮ ವಿಕೆಟ್‌ಗಳ ಮೊತ್ತವನ್ನು 61ಕ್ಕೆ ಕೊಂಡೊಯ್ದರು. ಇದುವರೆಗೆ ಅವರು 40 ಪ್ರಥಮ ದರ್ಜೆ ಪಂದ್ಯಗಳಲ್ಲಿ 151 ವಿಕೆಟ್ ಪಡೆದಿದ್ದು, ಒಟ್ಟು 16 ಬಾರಿ 5 ವಿಕೆಟ್ ಗೊಂಚಲು ಪಡೆದಿದ್ದಾರೆ.





ಚಿತ್ರ: ಮಂಜುನಾಥ ಜರತಾರಘರ

ಇನ್ನೂ ಗೆಲ್ಲುವ ಅವಕಾಶವಿದೆ

ಈ ಪಂದ್ಯದಲ್ಲಿ ನಾವು ಬಹಳ ಹಿಂದೆ ಇದ್ದೇವೆ. ಜಮ್ಮು ಕಾಶ್ಮೀರ ತಂಡದವರು ಉತ್ತಮ ಬಾಲಿಂಗ್ ಮಾಡಿ ನಮ್ಮ ಮೇಲೆ ಒತ್ತಡ ಹೇರಿದರು. ನಾಳೆ ಪಂದ್ಯದ ಕೊನೆಯ ದಿನ ಜಮ್ಮು-ಕಾಶ್ಮೀರ ತಂಡದ ಉಳಿದ ವಿಕೆಟ್‌ಗಳನ್ನು ಬೇಗನೇ ಪಡೆದು ಲೀಗ್ ಹಂತದಲ್ಲಿ ಪಂಜಾಬ್ ವಿರುದ್ಧ ಆಡಿದ ರೀತಿಯಲ್ಲಿ ಆಡಿದರೆ ಗೆಲ್ಲುವ ಅವಕಾಶವಿದೆ. ಈ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತೇವೆ ಎಂದು ಶತಕ ಗಳಿಸಿದ ಮಯಾಂಕ್ ಅಗರವಾಲ್ ಸುದ್ದಿಗಾರರಿಗೆ ತಿಳಿಸಿದರು.

ಸಿಎಂ ಒಮರ್ ಅಬ್ದುಲ್ ಪಂದ್ಯ ವೀಕ್ಷಣೆ

ನಗರದ ಕೆಎಸ್‌ಸಿಎ ಮೈದಾನದಲ್ಲಿ ನಡೆಯುತ್ತಿರುವ ಕರ್ನಾಟಕ ಹಾಗೂ ಜಮ್ಮು-ಕಾಶ್ಮೀರ ನಡುವಿನ ರಣಜಿ ಟೂರ್ನಿಯ ಫೈನಲ್ ಪಂದ್ಯ ವೀಕ್ಷಿಸಲು ಜಮ್ಮು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ ಆಗಮಿಸಲಿದ್ದಾರೆ. ಶುಕ್ರವಾರ ಸಂಜೆ 7.20ಕ್ಕೆ ನಗರದಕ್ಕೆ ಆಗಮಿಸಿದ ಅವರು, ಇಲ್ಲಿಯ ಗೋಕುಲ ರಸ್ತೆ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ. ಶನಿವಾರ ಬೆಳಗ್ಗೆ ರಾಜನಗರದ ಮೈದಾನಕ್ಕೆ ಬೆಳಗ್ಗೆ 10 ಗಂಟೆಗೆ ಭೇಟಿ ನೀಡಲಿದ್ದು, ಸಂಜೆ ವರೆಗೂ ಆಟ ವೀಕ್ಷಿಸಲಿದ್ದಾರೆ. ಈ ಹಿನ್ನೆಲೆ ಮೈದಾನದಲ್ಲಿ ಬಿಗಿ ಬಂದೋಬಸ್ತ್ ನಿಯೋಜಿಸಲಾಗಿದೆ ಎಂದು ಹು-ಧಾ ಪೊಲೀಸ್ ಆಯುಕ್ತ ಎನ್. ಶಶಿಕುಮಾರ ತಿಳಿಸಿದ್ದಾರೆ.

ಸಂಕ್ಷಿಪ್ತ ಸ್ಕೋರ್

ಜಮ್ಮು ಕಾಶ್ಮೀರ 1 ನೇ ಇನ್ನಿಂಗ್ಸ್: 584-10(173.1)
ಕರ್ನಾಟಕ 1ನೇ ಇನ್ನಿಂಗ್ಸ್:
ಮಯಾಂಕ್ ಅಗರವಾಲ್; 160 ರನ್,266 ಎ,21 ಬೌ,
ಕೃತೀಕ್ ಕೃಷ್ಣ; 36ರನ್, 101 ಎ, 2 ಬೌ
ವಿದ್ಯಾಧರ ; 11 ರನ್, 33ಎ, 2 ಬೌ
ವೈಶಾಕ್ ; 17ರನ್,27 ಎ, 3 ಬೌ,
ಶಿಖರ್ ಶೆಟ್ಟಿ; 0 ರನ್,7 ಎ,
ಪ್ರಸಿದ್ಧ ಕೃಷ್ಣ; 4 ರನ್, 6 ಎ, 1 ಬೌ
ಬೌಲಿಂಗ್: ಅಕೀಬ್ ನಬಿ; 5 ವಿ, 23 ಓ, 54 ರನ್,
ಸುನೀಲ್ ಕುಮಾರ 2 ವಿ, 19 ಓ, 51 ರನ್,
ಯುಧವೀರ್ ಸಿಂಗ್ 2ವಿ,14.3ಓ, 55 ರನ್,
ಸಾಹಿಲ್ ಲೋತ್ರಾ, 1 ವಿ, 12 ಓ, 50 ರನ್
ಜಮ್ಮು ಕಾಶ್ಮೀರ 2 ನೇ ಇನ್ನಿಂಗ್ಸ್:
ಇಕ್ಬಾಲ್ ಬ್ಯಾಟಿಂಗ್ ; 94 ರನ್, 160 ಎ,11 ಬೌ, 1 ಸಿ,
ಅಬ್ದುಲ್ ಸಮದ್ದ 32 ರನ್, 70 ಎ,4 ಬೌ,1 ಸಿ,
ಸಾಹಿಲ್ ಬ್ಯಾಟಿಂಗ್; 16 ರನ್, 41 ಎ, 2 ಬೌ.
ಬೌಲಿಂಗ್; ಪ್ರಸಿದ್ಧ ಕೃಷ್ಣ; 2 ವಿ, 12 ಓ, 42 ರನ್,
ವೈಶಾಕ್; 1 ವಿ, 10 ಓ, 30 ರನ್,


ಟಿಟಿ: ಸೆಮೀಸ್‌ನಲ್ಲಿ ಭಾರತಕ್ಕೆ ನಿರಾಸೆ

ಹೊಸದಿಲ್ಲಿ: ಸಿಂಗಲ್ಸ್ ವಿಭಾಗದಲ್ಲಿ ಹಿನ್ನಡೆ ಅನುಭವಿಸಿ ನೀರಸ ಪ್ರದರ್ಶನ ನೀಡಿದ್ದ ಭಾರತಕ್ಕೆ ಅಭಿಮಾನಿಗಳು ಸಮಾಧಾನಗೊಳ್ಳುವಂತೆ ಎದುರಾಳಿ ತಂಡದವರು ಬೆಚ್ಚುವಂತೆ ಮತ್ತು ಭಾರತ ಟೇಬಲ್ ಟೆನಿಸ್ ಲೋಕದಲ್ಲಿ ಇತಿಹಾಸವಾಗುವಂತೆ ಆಡಿದ್ದ ಮನುಶ್ ಶಾ ಮತ್ತು ಮಾನವ್ ಠಕ್ಕರ್ ಜೋಡಿಯು ಸಿಂಗಾಪುರ ಸ್ಮ್ಯಾಷ್‌ನ ನಿರೀಕ್ಷಿತ ಸೆಮಿಫೈನಲ್ ಪಂದ್ಯದಲ್ಲಿ ಹೋರಾಟದ ಸೋಲನುಭವಿಸಿ ಪಂದ್ಯಾವಳಿಯಿಂದ ಹೊರಬಿದ್ದಿತು.

ಸಿಂಗಾಪುರ ಸ್ಮ್ಯಾಷ್

ಮನಿಕಾ ಬಾತ್ರಾ ಸೇರಿದಂತೆ ಪ್ರಮುಖ ಆಟಗಾರರ ತಂಡವು ಸಿಂಗಾಪುರಕ್ಕೆ ಹೋಗಿತ್ತು. ಮೊದಲಿಗೆ ನಡೆದ ಸಿಂಗಲ್ಸ್ ವಿಭಾಗದಲ್ಲಿ ಭಾರೀ ಹಿನ್ನಡೆ ಅನುಭವಿಸಿತು. ಆದಾಗ್ಯೂ ತಮ್ಮ ಅತ್ಯುತ್ತಮ ಪ್ರದರ್ಶನ ಮುಂದುವರಿಸಿದ ಮಾನವ್ ಹಾಗೂ ಮಾನುಶ್ ತಮ್ಮ ಅತ್ಯುತ್ತಮ ಆಟದೊಂದಿಗೆ ಭಾರತದ ಪದಕ ಆಸೆ ಜೀವಂತವಾಗಿರಿಸಿತು.

ಹಿಂದಿನ ಪಂದ್ಯಗಳಲ್ಲಿ ತಾವು ನೀಡಿದ್ದ ಬಲವಾದ ಪ್ರದರ್ಶನದೊಂದಿಗೆ ತಮ್ಮೊಂದಿಗೆ ವಿಶ್ವಾಸ ತಂದಿದ್ದ ಭಾರತ ಜೋಡಿ ಶುಕ್ರವಾರದ ಸೆಮಿಫೈನಲ್ ಪಂದ್ಯದಲ್ಲಿ ಫ್ರೆಂಚ್‌ನ ಅಲೆಕ್ಸ್ ಮತ್ತು ಫೆಲಿಕ್ಸ್ ಅವರನ್ನು ಎದುರಿಸಿತು. ಅಲ್ಲಿನ ಪಂದ್ಯದಲ್ಲಿ ಲೆಕ್ಸ್ ಮತ್ತು ಫಿಲೆಕ್ಸ್ ಜೋಡಿ ಎದುರು 2-3(6-11, 11-7, 10-12, 11-9, 8-11)ರಿಂದ ಸೋತಿತು ಭಾರತ ಜೋಡಿ. ಸೋತರೂ ಪಂದ್ಯದ ಫಲಿತಾಂಶ ಅಷ್ಟೊಂದು ಸುಲಭವಾಗಿ ಪಡೆಯಲು ಬಿಡಲಿಲ್ಲ ಮಾನವ್ ಮತ್ತು ಮನುಶ್. ಮೊದಲಿನಿಂದಲೂ ತಮ್ಮ ಆಕ್ರಮಣಕಾರಿ ಆಟದೊಂದಿಗೆ ವಿಶಿಷ್ಟ ಪ್ರದರ್ಶನ ನೀಡಿದ ಈ ಜೋಡಿ ಎದುರಾಳಿಗಳ ಪರಿಶ್ರಮ ಕೇಳಿತು. ಸವಾಲು ಕೇಳಿತು ಮತ್ತು ಕೌಶಲ ಪ್ರದರ್ಶಿಸುವಂತೆ ಮಾಡಿತು. ಎರಡು ಸುತ್ತಿನ ಪಂದ್ಯಗಳಲ್ಲಿ ನಿಸ್ಸಂಶಯವಾಗಿ ಮಿಂಚಿದ ಭಾರತೀಯರು ರೋಚಕ ಹಣಾಹಣಿಯಲ್ಲಿ ಗೆಲ್ಲಲಾಗಲಿಲ್ಲ. ಮರಳಿ ಬರುವಾಗ ತಮ್ಮೊಂದಿಗೆ ಡಬ್ಲ್ಯುಟಿಟಿಯಲ್ಲಿ ಸೆಮಿಫೈನಲ್‌ಗೇರಿದ ಮೊದಲ ಭಾರತ ಜೋಡಿ ಎಂಬ ದಾಖಲೆಯನ್ನೂ, ಅತ್ಯುತ್ತಮ ಪ್ರದರ್ಶನ ನೀಡಿದ ತಮ್ಮ ಭರವಸೆ ಮತ್ತು ಒಂದಿಷ್ಟು ಕೌಶಲ ಅಭಿವೃದ್ಧಿ ತಂದಿತು.



ಭಾರತ ಮಹಿಳಾ ತಂಡಕ್ಕೆ 2ನೇ ಸೋಲು | ಜಾರ್ಜಿಯಾ ಶತಕ

ಆಸ್ಟ್ರೇಲಿಯಾಗೆ ಏಕದಿನ ಸರಣಿ

ಹಾರ್ಬರ್ಟ್: ಆಸ್ಟ್ರೇಲಿಯಾ ತಂಡದ ಸಾಂಘಿಕ ಬೌಲಿಂಗ್ ಮತ್ತು ವಾಲ್ ಅವರ ಶತಕದ ಮುಂದೆ ದಿಕ್ಕು ತಪ್ಪಿಸಿಕೊಂಡ ಭಾರತೀಯ ಮಹಿಳೆಯರ ತಂಡವು ಆಸ್ಟ್ರೇಲಿಯಾ ಪ್ರವಾಸದ ಏಕದಿನ ಸರಣಿಯನ್ನು ಒಂದು ಪಂದ್ಯ ಬಾಕಿ ಇರುವಾಗಲೇ ಸೋತಿದೆ.

ಟಿ20, ಏಕದಿನ ಹಾಗೂ ಟೆಸ್ಟ್ ಪಂದ್ಯಗಳ ಪ್ರವಾಸದಲ್ಲಿ ಟಿ20 ಸರಣಿಯನ್ನು ಭಾರತ, ಏಕದಿನ ಸರಣಿಯನ್ನು ಆಸ್ಟ್ರೇಲಿಯಾ ಗೆದ್ದಿದೆ. ಇನ್ನೂ ಒಂದು ಏಕದಿನ ಪಂದ್ಯ ಬಾಕಿಯಿದೆ. ಮೊದಲ ಪಂದ್ಯದಲ್ಲೂ ಆಸೀಸ್ ಮೇಲುಗೈ ಸಾಧಿಸಿತ್ತು. ಇದೀಗ ಎರಡನೇ ಪಂದ್ಯದ ಗೆಲುವಿನೊಂದಿಗೆ ಮುನ್ನಡೆ ಸಾಧಿಸಿದೆ. ಉಭಯ ತಂಡಗಳ ನಡುವೆ ಒಂದು ಟೆಸ್ಟ್ ಪಂದ್ಯ ಕೂಡ ನಡೆಯಲಿದೆ.

ಶುಕ್ರವಾರದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ಕಳೆದ ಪಂದ್ಯಗಿಂತಲೂ ಉತ್ತಮ ಬ್ಯಾಟಿಂಗ್ ಮಾಡಿತ್ತಾದರೂ ದೊಡ್ಡ ಗುರಿ ನಿರ್ಮಿಸಲಾಗಲಿಲ್ಲ. ಪ್ರತಿಕಾ ಮತ್ತು ಕೌರ್ ಆಟಕ್ಕೆ ಮಧ್ಯಮ ಕ್ರಮಾಂಕದ ಆಟಗಾರ್ತಿಯರ 20-25 ರನ್‌ಗಳ ಇನ್ನಿಂಗ್ಸ್ ಕೂಡಿದ ನಂತರ ಭಾರತ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 251 ರನ್ ಗಳಿಸಿತು. ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ ಜಾರ್ಜಿಯಾ ವಾಲ್ ಅವರ ಶತಕದೊಂದಿಗೆ ಯಾವುದೇ ಅಡತಡೆಯಿಲ್ಲದೆ ಪಂದ್ಯ ಗೆದ್ದುಕೊಂಡಿತು.

ವಾಲ್ ಪಂದ್ಯಶ್ರೇಷ್ಠ ಆಟಗಾರ್ತಿಯಾದರು. ಲಿಚ್‌ಫೀಲ್ಡ್ ಕೂಡ ಪಂದ್ಯದ ಬೆಸ್ಟ್ ಬ್ಯಾಟರ್ ಎನಿಸಿಕೊಂಡರು. ಆಸ್ಟ್ರೇಲಿಯಾದ ಮೂವರು, ಭಾರತದ ಇಬ್ಬರು ತಲಾ ಎರಡು ವಿಕೆಟ್ ಪಡೆದರು. ಮೂರನೇ ಪಂದ್ಯ ಭಾನುವಾರದಂದು ನಡೆಯಲಿದೆ.

ಜಾರ್ಜಿಯಾ ಶತಕ: ಗುರಿ ಬೆನ್ನತ್ತುವಾಗ ಆಸ್ಟ್ರೇಲಿಯಾ ಯಾವುದೇ ಹಂತದಲ್ಲೂ ಬವಣೆ ಎದುರಿಸಲಿಲ್ಲ. ಹೀಲಿ 6 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ಮೂರನೇ ಕ್ರಮಾಂಕದಲ್ಲಿ ಬಂದ ವಾಲ್ ಮತ್ತು ಲಿಚ್‌ಫೀಲ್ಡ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಮೊದಲಿನಿಂದಲೂ ಭಾರತೀಯ ಬೌಲರ್‌ಗಳನ್ನು ಕಾಡುವ ನಿರ್ಧಾರ ಮಾಡಿದ್ದ ಈ ಜೋಡಿ ನಿಸ್ಸಂಶಯವಾಗಿ ಪಂದ್ಯವನ್ನು ಕಸಿದುಕೊಂಡಿತು. ಲಿಚ್‌ಫೀಲ್ಡ್ ಕೂಡ ಅದೇ ಬ್ಯಾಟಿಂಗ್ ಮಾಡಿದರು. ಇವರಿಬ್ಬರ ಆಟಕ್ಕೆ ತತ್ತರಿಸಿದ ಭಾರತ ಯಾವುದೇ ಕ್ಷಣದಲ್ಲೂ ಗೆಲ್ಲುವ ಹಂತಕ್ಕೆ ಬರಲಿಲ್ಲ. ಬೆಥ್ ಮೂನಿ 31 ರನ್ ಗಳಿಸಿ ಪಂದ್ಯ ಗೆಲ್ಲಿಸಿದರು. ಜಾರ್ಜಿಯಾ ವಾಲ್ 82 ಎಸೆತದಲ್ಲಿ 100 ರನ್‌ಗಳಿಸಿದರೆ, ಲಿಚ್‌ಫೀಲ್ಡ್ 62ರಲ್ಲಿ 80 ರನ್ ಬಾರಿಸಿದರು.



ಕೌರ್-ರಾವಲ್ ಅರ್ಧಶತಕ

ಇನ್ನು ಮೊದಲು ಬ್ಯಾಟಿಂಗ್ ಮಾಡಿದ ಭಾರತ ರಾವಲ್ ಮತ್ತು ಮಂಧಾನ ಅವರ ಉತ್ತಮ ಬ್ಯಾಟಿಂಗ್‌ನೊಂದಿಗೆ ಭರ್ಜರಿ ಆರಂಭ ಪಡೆಯಿತಾದರೂ ಮಂಧಾನ ಆಟ 31ಕ್ಕೆ ನಿಂತಿತು. ಮೂರನೇ ಕ್ರಮಾಂಕದ ರಾಡ್ರಿಗ್ಸ್ ಬೇಗನೇ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಕೌರ್ 54 ರನ್‌ಗಳ ಇನ್ನಿಂಗ್ಸ್ ಆಡಿದರು. ರಾವಲ್ 52 ರನ್ ಗಳಿಸಿದರು. ಇನ್ನುಳಿದ ಬ್ಯಾಟರ್‌ಗಳಿಂದ 25ಕ್ಕೂ ಅಧಿಕ ಕಾಣಿಕೆ ಬರಲಿಲ್ಲ. ಆಸ್ಟ್ರೇಲಿಯಾ ಪರ ಅನಾಬೆಲ್, ಅಲ್ಲಾ ಮತ್ತು ಗಾರ್ಡನರ್ ತಲಾ 2 ವಿಕೆಟ್ ಕಿತ್ತರು.

ಸಂಕ್ಷಿಪ್ತ ಸ್ಕೋರ್

ಭಾರತ 50 ಓವರ್‌ಗಳಲ್ಲಿ 251/9: ಕೌರ್ 54, ಪ್ರತಿಕಾ 52; ಅನಾಬಲ್ 37/2
ಆಸ್ಟ್ರೇಲಿಯಾ 36.1 252/5: ಜಾರ್ಜಿಯಾ 101, ಲಿಚ್‌ಫೀಲ್ಡ್ 80; ದೀಪ್ತಿ 32/2

ಕಿವೀಸ್‌ಗೆ ಸೋಲಿನ ಆಘಾತ

ಕೊಲಂಬೋ: ವಿಲ್ ಜ್ಯಾಕ್ಸ್ ಹಾಗೂ ಬ್ಯಾಟನ್ ಅವರ ಪರಾಕ್ರಮದಿಂದ ಭರ್ಜರಿ ಪ್ರದರ್ಶನ ನೀಡಿರುವ ಇಂಗ್ಲೆಂಡ್ ತಂಡವು ನ್ಯೂಜಿಲೆಂಡ್ ತಂಡವನ್ನು ಸೋಲಿಸಿ ಸೆಮಿ ವಿಚಾರದಲ್ಲಿ ಭಾರೀ ಒತ್ತಡ ಹೇರಿದೆ. ಪಾಕಿಸ್ತಾನ ಸೆಮಿಗೇರುವ ಆಸೆ ಇನ್ನೂ ಜೀವಂತವಾಗಿರಿಸಿದೆ.

ತಂಡದ ಯಾವುದೇ ಬ್ಯಾಟರ್‌ಗರೂ ಅರ್ಧಶತಕ ದಾಟದಿದ್ದರೂ ನಿರ್ದಿಷ್ಟ ಕೊಡುಗೆಗಳನ್ನು ನೀಡಿದ ನಂತರ ಇಂಗ್ಲೆಂಡ್ ತಂಡ ಗೆಲ್ಲುವ ಹಂತಕ್ಕೆ ಬಂದಿತ್ತು. ಆದಾಗ್ಯೂ 24 ಬಾಲ್‌ಗಳಲ್ಲಿ 46 ರನ್‌ಗಳಿಸುವ ದೊಡ್ಡ ಸವಾಲು ಹೊಂದಿತ್ತು. ಇದೇ ವೇಳೆ ಬ್ಯಾಟಿಂಗ್‌ಗಿಳಿದ ವಿಲ್ ಜ್ಯಾಕ್ಸ್ ತಮ್ಮ ಸ್ಫೋಟಕ ಬ್ಯಾಟಿಂಗ್ ಮೂಲಕ ಪಂದ್ಯವನ್ನು ಗೆಲ್ಲಿಸಿದ್ದಾರೆ.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್‌ಗಿಳಿದ ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 159 ರನ್ ಗಳಿಸಿತು. ಗುರಿ ಬೆನ್ನತ್ತಿದ ಇಂಗ್ಲೆಂಡ್ 19.3 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 161 ರನ್‌ಗಳಿಸಿ ಗುರಿ ಮುಟ್ಟಿತು. ಈ ಗೆಲುವಿನೊಂದಿಗೆ ಇಂಗ್ಲೆಂಡ್ ಸೋಲಿಲ್ಲದ ತಂಡವಾಗೇ ಸೆಮಿಗೇರಿದೆ. ಇದಕ್ಕೂ ಹೆಚ್ಚಾಗಿ ಪಾಕಿಸ್ತಾನದ ಆಸೆ ಜೀವಂತವಾಗಿರಿಸಿದೆ. ಸೆಮಿಗೇರುವುದಕ್ಕೆ ಪಾಕಿಸ್ತಾನ ದೊಡ್ಡ ರನ್ ರೇಟ್‌ನಿಂದ ಪಂದ್ಯ ಗೆಲ್ಲಬೇಕಿದೆ.

ವಿಲ್ ಜ್ಯಾಕ್ಸ್ ಅರ್ಭಟ: ಗುರಿ ಬೆನ್ನತ್ತಿದ ಇಂಗ್ಲೆಂಡ್ ಆರಂಭದಲ್ಲಿ ಭಾರೀ ಆಘಾತ ಎದುರಿಸಿತು. ಟೂರ್ನಿಯುದ್ದಕ್ಕೂ ಹಿನ್ನಡೆ ಅನುಭವಿಸಿರುವ ಬಟ್ಲರ್ ಹಾಗೂ ಸಾಲ್ಟ್ ತಂಡ 2 ರನ್ ಗಳಿಸುವಷ್ಟರಲ್ಲಿ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಬ್ರೂಕ್ ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಳ್ಳುವ ಹೊತ್ತಿಗೆ 26 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು.

ಬ್ಯಾಥೆಲ್ ಕೂಡ 21 ರನ್‌ಗೆ ವಿಕೆಟ್ ಒಪ್ಪಿಸಿದರು. ಇದರೊಂದಿಗೆ ಸಂಕಷ್ಟಕ್ಕೆ ಸಿಲುಕೊಂಡ ಇಂಗ್ಲೆಂಡ್ ಬ್ಯಾಟನ್ ಅವರ ಆಟದೊಂದಿಗೆ ಪಂದ್ಯದಲ್ಲಿ ಉಳಿದಕೊಂಡಿತು.

ಕೊನೆಯ ನಾಲ್ಕು ಓವರ್‌ಗಳಲ್ಲಿ 46 ರನ್ ಬೇಕಿದ್ದವು.

ಈ ವೇಳೆ ಜ್ಯಾಕ್ಸ್ ಮತ್ತು ಅಹ್ಮದ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಪಂದ್ಯ ಗೆಲ್ಲಿಸಿದರು. ಮೊದಲು ಬ್ಯಾಟ್ ಮಾಡಿದ ನ್ಯೂಜಿಲೆಂಡ್ ಪರ ಸೀಫರ್ಟ್ ಮತ್ತು ಫಿನ್‌ಅಲೆನ್ ಉತ್ತಮ ಬ್ಯಾಟಿಂಗ್ ಮಾಡಿದರು.

ನ್ಯೂಜಿಲೆಂಡ್ ವಿರುದ್ಧ ಇಂಗ್ಲೆಂಡ್‌ಗೆ ನಾಲ್ಕು ವಿಕೆಟ್ ಗೆಲುವು

ಇಂದಿನ ಪಂದ್ಯ
ಶ್ರೀಲಂಕಾ VS ಪಾಕಿಸ್ತಾನ
ಸಂಜೆ 7 (ಪಲ್ಲೆಕೆಲೆ)

ಸೂಪರ್-8 ಅಂಕಪಟ್ಟಿ

ಗುಂಪು 1

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ದ.ಆಫ್ರಿಕಾ (Q)	2	2	0	0	4	+2.890
ವಿಂಡೀಸ್	2	1	1	0	2	+1.791
ಭಾರತ	2	1	1	0	2	-0.100
ಜಿಂಬಾಬ್ವೆ	2	0	2	0	0	-4.475

ಗುಂಪು 2

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಇಂಗ್ಲೆಂಡ್ (Q)	3	3	0	0	6	+1.09
ಕಿವೀಸ್	3	1	1	1	3	+1.39
ಪಾಕಿಸ್ತಾನ	2	0	1	1	1	-0.461
ಶ್ರೀಲಂಕಾ	2	0	2	0	0	-2.800

ಲಖನೌ ತಂಡದ ಹೊಸ ಜೆರ್ಸಿ ಅನಾವರಣ

ಲಖನೌ: ಮೊನ್ನೆಯಷ್ಟೇ ತಮ್ಮ ತಂಡದ ಹೊಸ ಲೋಗೊ ಬಿಡುಗಡೆ ಮಾಡಿದ್ದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಫ್ರಾಂಚೈಸಿ ಲಖನೌ ಸೂಪರ್ ಜೈಂಟ್ಸ್ ತಂಡವು ಶುಕ್ರವಾರದಂದು ತಮ್ಮ ತಂಡದ ಹೊಸ ಜೆರ್ಸಿ ಬಿಡುಗಡೆ ಮಾಡಿದೆ.

ರಿಷಭ್ ಪಂತ್ ನೇತೃತ್ವದಲ್ಲಿ ಕಣಕ್ಕಿಳಿಯುವ ಲಖನೌ ಸೂಪರ್ ಜೈಂಟ್ಸ್, ಬದಲಾವಣೆಗಳನ್ನು ತರುತ್ತಿದೆ. ನೀಲಿ ಜೆರ್ಸಿಯೊಂದಿಗೆ ಕಳೆದ ಮೂರು ಸೀಸನ್‌ಗಳಿಂದ ಆಡುತ್ತಿರುವ ತಂಡವು ಇದೇ ಮೊದಲ ಬಾರಿಗೆ ಕೆಂಪು ಮತ್ತು ನೀಲಿ ಬಣ್ಣದ ಜೆರ್ಸಿ ಬಿಡುಗಡೆ ಮಾಡಿದೆ. ನಡುವೆ ಬಂಗಾರ ಬಣ್ಣದ ರೇಖೆಗಳಿವೆ. ಶುಕ್ರವಾರದಂದು ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಬಿಡುಗಡೆ ಮಾಡಿರುವ ಪೋಸ್ಟ್‌ನಲ್ಲಿ ಜೆರ್ಸಿ ಬಗ್ಗೆ ಹೇಳಲಾಗಿದೆ. ಅದರಲ್ಲಿ ನಾವು ಹೊಸತನದನ್ನು ಬಯಸುತ್ತೇವೆ. ನಮ್ಮ ಲೋಗೊನಂತೆ ಜೆರ್ಸಿ ಕೂಡ ರಾಜ್ಯದ ಇತಿಹಾಸ ಪ್ರತಿಪಾದಿಸುತ್ತದೆ ಎಂದಿದೆ. ಜೆ.ಕೆ. ಸೂಪರ್ ಸಿಮೆಂಟ್ ತಂಡದ ಪ್ರಾಯೋಜಕರಾಗಿದ್ದಾರೆ.



ಚೆಸ್: ಎರಡನೇ ಡ್ರಾ ಸಾಧಿಸಿದ ಗುಕೇಶ್

ಹೊಸದಿಲ್ಲಿ: ಪ್ರಾಗ್ ಇಂಟರ್‌ನ್ಯಾಷನಲ್ ಚೆಸ್ ಫೆಸ್ಟಿವಲ್‌ನ ಮಾಸ್ಟರ್ಸ್ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ಮತ್ತೊಂದು ಡ್ರಾ ಸಾಧಿಸಿದರೆ, ಹಾಲಿ ಚಾಂಪಿಯನ್ ಅರವಿಂದ್ ಚಿತಾಂಬರಂ ಅಮೆರಿಕದ ಹಾನ್ಸ್ ನಿಯೆಮನ್ ವಿರುದ್ಧ ಅಚ್ಚರಿ ಗೆಲುವು ದಾಖಲಿಸಿದರು.

ಮಾಸ್ಟರ್ಸ್ ವಿಭಾಗದ ಎರಡನೇ ಸುತ್ತಿನಲ್ಲಿ ಗುಕೇಶ್ ಉಜ್ಬೇಕಿಸ್ತಾನದ ನೋಡಿರ್‌ಬೇಕ್ ಯಾಕುಬ್ಬೋಯೆವ್ ವಿರುದ್ಧ ಡ್ರಾಗೆ ತೃಪ್ತಿಪಟ್ಟರು. ಕ್ವೀನ್ಸ್ ಗ್ಯಾಂಬಿಟ್ ಡಿಕ್ಲೈನ್ಡ್ ಆರಂಭದಲ್ಲಿ ಯಾಕುಬ್ಬೋಯೆವ್ ಉತ್ತಮ ಸಿದ್ಧತೆಯೊಂದಿಗೆ ಕಣಕ್ಕಿಳಿದಿದ್ದರು. ಆರಂಭದ ಉದ್ವೇಗದ ನಂತರ ಸ್ಥಿತಿ ಸಮಬಲದಲ್ಲಿತ್ತು. ಬಳಿಕ ಯಾಕುಬ್ಬೋಯೆವ್ ರುಕ್ ಬಲಿ ನೀಡಿ ಮರುಪದವಿನ್ಯಾಸ ಮೂಲಕ ಡ್ರಾ ಖಚಿತಪಡಿಸಿಕೊಂಡರು. ಇನ್ನೊಂದೆಡೆ, ಹಾಲಿ ಚಾಂಪಿಯನ್ ಅರ್ವಿಂದ್ ಚಿತಂಬರಂ ಫಿಲಿಡರ್ ಡಿಫೆನ್ಸ್ ಮುಂದುವರಿಸಿದರು. ಬಿಳಿ ಕಾಯಿಗಳೊಂದಿಗೆ ಆಡಿದ ಅವರು, ನಿಯೆಮನ್ ಆರಂಭದಲ್ಲಿ ಮೇಲುಗೈ ಸಾಧಿಸಿದ್ದರೂ, ಸಮಯದ ಒತ್ತಡದಿಂದ ಹಿನ್ನಡೆ ಅನುಭವಿಸಿದರು. ಅವಕಾಶವನ್ನು ಚಾತುರ್ಯದಿಂದ ಬಳಸಿಕೊಂಡ ಅರವಿಂದ್ ಗೆಲ್ಲುವ ಅಂತಿಮ ಹಂತಕ್ಕೆ (ಎಂಡ್ ಗೇಮ್) ಪಂದ್ಯವನ್ನು ಕೊಂಡೊಯ್ದು ಅಮೂಲ್ಯ ಜಯ ಸಾಧಿಸಿದರು.

ಇನ್ನೊಂದು ನಿರ್ಣಾಯಕ ಪಂದ್ಯದಲ್ಲಿ ಸ್ಪೇನ್‌ನ ಡೆವಿಡ್ ಆಂಟೋನ್ ಕಿಂಗ್ಸ್ ಇಂಡಿಯನ್ ಡಿಫೆನ್ಸ್‌ನಲ್ಲಿ ನೆದರ್‌ಲ್ಯಾಂಡ್ಸ್‌ನ ಜಾರ್ಡನ್ ವ್ಯಾನ್ ಫಾರೆಸ್ಟ್ ವಿರುದ್ಧ ಜಯ ಸಾಧಿಸಿದರು.


ಏಳು ಸುತ್ತುಗಳು ಬಾಕಿ ಇರುವಾಗ, ಅಬ್ದುಸತ್ತೊರೋವ್, ಯಾಕುಬ್ಬೋಯೆವ್ ಮತ್ತು ಸ್ಥಳೀಯ ಆಟಗಾರ ಡೇವಿಡ್ ನಾವರಾ ತಲಾ 1.5 ಅಂಕಗಳೊಂದಿಗೆ ಸಂಯುಕ್ತ ಮುನ್ನಡೆಯಲ್ಲಿದ್ದಾರೆ. ಗುಕೇಶ್, ಅರ್ವಿಂದ್, ವಾನ್ ಫೊರೆಸ್ಟ್ ಮತ್ತು ಗುಯಿಚಾರೋ ಅರ್ಧ ಅಂಕ ಹಿಂದೆ ಇದ್ದಾರೆ. ಚಾಲೆಂಜರ್ಸ್ ವಿಭಾಗದಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಹಾಗೂ ವುಮೆನ್ಸ್ ವರ್ಲ್ಡ್ ಕಪ್ ವಿಜೇತೆ ದಿವ್ಯಾ ದೇಶಮುಖ್ ಸ್ಪೇನ್‌ನ ಡಾನಿಲ್ ಯುಫಾ ವಿರುದ್ಧ ಡ್ರಾ ಸಾಧಿಸಿದರು. ಮೊದಲ ಪಂದ್ಯದಲ್ಲಿ ಹಂಗೇರಿಯ ಬೆಂಜಾಮಿನ್ ಗ್ಲೇಡುರಾ ವಿರುದ್ಧ ಸಮಬಲ ಸಾಧಿಸಿದ್ದ ದಿವ್ಯಾ, ಎರಡು ಪಂದ್ಯಗಳ ನಂತರ ಅರ್ಧ ಅಂಕದ ಸಾಧನೆಯೊಂದಿಗೆ ಮುಂದುವರಿದಿದ್ದಾರೆ. ಇನ್ನೊಬ್ಬ ಭಾರತೀಯ ಸೂರ್ಯ ಶೇಖರ ಡೆನ್ಮಾರ್ಕ್‌ನ ಜೋನಸ್ ಬುಹ್ಲ್ ವಿರುದ್ಧ ಡ್ರಾ ಮೂಲಕ ಖಾತೆ ತೆರೆದಿದ್ದಾರೆ.



ಪದಬಂಧ

▸▸ ರಾಜಾ ಸಂಗಮೇಶ ಹಿರೇಮಠ

5909



ಎಡದಿಂದ ಬಲಕ್ಕೆ
1.ಲೋಕವನ್ನು ತನ್ನ ಸೌಂದರ್ಯದಿಂದ ಆಕರ್ಷಿಸುವವಳು (7)
3.ತ್ರಿಮೂರ್ತಿಗಳಲ್ಲೊಬ್ಬ-ಈಶ್ವರ (2)
4.ಚಿಕ್ಕಹುಳುಗಳಿಂದಾಗುವ ಅಂಟುರೋಗ (2)
5.ಕಣ್ಣಿಗೆ ಕಾಣದಷ್ಟು ಸಣ್ಣ ಜೀವಿ (3)
7.ಕೂಡಿದ ಜನರಿಂದ ತಿಳಿದ ಸುದ್ದಿ (4)
9.ಜಾತ ಒಳಗೊಂಡ ನಿರಾಕರಿಸಲ್ಪಟ್ಟದ್ದು (4)
11.ಮಂದ ಬುದ್ಧಿಯವ ಅಲ್ಲಿಗೇ ತಂದ ಚಾಪೆ (4)
13.ಅತಿಯಾದ ವಜನು ಎಂಬರ್ಥದ ಶಬ್ದ (4)
15.ಅಕ್ಕಪಕ್ಕವಿಲ್ಲಿ ತಿರುಗಿ ಕಾಣುತ್ತಿದೆ (4)
16.ಅತ್ಯಂತ ಸೂಕ್ಷ್ಮವಾದ ಚಿಕ್ಕ ಪ್ರಮಾಣ (4)

ಮೇಲಿನಿಂದ ಕೆಳಕ್ಕೆ
1.ಈ ಜಗತ್ತಿನಲ್ಲಿ ಜನಿಸಿದವನು (4)
2.ಅನುಗ್ರಹಿಸುವವಳು ತಲೆಕೆಳಗಾಗಿದ್ದಾಳೆ (4)
5.ಪುಸ್ತಕ-ಬಟ್ಟೆಗಳನ್ನಿಡುವ ದೊಡ್ಡ ಕಪಾಟು (2)
6.ಉಲ್ಟಾ ಕಂಡ ರಸಾಯನಿಕ-ಭೌತಿಕತೆ ಕಾಯ್ದುಕೊಂಡ ಚಿಕ್ಕ ಕಣ (2)
8. ತುಂಗ-ಭದ್ರಾ, ನದಿಗಳು ಸಂಗಮಿಸುವ ಸ್ಥಳ (3)
10. ಇಲಿಗೆ ಹಾಕುವ ವಿಷವಿದು (3)
11. ಮೆಲುವಾಗಿ ಬೀಸುತ್ತಿರುವ ಗಾಳಿ (4)
12. ಕೊರಳಲ್ಲಿ ಧರಿಸುವ ಚಿನ್ನದ ಆಭರಣ (4)
13. ಸಿಹಿಯಾದ ಮನಸ್ಸನ್ನು ಹೊಂದಿದವಳು (4)
14. ಲೋಹವನ್ನು ಚಿನ್ನವಾಗಿಸುವ ಕಲೆ (4)

5908 ಉತ್ತರ

ಎಡದಿಂದ ಬಲಕ್ಕೆ:
1.ಸಕಾಲ 3.ಅಮರಕಾಂತ
5.ನಲಿವು 7.ಕಟ್ಟಿಗೆ
8.ಹಾಜರಿ 9.ಅಧೀರ
10.ಸುರಭಿ 11.ಗಾಯಕ
12.ಯಮುನಾ 13.ರವಿಜ
15.ಹಣದಭಾವ 16.ಕಸಟು

ಮೇಲಿನಿಂದ ಕೆಳಕ್ಕೆ :
2.ಕಾವಲಿ 3.ಅಧಿಕಾರಿ
4.ತದಿಗೆ 6.ನಾಗರಹಾವು
7.ಕನಸುಗಾರ 11.ಕಲರವ
12.ಹರೆಯ 14.ವಿಶ್ವಾಸ

ಕಚೇರಿಗೆ ಭೇಟಿ ನೀಡುವ ನಾಗರಿಕರಿಗೆ ಅನುಕೂಲ: ಮಹೇಶ್ವರ್ ರಾವ್

ಕ್ಯಾಂಟೀನ್ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ



ಬೆಂಗಳೂರು: ಜಿಬಿಎ ಕಚೇರಿಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿ ಹಾಗೂ ಸಿಬ್ಬಂದಿ ಮತ್ತು ಕಚೇರಿಗೆ ಭೇಟಿ ನೀಡುವ ನಾಗರಿಕರ ಅನುಕೂಲಕ್ಕಾಗಿ ಜಿಬಿಎ ಆವರಣದಲ್ಲಿ ಸುಸಜ್ಜಿತ ಕ್ಯಾಂಟೀನ್ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಗಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಕೇಂದ್ರ ಕಚೇರಿಯ ಡಾ.ರಾಜ್ ಕುಮಾರ್ ಗಾಜಿನ ಮನೆಯ ಸಮೀಪ ಕ್ಯಾಂಟೀನ್ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಬಳಿಕ ಮಾತನಾಡಿದ ಅವರು, ಒಟ್ಟು 98 ಲಕ್ಷ ರೂ. ವೆಚ್ಚದಲ್ಲಿ 40/30 ಅಡಿ ವಿಸ್ತೀರ್ಣದ ಜಾಗದಲ್ಲಿ ನೆಲ ಮಹಡಿ ಹಾಗೂ ಮೊದಲ ಮಹಡಿಯನ್ನು ಒಳಗೊಂಡ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ ಎಂದು ತಿಳಿಸಿದರು.

ಜಿಬಿಎ ಕೇಂದ್ರ ಕಚೇರಿಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿ, ಸಿಬ್ಬಂದಿ ಹಾಗೂ ನಾಗರಿಕರಿಗೆ ಗುಣಮಟ್ಟದ ಆಹಾರ ಸೌಲಭ್ಯ ಒದಗಿಸುವ ಉದ್ದೇಶದಿಂದ ಈ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ. ಈ ಮೂಲಕ ಗುಣಮಟ್ಟದ ಉಪಹಾರ, ಕಾಫಿ/ ಟೀ, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ ಎಂದು ಹೇಳಿದರು. ಕಟ್ಟಡದ ನೆಲ ಮಹಡಿಯಲ್ಲಿ ಸೆಲ್ಫ್ ಸರ್ವೀಸ್ ವ್ಯವಸ್ಥೆ ಮತ್ತು ಮೊದಲ ಮಹಡಿಯಲ್ಲಿ ಸರ್ವೀಸ್ ವ್ಯವಸ್ಥೆ ಕಲ್ಪಿಸಲು ಯೋಜನೆ ರೂಪಿಸಲಾಗಿದೆ. ನಿಗದಿತ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

ಕ್ಯಾಂಟೀನ್‌ನಲ್ಲಿ ಉಪಹಾರ, ಬೇಕರಿ ತಿನಿಸುಗಳು, ಜ್ಯೂಸ್ ಸೇರಿದಂತೆ ವಿವಿಧ ಆಹಾರ ಪದಾರ್ಥಗಳನ್ನು ಲಭ್ಯವಾಗುವಂತೆ ಕ್ರಮ ಕೈಗೊಳ್ಳಲಾಗುವುದು. ಉತ್ತಮ ಗುಣಮಟ್ಟವನ್ನು ಕಾಪಾಡಿಕೊಂಡು ಆಹಾರ ಒದಗಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿಶೇಷ ಆಯುಕ್ತ ಡಾ.ಕೆ.ಹರೀಶ್ ಕುಮಾರ್, ಕೇಂದ್ರ ನಗರ ಪಾಲಿಕೆ ಜಂಟಿ ಆಯುಕ್ತ ಹೇಮಂತ್ ಶರಣ್ ಉಪಸ್ಥಿತರಿದ್ದರು.

ಪೌರ ಕಾರ್ಮಿಕರಿಗೆ ವಸ್ತ್ರ ವಿತರಿಸಿ ಹುಟ್ಟುಹಬ್ಬ ಆಚರಣೆ

ಬೆಂಗಳೂರು: ಲೋಕೋಪಯೋಗಿ ಇಲಾಖೆಯ ನಿವೃತ್ತ ಡಾ.ಎ.ಸೋಮಶೇಖರ್ ಅವರ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ಹಾಗೂ ಹಿತೈಷಿಗಳು ಪೌರ ಕಾರ್ಮಿಕರಿಗೆ ವಸ್ತ್ರ ವಿತರಿಸುವ ಮೂಲಕ ಅತ್ಯಂತ ಅರ್ಥಪೂರ್ಣವಾಗಿ ಆಚರಿಸಿದರು.

ಕಾರ್ಯಕ್ರಮದಲ್ಲಿ ಹೊಸದುರ್ಗ ಶಾಖಾ ಮಠದ ಪೀಠಾಧ್ಯಕ್ಷ ಈಶ್ವರಾನಂದ ಪುರಿ ಸ್ವಾಮೀಜಿ ಅವರು ಮಾತನಾಡಿ, ಡಾ.ಎ. ಸೋಮಶೇಖರ್ ಅವರು ಸದಾ ಜನರ ಸಂಕಷ್ಟಗಳಿಗೆ ಸ್ಪಂದಿಸುವ ಗುಣ ಹೊಂದಿದ್ದಾರೆ. ಅವರ ಜನಸ್ನೇಹಿ ಕಾರ್ಯಗಳು ಹಾಗೂ ಸಮಾಜಮುಖಿ ಸೇವೆ ಶ್ಲಾಘನೀಯವಾಗಿದ್ದು, ಮುಂದಿನ ದಿನಗಳಲ್ಲಿ ಅವರಿಗೆ ಇನ್ನಷ್ಟು ಜನಸೇವೆ ಮಾಡುವ ಶಕ್ತಿ ಸಿಗಲಿ ಎಂದು ಹರಸಿದರು.

ಡಾ.ಎ.ಸೋಮಶೇಖರ್ ಮಾತನಾಡಿ, ಸ್ವಾಮೀಜಿಯವರ ಆಶೀರ್ವಾದ ಹಾಗೂ ಅಭಿಮಾನಿಗಳ ಪ್ರೀತಿಗೆ ತಾವು ಸದಾ ಚಿರಋಣಿಯಾಗಿರುತ್ತೇನೆ. ಸಮಾಜದ ಅಭಿವೃದ್ಧಿ ಹಾಗೂ ಜನರ ಏಳಿಗೆಗಾಗಿ ಶ್ರಮಿಸುವುದು ನಮ್ಮೆಲ್ಲರ ಗುರಿಯಾಗಬೇಕು ಎಂದರು.



ಸನ್ಮಾನ



ಇತ್ತೀಚೆಗೆ ನಿವೃತ್ತರಾದ ಕರ್ನಾಟಕ ಮತ್ತು ಕೇರಳ ಉಪವಿಭಾಗದ ಜನರಲ್ ಆಫೀಸರ್ ಕಮಾಂಡಿಂಗ್ ಜನರಲ್ ಮೇಜರ್ ವಿನೋದ್ ಟಾಮ್ ಮ್ಯಾಥ್ಯೂ ಅವರನ್ನು ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಬೀಳ್ಕೊಡುಗೆ ಔತಣಕೂಟದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಸನ್ಮಾನಿಸಿದರು. ಈ ವೇಳೆ ಬಿಡಿಎ ಅಧ್ಯಕ್ಷ, ಶಾಸಕ ಎನ್.ಎ.ಹ್ಯಾರಿಸ್, ಆಯುಕ್ತ ಮಣಿವಣ್ಣನ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಬಿಡಬ್ಲ್ಯೂಎಸ್‌ಎಸ್‌ಬಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರರಾವ್ ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ಕಾಮಗಾರಿ ಪೂರ್ಣಗೊಳಿಸಲು ವಿಭಾಗಗಳ ಸಮನ್ವಯ ಮುಖ್ಯ



ಬೆಂಗಳೂರು: ಬಾಕಿ ಉಳಿದಿರುವ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು, ವಿವಿಧ ವಿಭಾಗಗಳ ನಡುವೆ ಸಮನ್ವಯವನ್ನು ಹೆಚ್ಚಿಸಬೇಕೆಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ.ಜೆ. ರವಿಶಂಕರ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಶುಕ್ರವಾರ ರೀಚ್-6ರ ಭೂಗತ ಮೆಟ್ರೋ ಕಾರಿಡಾರ್ ಪರಿಶೀಲನೆ ನಡೆಸಿದರು. ಈ ಮಾರ್ಗವು ಕಾರ್ಯಾರಂಭವಾದ ನಂತರ ಬೆಂಗಳೂರಿನ ಉತ್ತರ-ದಕ್ಷಿಣ ಸಂಪರ್ಕವನ್ನು ಬಲಪಡಿಸುವುದರ ಜೊತೆಗೆ ಪ್ರಮುಖ ಮುಖ್ಯರಸ್ತೆಗಳ ಮೇಲಿನ ಸಂಚಾರ ದಟ್ಟಣೆಯನ್ನು ತಗ್ಗಿಸುವಲ್ಲಿ ಮಹತ್ವದ ಪಾತ್ರ ವಹಿಸುವುದರಿಂದ, ಬಾಕಿ ಉಳಿದಿರುವ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ವಿವಿಧ ವಿಭಾಗಗಳ ನಡುವೆ ಸಮನ್ವಯವನ್ನು ಹೆಚ್ಚಿಸಬೇಕೆಂದು ಅಧಿಕಾರಿಗಳಿಗೆ, ಗುತ್ತಿಗೆದಾರರಿಗೆ ಹಾಗೂ ಸ್ಥಳೀಯ ಇಂಜಿನಿಯರ್‌ಗಳಿಗೆ ನಿರ್ದೇಶನ ನೀಡಿದರು.

ನಾಳೆ ರೈತರೊಂದಿಗೆ ಸಂವಾದ ಕಾರ್ಯಕ್ರಮ

ಬೆಂಗಳೂರು: ಸ್ವರ್ಣ ಭೂಮಿ ಮತ್ತು ದಿ ಫಾರ್ವರ್ಡ್ ಫೌಂಡೇಶನ್ ವತಿಯಿಂದ ಮಾ.1 ರಂದು ಬೆಳಗ್ಗೆ 10.30ಕ್ಕೆ ಗಾಂಧಿ ಭವನದಲ್ಲಿ ಸಾವಯವ ಕೃಷಿಯಲ್ಲಿ ಗೋಕೃಪಾಮೃತದ ಮಹತ್ವ ಕುರಿತು ರೈತರೊಂದಿಗೆ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಸಂವಾದ ಕಾರ್ಯಕ್ರಮದಲ್ಲಿ ಪ್ರಸಿದ್ಧ ಬನ್ಸಿ ಗೀರ್ ಗೋಶಾಲಾ ಖ್ಯಾತಿಯ ಗೋಪಾಲ್ ಭಾಯ್ ಸುತಾರಿಯ ಅವರು ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಕುರಿತು ಹೆಚ್ಚಿನ ಮಾಹಿತಿಗಾಗಿ 9945108393 ಸಂಪರ್ಕಿಸಬಹುದಾಗಿದೆ.

ಪದಾಧಿಕಾರಿಗಳು, ವ್ಯವಸ್ಥಾಪನಾ ಸಮಿತಿ ಸದಸ್ಯರ ಪಟ್ಟಿ ಪ್ರಕಟ

ಬೆಂಗಳೂರು: ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ದಕ್ಷಿಣ ಭಾರತ ಪ್ರಾದೇಶಿಕ ಮಂಡಳಿ (ಎಸ್‌ಐಆರ್‌ಸಿ) ಅಡಿಯಲ್ಲಿ ಕಾರ್ಯನಿರ್ವಹಿಸುವ ಬೆಂಗಳೂರು ಶಾಖೆಯು 2026–2027ನೇ ಸಾಲಿನ ನೂತನ ಪದಾಧಿಕಾರಿಗಳು ಹಾಗೂ ವ್ಯವಸ್ಥಾಪನಾ ಸಮಿತಿ ಸದಸ್ಯರ ಪಟ್ಟಿ ಪ್ರಕಟಿಸಿದೆ.



ನೂತನ ತಂಡದಲ್ಲಿ ಅಧ್ಯಕ್ಷರಾಗಿ ಸಿಎ ಕವಿತಾ ಪರಮೇಶ್, ಉಪಾಧ್ಯಕ್ಷರಾಗಿ ಸಿಎ ಶುಭದ ವಿರೂಪಾಕ್ಷಪ್ಪ ಮುವ್ವಣ್ಣ, ಕಾರ್ಯದರ್ಶಿಯಾಗಿ ಸಿಎ ಶ್ರೀಪಾದ್ ಹುಯಿಲಗೋಳ, ಖಜಾಂಚಿಯಾಗಿ ಸಿಎ ನಿಶ್ಚಲ್ ರೇಣಿಗುಂಟ್ಲ ಬದರಿನಾಥ ಹಾಗೂ ಸಿಕಾಸಾ ಅಧ್ಯಕ್ಷರಾಗಿ ಸಿಎ ವಿನೋದ ಗರ್ಗ್, ಸಿಎ ರಕ್ಷಾ ಕೆ.ಎನ್. ಸಿಕಾಸಾ ಸಹ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಸಿಎ ಚಂದ್ರಪ್ರಕಾಶ್ ಜೈನ್ ಟಿಜಿಟಿ ಮತ್ತು ಸಿಎ ರಾಘವೇಂದ್ರ ಹೆಗಡೆ ವ್ಯವಸ್ಥಾಪನಾ ಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಮಾ.24ರಂದು ಕರಗ ಧ್ವಜಾರೋಹಣ | ದಸರಾ ಮಾದರಿ ಆಚರಣೆಗೆ ಪೂರ್ವಸಿದ್ಧತೆ: ರಾಮಲಿಂಗಾ ರೆಡ್ಡಿ

ಏ.1ಕ್ಕೆ ಬೆಂಗಳೂರು ಕರಗ ಶಕ್ತ್ಯೋತ್ಸವ

ಬೆಂಗಳೂರು: ತಿಗಳರಪೇಟೆಯಲ್ಲಿನ ಶ್ರೀ ಧರ್ಮರಾಯ ಸ್ವಾಮಿ ದೇವಾಲಯದಲ್ಲಿ ಮಾ.24ರಂದು ಕರಗ ಧ್ವಜಾರೋಹಣ, ಏ.1 ರಂದು ಕರಗ ಶಕ್ತ್ಯೋತ್ಸವ ಜರುಗಲಿದೆ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.24ರಿಂದ ಏ.3ರವರೆಗೆ ಕರಗ ಉತ್ಸವ ನಡೆಯಲಿದ್ದು, ಈ ವರ್ಷ ದಸರಾ ಕಾರ್ಯಕ್ರಮ ಮಾದರಿಯಲ್ಲಿ ಕರಗವನ್ನು ಹೆಚ್ಚು ವಿಜೃಂಭಣೆಯಿಂದ ನಡೆಸಲು ಅಗತ್ಯ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಪ್ರತಿ ವರ್ಷ ಜಿ.ಬಿ.ಎ ವತಿಯಿಂದ ಕಾಯ್ದಿರಿಸಲಾಗುವ ಅನುದಾನವನ್ನು ಕಾರ್ಯಕ್ರಮಕ್ಕಾಗಿ ಅಗತ್ಯವಿರುವ ವ್ಯವಸ್ಥೆಗಳಿಗೆ ತಗಲುವ ಎಲ್ಲಾ ವೆಚ್ಚವನ್ನು ಜಿ.ಬಿ.ಎ ವತಿಯಿಂದ ಅಲ್ಪಾವಧಿ ಟೆಂಡರ್‌ಗಳನ್ನು ಕರೆದು ಸಮರ್ಪಕವಾಗಿ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕರಗಮಹೋತ್ಸವದ ದಿನವಂದು ನಡೆಯುವ ರಥೋತ್ಸವ ಕಾರ್ಯಕ್ರಮಕ್ಕಾಗಿ ದೇವಾಲಯದ ರಥವನ್ನು ಸುಸ್ಥಿತಿಯಲ್ಲಿ ಇರುವ ಬಗ್ಗೆ ಲೋಕೋಪಯೋಗಿ ಇಲಾಖೆಯಿಂದ ಪರಿಶೀಲನೆಗೆ ಒಳಪಡಿಸಿ ಅಗತ್ಯವಿರುವ ರಿಪೇರಿಗಳನ್ನು ಕೈಗೊಂಡು ರಥವನ್ನು ಸುಸ್ಥಿತಿಯಲ್ಲಿ ಇರುವ ಬಗ್ಗೆ ದೃಢೀಕರಣ ಪಡೆದು ರಥೋತ್ಸವ ನೆರವೇರಿಸಲಾಗುವುದು ಎಂದರು.

ವಿದ್ಯುತ್ ದೀಪಾಲಂಕಾರ: ಬೆಂಗಳೂರು ನಗರದ ಮುಖ್ಯ ವೃತ್ತಗಳಾದ ಹಡ್ಸನ್ ಸರ್ಕಲ್, ಟೌನ್ ಹಾಲ್ ವೃತ್ತ, ಸಿಟಿ ಮಾರುಕಟ್ಟೆ ವೃತ್ತ, ಮೈಸೂರು ಬ್ಯಾಂಕ್ ವೃತ್ತ, ಜಿ.ಬಿ.ಎ. ಮುಖ್ಯ ಕಚೇರಿಯ ಆವರಣ ಕೆಂಪೇಗೌಡ ವೃತ್ತ, ಹಳೇ ಪೇಟೆಗಳು ಮತ್ತು ಇತರೆ ಮುಖ್ಯ ರಸ್ತೆಗಳಿಗೆ ವಿಶೇಷವಾಗಿ ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತಿದೆ. ದೇವಾಲಯದ ಸುತ್ತಮುತ್ತಲೂ ಅವಕಾಶವಿರುವ ಸ್ಥಳಗಳಲ್ಲಿ ಮನರಂಜನೆಗಾಗಿ ಹೆಚ್ಚು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಕೂಡಲೇ ಕಸ ವಿಲೇವಾರಿ: ಕರಗವು ಸಾಗುವ ಮಾರ್ಗಗಳಲ್ಲಿ ಸಂಗ್ರಹವಾಗುವ ಕಸವನ್ನು ಆಗಿಂದಾಗ್ಗೆ ವಿಲೇವಾರಿ ಮಾಡಿ ಸ್ವಚ್ಛವಾಗಿಡಲು ಮತ್ತು ಅಗತ್ಯವಿರುವ ಕಡೆ ರಸ್ತೆಗಳನ್ನು ರಿಪೇರಿ ಮಾಡಿ ಸುಸ್ಥಿತಿಯಲ್ಲಿಡಲು, ಬೀದಿ ದೀಪ, ಸಿ.ಸಿ.ಕ್ಯಾಮೆರಾಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಅಳವಡಿಸಿ ಸಮರ್ಪಕವಾಗಿ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ತುರ್ತುಸೇವೆ ಒದಗಿಸಲು ಕ್ರಮ: ಕರಗ ಮಹೋತ್ಸವಕ್ಕೆ ಆಗಮಿಸುವ ಭಕ್ತಾಧಿಗಳಿಗೆ ಅಗತ್ಯವಿರುವ ಎಲ್ಲಾ ಕಡೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಸಮರ್ಪಕವಾಗಿ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಭಕ್ತಾಧಿಗಳಿಗೆ ಅನುಕೂಲವಾಗುವಂತೆ ಮುಂಜಾಗ್ರತಾ ಕ್ರಮವಾಗಿ ತುರ್ತುಸೇವೆ ಒದಗಿಸಲು ಆಂಬ್ಯುಲೆನ್ಸ್ ಸಹಿತ ವೈದ್ಯಕೀಯ ತಂಡ ನಿಯೋಜನೆ, ಅಗ್ನಿ ಅವಘಡ ಸಂಭವಿಸದಂತೆ ಮುಂಜಾಗ್ರತಾ ಕ್ರಮವಾಗಿ ಅಗ್ನಿ ಶಾಮಕ ವಾಹನವನ್ನು ಸ್ಥಳದಲ್ಲಿ ನಿಯೋಜಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.



> ಏ.6ಕ್ಕೆ ಜಿಬಿಎ ಚುನಾವಣೆ ಸಂಬಂಧ ಅಧಿಸೂಚನೆ ಮಾಡುತ್ತೇವೆ. ಅದಾಗಿ ಮೇ ತಿಂಗಳಿಗೆ ಜಿಬಿಎ ಚುನಾವಣೆ ನಡೆಯುತ್ತದೆ.
> ■ ರಾಮಲಿಂಗಾ ರೆಡ್ಡಿ, ಸಾರಿಗೆ ಸಚಿವ

ಸಂಚಾರಕ್ಕೆ ಅಡ್ಡಿಯಾಗದಂತೆ ಅಗತ್ಯ ವ್ಯವಸ್ಥೆ

ಕರಗ ಮಹೋತ್ಸವಕ್ಕೆ ಕಾರ್ಯಕ್ರಮಕ್ಕೆ ಆಗಮಿಸುವ ಅತಿ ಗಣ್ಯರು, ಗಣ್ಯರು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕ ಭಕ್ತಾಧಿಗಳು ಆಗಮಿಸುವುದರಿಂದ ಕಾನೂನು ಸುವ್ಯವಸ್ಥೆಯಲ್ಲಿ ಯಾವುದೇ ಲೋಪವಾಗದಂತೆ ಅಗತ್ಯ ಪ್ರಮಾಣದಲ್ಲಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲು ಮತ್ತು ಅವಕಾಶವಿರುವ ಕಡೆಗಳಲ್ಲಿ ವಾಹನ ನಿಲುಗಡೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಿ ಸಾರ್ವಜನಿಕ ಸಂಚಾರಕ್ಕೆ ಯಾವುದೇ ಅಡ್ಡಿಯಾಗದಂತೆ ಅಗತ್ಯ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.

ಹಣ ಕದ್ದ ಪ್ರಕರಣ: ಆರೋಪಿ ಸೆರೆ



ಬೆಂಗಳೂರು: ಬಿಲ್ಡರ್ಸ್ ಮತ್ತು ಮೈನಿಂಗ್ ಕಚೇರಿಯೊಂದರ ಬೀಗ ಮುರಿದು ಲಕ್ಷಾಂತರ ರೂಪಾಯಿ ಹಣ ಕಳವು ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸದಾಶಿವನಗರ ಠಾಣಾ ಪೊಲೀಸರು ಓರ್ವ ಆರೋಪಿಯನ್ನು ಬಂಧಿಸಿದ್ದಾರೆ.

ಧನಂಜಯ (28) ಬಂಧಿತ ಆರೋಪಿ. ಇದೆ ಪ್ರಕರಣಕ್ಕೆ ಸಂಬಂಧಿಸಿದ ಮತ್ತಿಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಇವರ ಶೋಧ ಕಾರ್ಯ ಮುಂದುವರೆದಿದೆ. ಓರ್ವ ಬಂಧಿತನಿಂದ ಒಟ್ಟು 81.66 ಲಕ್ಷ ರೂ. ನಗದನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಠಾಣಾ ವ್ಯಾಪ್ತಿಯ ಬಿಇಎಲ್ ರಸ್ತೆಯಲ್ಲಿರುವ ಕಚೇರಿಯ ಮಾಲೀಕರು ರಾತ್ರಿ ಕೆಲಸ ಮುಗಿಸಿ ಬೀಗ ಹಾಕಿಕೊಂಡು ಮನೆಗೆ ತೆರಳಿದ್ದರು. ಮರುದಿನ ಕಚೇರಿಯ ಗ್ಲಾಸ್ ಒಡೆದಿರುವ ಬಗ್ಗೆ ಪಕ್ಕದ ಅಂಗಡಿಯವರು ಮಾಹಿತಿ ನೀಡಿದ್ದಾರೆ. ಮಾಲೀಕರು ಬಂದು ಪರಿಶೀಲಿಸಿದಾಗ, ಬೀರುವಿನಲ್ಲಿದ್ದ ಒಟ್ಟು 1,76,00,000 ನಗದಿನ ಪೈಕಿ 91,76,000 ಹಣವನ್ನು ದುಷ್ಕರ್ಮಿಗಳು ಕಳವು ಮಾಡಿರುವುದು ಬೆಳಕಿಗೆ ಬಂದಿತ್ತು. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದರು.

ಈ ಘಟನೆ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು ಫೆ.22 ರಂದು ಶಿವಮೊಗ್ಗದಲ್ಲಿ ಕೃತ್ಯಕ್ಕೆ ಬಳಸಿದ್ದ ಕಾರಿನ ಸಮೇತ ಓರ್ವ ವ್ಯಕ್ತಿಯನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಿದಾಗ ಅದೇ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿಯೇ ಈ ಕೃತ್ಯಕ್ಕೆ ಸಂಚು ರೂಪಿಸಿದ ಮಾಸ್ಟರ್ ಮೈಂಡ್ ಎಂಬುದು ತಿಳಿದುಬಂದಿದೆ.

ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿಯು ಹೆಚ್ಚಿನ ಹಣ ಗಳಿಸುವ ಆಸೆಯಿಂದ ತನ್ನ ಸ್ನೇಹಿತರಿಗೆ ಕಚೇರಿಯಲ್ಲಿ ಹಣವಿರುವ ಬಗ್ಗೆ ಮಾಹಿತಿ ನೀಡಿ ಈ ಕಳ್ಳತನ ಮಾಡಿಸಿದ್ದಾನೆ ಎನ್ನುವುದು ಪ್ರಾಥಮಿಕ ತನಿಖೆಯಿಂದ ದೃಢಪಟ್ಟಿದೆ. ತಲೆಮರೆಸಿಕೊಂಡಿರುವ ಮತ್ತೊಬ್ಬ ಆರೋಪಿಯ ತಂದೆಯ ಬಳಿ ಶಿವಮೊಗ್ಗದಲ್ಲಿ ಇರಿಸಲಾಗಿದ್ದ 81.66 ಲಕ್ಷ ಹಣವನ್ನು ಪೊಲೀಸರು ಫೆ.25 ರಂದು ವಶಪಡಿಸಿಕೊಂಡಿದ್ದಾರೆ.

5.24 ಕೋಟಿ ರೂ. ಮೌಲ್ಯದ ನಿಷೇಧಿತ ಮಾದಕ ವಸ್ತು ಜಪ್ತಿ

ಹದಿನಾರು ಆರೋಪಿಗಳ ಬಂಧನ

ಬೆಂಗಳೂರು: ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳ ಹಾಗೂ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಡೆಸಲಾದ ಬೃಹತ್ ಕಾರ್ಯಾಚರಣೆಯಲ್ಲಿ, ಸುಮಾರು 5.24 ಕೋಟಿ ರೂ. ಮೌಲ್ಯದ ನಿಷೇಧಿತ ಮಾದಕ ವಸ್ತುವನ್ನು ಜಪ್ತಿಮಾಡಿ 16 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಮಾರತ್‌ಹಳ್ಳಿ, ವಿದ್ಯಾರಣ್ಯಪುರ, ಮಹದೇವಪುರ, ಗೋವಿಂದಪುರ, ಚಾಮರಾಜಪೇಟೆ, ಎಸ್.ಆರ್.ನಗರ ಮತ್ತು ನಂದಿನಿ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಕಾರ್ಯಾಚರಣೆ ನಡೆದಿದ್ದು, ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣಗಳನ್ನು ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ನೈಜೀರಿಯಾ ಮೂಲದ ಆರೋಪಿಗಳ ವೀಸಾ ಅವಧಿ ಮುಗಿದಿದ್ದರೂ ನಗರದಲ್ಲಿ ಅಕ್ರಮವಾಗಿ ನೆಲೆಸಿದ್ದ 9 ಮಂದಿಯನ್ನು ವಶಕ್ಕೆ ಪಡೆದಿದ್ದು, ಈ ಪೈಕಿ ನಾಲ್ವರನ್ನು ಈಗಾಗಲೇ ಅವರ ದೇಶಕ್ಕೆ ವಾಪಸ್ ಕಳುಹಿಸಲಾಗಿದೆ ಉಳಿದ ಆರೋಪಿಗಳ ಮೇಲೆ ಪ್ರಕರಣ ಇರುವುದರಿಂದ ಫಾರಿನರ್ಸ್ ಡಿಟೆಕ್ಷನ್ ಸೆಂಟರ್‌ಗೆ ಕಳುಹಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

ಆರೋಪಿಗಳ ವಿಚಾರಣೆ ವೇಳೆ ವಿದೇಶ ಹಾಗೂ ಹೊರರಾಜ್ಯಗಳಿಂದ ಕಡಿಮೆ ಬೆಲೆಗೆ ಮಾದಕ ವಸ್ತುಗಳನ್ನು ತಂದು ಸಾರ್ವಜನಿಕರಿಗೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಹೆಚ್ಚಿನ ಲಾಭಕ್ಕೆ ಮಾರಾಟ ಮಾಡುತ್ತಿರುವುದಾಗಿ ಒಪ್ಪಿಕೊಂಡಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಡಿಸಿಪಿಗಳಾದ ರಾಜಾ ಇಮಾಮ್ ಕಾಸಿಂ, ಬಿ.ಎಸ್. ನೇಮಗೌಡ, ಅಕ್ಷಯ್ ಎಂ. ಹಾಕೆ ಮಾರ್ಗದರ್ಶನದಲ್ಲಿ ಹಾಗೂ ಸಹಾಯಕ ಪೊಲೀಸ್ ಆಯುಕ್ತರು ಮತ್ತು ಇನ್‌ಸ್ಪೆಕ್ಟರ್‌ಗಳ ತಂಡದ ನೇತೃತ್ವದಲ್ಲಿ ಜಾಲವನ್ನು ಭೇದಿಸಲಾಗಿದೆ.



5.24 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ

ಬಂಧಿತ ಆರೋಪಿಗಳಿಂದ ಅಂದಾಜು 2.62 ಕೋಟಿ ರೂ.ಮೌಲ್ಯದ (ಮಾರುಕಟ್ಟೆ ಮೌಲ್ಯ ಅಂದಾಜು 5.24 ಕೋಟಿ ರೂ.) ನಿಷೇಧಿತ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದರಲ್ಲಿ 1.939 ಕೆ.ಜಿ ಎಂಡಿಎಂಎ ಎಕ್ಸ್‌ಟಸಿ ಪಿಲ್ ಮಾತ್ರೆಗಳು, 230 ಗ್ರಾಂ ಎಂಡಿಎಂಎ ಕ್ರಿಸ್ಟಲ್, 48.750 ಕೆ.ಜಿ ಗಾಂಜಾ ಹಾಗೂ 306 ಗ್ರಾಂ ಹೈಡ್ರೋ ಗಾಂಜಾವನ್ನು ಜಪ್ತಿಮಾಡಿದ್ದಾರೆ.

> ನಗರವ್ಯಾಪ್ತಿಯ ಜಂಟಿ ಪೊಲೀಸ್ ಆಯುಕ್ತರು ಸೇರಿದಂತೆ ಎಲ್ಲಾ ವಿಭಾಗಗಳ ಡಿಸಿಪಿಗಳು ಜಂಟಿಯಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇದರ ಫಲವಾಗಿ ಇಷ್ಟುದೊಡ್ಡ ಪ್ರಮಾಣದ ಡ್ರಗ್ಸ್ ಜಾಲವನ್ನು ಪತ್ತೆಹಚ್ಚು ಸಾಧ್ಯವಾಗಿದೆ. ಇಂತಹ ಕಾರ್ಯಾಚರಣೆ ನಿರಂತರವಾಗಿ ನಡೆಯುತ್ತದೆ.
> ■ ಸೀಮಂತ್ ಕುಮಾರ್ ಸಿಂಗ್, ನಗರ ಪೊಲೀಸ್ ಆಯುಕ್ತ

ಮಾಲೀಕನ ಹೆಸರಲ್ಲಿ ಚಿನ್ನಾಭರಣ ಕಳವು: ಆರೋಪಿ ಸೆರೆ

ಬೆಂಗಳೂರು: ಚಿನ್ನದಂಗಡಿ ಮಾಲೀಕನ ಹೆಸರಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನದ ಸರಗಳೊಂದಿಗೆ ಪರಾರಿ ಯಾಗಿದ್ದ ಆರೋಪಿಯನ್ನು ಭಾರತೀನಗರ ಠಾಣೆ ಪೊಲೀಸರು ಬಂಧಿಸಿ, ಆತನಿಂದ 33 ಲಕ್ಷ ರೂ. ಮೌಲ್ಯದ 239 ಗ್ರಾಂ ತೂಕದ ಚಿನ್ನದ ಸರಗಳನ್ನು ವಶಪಡಿಸಿಕೊಂಡಿದ್ದಾರೆ.

ರಾಜಸ್ಥಾನ ಮೂಲದ ಧರ್ಮವೀರ್ ಸಿಂಗ್ ಅಲಿಯಾಸ್ ಪಿಂಟು (23) ಬಂಧಿತ ಆರೋಪಿ. ಈತ ಕಳೆದ ಒಂದು ತಿಂಗಳಿಂದ ನಗರದ ಜ್ಯುವೆಲ್ಲರಿ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಈ ವೇಳೆ ಒಂದು ಅಂಗಡಿಯಿಂದ ಮತ್ತೊಂದು ಅಂಗಡಿಗೆ ಚಿನ್ನಾಭರಣಗಳನ್ನು ಸಾಗಿಸುವ ಮತ್ತು ಎಕ್ಸ್‌ಚೇಂಜ್ ಮಾಡುವ ವ್ಯವಹಾರದ ಬಗ್ಗೆ ಹೆಚ್ಚು ತಿಳಿದಿದ್ದ. ಕೆಲಸದ ನಿಮಿತ್ತ ಅಂಗಡಿ ಮಾಲೀಕ ಹೈದರಾಬಾದ್‌ಗೆ ಹೋಗಿದ್ದ ಅವಕಾಶ ಬಳಸಿಕೊಂಡ ಆರೋಪಿ, ಮಾಲೀಕನ ಹೆಸರನ್ನು ಹೇಳಿ ಮಹಾವೀರ್ ಜ್ಯುವೆಲ್ಲರಿ ಶಾಪ್‌ನಿಂದ 9 ಚಿನ್ನದ ಸರಗಳನ್ನ ಪಡೆದುಕೊಂಡು ನಂತರ ಕೆಲಸಕ್ಕೆ ಬರದೆ ರಾಜ ಸ್ಥಾನಕ್ಕೆ ಪರಾರಿಯಾಗಿದ್ದ. ಘಟನೆ ಬಗ್ಗೆ ಅಂಗಡಿ ಮಾಲೀಕ ಭಾರತೀನಗರ ಠಾಣೆಗೆ ದೂರು ನೀಡಿದ್ದರು. ಆರೋಪಿ ಪತ್ತೆಗಾಗಿ ಕಾರ್ಯಾಚರಣೆ ನಡೆಸಿದ್ದ ಭಾರತೀನಗರ ಠಾಣೆ ಪೊಲೀಸರು ಆರೋಪಿಯನ್ನು ರಾಜಸ್ಥಾನದಲ್ಲಿ ಬಂಧಿಸಿದ್ದಾರೆ.

ವಿಶ್ವನೇತ ರಂಗಪ್ರವೇಶ ಇಂದು

ಬೆಂಗಳೂರು: ಕಲಾನಿಧಿ ಆರ್ಟ್ಸ್ ಅಕಾಡೆಮಿಯ ಹಿರಿಯ ನೃತ್ಯಗುರು ವಿದುಷಿ. ಪವಿತ್ರ ಶ್ರೀಧರ್ ಅವರ ಶಿಷ್ಯೆ ಡಿ.ವಿಶ್ವನೇತ ಅವರು ಮಾ.1 ರಂದು ಸಂಜೆ 6 ಗಂಟೆಗೆ ಯಲಹಂಕದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ವಿದ್ಯುಕ್ತವಾಗಿ ರಂಗಪ್ರವೇಶ ಮಾಡಲಿದ್ದಾರೆ.



ಸಿ.ಧನಶೇಖರ್ ಮತ್ತು ಹೇಮಾ ದಂಪತಿಗಳ ಮಗಳಾದ ವಿಶ್ವನೇತ ಕಳೆದ ಆರು ವರ್ಷಗಳಿಂದ ನೃತ್ಯ ಕಲಿಯುತ್ತಿದ್ದು, ಈಗಾಗಲೇ ತನ್ನ ಗೆಜ್ಜೆಪೂಜೆಯನ್ನು ನೆರವೇರಿಸಿಕೊಂಡಿದ್ದಾಳೆ. ಒಂಭತ್ತನೆಯ ತರಗತಿಯಲ್ಲಿ ಓದುತ್ತಿರುವ ಇವಳು, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನಿರತಳಾಗಿದ್ದು, ಇಸ್ಕಾನ್ ನಲ್ಲಿ ಭಗವದ್ಗೀತಾ ಸ್ಪರ್ಧೆಯಲ್ಲಿ ಉನ್ನತ ಶ್ರೇಣಿಯನ್ನು ಪಡೆದಿರುವ ಜತೆಗೆ, ಅಬಾಕಸ್ ಫೇಸ್‌ನಲ್ಲಿ ಡಿಸ್ಟಿಂಕ್ಷನ್, ವೇದಿಕ್ ಪಠಣದಲ್ಲಿ ವಿದ್ವತ್, ಕರ್ನಾಟಕ ಶಾಸ್ತ್ರೀಯ ಗಾಯನದಲ್ಲಿ ಶಿಕ್ಷಣ ಮತ್ತು ಎನ್.ಎಸ್.ಓ. ಮತ್ತು ಐ. ಇ. ಓ ಮುಂತಾದ ಅಕೆಡೆಮಿಕ್ ಸ್ಪರ್ಧೆಗಳಲ್ಲಿ ಮೊದಲಿಗಳಾಗಿದ್ದಾಳೆ.

ಪಾರ್ಟಿ ನೆಪ: ಯುವತಿ ಮೇಲೆ ಅತ್ಯಾಚಾರ

ಬೆಂಗಳೂರು: ಖಾಸಗಿ ಕಾಲೇಜು ಯುವತಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದ ತನಿಖೆಯನ್ನು ಅಮೃತಹಳ್ಳಿ ಠಾಣಾ ಪೊಲೀಸರು ಚುರುಕುಗೊಳಿಸಿದ್ದು, ಬಂಧಿತ ಆರೋಪಿಗಳ ಕರಾಳ ಮುಖಗಳು ಒಂದೊಂದಾಗಿಯೇ ಬಯಲಾಗುತ್ತಿವೆ.

ಈ ಜಾಲದ ಹಿಂದಿರುವ ಮಾಸ್ಟರ್‌ಮೈಂಡ್ ನಿಖಿಲ್ ಎಂದು ತಿಳಿದು ಬಂದಿದ್ದು, ಸಕಲೇಶಪುರ ಮೂಲದ ನಿಖಿಲ್, ಬಸವೇಶ್ವರ ನಗರದಲ್ಲಿ ಸೆಕೆಂಡ್ ಹ್ಯಾಂಡ್ ಕಾರ್ ಶೋರೂಂ ಮತ್ತು ಕಾರ್ ವಾಶಿಂಗ್ ಸೆಂಟರ್ ನಡೆಸುತ್ತಿದ್ದ. ಈತ ಪಶ್ಚಿಮ ಬಂಗಾಳ ಮೂಲದ ಡಿಕ್ಸನ್ ಸಾಂಡ್ರಾ ಮತ್ತು ಇತರ ಯುವಕರನ್ನೊಳಗೊಂಡ ಗ್ಯಾಂಗ್ ಕಟ್ಟಿಕೊಂಡಿದ್ದ. ಈ ತಂಡದ ಪ್ರಮುಖ ಕೆಲಸವೆಂದರೆ ಪ್ರತಿಷ್ಠಿತ ಕಾಲೇಜುಗಳ ಯುವತಿಯರನ್ನು ಟಾರ್ಗೆಟ್ ಮಾಡಿ, ಇನ್ಸ್ಟಾಗ್ರಾಮ್ ಮೂಲಕ ಯುವತಿಯರ ಸ್ನೇಹ ಬೆಳೆಸಿ ಅವರನ್ನು ಪಾರ್ಟಿ ನೆಪದಲ್ಲಿ ಆಹ್ವಾನಿಸುತ್ತಿದ್ದರು.

ಯುವತಿಯರು ಪಾರ್ಟಿಗೆ ಬರಲು ಒಪ್ಪಿದ ತಕ್ಷಣ ನಿಖಿಲ್ ಜಕ್ಕೂರು ಸಮೀಪದ ವಿಲ್ಲಾವೊಂದರಲ್ಲಿ ಪಾರ್ಟಿ ಆಯೋಜಿಸುತ್ತಿದ್ದ. ಅಲ್ಲಿ ಬಂದ ಯುವತಿಯರಿಗೆ ಲೈಂಗಿಕ ಸಂಪರ್ಕಕ್ಕೆ ಒತ್ತಾಯಿಸಲಾಗುತ್ತಿತ್ತು. ಒಂದು ವೇಳೆ ಯುವತಿಯರು ನಿರಾಕರಿಸಿದರೆ, ಅವರಿಗೆ ಮದ್ಯ, ಡ್ರಗ್ ಅಥವಾ ಅಮಲು ಬರಿಸುವ ಮಾತ್ರೆಗಳನ್ನು ನೀಡಿ ಅರೆಪ್ರಜ್ಞಾವಸ್ಥೆಗೆ ಜಾರುವಂತೆ ಮಾಡಿ, ಬಳಿಕ ಅವರ ಮೇಲೆ ಅತ್ಯಾಚಾರ ಎಸಗಲಾಗುತ್ತಿತ್ತು. ಮರುದಿನ ಬೆಳಗ್ಗೆ ಏನೂ ಅರಿಯದವರಂತೆ ನಟಿಸುತ್ತಿದ್ದರು ಎಲ್ಲರೂ ಅಮಲಿನಲ್ಲಿದ್ದೆವು, ನಮಗೇನೂ ನೆನಪಿಲ್ಲ ಎಂದು ಹೇಳುತ್ತಿದ್ದರು. ಮರ್ಯಾದೆಗೆ ಹೆದರಿ ಈ ಹಿಂದೆ ಅನೇಕ ಯುವತಿಯರು ಮೌನವಾಗಿದ್ದರು, ಆದರೆ, ಈ ಬಾರಿ ಸಂತ್ರಸ್ತ ಯುವತಿ ಧೈರ್ಯ ಮಾಡಿ ದೂರು ನೀಡಿದ್ದರಿಂದ ಈ ಇಡೀ ಜಾಲ ಪತ್ತೆಯಾಗಿದೆ. ಯುವತಿಯರ ಮೇಲೆ ಅತ್ಯಾಚಾರ ಎಸಗಿ, ಬೆತ್ತಲೆ ವಿಡಿಯೋಗಳು ಮತ್ತು ಫೋಟೋಗಳನ್ನು ತೆಗೆದು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು. ಈ ಮೂಲಕ ಅವರನ್ನು ಮತ್ತೆ ಮತ್ತೆ ಬಳಸಿಕೊಳ್ಳುತ್ತಿದ್ದರು ಎನ್ನಲಾಗಿದೆ. ಸುಮಾರು 19 ಸಂತ್ರಸ್ತ ಯುವತಿಯರು ದೌರ್ಜನ್ಯ ವಿಚಾರವಾಗಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ.

ಪ್ರಭಾವಿಗಳ ನಂಟು: ತನಿಖೆಯ ವೇಳೆ ಅತ್ಯಂತ ಸ್ಫೋಟಕ ಮಾಹಿತಿ ಹೊರಬಿದ್ದಿದೆ, ನಿಖಿಲ್ ಪಾರ್ಟಿ ಆಯೋಜಿಸುತ್ತಿದ್ದ ವಿಲ್ಲಾ ಒಬ್ಬ ಪ್ರಭಾವಿ ವ್ಯಕ್ತಿಗಳಿಗೆ ಸೇರಿದ್ದು ಎನ್ನಲಾಗಿದೆ. ಇತನ ಮೇಲೆ ಕೇಸ್ ದಾಖಲಾದ ಆರಂಭದಲ್ಲಿ ಪ್ರಭಾವಿಗಳಿಂದ ಪೊಲೀಸರ ಮೇಲೆ ಒತ್ತಡ ಬಂದಿತ್ತು ಎನ್ನಲಾಗಿದೆ. ಸದ್ಯ ಪೊಲೀಸರು ಈ ಜಾಲದ ಉಳಿದ ಸದಸ್ಯರಿಗಾಗಿ ಶೋಧ ಮುಂದುವರಿಸಿದ್ದಾರೆ.

ಸಂತ್ರಸ್ತ ಯುವತಿ ವಿರುದ್ಧವೇ ದೂರು: ಘಟನೆ ಸಂಬಂಧ ಫೆ.21ರಂದು ಯುವತಿ ದೂರು ನೀಡುವ ಮೊದಲು, ಆರೋಪಿ ನಿಖಿಲ್ ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಆ ಯುವತಿ ತನಗೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾಳೆ ಎಂದು ದೂರು ದಾಖಲಿಸಿದ್ದ. ನಂತರ ಯುವತಿಯ ದೂರಿನ ಆಧಾರದ ಮೇಲೆ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ಗ್ಯಾಂಗ್ ರೇಪ್ ಪ್ರಕರಣ ದಾಖಲಾಗಿತ್ತು. ಆರೋಪಿಗಳು ಯುವತಿಯೇ ತಪ್ಪಿತಸ್ಥೆ ಎಂದು ಬಿಂಬಿಸಲು ಯತ್ನಿಸಿದ್ದರು ಎನ್ನಲಾಗಿದೆ. ಪ್ರಕರಣ ಸಂಬಂಧ ಸಕಲೇಶಪುರದ ನಿಖಿಲ್ ಮತ್ತು ಪಶ್ಚಿಮ ಬಂಗಾಳದ ನಿಖಿಲ್‌ನ ಪೊಲೀಸರು ಬಂಧಿಸಿದ್ದಾರೆ.

ಅಧಿಕಾರಿಗಳಿಗೆ ಹೆಚ್ಚುವರಿ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್ ಸೂಚನೆ

ರಸ್ತೆ ಅಗಲೀಕರಣ ಭೂಸ್ವಾಧೀನ ಪ್ರಕ್ರಿಯೆ ವೇಗ ಹೆಚ್ಚಿಸಿ

ಬೆಂಗಳೂರು: ಹೊರ ವರ್ತುಲ ರಸ್ತೆಯಿಂದ ಪಿ.ಆರ್.ಆರ್ ರಸ್ತೆಗೆ ಸಂಪರ್ಕ ಕಲ್ಪಿಸುವ ಪ್ರಸ್ತಾಪಿತ ರಸ್ತೆ ಅಗಲೀಕರಣ ಭೂಸ್ವಾಧೀನ ಪ್ರಕ್ರಿಯೆಗೆ ವೇಗ ನೀಡಿ ಎಂದು ಬೆಂಗಳೂರು ಪೂರ್ವ ನಗರ ಪಾಲಿಕೆ ಹೆಚ್ಚುವರಿ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪರಿಷ್ಕೃತ ಮಹಾಯೋಜನೆ -2015ರ ಪ್ರಕಾರ ಹೊರ ವರ್ತುಲ ರಸ್ತೆಯಿಂದ ಪೆರಿಫೆರಲ್ ರಿಂಗ್ ರೋಡ್ ಸಂಪರ್ಕಿಸುವ ಪ್ರಸ್ತಾಪಿತ 24 ಮೀ. ಅಗಲದ ರಸ್ತೆ ಅಗಲೀಕರಣ ಕಾರ್ಯವನ್ನು ಅನುಷ್ಠಾನಗೊಳಿಸುವ ಕುರಿತು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಯೋಜನೆಯು ಹೊರ ವರ್ತುಲ ರಸ್ತೆಯಿಂದ ಮಹದೇವಪುರ, ದೊಡ್ಡ ನೆಕ್ಕುಂದಿ, ಪಟ್ಟಂದೂರು ಅಗ್ರಹಾರ ಹಾಗೂ ನಾಗೊಂಡನಹಳ್ಳಿ ಮಾರ್ಗವಾಗಿ ಪಿ.ಆರ್.ಆರ್. ಸಂಪರ್ಕಿಸುವ ಪ್ರಸ್ತಾಪಿತ 24 ಮೀ. ಅಗಲದ ರಸ್ತೆ ಅಗಲೀಕರಣ ವನ್ನು ಫೇಸ್-1ರಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆ ಸಂಬಂಧ ಅಭಿವೃದ್ಧಿ ನಕ್ಷೆಯಲ್ಲಿ ರಸ್ತೆ ಅಗಲೀಕರಣಕ್ಕಾಗಿ ಗುರುತಿಸಿರುವ ಹಾಗೂ ಆರ್.ಡಿ ಆಗಿರುವ ಸ್ವತ್ತುಗಳನ್ನು ವಶಕ್ಕೆ ಪಡೆಯುವುದು, ಭೂಸ್ವಾಧೀನಕ್ಕೆ ಬಾಕಿ ಇರುವ ಸ್ವತ್ತುಗಳ ಮಾಹಿತಿಯನ್ನು ಪಡೆದುಕೊಂಡು, ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಿದರು.

ಬಾಗ್ ಮನೆ ಟೆಕ್‌ಪಾರ್ಕ್ ಮತ್ತು ಬ್ರಿಗೇಡ್ ಸಮೀಪ ರಸ್ತೆ ಅಗಲೀಕರಣಕ್ಕಾಗಿ ಮೀಸಲಿರಿಸಿದ್ದ ಜಾಗದ ಅನುಮೋದಿತ ಅಭಿವೃದ್ಧಿ ನಕ್ಷೆ ಪ್ರತಿ ಹಾಗೂ ಆರ್.ಡಿ ಪ್ರತಿಯನ್ನು ನಗರ ಯೋಜನೆ (ಬಿಡಿಎ), ನಗರ ಯೋಜನೆ (ಜಿಬಿಎ/ಬಿಇಸಿಸಿ) ಅಧಿಕಾರಿಗಳು ಕೂಡಲೇ ಭೂಸ್ವಾಧೀನ ಮತ್ತು ಟಿ.ಡಿ.ಆರ್ ವಿಭಾಗಕ್ಕೆ ಸಲ್ಲಿಸಲು ಸೂಚಿಸಲಾಯಿತು.

ರಸ್ತೆ ಅಗಲೀಕರಣಕ್ಕಾಗಿ ಅನುಮೋದಿತ ಅಭಿವೃದ್ಧಿ ನಕ್ಷೆ ಪ್ರಕಾರ ಪರಿತ್ಯಾಜನ ಪತ್ರ ಆಗಿರುವ ಸ್ವತ್ತುಗಳನ್ನು ಈ ಕೂಡಲೇ ನಗರ ಪಾಲಿಕೆ ಸುಪರ್ದಿಗೆ ಪಡೆಯಲು ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು.

ಸಭೆಯಲ್ಲಿ ಹೆಚ್ಚುವರಿ ಆಯುಕ್ತ ಕಂದಾಯ ಪ್ರಜ್ಞಾ ಅಮ್ಮೆಂಬಳ, ಮುಖ್ಯ ಅಭಿಯಂತರ ಲೋಕೇಶ್ ಉಪಸ್ಥಿತರಿದ್ದರು.



ಅಧಿಸೂಚನೆ ಹೊರಡಿಸಲು ಗಡುವು

ಸಂಪರ್ಕ ರಸ್ತೆಗೆ ಅವಶ್ಯವಿರುವ ಉಳಿದ ಜಾಗಗಳಿಗೆ ಸಂಬಂಧಿಸಿದ ಮಾಲೀಕತ್ವ ದಾಖಲೆಗಳನ್ನು ಕಂದಾಯ ಇಲಾಖೆಯವರು ಕೂಡಲೇ ಟಿ.ಡಿ.ಆರ್ ವಿಭಾಗಕ್ಕೆ ನೀಡಬೇಕು. ಎಲ್ಲಾ ಪ್ರಕ್ರಿಯೆ ಪೂರ್ಣಗೊಂಡ ನಂತರ ಮಾ.10ರ ಒಳಗೆ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲು ಭೂಸ್ವಾಧೀನ ವಿಭಾಗಕ್ಕೆ ಲೋಖಂಡೆ ಸ್ನೇಹಲ್ ಸುಧಾಕರ್ ಸೂಚಿಸಿದರು.

ಇಂದು ನಗರದಲ್ಲಿ...

- ವಾಸನ್ ಐ ಕೇರ್ ವತಿಯಿಂದ ಆರೋಗ್ಯ ಶಿಬಿರ, ಸ್ಥಳ:ಪೊಲೀಸ್ ಕಾಲೋನಿ, ಮಾಗಡಿ ರಸ್ತೆ, ಬೆಳಗ್ಗೆ 9.45
- ರಾಜ್ಯಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ, ಸ್ಥಳ: ತ್ರಿಪುರಾ ವಾಸಿನಿ, ಬೆಳಗ್ಗೆ 10.00
- ನಾಲ್ಕು ಪುಸ್ತಕಗಳ ಲೋಕಾರ್ಪಣೋತ್ಸವ, ಸ್ಥಳ: ಆರ್ಯ ಸಮಾಜ, ಬೆಳಗ್ಗೆ 10.00
- 6ನೇ ಅಖಿಲ ಭಾರತ ಸಮ್ಮೇಳನ, ಸ್ಥಳ: ಟೌನ್ ಹಾಲ್, ಬೆಳಗ್ಗೆ 10.30

ರಾಷ್ಟ್ರಸೇವೆಯಲ್ಲಿ 60 ರಾಷ್ಟ್ರೋತ್ಥಾನ

ರಾಷ್ಟ್ರೋತ್ಥಾನ ಪರಿಷತ್ತಿನ ಸೇವಾಕಾರ್ಯ 4 ಆಯಾಮಗಳಲ್ಲಿ



ಶಿಕ್ಷಣ



ಸಾಹಿತ್ಯ

ಸಂವಿತ್ - ಸಂಶೋಧನಾ ಪ್ರತಿಷ್ಠಾನ

- ವಿಭಾಗಗಳು 4
- ಪಠ್ಯಪುಸ್ತಕಗಳು 72
- ಪಠ್ಯಪೂರಕ ಪುಸ್ತಕಗಳು 45
- ತಲುಪಿರುವ ಶಾಲೆಗಳು 414



ಸಿಬಿಎಸ್‌ಇ ಪಠ್ಯಕ್ರಮ

20 ಶಾಲೆಗಳು

18000 ವಿದ್ಯಾರ್ಥಿಗಳು

800 ಶಿಕ್ಷಕರು

ರಾಜ್ಯ ಪಠ್ಯಕ್ರಮ

9 ಶಾಲೆಗಳು

6500 ವಿದ್ಯಾರ್ಥಿಗಳು

250 ಶಿಕ್ಷಕರು



ರಾಷ್ಟ್ರೋತ್ಥಾನ 1972ರಲ್ಲಿ ಶಿಕ್ಷಣಕ್ಷೇತ್ರವನ್ನು ಪ್ರವೇಶಿಸಿತು. ಶೈಕ್ಷಣಿಕ ಕ್ಷೇತ್ರದಲ್ಲಿ ಭಾರತೀಯತೆ ಹಾಗೂ ಭಾರತೀಯ ಬೋಧನಾಕ್ರಮವನ್ನು ಮೇಳೈಸುವ ಸಂಸ್ಥೆಗಳ ಅವಶ್ಯಕತೆಯನ್ನು ಪರಿಷತ್ ಮನಗಂಡಿತು. ಪಂಚಮುಖಿ ಶಿಕ್ಷಣದ ಮೂಲಕ ಪ್ರತಿಯೊಬ್ಬ ವಿದ್ಯಾರ್ಥಿಯ ಸಮಗ್ರ ವ್ಯಕ್ತಿತ್ವವಿಕಾಸವನ್ನು ಸಾಧಿಸುವುದು ರಾಷ್ಟ್ರೋತ್ಥಾನ ಶಾಲೆಗಳ ಸಂಕಲ್ಪ. ಮಕ್ಕಳ ದೈಹಿಕ, ಬೌದ್ಧಿಕ, ಮಾನಸಿಕ, ಭಾವನಾತ್ಮಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಯನ್ನು ಸಾಧಿಸಿ, ತನ್ಮೂಲಕ ಪಠ್ಯಪುಸ್ತಕ-ಪರೀಕ್ಷೆಗಳಾಚೆಗೂ ಕಲಿಕೆ ಸಾಗುವಂತಾಗಿ, ವಿದ್ಯಾರ್ಥಿಗಳನ್ನು ಸಮೃದ್ಧ ಬದುಕಿಗೆ ಸಜ್ಜುಗೊಳಿಸಲು ಈ ವಿಶಿಷ್ಟ ಪಠ್ಯಕ್ರಮ ರೂಪಿಸಲಾಗಿದೆ. ರಾಜ್ಯ ಪಠ್ಯಕ್ರಮವನ್ನು ಅನುಸರಿಸುವ ಶಾಲೆಗಳಾಗಿ ರಾಷ್ಟ್ರೋತ್ಥಾನ ವಿದ್ಯಾಲಯಗಳಿವೆ. ಹಗರಿಬೊಮ್ಮನಹಳ್ಳಿ, ದಾವಣಗೆರೆ, ಚಿತ್ರದುರ್ಗ, ಧಾರವಾಡ, ಹೊಳೆಹೊನ್ನೂರು, ಶ್ರೀರಾಂಪುರ, ಕಲ್ಯಾಣನಗರ (ಬೆಂಗಳೂರು) ಹಾಗೂ ಮುಂಗಾನಹಳ್ಳಿಯಲ್ಲಿ ಇವುಗಳನ್ನು ಕಾಣಬಹುದು. ಸಿಬಿಎಸ್‌ಇ ಪಠ್ಯಕ್ರಮವನ್ನು ಅನುಸರಿಸುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರಗಳು (ರಾವಿಕೇ) 2005ರಲ್ಲಿ ಪ್ರಾರಂಭವಾದವು. ಬೆಂಗಳೂರಿನಲ್ಲಿ ಅರ್ಕಾವತಿ, ರಾಮಮೂರ್ತಿನಗರ, ಬನಶಂಕರಿ, ಸೋಮನಹಳ್ಳಿ, ಹುಲಿಮಂಗಲ, ಹುರಳಿಚಿಕ್ಕನಹಳ್ಳಿ; ಮೈಸೂರಿನಲ್ಲಿ ವಿಜಯನಗರ, ಶ್ರೀನಗರ; ಧಾರವಾಡದಲ್ಲಿ ಗದಗ, ಸಕ್ಕೂರ; ಹಗರಿಬೊಮ್ಮನಹಳ್ಳಿ, ದಾವಣಗೆರೆ, ಕಲಬುರಗಿ, ಮಂಗಳೂರು, ಬಾಗಲಕೋಟೆಯಲ್ಲಿ ಕೆರೂರ, ಬಳ್ಳಾರಿ, ಹಾಸನ, ಉಡುಪಿ, ಹಾನಗಲ್, ಹಾವೇರಿಯಲ್ಲಿ ವಿದ್ಯಾಕೇಂದ್ರಗಳಿವೆ.

ದಾವಣಗೆರೆ, ಉಡುಪಿ ಹಾಗೂ ಧಾರವಾಡ ಈ ಮೂರೂ ಕಡೆಗಳಲ್ಲಿ ರಾಷ್ಟ್ರೋತ್ಥಾನ ಪದವಿಪೂರ್ವ ಕಾಲೇಜುಗಳಿವೆ. ವಿದ್ಯಾರ್ಥಿಗಳಿಗೆ ವಸತಿಸೌಲಭ್ಯವನ್ನೂ ಕಲ್ಪಿಸಲಾಗಿದೆ.

ಸಂವಿತ್ - ಸಂಶೋಧನಾ ಪ್ರತಿಷ್ಠಾನ: ಶಿಕ್ಷಣಸಂಸ್ಥೆಗಳು ಸಂತಸಮಯ ಕಲಿಕೆಯ ಮೂಲಕ ಶೈಕ್ಷಣಿಕ ಉನ್ನತಿಯನ್ನು ಸಾಧಿಸಲು ನೆರವಾಗುವ ಉದ್ದೇಶದಿಂದ 2019ರಲ್ಲಿ ಆರಂಭವಾದ ಸಂವಿತ್ ಸಂಶೋಧನಾ ಪ್ರತಿಷ್ಠಾನವು -2020ಕ್ಕೆ ಅನುಗುಣವಾಗಿ ಪಠ್ಯಪುಸ್ತಕಗಳು, ಕಿಟ್ (ಬೋಧನಾ ಕಲಿಕಾ ಸಾಮಗ್ರಿ), ಶಿಕ್ಷಕರ ಕೈಪಿಡಿಗಳು, ಇ-ಸಂಪನ್ಮೂಲಗಳು ಮುಂತಾದ ಭಾರತಕೇಂದ್ರಿತ ಸಮಗ್ರ ಶಿಕ್ಷಣ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುತ್ತಿದೆ. ಸಂವಿತ್ ಸಂಶೋಧನಾ ಪ್ರತಿಷ್ಠಾನವು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿಯಿಂದ ಅಂಗೀಕೃತವಾದ ಭಾರತೀಯ ಜ್ಞಾನ ಪದ್ಧತಿಯ (ಐಕೆಎಸ್) ಕಲಿಕಾ ಕೇಂದ್ರವೂ ಆಗಿದೆ.

ತಪಸ್ ಸಾಧನಾ: ಭಾರತದ ಸರ್ವಾಂಗೀಣ ಉನ್ನತಿಗೆ ಎಲ್ಲ ಸ್ತರಗಳ ಯುವ ಸಮುದಾಯ ಉನ್ನತ ಶಿಕ್ಷಣವನ್ನು ಹೊಂದುವುದು ಅನಿವಾರ್ಯ ಹಾಗೂ ಅಗತ್ಯ ಕೂಡ. ಆದರೆ ಪ್ರತಿಭಾವಂತರಾಗಿದ್ದರೂ ಆರ್ಥಿಕವಾಗಿ ಸಬಲರಲ್ಲದ ಮಕ್ಕಳಿಗೆ ಇದು ಸಾಧ್ಯವಾಗದೇ ಇದ್ದುದನ್ನು ಮನಗಂಡು ಆ ಉನ್ನತ ಶಿಕ್ಷಣವನ್ನು ಆಗು ಮಾಡಿ ಅವರನ್ನೂ ಭವಿಷ್ಯದ ಸಮರ್ಥ ನೇತಾರರನ್ನಾಗಿಸುವ ಉದ್ದೇಶದೊಂದಿಗೆ ತಪಸ್-ಸಾಧನಾ ಯೋಜನೆಗಳ ಪ್ರಾರಂಭವಾಯಿತು. ಅವಕಾಶವಂಚಿತ ಪ್ರತಿಭಾನ್ವಿತ ಗಂಡುಮಕ್ಕಳಿಗೆ ಸಮಗ್ರ ಮಾದರಿಯಲ್ಲಿ ಜೆಇಇ ತರಬೇತಿ ನೀಡುವ ಉಚಿತ ದ್ವೈವಾರ್ಷಿಕ ವಸತಿಸಹಿತ ಪ್ರಕಲ್ಪ ತಪಸ್ 2012ರಲ್ಲಿ ಆರಂಭವಾಯಿತು. ಐಐಟಿ ಮುಂತಾದ ಪ್ರತಿಷ್ಠಿತ ಎಂಜಿನಿಯರಿಂಗ್ ಕಾಲೇಜುಗಳನ್ನು ಸೇರ ಬಯಸುವ ವಿದ್ಯಾರ್ಥಿಗಳ ಕನಸುಗಳನ್ನು ಸಾಕಾರಗೊಳಿಸುವುದು ಈ ಯೋಜನೆಯ ಉದ್ದೇಶ. ಈವರೆಗೆ 180 ವಿದ್ಯಾರ್ಥಿಗಳು ಮೆರಿಟ್ ಸೀಟುಗಳನ್ನು ಪಡೆದಿದ್ದಾರೆ. 2017ರಲ್ಲಿ ಆರಂಭವಾದ ಸಾಧನಾ, ವೈದ್ಯಕೀಯ ಶಿಕ್ಷಣವನ್ನು ಪಡೆಯಬಯಸುವ, ಆರ್ಥಿಕವಾಗಿ ಸಬಲರಲ್ಲದ ಪ್ರತಿಭಾನ್ವಿತ ಹೆಣ್ಣುಮಕ್ಕಳಿಗಾಗಿಯೇ ರೂಪಿಸಲಾದ, ಸಮಗ್ರ ಮಾದರಿಯಲ್ಲಿ ನೀಟ್ ತರಬೇತಿ ನೀಡುವ ಉಚಿತ ದ್ವೈವಾರ್ಷಿಕ ವಸತಿಸಹಿತ ಪ್ರಕಲ್ಪ. ಇದು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಹಾಗೂ ಇತರ ಪ್ರತಿಷ್ಠಿತ ವಿದ್ಯಾಲಯಗಳಲ್ಲಿ ಮೆರಿಟ್ ಸೀಟುಗಳನ್ನು ಪಡೆಯಲು ಅವರನ್ನು ಸಿದ್ಧಗೊಳಿಸುತ್ತದೆ. ಇಲ್ಲಿಯವರೆಗೆ 145 ವಿದ್ಯಾರ್ಥಿನಿಯರು ಮೆರಿಟ್ ಸೀಟುಗಳನ್ನು ಪಡೆದಿದ್ದಾರೆ.

ಸಂದ ಪ್ರಶಸ್ತಿ ಮತ್ತು ಗೌರವಗಳು

- ಕನ್ನಡ ಸಾಹಿತ್ಯ ಪರಿಷತ್ತಿನಿಂದ ಅಂಕಿತ ದತ್ತಿ ಪ್ರಶಸ್ತಿ
- ತೋರ್ಬೆರಳು, ಅಜೇಯ, ಅದಮ್ಯ, ಶತಮಾನದ ತಿರುವಿನಲ್ಲಿ ಭಾರತ, ಗಾಂಧೀಯ ಅರ್ಥಶಾಸ್ತ್ರ ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪುಸ್ತಕ ಬಹುಮಾನಗಳು
- ಸಾಮಾಜಿಕ ಕ್ರಾಂತಿಸೂರ್ಯ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಕೃತಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಿಂದ ಅತ್ಯುತ್ತಮ ಅನುವಾದ ಪ್ರಶಸ್ತಿ
- ಉತ್ಕರ್ಷಪಥ ಕೃತಿಗೆ ಗಾಂಧಿ ಸಾಹಿತ್ಯ ಸಂಘದಿಂದ ಸಿದ್ಧವನಹಳ್ಳಿ ಕೃಷ್ಣಶರ್ಮಾ ದತ್ತಿ ಪ್ರಶಸ್ತಿ
- ಕನ್ನಡ ಪುಸ್ತಕ ಪ್ರಾಧಿಕಾರದಿಂದ 2021ನೇ ಸಾಲಿನ ಅತ್ಯುತ್ತಮ ಪ್ರಕಾಶನ ಗೌರವ ಪ್ರಶಸ್ತಿ

ಇದುವರೆಗಿನ ಪ್ರಕಟಣೆಗಳು

182 ರಾಷ್ಟ್ರೋತ್ಥಾನ ಸಾಹಿತ್ಯ

130 ಸಾಹಿತ್ಯ ಸಿಂಧು ಪ್ರಕಾಶನ

610 ಭಾರತ-ಭಾರತಿ (ಕನ್ನಡ)

225 ಭಾರತ-ಭಾರತಿ (ಇಂಗ್ಲಿಷ್)

- ಭಾರತ-ಭಾರತಿ ಪುಸ್ತಕಗಳ ಮಾರಾಟ 2 ಕೋಟಿಗೂ ಅಧಿಕ

ಭಾರತದ ನೈಜ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಗಳ ಅನ್ವೇಷಣೆಗಾಗಿ ಸಾಹಿತ್ಯ. ಕನ್ನಡದಲ್ಲಿ ರಾಷ್ಟ್ರೀಯ ಸಾಹಿತ್ಯದ ಪರಂಪರೆಯನ್ನು ಮುಂದುವರಿಸುವ ಹಾಗೂ ಭಾರತದ ನೈಜ ಇತಿಹಾಸ, ಸಂಸ್ಕೃತಿಗಳನ್ನು ಕುರಿತು ಭಾರತೀಯರಲ್ಲಿ ಹೆಮ್ಮೆಯನ್ನು ಮೂಡಿಸುವಂತಹ ಸಾಹಿತ್ಯ ಪ್ರಕಟಣೆ ಮತ್ತು ಪ್ರಸರಣ ಮಾಡುವ ಉದ್ದೇಶದಿಂದ 1965ರಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯ ಕಾರ್ಯಾರಂಭ ಮಾಡಿತು. ಇದುವರೆಗೆ ಇತಿಹಾಸ, ಸಂಸ್ಕೃತಿ, ಪರಂಪರೆ, ಆರೋಗ್ಯ, ಜೀವನಚರಿತ್ರೆ, ಆರ್ಥಿಕತೆ, ಪರಿಸರ, ವಿಜ್ಞಾನ, ವ್ಯಕ್ತಿತ್ವವಿಕಸನ ಮೊದಲಾದ ಹಲವು ವಿಷಯ-ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕಗಳು ಪ್ರಕಟವಾಗಿವೆ. ರಾಷ್ಟ್ರೋತ್ಥಾನ ಉಪನ್ಯಾಸಮಾಲಾ ಹಾಗೂ ಮಂಥನ ವೇದಿಕೆಗಳಲ್ಲಿ ನೀಡಲಾದ ಪ್ರಮುಖ ಉಪನ್ಯಾಸಗಳು ರಾಷ್ಟ್ರೋತ್ಥಾನ ಸಾಹಿತ್ಯದ ಮೂಲಕ ಪುಸ್ತಕರೂಪ ಪಡೆದಿವೆ.

ಕಳೆದ 60 ವರ್ಷಗಳಲ್ಲಿ ವಿವಿಧ ಪುಸ್ತಕಗಳ ಲೋಕಾರ್ಪಣ ಕಾರ್ಯಕ್ರಮಗಳಿಗೆ ದೇಶದ ಅಗ್ರಮಾನ್ಯ ನಾಯಕರು, ಸಾಹಿತಿಗಳು, ಸ್ವಾತಂತ್ರ್ಯ ಹೋರಾಟಗಾರರು ಆಗಮಿಸಿದ್ದಾರೆ. ಭಗತ್ ಸಿಂಗ್ ಅವರ ತಾಯಿ ವಿದ್ಯಾವತಿದೇವಿ, ತಿ.ತಾ. ಶರ್ಮಾ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕುವೆಂಪು, ದ.ರಾ. ಬೇಂದ್ರೆ, ಶಿವರಾಮ ಕಾರಂತ, ದುರ್ಗಾ ಭಾಗವತ್, ಡಾ. ಸುನೀತಿಚೌಧರಿ ಘೋಶ್, ಶಚೀಂದ್ರನಾಥ ಬಕ್ಷಿ, ಅನಕೃ, ನಿರಂಜನ, ಖಾದ್ರಿ ಶಾಮಣ್ಣ, ಎಲ್.ಕೆ. ಅಡ್ವಾಣಿ, ಸ್ವಾಮಿ ಚಿನ್ಮಯಾನಂದ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪ್ರೊ. ಜಿ. ವೆಂಕಟಸುಬ್ಬಯ್ಯ, ಚಂದ್ರಶೇಖರ ಕಂಬಾರ, ಎಚ್.ಎಸ್. ವೆಂಕಟೇಶಮೂರ್ತಿ, ಡಾ. ಎಸ್.ಎಲ್. ಭೈರಪ್ಪ, ಡಾ. ಸಿದ್ದಲಿಂಗಯ್ಯ, ಜಗಮೋಹನ್, ಗೊ.ರು. ಚನ್ನಬಸಪ್ಪ, ಡಾ. ನವರತ್ನ ಎಸ್. ರಾಜಾರಾಂ ಸೇರಿದಂತೆ ಹಲವರು ಖ್ಯಾತನಾಮರ ಮೂಲಕ ರಾಷ್ಟ್ರೋತ್ಥಾನ ಪ್ರಕಾಶನ ವಿಭಾಗದ ಪ್ರಕಟಣೆಗಳು ಲೋಕಾರ್ಪಣೆಯಾಗಿವೆ.

ರಾಷ್ಟ್ರೋತ್ಥಾನ ಮುದ್ರಣಾಲಯ: ರಾಷ್ಟ್ರೋತ್ಥಾನ ಸಾಹಿತ್ಯವನ್ನು ಅಚ್ಚುಕಟ್ಟಾಗಿ, ಕೈಗೆಟುಕುವ ದರದಲ್ಲಿ ಮುದ್ರಿಸುವ ಉದ್ದೇಶದೊಂದಿಗೆ 1967ರಲ್ಲಿ ರಾಷ್ಟ್ರೋತ್ಥಾನ ಮುದ್ರಣಾಲಯವನ್ನು ಪ್ರಾರಂಭಿಸಲಾಯಿತು. ಬೇರೆ ಬೇರೆ ಪ್ರಕಾಶಕರ ಸದಭಿರುಚಿಯ ಸಾಹಿತ್ಯ ಮುದ್ರಣಕ್ಕೂ ಅದೇ ಆಶಯ ವಿಸ್ತಾರದೊಂದಿಗೆ ಅವಕಾಶ ಮಾಡಿಕೊಡಲಾಯಿತು. ಪ್ರಸ್ತುತ, ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಸೌಲಭ್ಯಗಳಿರುವ ಕರ್ನಾಟಕದ ಪ್ರತಿಷ್ಠಿತ ಮುದ್ರಣಾಲಯಗಳಲ್ಲಿ ಒಂದೆನಿಸಿದೆ.

ಉತ್ಥಾನ ಕನ್ನಡ ಮಾಸಪತ್ರಿಕೆ: ಕನ್ನಡದ ವಿಶಿಷ್ಟ ಕೌಟುಂಬಿಕ ಮಾಸಪತ್ರಿಕೆ ಉತ್ಥಾನ. 1965ರ ವಿಜಯದಶಮಿಯಂದು ಮೊದಲ ಸಂಚಿಕೆ ಅನಾವರಣಗೊಂಡಿತು. ಇದರ ಮೊದಲ ಸಂಪಾದಕರು ಡಾ. ಸೂರ್ಯನಾಥ ಕಾಮತ್. ಅನಂತರದ ದಿನಗಳಲ್ಲಿ ಎಸ್. ವೆಂಕಟರಾವ್, ಪಿ.ಆರ್. ಆನಂದರಾವ್ ಹಾಗೂ ಶಿವರಾಮು ಅವರು ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ, ನಾಡೋಜ ಎಸ್.ಆರ್. ರಾಮಸ್ವಾಮಿ ಅವರು ಉತ್ಥಾನದ ಗೌರವ ಪ್ರಧಾನ ಸಂಪಾದಕರಾಗಿದ್ದಾರೆ. ಕನ್ನಡದ ಹಲವಾರು ಖ್ಯಾತ ಲೇಖಕರಿಗೆ ಅವರ ಆರಂಭಿಕ ದಿನಗಳಲ್ಲಿ ವೇದಿಕೆಯಾಗಿದ್ದು ಉತ್ಥಾನ.

ಭಾರತ - ಭಾರತಿಯ ದಾಖಲೆ: ಮಕ್ಕಳಿಗೆ ಅಚ್ಚುಮೆಚ್ಚಾಗಿರುವ, ಅಂಗೈ ಅಗಲದ ಪುಸ್ತಕ ಮಾಲಿಕೆ ಭಾರತ-ಭಾರತಿ. ಭಾರತ-ಭಾರತಿ ಮೊದಲ ಹತ್ತು ಪುಸ್ತಕಗಳ ಅನಾವರಣ ಸಮಾರಂಭದ ದಿವಸವೇ 1,30,000 ಪ್ರತಿಗಳು ಮಾರಾಟವಾದವು. ಇದು ಮಕ್ಕಳ ಸಾಹಿತ್ಯ ಎಂದು ಕಲ್ಪಿತವಾದ ಯೋಜನೆಯಾದರೂ ಪರಿಣಾಮದಲ್ಲಿ ಅನುಪಮ ಆಕರ ಸಾಹಿತ್ಯವಾಗಿ ಪರಿಣಮಿಸಿತು. ಇವತ್ತಿಗೆ ಕನ್ನಡದಲ್ಲಿ 610 ಹಾಗೂ ಇಂಗ್ಲಿಷಿನಲ್ಲಿ 225 ಶೀರ್ಷಿಕೆಗಳಲ್ಲಿ ಪ್ರಕಟವಾಗಿರುವ ಈ ಸಾಹಿತ್ಯಸರಣಿ ಒಟ್ಟಾರೆ 2 ಕೋಟಿಗೂ ಹೆಚ್ಚು ಪುಸ್ತಕಗಳ ಮಾರಾಟ ಕಂಡಿರುವುದೊಂದು ಸಾರ್ವಕಾಲಿಕ ದಾಖಲೆ.



ರಾಷ್ಟ್ರೋತ್ಥಾನ

ಸ್ವಸ್ಥ-ಸುಸ್ಥಿರ ಸಮಾಜ ನಿರ್ಮಾಣ

ಭಾರತೀಯ ಜೀವನಮೌಲ್ಯಗಳನ್ನು ಜನಮನದಲ್ಲಿ ಬೇರೂರಿಸುವ ಸಾಹಿತ್ಯ ನಿರ್ಮಾಣ ಮತ್ತು ಪ್ರಸಾರ; ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸಕ್ಕೆ ಪೂರಕವಾದ ಸಂಸ್ಕಾರಯುಕ್ತ, ರಾಷ್ಟ್ರನಿಷ್ಠ ಶಿಕ್ಷಣದ ಮೂಲಕ ಸಾಮಾಜಿಕ ಪರಿವರ್ತನೆ; ಸಮಾಜದ ಅಗತ್ಯಗಳ ಪೂರೈಕೆಗಾಗಿ ಯೋಗ, ಆರೋಗ್ಯ ಮತ್ತು ವಿವಿಧ ಸೇವಾ ಚಟುವಟಿಕೆಗಳು; ಈ ಎಲ್ಲಾ ಚಟುವಟಿಕೆಗಳಲ್ಲೂ ಉತ್ಕೃಷ್ಟ ಕಾರ್ಯಮಾದರಿಗಳ ಸೃಷ್ಟಿ ಮತ್ತು ಅವುಗಳ ವ್ಯಾಪಕ ಅಳವಡಿಕೆಗೆ ಪ್ರೋತ್ಸಾಹ ನೀಡುವ ಧ್ಯೇಯಗಳೊಂದಿಗೆ ರಾಷ್ಟ್ರೋತ್ಥಾನ ಪರಿಷತ್ ಪ್ರಮುಖವಾಗಿ ನಾಲ್ಕು ಆಯಾಮಗಳಲ್ಲಿ ಚಟುವಟಿಕೆಗಳನ್ನು ನಡೆಸುತ್ತಿದೆ.









ಸ್ವಾಸ್ಥ್ಯ

ಯೋಗಕೇಂದ್ರಗಳು, ರಕ್ತಕೇಂದ್ರಗಳು ಹಾಗೂ ಆಸ್ಪತ್ರೆಯ ಮೂಲಕ ಸಮಾಜದ ನಿತ್ಯನೂತನ ಆರೋಗ್ಯ ಮತ್ತು ಸ್ವಾಸ್ಥ್ಯಸಂಬಂಧಿತ ಆವಶ್ಯಕತೆಗಳನ್ನು ರಾಷ್ಟ್ರೋತ್ಥಾನ ಪರಿಷತ್ ಪೂರೈಸುತ್ತಿದೆ. ಈ ನಿಟ್ಟಿನಲ್ಲಿ, ಅಷ್ಟಾಂಗಯೋಗ ಹಾಗೂ ತತ್ಸಂಬಂಧಿತ ಭಾರತೀಯ ಮೂಲದ ದೇಹ, ಆತ್ಮ ಮತ್ತು ಮನಸ್ಸುಗಳ ಸಾಮರಸ್ಯ ತಂತ್ರಗಳು ಹಾಗೂ ಸಮಗ್ರ ವ್ಯಕ್ತಿತ್ವವಿಕಸನದ ತರಬೇತಿಗಳನ್ನು ನೀಡುವ ಉದ್ದೇಶದಿಂದ ರಾಷ್ಟ್ರೋತ್ಥಾನ ಯೋಗವಿಜ್ಞಾನ ಹಾಗೂ ಸಂಶೋಧನಾ ಕೇಂದ್ರ (ಈ ಹಿಂದೆ - ರಾಷ್ಟ್ರೋತ್ಥಾನ ಶಾರೀರಿಕ ಶಿಕ್ಷಣ ಕೇಂದ್ರ) 1972ರಲ್ಲಿ ಬೆಂಗಳೂರಿನ ಜಯನಗರದಲ್ಲಿ ಪ್ರಾರಂಭವಾಯಿತು.

ರುಗ್ಣ (ರಕ್ತ) ಸೇವಾ ಭಂಡಾರ, ರಕ್ತದಾನಿಗಳ ವಿವರಗಳ ನಿರ್ವಹಣೆ ಹಾಗೂ ಅಗತ್ಯವಿರುವವರಿಗೆ ವೈದ್ಯಕೀಯ ಉಪಕರಣಗಳನ್ನು ಒದಗಿಸುವ ಮೂಲಕ ರಾಷ್ಟ್ರೋತ್ಥಾನ ಪರಿಷತ್ 1987ರಲ್ಲಿ ವೈದ್ಯಕೀಯ ಸೇವಾಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿತು. 1993ರ ವೇಳೆಗೆ ರೋಗಿಗಳಿಗೆ ಸುರಕ್ಷಿತ ರಕ್ತ ಒದಗಿಸುವುದಕ್ಕಾಗಿಯೇ ಬೆಂಗಳೂರಿನಲ್ಲಿ ರಕ್ತಕೇಂದ್ರ ಆರಂಭಿಸಲಾಯಿತು. 2010ರಲ್ಲಿ ರಕ್ತಕೇಂದ್ರದ ಎರಡನೆಯ ಘಟಕ ಹುಬ್ಬಳ್ಳಿಯಲ್ಲಿ ಕೆಲಸ ಪ್ರಾರಂಭಿಸಿತು. ರಕ್ತವನ್ನು ಸಮರ್ಪಕವಾಗಿ ಸಂಸ್ಕರಿಸಲು ಹಾಗೂ ಸಂರಕ್ಷಿಸಲು ಅತ್ಯಾಧುನಿಕ ತಾಂತ್ರಿಕ ಸೌಲಭ್ಯಗಳನ್ನು ಹೊಂದಿರುವ ಈ ಎರಡೂ ರಕ್ತಕೇಂದ್ರಗಳು ಪ್ರತಿವರ್ಷವೂ ಅತಿಹೆಚ್ಚು ರಕ್ತಸಂಗ್ರಹ ಮಾಡುವ ಹೆಗ್ಗಳಿಕೆಗೆ ಪಾತ್ರವಾಗಿವೆ.

ತಲಸ್ಸೆಮಿಯಾ ಪೀಡಿತರ ಬೆಳಕು ಸಂರಕ್ಷಾ ತಲಸ್ಸೆಮಿಯಾ ಪೀಡಿತರಿಗಾಗಿ ಸಮಗ್ರರೂಪದ ಚಿಕಿತ್ಸೆ ಹಾಗೂ ನಿರ್ವಹಣೆಯ ಕೇಂದ್ರವಾಗಿ 2013ರಿಂದ ಸಂರಕ್ಷಾ ಕಾರ್ಯನಿರ್ವಹಿಸುತ್ತಿದೆ. ಈ ನಿಟ್ಟಿನಲ್ಲಿ ಇದು ಮೊದಲ ಸರ್ಕಾರೇತರ ವ್ಯವಸ್ಥೆಯೆನಿಸಿದೆ. ಸಂರಕ್ಷಾದ ಮೂಲಕ 400ಕ್ಕೂ ಹೆಚ್ಚು ಕಡುಬಡತನದಲ್ಲಿರುವ ಕುಟುಂಬಗಳ ಮಕ್ಕಳು ತಲಸ್ಸೆಮಿಯಾ ಚಿಕಿತ್ಸೆಗಾಗಿ ನೆರವು ಪಡೆಯುತ್ತಿದ್ದಾರೆ. ರಾಷ್ಟ್ರೋತ್ಥಾನ ಪರಿಷತ್ 2022ರಲ್ಲಿ ಸಮಾಜದ ಎಲ್ಲ ಸ್ತರಗಳ ಜನರಿಗೆ ಉತ್ತಮ ಗುಣಮಟ್ಟದ ವೈದ್ಯಕೀಯ ಸೌಲಭ್ಯಗಳನ್ನು ಕೈಗೆಟುಕುವಂತೆ ಒದಗಿಸುವ ಉದ್ದೇಶದಿಂದ ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ಸ್ಥಾಪಿಸುವ ಮೂಲಕ ತನ್ನ ಸ್ವಾಸ್ಥ್ಯಸಂಬಂಧಿತ ಪ್ರಕಲ್ಪಗಳಲ್ಲಿ ಹೊಸ ಮೈಲುಗಲ್ಲೊಂದನ್ನು ಸ್ಥಾಪಿಸಿತು. ಅದು ಪ್ರಾರಂಭಗೊಂಡ 3 ವರ್ಷಗಳ ಒಳಗೇ ಎನ್ಎಬಿಎಚ್ 6ನೇ ಆವೃತ್ತಿಯ ಪೂರ್ಣ ಮಾನ್ಯತೆ ಪಡೆದಿದೆ.

ರಾಷ್ಟ್ರೋತ್ಥಾನ ಯೋಗವಿಜ್ಞಾನ ಹಾಗೂ ಸಂಶೋಧನಾ ಕೇಂದ್ರ

- ಕೇಂದ್ರಗಳು 25
- ದಿನನಿತ್ಯದ ತರಗತಿಗಳು 250+
- ದಿನನಿತ್ಯದ ಅಭ್ಯಾಸಿಗಳು 4,000+
- ಯೋಗಶಿಕ್ಷಿತರು 1.5 ಲಕ್ಷ+
- ಶಿಕ್ಷಕರು 250

ರಾಷ್ಟ್ರೋತ್ಥಾನ ರಕ್ತಕೇಂದ್ರ

- ಫಲಾನುಭವಿಗಳು 5 ಲಕ್ಷ+
- ರಕ್ತದಾನಿಗಳು 11.5 ಲಕ್ಷ+
- ಸಂಗ್ರಹವಾದ ಯುನಿಟ್‌ಗಳು 5 ಲಕ್ಷ+
- ರಕ್ತದಾನ ಶಿಬಿರಗಳು 6,000+

ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ

- ಹಾಸಿಗೆಗಳು 162
- ಕ್ಲಿನಿಕ್ ಆನ್ ವ್ಹೀಲ್ಸ್ ಫಲಾನುಭವಿಗಳು (72 ಸ್ಲಂಗಳಿಂದ) 20,000+
- ಹೊರರೋಗಿಗಳು 2 ಲಕ್ಷ+
- ಒಳರೋಗಿಗಳು 12,000+
- ತಲಸ್ಸೆಮಿಯಾ ರೋಗಿಗಳು 400+

ಸೇವಾವಸತಿ

- ಸ್ಲಂ/ ಕೊಳೆಗೇರಿಗಳು 200+
- ಫಲಾನುಭವಿಗಳು 56,000+
- ಶಿಕ್ಷಣ ಕೇಂದ್ರಗಳು 370+
- ಮಕ್ಕಳು 13,000+
- ಸ್ವಸಹಾಯ ಗುಂಪುಗಳು 224
- ಸದಸ್ಯರು 2,000+
- ಸ್ವಾಸ್ಥ್ಯ ಚಟುವಟಿಕೆಗಳ ಫಲಾನುಭವಿಗಳು 25,000+

ಮಾಧವ ಸೃಷ್ಟಿ

- ಒಟ್ಟು ವಿಸ್ತೀರ್ಣ ಎಕರೆ 110
- ಗೋವುಗಳು 600+
- ಕೃಷಿಕರಿಗೆ ನೀಡಿದ ಎತ್ತುಗಳು 500+
- ಕಾಡು ಬೆಳೆಸಿದ ಜಾಗ ಎಕರೆ 35
- ಮರಗಳು 15,500+





ಸಮಾಜ ಸಬಲೀಕರಣ

ಸುಸ್ಥಿರತೆ ಹಾಗೂ ಸಬಲೀಕರಣ, ಸ್ವಸ್ಥಸಮಾಜದ ಅವಿಭಾಜ್ಯ ಅಂಶಗಳು. ಅವುಗಳನ್ನು ಸಾಧಿಸಲು ಸಮಾಜದ ಎಲ್ಲರ ಸಹಕಾರ ಹಾಗೂ ಜವಾಬ್ದಾರಿಯ ನಿರ್ವಹಣೆಯಲ್ಲಿ ಎಲ್ಲರ ಸಹಭಾಗಿತ್ವ ಆವಶ್ಯಕ. ಇದನ್ನು ಮನಗಂಡು, ಸಮಾಜದ ಅವಕಾಶವಂಚಿತರನ್ನು ಮೇಲೆತ್ತುವ ಸಲುವಾಗಿ, ಅವರನ್ನೂ ಸಕ್ರಿಯವಾಗಿ ತೊಡಗಿಸುವಂತಹ ಚಟುವಟಿಕೆಗಳನ್ನು ಆರಂಭಿಸಲಾಯಿತು.

ಸ್ಲಂಗಳ ಸರ್ವಾಂಗೀಣ ಅಭಿವೃದ್ಧಿಗೆ ಸೇವಾವಸತಿ: ಶಾಲೆಯಿಂದ ಹೊರಗುಳಿದ ಮಕ್ಕಳ ಶಿಕ್ಷಣ, ಸ್ತ್ರೀಯರ ಹಾಗೂ ಯುವಜನತೆಯ ಸ್ವಾವಲಂಬನೆ ಹಾಗೂ ಎಲ್ಲರ ಸ್ವಾಸ್ಥ್ಯವನ್ನು ಸಾಧಿಸುವ ಮೂಲಕ ಸ್ಲಂ ನಿವಾಸಿಗಳ ಜೀವನಮಟ್ಟವನ್ನು ಸುಧಾರಿಸುವುದಕ್ಕಾಗಿ 1989ರಲ್ಲಿ ಸೇವಾವಸತಿ (ಈ ಮೊದಲು ಜಾಗರಣ) ಪ್ರಕಲ್ಪ (ಕಾರ್ಯಕ್ರಮ) ಆರಂಭಿಸಲಾಯಿತು. ಬೆಂಗಳೂರಿನ ಸುಮಾರು 200ಕ್ಕೂ ಹೆಚ್ಚು ಸ್ಲಂಗಳಲ್ಲಿ ಈ ಚಟುವಟಿಕೆಗಳು ನಡೆಯುತ್ತಿವೆ. 2021ರ ವೇಳೆಗೆ ಜಾಗರಣ ಯೋಜನೆಯ ವ್ಯಾಪ್ತಿ ಬೆಳೆದು ಸೇವಾವಸತಿ ಎನ್ನುವ ಹೆಸರಿನಲ್ಲಿ ಶಿಕ್ಷಣ, ಸ್ವಾವಲಂಬನೆ ಮತ್ತು ಸ್ವಾಸ್ಥ್ಯ ಕ್ಷೇತ್ರಗಳಲ್ಲಿ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.

ಮಾಧವಸೃಷ್ಟಿ: ಶ್ರೀಗುರೂಜಿ ಗೋಳ್ವಲ್ಕರ್ ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ (2006) ದೇಸೀ ಜಾನುವಾರು ತಳಿಗಳ ಸಂರಕ್ಷಣೆಗಾಗಿ, ದೊಡ್ಡಬಳ್ಳಾಪುರದ ಶ್ರೀ ಘಾಟಿ ಸುಬ್ರಹ್ಮಣ್ಯ ದೇವಸ್ಥಾನದ ಸಮೀಪದಲ್ಲಿ ಮಾಧವಸೃಷ್ಟಿ ಎಂಬ ಹೆಸರಿನಲ್ಲಿ ಗೋಶಾಲೆ ಪ್ರಾರಂಭಿಸಲಾಯಿತು. ಇಲ್ಲೀಗ, 35 ಎಕರೆ ವಿಸ್ತೀರ್ಣದಲ್ಲಿ 15,500+ ಮರಗಳನ್ನು ಹೊಂದಿರುವ ವೃಂದಾವನ ನಿರ್ಮಿಸಲಾಗಿದೆ. ಸುಸ್ಥಿರ ಕೃಷಿ-ಅರಣ್ಯ ಸಾಗುವಳಿ ಕೇಂದ್ರವಾಗಿ ನೈಸರ್ಗಿಕ ಸುಸ್ಥಿರತೆಗೆ ಕೊಡುಗೆ ನೀಡುತ್ತಿದೆ. ಗೋಶಾಲೆಯು ಈಗ ರೈತರು ಮತ್ತು ಜನಸಾಮಾನ್ಯರಿಗೆ ಸಾವಯವ ಕೃಷಿ ವಿಧಾನಗಳನ್ನು ಕುರಿತು ತರಬೇತಿ ನೀಡುವ ಕೇಂದ್ರವಾಗಿ ರೂಪುಗೊಂಡಿದೆ. ಗೀರ್, ಸಾಹಿವಾಲ್, ಕಾಂಕ್ರೇಜ್, ಥಾರ್ಪಾರ್ಕರ್, ದೇವಣಿ, ಹಳ್ಳಿಕಾರ್, ಮಲೆನಾಡುಗಿಡ್ಡ, ಓಂಗೋಲ್, ಅಮೃತಮಹಲ್ ಗೋ ತಳಿಗಳನ್ನು ಸಂರಕ್ಷಿಸಲಾಗುತ್ತಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26